ಮಂಗಳೂರು
ಬುಧವಾರ, 11 ಮಾರ್ಚ್ 2026
ಸಂಪುಟ 47, ಸಂಚಿಕೆ 342, ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕದನವಿರಾಮ ಬಯಸಲ್ಲ: ಇರಾನ್ | ೦೨
ಜಲಸಂಧಿ ವಶ: ಟ್ರಂಪ್ ಎಚ್ಚರಿಕೆ | ೦೨
ಅರ್ಹ ಮತದಾರರನ್ನು ಹೊರಗಿಡಲ್ಲ : ಸಿಇಸಿ | ೦೨

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಜ್ಯೇಷ್ಠ

ದಿನದ ಮಾತು

ಸುಖಾಭಿಲಾಷಿಗೆ ವಿದ್ಯೆ ಇಲ್ಲ. ವಿದ್ಯಾರ್ಥಿಗೆ ಸುಖವಿಲ್ಲ. ವಿದ್ಯಾಕಾಂಕ್ಷಿ ಸುಖವನ್ನು ಬಿಡಬೇಕು.

▲ ಸುಭಾಷಿತ

ಕಿರುಸುದ್ದಿ

ಕೆಪಿಸಿಸಿ ಅಧ್ಯಕ್ಷ ಡಿಕೆಶಿಗೆ ಶುಭ ಹಾರೈಸಿದ ಸಿಎಂ



◆ **ಬೆಂಗಳೂರು:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಯಶಸ್ವಿಯಾಗಿ ಆರು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಭಾಶಯ ಕೋರಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆಗಳು. ಶಿವಕುಮಾರ್ ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ನಮ್ಮ ಪಕ್ಷದ ಎಲ್ಲ ಯುವನಾಯಕರಿಗೆ ಮಾದರಿಯಾಗಿದ್ದಾರೆ ಎಂದಿದ್ದಾರೆ. ➡ಪುಟ ೪

ವೈದ್ಯರ ಮುಷ್ಕರ ವಾಪಸ್

◆ **ಬೆಂಗಳೂರು:** ವಿವಿಧ ಬೇಡಿಕೆಗೆ ಆಗ್ರಹಿಸಿ ಮಾ.11ರಿಂದ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳು, ಸಿಬ್ಬಂದಿ ಕರೆ ನೀಡಿದ್ದ ಅನಿರ್ದಿಷ್ಟಾವಧಿ ಮುಷ್ಕರವನ್ನು ವೈದ್ಯಾಧಿಕಾರಿಗಳ ಸಂಘ ಮಂಗಳವಾರ ವಾಪಸ್ ಪಡೆದಿದೆ. ಒಪಿಡಿ ಎಂದಿನಂತೆ ಕಾರ್ಯನಿರ್ವಹಿಸಲಿದೆ. ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಜತೆಗಿನ ಸಂಧಾನ ಸಭೆ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸಂಘ ಮಂಗಳವಾರ ಮುಷ್ಕರವನ್ನು ಕೈಬಿಟ್ಟಿರುವುದರಿಂದ ಹೊರ ರೋಗಿಗಳ ಚಿಕಿತ್ಸೆ ವಿಭಾಗ ಎಂದಿನಂತೆ ಕಾರ್ಯನಿರ್ವಹಿಸಲಿವೆ. ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಇಟ್ಟಿರುವ 14 ಬೇಡಿಕೆಗಳ ಪೈಕಿ 13 ಬೇಡಿಕೆ ಈಡೇರಿಸುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿದೆ. ➡ಪುಟ ೪

ಎಐಗೆ ತುಳು ಪಾಠ

◆ **ಬೆಂಗಳೂರು:** ಡಿಜಿಟಲ್ ಯುಗದಲ್ಲಿ ಕೃತಕ ಬುದ್ಧಿಮತ್ತೆ ವೇಗವಾಗಿ ಅಭಿವೃದ್ಧಿಯಾಗುತ್ತಿದ್ದರೂ, ಡೇಟಾ ಕಡಿಮೆ ಇರುವ ಭಾಷೆಗಳು ತಂತ್ರಜ್ಞಾನದಿಂದ ಹಿಂದೆ ಬೀಳುತ್ತಿರುವುದು ದೊಡ್ಡ ಸವಾಲಾಗಿ ಉಳಿದಿದೆ. ಆದರೆ, ಇದನ್ನೇ ಸವಾಲಾಗಿ ತೆಗೆದುಕೊಂಡು ಕರ್ನಾಟಕದ ತುಳು ಭಾಷೆಯಲ್ಲಿ ಎಐ ಸಂಭಾಷಣೆ ನಡೆಸುವಂತೆ ಮಾಡುವ ಹೊಸ ವಿಧಾನವನ್ನು ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ.

◆ ಪುಟ ೦೪

3 ಕೋಟಿ ಮೌಲ್ಯದ ವಜ್ರ, ಚಿನ್ನಾಭರಣ ವಶ

◆ ಪುಟ ೦೪

ಹೆಚ್ಚುವರಿ ಡೀಸೆಲ್‌ಗಾಗಿ ಭಾರತಕ್ಕೆ ಬಾಂಗ್ಲಾ ಮನವಿ

◆ ಪುಟ ೦೨

ಸ್ವದೇಶಿ ಏರ್ ಡ್ರಾಪಬಲ್ ಕಂಟೇನರ್ ಪರೀಕ್ಷೆ ಯಶ

◆ ಪುಟ ೦೨

ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆ ಕೇಂದ್ರ ಕ್ರಮ | ನೈಸರ್ಗಿಕ ಅನಿಲ ಹಂಚಿಕೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ
ಮನೆ ಬಳಕೆ, ಸಾರಿಗೆ ಕ್ಷೇತ್ರಗಳಿಗೆ ಅನಿಲ ನಿರಂತರ ಪೂರೈಕೆ | ಎಲ್‌ಪಿಜಿ , ಸಿಎನ್‌ಜಿ , ಪಿಎನ್‌ಜಿ ಗ್ಯಾಸ್‌ಗೆ ಒತ್ತು

ಗೃಹ ಬಳಕೆ ಅನಿಲಕ್ಕೆ ಆದ್ಯತೆ

◆ **ಹೊಸದಿಲ್ಲಿ:** ನೈಸರ್ಗಿಕ ಅನಿಲ ಹಂಚಿಕೆ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮಂಗಳವಾರ ಮಹತ್ವದ ಬದಲಾವಣೆ ಮಾಡಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ಭಾರತಕ್ಕೆ ಬರುವ ಅನಿಲ ಸರಬರಾಜಿನಲ್ಲಿ ವ್ಯತ್ಯಯ ಉಂಟಾದ ಹಿನ್ನೆಲೆಯಲ್ಲಿ ಮನೆ ಬಳಕೆ ಹಾಗೂ ಸಾರಿಗೆ ಕ್ಷೇತ್ರಗಳಿಗೆ ನಿರಂತರ ಸರಬರಾಜು ಖಚಿತಪಡಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಹೊಸ



ನಿಯಮಾವಳಿಯ ಪ್ರಕಾರ, ಎಲ್‌ಪಿಜಿ ಉತ್ಪಾದನೆ, ಸಿಎನ್‌ಜಿ ಮತ್ತು ಪೈಪ್ ಮೂಲಕ ಮನೆಗಳಿಗೆ ಒದಗಿಸುವ ಪಿಎನ್‌ಜಿ ಗ್ಯಾಸ್‌ಗೆ ಮೊದಲ ಆದ್ಯತೆ ನೀಡಲಾಗಿದೆ. ಭಾರತವು ದಿನಕ್ಕೆ ಸುಮಾರು 191 ಮಿಲಿಯನ್ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್ (ಎಂಎಂಎಸ್‌ಸಿಎಂಡಿ) ಅನಿಲವನ್ನು ಬಳಸುತ್ತದೆ. ಇದರ ಅರ್ಧದಷ್ಟು ಭಾಗವನ್ನು ಆಮದು ಮೂಲಕ ಪೂರೈಸಲಾಗುತ್ತದೆ. ಆದರೆ ಮಧ್ಯಪ್ರಾಚ್ಯ ಸಂಘರ್ಷದ ಪರಿಣಾಮವಾಗಿ ಹಾರ್ಮುಜ್ ಜಲಸಂಧಿ ಮೂಲಕ ಸಾಗುವ ಎಲ್‌ಎನ್‌ಜಿ ಟ್ಯಾಂಕರ್‌ಗಳ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಇದರ ಪರಿಣಾಮವಾಗಿ ಸುಮಾರು 60 ಎಂಎಂಎಸ್‌ಸಿಎಂಡಿ ಅನಿಲ ಸರಬರಾಜು ವ್ಯತ್ಯಯಗೊಂಡಿದೆ. ➡ಪುಟ ೪



ಪಾಕ್ ಸೇರಿ ರಾಷ್ಟ್ರಗಳಿಗೆ ಇಂಧನ ಕೊರತೆಯ ಬಿಸಿ

ಮಧ್ಯಪ್ರಾಚ್ಯ ಯುದ್ಧವು ಜಾಗತಿಕ ತೈಲ ಪೂರೈಕೆ ವ್ಯತ್ಯಯ ಸೃಷ್ಟಿಸಿದ್ದರಿಂದ ತೈಲ ಕೊರತೆಯ ಬಿಸಿ ನೆರೆಯ ಪಾಕಿಸ್ತಾನ ಸೇರಿದಂತೆ ಹಲವು ದೇಶಗಳಿಗೆ ಮುಟ್ಟಿದೆ. ಚೀನಾ ಹಲವು ಪೂರೈಕೆದಾರರನ್ನು ಹೊಂದಿದ್ದರೂ, ಚೀನಾದಲ್ಲಿ ತೈಲ ಬೆಲೆ ಏರಿಕೆಯಾಗಿದೆ. ➡ಪುಟ ೪

ವಿಮಾನಯಾನ ದರ ಏರಿಕೆ ಬಿಸಿ

◆ **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಸಂಘರ್ಷದಿಂದಾಗಿ ಜೆಟ್ ಇಂಧನದ ಬೆಲೆ ತೀವ್ರವಾಗಿ ಏರಿಕೆಯಾಗಿರುವ ಕಾರಣ, ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಟಿಕೆಟ್‌ಗಳಿಗೆ ಹೆಚ್ಚುವರಿ ಇಂಧನ ಶುಲ್ಕ ವಿಧಿಸಲು ನಿರ್ಧರಿಸಿವೆ. ಮಾ.12ರಿಂದ ದೇಶೀಯ ವಿಮಾನ ಟಿಕೆಟ್‌ಗಳಿಗೆ ಪ್ರತಿ ಪ್ರಯಾಣಿಕನಿಗೂ 399 ರೂ. ಇಂಧನ ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ. ಸಾರ್ಕ್ ದೇಶಗಳ ಮಾರ್ಗಗಳಿಗೂ ಇದು ಅನ್ವಯವಾಗುತ್ತದೆ. ➡ಪುಟ ೪

ಹೊಟೇಲ್ ಉದ್ಯಮಕ್ಕೆ ಭಾರೀ ಸಂಕಷ್ಟ

◆ **ಬೆಂಗಳೂರು:** ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಹೆಚ್ಚಾಗುತ್ತಿದ್ದು, ಇದರಿಂದ ಬೆಂಗಳೂರಿನಲ್ಲಿನ ಕೆಲವು ಹೊಟೇಲ್‌ಗಳಲ್ಲಿ ಕೇವಲ ಟೀ ಕಾಫಿ ಸೇರಿದಂತೆ ಕೆಲ ತಿಂಡಿ ತಿನಿಸುಗಳನ್ನು ಮಾತ್ರ ನೀಡುತ್ತಿದ್ದು, ಇನ್ನು ಕೆಲವು ಹೊಟೇಲ್‌ಗಳು ಸಂಪೂರ್ಣ ಬಂದ್ ಮಾಡಲು ಹೊಟೇಲ್ ಮಾಲೀಕರು ಮುಂದಾಗುತ್ತಿದ್ದಾರೆ. ಸೋಮವಾರ ಈ ಸಂಬಂಧ ಹೊಟೇಲ್ ಸಂಘವು ಹೊಟೇಲ್‌ಗಳಲ್ಲಿ ಸಿಲಿಂಡರ್ ಖಾಲಿ ಆದ ಹಾಗೇ ಬಂದ್ ಮಾಡಲಾಗುವುದು ಎಂದು ತಿಳಿಸಿತ್ತು. ಆದರಂತೆ ಮಂಗಳವಾರ ಕೆಲ ಹೊಟೇಲ್‌ಗಳಲ್ಲಿ ಕೇವಲ ಟೀ, ಕಾಫಿ ಮಾತ್ರ ನೀಡುತ್ತಿದ್ದರು, ಇನ್ನು ಕೆಲವೆಡೆ ಅಧಿಕ ಅನಿಲ ಖರ್ಚಾಗುವ ತಿನಿಸುಗಳನ್ನು ಹೊರತುಪಡಿಸಿ ಇತರ ತಿನಿಸುಗಳನ್ನು ನೀಡಲಾಗುತ್ತಿತ್ತು.



ಕೇಂದ್ರ ಸಚಿವರಿಗೆ ಸಿಎಂ ಮನವಿ

ಈ ಬಗ್ಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರ ಬರೆದು ಬೆಂಗಳೂರಿನ ಹಲವು ಹೊಟೇಲ್ ಮತ್ತು ರೆಸ್ಟೋರೆಂಟ್‌ಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ಹಲವಾರು ಹೊಟೇಲ್‌ಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಪರಿಸ್ಥಿತಿ ಎದುರಾಗಬಹುದಾಗಿದೆ. ಆ ನಿಟ್ಟಿನಲ್ಲಿ ತಕ್ಷಣ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ತತ್ವಾರದ ಸಮಯದಲ್ಲಿ ತತ್ವಾದರ್ಶ ಪಾಲಿಸೋಣ

ಇಸ್ರೇಲ್– ಅಮೆರಿಕ– ಇರಾನ್ ಯುದ್ಧ ನಡೆಯುತ್ತಿದೆ. ಅದು ಮಧ್ಯಪ್ರಾಚ್ಯ ದೇಶಗಳ ಮೇಲೆಲ್ಲ ಪರಿಣಾಮ ಬೀರಿದೆ. ಈಗಾಗಲೇ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಸೇರಿದಂತೆ ವಿವಿಧ ದೇಶಗಳು ವಿಪರೀತ ಸಮಸ್ಯೆ ಎದುರಿಸುತ್ತಿವೆ. ಪಾಕಿಸ್ತಾನದಲ್ಲಿ ಪೆಟ್ರೋಲ್ ಲೀಟರ್‌ಗೆ 55 ರುಪಾಯಿ ಹೆಚ್ಚಿಸಿರುವುದರ ಜತೆಗೆ ಶಾಲೆ– ಕಾಲೇಜಿಗೆ ರಜೆ ಕೊಟ್ಟು, ವಾರದಲ್ಲಿ ನಾಲ್ಕೇ ದಿನ ಕೆಲಸ ಎಂಬ ನಿಯಮವನ್ನೂ ಮಾಡಲಾಗಿದೆ. ಬಾಂಗ್ಲಾದೇಶದಲ್ಲಿ ಕೂಡ ಇಂಧನ ಸಮಸ್ಯೆ ಕಾಣಿಸಿಕೊಂಡಿದೆ. ಭಾರತ ತಕ್ಷಣಕ್ಕೆ ಬಾಂಗ್ಲಾದೇಶಕ್ಕೆ ಡೀಸೆಲ್ ಕಳಿಸಿಕೊಟ್ಟಿದೆ.

ನಮ್ಮ ದೇಶದಲ್ಲೂ ಗ್ಯಾಸ್ ಟ್ರಬಲ್ ಆರಂಭವಾಗಿದೆ. ಈಗ ಸದ್ಯಕ್ಕೆ ವಾಣಿಜ್ಯ ಬಳಕೆ ಸಿಲಿಂಡರ್ ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಹಾಗಾಗಿ ಗೃಹಬಳಕೆ ಗ್ಯಾಸ್ ಸಿಲಿಂಡರ್ ಕೂಡ ಕೊರತೆಯಾಗಬಹುದು ಎಂಬ ನಿರೀಕ್ಷೆಯಿದೆ. ಸಹಜವಾಗಿ ಯಾವುದೇ ವಸ್ತುವಿನ ಕೊರತೆ ಆರಂಭವಾದಾಗ ನಾವು ಆತಂಕಕ್ಕೆ ಒಳಗಾಗುತ್ತೇವೆ. ಆದರಿಂದ ಬಚಾವಾಗಲು ಆ ವಸ್ತುವನ್ನು ಹೆಚ್ಚು ಶೇಖರಿಸಲು ಹವಣಿಸುತ್ತೇವೆ. ಈಗ ಗ್ಯಾಸ್ ವಿಷಯದಲ್ಲೂ ಹಾಗೇ ಆಗುತ್ತಿದೆ. ಗ್ಯಾಸ್ ಕೊರತೆ ಆಗಬಹುದು ಎಂದೆನಿಸುತ್ತಿದ್ದಂತೆ ಕೆಲವರು ದಿಢೀರನೆ ಗ್ಯಾಸ್ ಬುಕ್ ಮಾಡಲಾರಂಭಿಸಿದ್ದಾರೆ. ಸಿಕ್ಕರೆ ಖರೀದಿಸಿ ಇಟ್ಟುಕೊಳ್ಳೋಣ ಎಂಬ ಯೋಚನೆ ಸಹಜ. ಆದರ ಬದಲಾಗಿ ನಾವು ಕಡಿಮೆ ಗ್ಯಾಸ್ ಬಳಸುವ ಮಾರ್ಗ ಅನುಸರಿಸಬಹುದೆ? ಹೇಗೂ ಈಗ ಬೇಸಿಗೆ. ತಣ್ಣಗಿನ ಆಹಾರಗಳನ್ನು ಅಥವಾ ಬೆಂಕಿಯ ಅಗತ್ಯವಿಲ್ಲದ ಆಹಾರವನ್ನು ನಮ್ಮ ದಿನನಿತ್ಯದ ಬಳಕೆಯಲ್ಲಿ ಹೆಚ್ಚಿಸಬಹುದೆ? ಶಾಲೆ– ಕಾಲೇಜುಗಳಲ್ಲಿ ಬೆಂಕಿ ಇಲ್ಲದ ಅಡುಗೆಯ ಸ್ಪರ್ಧೆ ಇರುತ್ತದಲ್ಲ. ಅಂತಹ ಕೌಶಲ್ಯಗಳನ್ನು ನಾವು ಈ ಸಮಯದಲ್ಲಿ ಹೆಚ್ಚು ಬಳಸಬಹುದೆ ಎಂದು ಯೋಚಿಸಬಹುದು. ನಾವೀನ್ಯಕ್ಕೆ ಹೆಸರಾದ ಭಾರತೀಯರಿಗೆ ಇದು ಅಸಾಧ್ಯವಾದ ಸಂಗತಿಯಂತೂ ಖಂಡಿತ ಅಲ್ಲ. ➡ಪುಟ ૬

ಸರ್ಕಾರ ವಿರುದ್ಧ ಪ್ರತಿಪಕ್ಷ ನಾಯಕ ಕಿಡಿ

ಬಜೆಟ್‌ನಲ್ಲಿ ಜನರಿಗೆ ಅನ್ಯಾಯ: ಅಶೋಕ

◆ **ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ರಾಜ್ಯದ ಜನರನ್ನು ಸಾಲದ ಸುಳಿಯಲ್ಲಿ ಸಿಲುಕಿಸಿದೆ. ಹಿಂದುಳಿದ ವರ್ಗ, ಪರಿಶಿಷ್ಟ ವರ್ಗ ಹಾಗೂ ಎಲ್ಲ ವರ್ಗದ



ಜನರಿಗೆ ಈ ಬಜೆಟ್ ತೀವ್ರ ಅನ್ಯಾಯ ಮಾಡಿದೆ. ವಿತ್ತೀಯ ಕೊರತೆ ಹಾಗೂ ಸಾಲದ ಪ್ರಮಾಣ ಮಿತಿಮೀರಿ ಹೋಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆರೋಪಿಸಿದರು. ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಳೇ ಸಾಲ ತೀರಿಸಲು ಹೊಸ ಸಾಲ ಮಾಡಿದ್ದಾರೆ. ➡ಪುಟ ೪

ಸಾಲದ ಹೊರೆ ಹೆಚ್ಚಳ

ಮೂರು ವರ್ಷದಲ್ಲಿ ಒಟ್ಟು ವಿತ್ತೀಯ ಕೊರತೆ 54,660 ಕೋಟಿ ರೂ. ಆಗಿದೆ. ಈ ಮೂಲಕ ರಾಜ್ಯದ ಆರ್ಥಿಕ ಹೊಣೆ ದಯನೀಯ ಸ್ಥಿತಿಗೆ ಬಂದಿದೆ. ಸಿದ್ದರಾಮಯ್ಯ ಮಾತ್ರ 4,36,803 ಕೋಟಿ ರೂ. ಸಾಲ ಮಾಡಿದ್ದು, ಒಟ್ಟು ಸಾಲದಲ್ಲಿ ಅವರ ಸಾಲದ ಪ್ರಮಾಣ 52.33% ಆಗಿದೆ. ಸಿದ್ದರಾಮಯ್ಯನವರು ಸಾಲದ ರಾಮಯ್ಯ ಆಗಿದ್ದಾರೆ ಎಂದು ಅಶೋಕ ಆರೋಪಿಸಿದರು.

ಲೋಕಸಭೆ ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ ಚರ್ಚೆ | ಮಾತಿನ ಚಕಮಕಿ

ಪ್ರತಿಪಕ್ಷದ ವರ್ತನೆ ಬೇಜವಾಬ್ದಾರಿಯುತ: ಶಾ

◆ **ಹೊಸದಿಲ್ಲಿ:** ಲೋಕಸಭೆ ಸ್ಪೀಕರ್ ಓಂ ಬಿರ್ಲಾ ವಿರುದ್ಧದ ಅವಿಶ್ವಾಸ ನಿರ್ಣಯದ ಕುರಿತು ಲೋಕಸಭೆಯಲ್ಲಿ ಮಂಗಳವಾರ ಚರ್ಚೆ ಆರಂಭವಾಗುತ್ತಿದ್ದಂತೆ, ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ತೀವ್ರ ವಾಗ್ವಾದ ನಡೆದಿದೆ. ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಿರುದ್ಧ ಟೀಕೆ ಮಾಡಿದ್ದು, ಮಧ್ಯಪ್ರವೇಶಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರತಿಪಕ್ಷದ ವರ್ತನೆಯನ್ನು ಬೇಜವಾಬ್ದಾರಿಯುತ ಎಂದು ಆರೋಪಿಸಿದರು.

ಇದಕ್ಕೂ ಮುನ್ನ ಚರ್ಚೆ ವೇಳೆ ಮಾತನಾಡಿದ ಗೊಗೊಯ್, ಭವಿಷ್ಯದಲ್ಲಿ ಸಂಸತ್ತಿನ ದಾಖಲೆಗಳನ್ನು ಪರಿಶೀಲಿಸಿದಾಗ ರಿಜಿಜು ಪ್ರತಿಪಕ್ಷವನ್ನು ಅತಿ ಹೆಚ್ಚು ಬಾರಿ ಅಡ್ಡಿಪಡಿಸಿದ



ಸಂಸದೀಯ ವ್ಯವಹಾರಗಳ ಸಚಿವ ಎಂದು ನೆನಪಾಗುವರು ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ರಿಜಿಜು, ಪ್ರತಿಪಕ್ಷ ಸದಸ್ಯರು ಅಸಂಸದೀಯ ಪದಗಳನ್ನು ಬಳಸುತ್ತಿದ್ದಾರೆ ಎಂದು ಆರೋಪಿಸಿ, ತಾವು ಅದಕ್ಕೆ ಉತ್ತರ ನೀಡಬೇಕಾಗುತ್ತದೆ ಎಂದು ಹೇಳಿದರು. ಇದಕ್ಕೆ ತಿರುಗೇಟು ನೀಡಿದ ಗೊಗೊಯ್, ಸಂಸತ್ತಿನ ದಾಖಲೆಗಳೇ ರಿಜಿಜು ಅವರ ಅಡ್ಡಿಪಡಿಸುವ ದಾಖಲೆಯನ್ನು ತೋರಿಸುತ್ತವೆ ಎಂದು ವ್ಯಂಗ್ಯವಾಡಿದರು. ➡ಪುಟ ೪

ಚರ್ಚೆಯಲ್ಲಿ ಯಾರೆಲ್ಲಾ ಭಾಗಿ?

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ನಿರ್ಣಯದ ಮೇಲಿನ ಚರ್ಚೆಯನ್ನು ಪ್ರಾರಂಭಿಸಲಿದ್ದಾರೆ. ಬಿಜೆಪಿ ಸಂಸದರಾದ ಅನುರಾಗ್ ಠಾಕೂರ್, ನಿಶಿಕಾಂತ್ ದುಬೆ, ರವಿಶಂಕರ್ ಪ್ರಸಾದ್ ಮತ್ತು ಭರ್ತೃಹರಿ ಮಹ್ತಾಬ್ ಈ ವಿಷಯದ ಕುರಿತು ಮಾತನಾಡಲಿದ್ದು, ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್) ಚಿರಾಗ್ ಪಾಸ್ವಾನ್ ಕೂಡ ಚರ್ಚೆಯ ಸಂದರ್ಭದಲ್ಲಿ ಸದನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಲೋಕಸಭಾ ಸ್ಪೀಕರ್ ಅವರನ್ನು ಪದಚ್ಯುತಗೊಳಿಸುವಂತೆ ಕೋರುವ ನಿರ್ಣಯದ ಪರವಾಗಿ ಕಾಂಗ್ರೆಸ್ ಸಂಸದರಾದ ಗೌರವ್ ಗೊಗೊಯ್, ಮನೀಶ್ ತಿವಾರಿ, ದೀಪೇಂದರ್ ಸಿಂಗ್ ಹೂಡಾ ಮತ್ತು ಜೋತಿಮಣಿ ಅವರು ತಮ್ಮ ವಾದ ಮಂಡಿಸಲಿದ್ದಾರೆ.

ಪಶ್ಚಿಮ ಬಂಗಾಳಕ್ಕೆ ತರಾಟೆ

◆ **ಹೊಸದಿಲ್ಲಿ:** ಪಶ್ಚಿಮ ಬಂಗಾಳ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಮೇಲುಸ್ತುವಾರಿ ನೋಡಿಕೊಳ್ಳುವ ನ್ಯಾಯಾಂಗ ಅಧಿಕಾರಿಗಳ ನಿಷ್ಠೆಯನ್ನೇ ಪ್ರಶ್ನಿಸುವುದನ್ನು ನಾನು ಸಹಿಸಲಾರೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ(ಸಿಜೆಐ) ಸೂರ್ಯ ಕಾಂತ್ ತರಾಟೆಗೆತ್ತಿಕೊಂಡಿದ್ದಾರೆ.

ಪಶ್ಚಿಮ ಬಂಗಾಳದ ಎಸ್‌ಐಆರ್ ಪರಿಷ್ಕರಣೆಯನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಗಳ ವಿಚಾರಣೆ ವೇಳೆ ಸಿಜೆಐ ಸೂರ್ಯ ಕಾಂತ್, ಈ ರೀತಿಯ ಅರ್ಜಿಗಳನ್ನು ಸಲ್ಲಿಸಲು ನಿಮಗೆ ಧೈರ್ಯ ಹೇಗೆ ಬಂತು? ನಿಮ್ಮ ಅರ್ಜಿ ತೀರಾ ಬಾಲಿಶವಾಗಿದೆ. ➡ಪುಟ ೪

» **ನ್ಯಾಯಾಂಗ ಅಧಿಕಾರಿಗಳ ನಿಷ್ಠೆ ಪ್ರಶ್ನಿಸುವ ಧೈರ್ಯವೇ?: ಸಿಜೆಐ ಪ್ರಶ್ನೆ**

ಷರಿಯತ್ ಕುರಿತ ಅರ್ಜಿ | ಸುಪ್ರೀಂ ಅಭಿಪ್ರಾಯ

ಯುಸಿಸಿ ಸಮಯ ಬಂದಿದೆ

◆ **ಹೊಸದಿಲ್ಲಿ:** ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ(ಯುಸಿಸಿ) ಅಗತ್ಯವಿರುವ ಸಮಯ ಬಂದಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಅಭಿಪ್ರಾಯಪಟ್ಟಿದೆ.

1937ರ ಷರಿಯತ್ ಕಾನೂನಿನ ಕೆಲವು ವಿಧಿಗಳು ಮುಸ್ಲಿಂ ಮಹಿಳೆಯರ ವಿರುದ್ಧ ಭೇದಭಾವ ತೋರಿಸುತ್ತಿದ್ದು, ಅವನ್ನು ರದ್ದುಪಡಿಸುವಂತೆ ಸಲ್ಲಿಸಲಾದ ಅರ್ಜಿಯನ್ನು ಬಹಳ ಉತ್ತಮ ಪ್ರಕರಣ ಎಂದು ಹೇಳಿದ ನ್ಯಾಯಾಲಯ, ಈ ವಿಷಯವನ್ನು ಪರಿಶೀಲಿಸುವುದು ಮುಖ್ಯವಾಗಿ ಶಾಸಕಾಂಗದ ಕೆಲಸವಾಗಿರಬಹುದು ಎಂದು ಕೋರ್ಟ್ ಅಭಿಪ್ರಾಯಪಟ್ಟಿತು. ಇದೇ ವೇಳೆ ಯುಸಿಸಿ ಸಮಯ ಬಂದಿದೆ ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ಆರ್. ಮಹಾದೇವನ್ ಅವರಿದ್ದ ಪೀಠವು, ಷರಿಯತ್ ಪರಂಪರೆಯ ವಾರಸುದಾರಿಕೆ ನಿಯಮವನ್ನು ಕೋರ್ಟ್ ರದ್ದುಪಡಿಸಿದರೆ, ಕಾನೂನಾತ್ಮಕ ಶೂನ್ಯತೆ ಉಂಟಾಗಬಹುದು ಎಂದು ಹೇಳಿತು. ಏಕೆಂದರೆ ಮುಸ್ಲಿಂ ವಾರಸುದಾರಿಕೆಗೆ ಸಂಬಂಧಿಸಿದ ಪ್ರತ್ಯೇಕ ಕಾನೂನು ಇಲ್ಲ. ಸುಧಾರಣೆಗಳ ಬಗ್ಗೆ ಆತುರದಲ್ಲಿ ನಾವು ಅವರಿಗೆ ಈಗಿರುವ ಹಕ್ಕುಗಳಿಗಿಂತ ಕಡಿಮೆ ಸಿಗುವ ಪರಿಸ್ಥಿತಿ ಉಂಟುಮಾಡಬಹುದು. ➡ಪುಟ ೪

ನ್ಯಾಯಪೀಠ ಹೇಳಿದ್ದೇನು?

- » ಷರಿಯತ್ ಕಾಯ್ದೆಯ ವಿಷಯದಲ್ಲಿ ಸುಧಾರಣೆಗಳನ್ನು ಮಾಡುವ ಮುಖ್ಯ ಅಧಿಕಾರ ಶಾಸನಸಭೆಗೆ ಇದೆ
- » 1937ರ ಷರಿಯತ್ ಕಾಯ್ದೆ ರದ್ದುಪಡಿಸಿದರೆ ವಾರಸುದಾರಿಕೆಯಲ್ಲಿ ಕಾನೂನಾತ್ಮಕ ಶೂನ್ಯತೆ ಉಂಟಾಗುವ ಸಾಧ್ಯತೆ ಇದೆ
- » ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಬೇಕಾದ ಸಮಯ ಬಂದಿದೆ
- » ವಿಷಯ ಸಂಕೀರ್ಣವಾಗಿರುವುದ ರಿಂದ ಹೆಚ್ಚಿನ ಅಧ್ಯಯನ, ಉಲ್ಲೇಖಗಳು, ಪರ್ಯಾಯ ಪರಿಹಾರಗಳು ಅಗತ್ಯ

ವಿಧಾನ ಪರಿಷತ್‌ನ 3 ಸ್ಥಾನಕ್ಕೆ ಹೆಸರು ಘೋಷಿಸಿದ ಬಿಜೆಪಿ

◆ **ಬೆಂಗಳೂರು:** ಮುಂದಿನ ನವೆಂಬರ್‌ನಲ್ಲಿ ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಬಿಜೆಪಿ ಮೂರು ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ.

ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ಶಶಿಲ್ ಜಿ. ನಮೋಶಿ, ಪಶ್ಚಿಮ ಪದವೀಧರರ ಕ್ಷೇತ್ರದಿಂದ ಎಸ್.ವಿ.ಸಂಕನೂರು ಹಾಗೂ ಆಗ್ನೇಯ ಪದವೀಧರರ ಕ್ಷೇತ್ರದಿಂದ ಕೆ.ಎಂ.ಸುರೇಶ್ ಹೆಸರು ಅಂತಿಮಗೊಳಿಸಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಮಂಗಳವಾರ ಪ್ರಕಟಿಸಿದ್ದಾರೆ.

ಹಾಲಿ ಕಾಂಗ್ರೆಸ್ ಪಕ್ಷದ ಪುಟ್ಟಣ್ಣ ಇರುವ ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಬಿಜೆಪಿ ತನ್ನ ಅಭ್ಯರ್ಥಿಯನ್ನು ಘೋಷಿಸಿಲ್ಲ. ಆಗ್ನೇಯ ಪದವೀಧರರ ಕ್ಷೇತ್ರವನ್ನು ಹಾಲಿ ಬಿಜೆಪಿ ಸದಸ್ಯ ಚಿದಾನಂದ ಎಂ.ಗೌಡ ಪ್ರತಿನಿಧಿಸುತ್ತಿದ್ದಾರೆ. ಅಲ್ಲಿ ದಾವಣಗೆರೆಯ ಕೆ.ಎಂ.ಸುರೇಶ್ ಅವರಿಗೆ ಬಿಜೆಪಿ ಅವಕಾಶ ಮಾಡಿಕೊಟ್ಟಿದೆ.

ಇರಾನ್‌ಗೆ ನೌಕಾಬಲ, ಸಂಪರ್ಕ ವ್ಯವಸ್ಥೆ, ವಾಯುಪಡೆ ಸೌಲಭ್ಯ ಕೂಡ ಇಲ್ಲ ಎಂದ ಟ್ರಂಪ್

ಜಲಸಂಧಿಯನ್ನೇ ವಶಪಡಿಸಿಕೊಳ್ಳುವುದಾಗಿ ಎಚ್ಚರಿಕೆ!

ಟೆಹ್ರಾನ್: ಇರಾನ್ ಅತಿ ಬುದ್ಧಿವಂತಿಕೆ ಮೆರೆದು ಮಧ್ಯಪ್ರಾಚ್ಯದಲ್ಲಿನ ಅಮೆರಿಕದ ಹಾಗೂ ಇಸ್ರೇಲಿ ನೆಲೆಗಳ ಮೇಲೆ ಇನ್ನಷ್ಟು ದಾಳಿ ನಡೆಸಿದಲ್ಲಿ, ನಿರ್ಣಾಯಕ ಹೊರ್ಮುಜ್ ಜಲಸಂಧಿ ಮೇಲೆ ತಾನು ನಿಯಂತ್ರಣ ಸಾಧಿಸುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಗುಡುಗಿದ್ದಾರೆ.

ಇರಾನ್, ಖಮೇನಿ ಪುತ್ರ ಆಯತೊಲ್ಲಾ ಮೊಜ್ತಾಬಾ ಖಮೇನಿಯನ್ನು ಇರಾನ್‌ನ ಸರ್ವೋಚ್ಚ ನಾಯಕನಾಗಿ ಆರಿಸಿದ ಬೆನ್ನಲ್ಲೇ ತೈಲ ಬೆಲೆಗಳು 2022ರ ನಂತರ ಕಂಡರಿಯದ ರೀತಿಯಲ್ಲಿ ಗಗನಕ್ಕೇರಿದ್ದು, ಈ ಹಿನ್ನೆಲೆಯಲ್ಲಿ ಟ್ರಂಪ್ ಪ್ರಸ್ತುತ ಎಚ್ಚರಿಕೆ ನೀಡಿದ್ದಾರೆ.

ಸುಮಾರು ಶೇ. 20 ಜಾಗತಿಕ ತೈಲ ಸರಬರಾಜಾಗುವುದು ಹೊರ್ಮುಜ್ ಜಲಸಂಧಿಯಿಂದಾಗಿ. ಇರಾನ್ ನಿರ್ಬಂಧದಿಂದಾಗಿ ಈ ಜಲಸಂಧಿ ಮುಖೇನ ವಾಣಿಜ್ಯಿಕ ನೌಕೆಗಳ ಓಡಾಟ ವಸ್ತುಶ: ದುಸ್ತರವಾಗಿದೆ. ನನ್ನ ಪ್ರಕಾರ ಯುದ್ಧ ಪೂರ್ತಿಯಾಗಿದೆ ಎಂದು ಟ್ರಂಪ್ ಸಿಬಿಎಸ್ ನ್ಯೂಸ್‌ಗೆ ಫೋನ್ ಸಂದರ್ಶನದಲ್ಲಿ ತಿಳಿಸಿದ್ದಾರೆ. ಇರಾನ್‌ಗೆ ನೌಕಾಬಲ ಇಲ್ಲ, ಸಂಪರ್ಕ ವ್ಯವಸ್ಥೆ ಇಲ್ಲ.ವಾಯುಪಡೆ ಕೂಡ ಇಲ್ಲ. ಅವರ ಕ್ಷಿಪಣಿಗಳು ಧ್ವಂಸಗೊಂಡಿವೆ. ಅವರ ಡ್ರೋನ್ ತಯಾರಿ ಘಟಕಗಳ ಸಹಿತ ಅವರ ಡ್ರೋನ್‌ಗಳು ಎಲ್ಲಾ ಕಡೆ ಹೊತ್ತುರಿದಿವೆ ಎಂದು ಟ್ರಂಪ್ ಸಂದರ್ಶನದಲ್ಲಿ ಹೇಳಿದ್ದಾರೆ. ಮಿಲಿಟರಿ ದೃಷ್ಟಿಯಿಂದ ಇರಾನ್ ಬಳಿ ಏನೂ ಉಳಿದಿಲ್ಲ ಎಂದಿದ್ದಾರೆ. ಜಲಮಾರ್ಗವನ್ನು ನಿರ್ಬಂಧಿಸಿದಲ್ಲಿ ಹೊರ್ಮುಜ್ ಜಲಸಂಧಿ ಮೇಲೆ ನಿಯಂತ್ರಣ ಸಾಧಿಸುವುದಾಗಿಯೂ ಟ್ರಂಪ್ ಗುಡುಗಿದ್ದಾರೆ. ಇರಾನ್ ಏನೆಲ್ಲಾ ದಾಳಿ ಮಾಡ್ಬೇಕೋ ಎಲ್ಲವನ್ನು ಮಾಡಿದೆ. ಇನ್ನೂ ಜಾಣತನ ಪ್ರದರ್ಶಿಸಿದಲ್ಲಿ ಆ ರಾಷ್ಟ್ರದ ಅಂತ್ಯವಾದೀತು. ಅವರೇನಾದರು ಕೆಡುಕು ಮಾಡಿದಲ್ಲಿ ಅದು ಇರಾನ್ ಅಂತ್ಯಕ್ಕೆ ದಾರಿಯಾದೀತು. ಇರಾನ್ ಹೆಸರನ್ನು ಮತ್ತೆ ನೀವು ಕೇಳಲಿಕ್ಕಿಲ್ಲ ಎಂದಿರುವ ಟ್ರಂಪ್, ಇದೀಗ ಜಲಸಂಧಿ ತೆರೆದುಕೊಂಡಿದೆ ಮತ್ತು ಹಡಗುಗಳು ಜಲಸಂಧಿ ಪ್ರವೇಶಿಸಲು ಶುರುವಿಟ್ಟಿವೆ ಎಂದಿದ್ದಾರೆ. ಸಂಘರ್ಷದ ಮೊದಲ ವಾರದಲ್ಲೇ ನಾವು ಇರಾನಿನ 5000 ನೆಲೆಗಳ ಮೇಲೆ ದಾಳಿ ಮಾಡಿದ್ದೇವೆಂದು ಅಮೆರಿಕನ್ ಮಿಲಿಟರಿ ಪಡೆ ಹೇಳಿಕೊಂಡಿದೆ.



ಪಾಕ್‌ನಲ್ಲಿ ಸೋಮವಾರದಿಂದ ಶಾಲೆಗೆ ರಜೆ : ನಾಲ್ಕೇ ದಿನ ಕೆಲಸ

ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಳ್ಳುತ್ತಿದ್ದು, ಇದು ಜಗತ್ತನ್ನೆ ತಲ್ಲಣಗೊಳಿಸುತ್ತಿದೆ. ಇಂಧನ ಕೊರತೆ ಇಡೀ ಜಗತ್ತನ್ನೇ ತತ್ತರಿಸುತ್ತಿದೆ. ಜಾಗತಿಕ ತೈಲ ಪೂರೈಕೆಯು ಹೆಚ್ಚುತ್ತಿರುವ ಒತ್ತಡ ಎದುರಿಸುತ್ತಿದೆ. ಹಲವಾರು ಪ್ರದೇಶಗಳಲ್ಲಿ ಅಡೆತಡೆ ಎದುರಾಗುತ್ತಿದೆ. ಈ ತೈಲ ಬಿಸಿಯು ಪಾಕಿಸ್ತಾನವನ್ನೂ ತಲುಪಿದೆ. ಹೊಡೆತವನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ, ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಇರಾನ್ ಯುದ್ಧದಿಂದಾಗಿ ನಡೆಯುತ್ತಿರುವ ಪೂರೈಕೆ ಅಡೆತಡೆಗಳ ನಡುವೆ ಇಂಧನವನ್ನು ಉಳಿಸುವ ಗುರಿ ಹೊಂದಿರುವ ಸರ್ಕಾರಿ ವೆಚ್ಚ ಕಡಿತ, ಮನೆಯಿಂದ ಕೆಲಸ ಮಾಡುವ ಮಾರ್ಗಸೂಚಿಗಳಿಂದ ಹಿಡಿದು ಇತರ ಹೊಸ ಕ್ರಮಗಳನ್ನು ಕೈಗೊಂಡಿದ್ದಾರೆ. ದೇಶವನ್ನು ಉದ್ದೇಶಿಸಿ ಮಾತನಾಡಿದ ಷರೀಫ್, ಫೆಡರಲ್ ಮತ್ತು ಪ್ರಾಂತೀಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಈ ಕ್ರಮಗಳನ್ನು ಚರ್ಚಿಸಲಾಗಿದೆ ಎಂದು ಹೇಳಿದ್ದಾರೆ. ಕಠಿಣ ಪರಿಸ್ಥಿತಿ ಹಿನ್ನಲ್ಲೆ ಸರ್ಕಾರವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಯಿತು ಎಂದು ಹೇಳಿದರು. ಇಂಧನ ಉಳಿತಾಯ ಪ್ರಮುಖ ಕ್ರಮಗಳ ಪೈಕಿ, ಸರ್ಕಾರವು ಮುಂದಿನ ಎರಡು ತಿಂಗಳುಗಳ ಕಾಲ ಅಧಿಕೃತ ವಾಹನಗಳ ಇಂಧನ ಭತ್ಯೆಯನ್ನು ಶೇ.50ರಷ್ಟು ಕಡಿತಗೊಳಿಸಲಿದೆ.

ಯುದ್ಧ ಇನ್ನೂ ಮುಗಿದಿಲ್ಲ: ನೆತನ್ಯಾಹು

ಇಸ್ರೇಲ್ ಸೇನೆ ಇರಾನ್ ಬೆನ್ನೆಲುಬು ಮುರಿದಿದೆ. ಆದರೆ ಯುದ್ಧ ಇನ್ನೂ ಮುಗಿದಿಲ್ಲ. ಇರಾನ್‌ನಲ್ಲಿ ಇಸ್ಲಾಮಿಕ್ ಆಡಳಿತವನ್ನು ಅಂತ್ಯಗೊಳಿಸದವರೆಗೂ ನಾವು ಯುದ್ಧವನ್ನು ನಿಲ್ಲಿಸುವುದಿಲ್ಲ. ದಬ್ಬಾಳಿಕೆಯಿಂದ ಇರಾನ್ ಜನರಿಗೆ ಸ್ವಾತಂತ್ರ್ಯ ನೀಡುವುದು ನಮ್ಮ ಪ್ರಮುಖ ಗುರಿಗಳಲ್ಲಿ ಒಂದಾಗಿದೆ. ಇಲ್ಲಿಯವರೆಗಿನ ಯುದ್ಧದಲ್ಲಿ ನಾವು ಇರಾನ್ ಬೆನ್ನೆಲುಬು ಮುರಿದಿದ್ದೇವೆ. ಇದು ಇನ್ನೂ ಮುಗಿದಿಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಚ್ಚರಿಕೆ ನೀಡಿದ್ದಾರೆ. ಇತ್ತೀಚೆಗೆ ಕ್ಷಿಪಣಿ ದಾಳಿಗೆ ನೆತನ್ಯಾಹು ಗಾಯಗೊಂಡಿದ್ದಾರೆ. ಇದರಿಂದ ನೆತನ್ಯಾಹು ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿಲ್ಲ ಎಂಬ ವದಂತಿಯನ್ನು ಇರಾನ್ ಹಬ್ಬಿಸಿತ್ತು. ಮಂಗಳವಾರ ನೆತನ್ಯಾಹು ರಾಷ್ಟ್ರೀಯ ಆರೋಗ್ಯ ಕೇಂದ್ರಕ್ಕೆ ಸಾರ್ವಜನಿಕ ಭೇಟಿ ನೀಡಿದ್ದಾರೆ.

ಕದನವಿರಾಮ ಬಯಸಲ್ಲ: ಇರಾನ್ ಸ್ಪೀಕರ್!

ಅಮೆರಿಕ ಮತ್ತು ಇಸ್ರೇಲ್‌ನೊಂದಿಗಿನ ಯುದ್ಧದಲ್ಲಿ ಇರಾನ್ ಕದನವಿರಾಮ ಮಾಡಿಕೊಳ್ಳಲು ಬಯಸುವುದಿಲ್ಲ. ಆಕ್ರಮಣಕಾರಿಗಳನ್ನು ಶಿಕ್ಷೆಗೆ ಒಳಪಡಿಸುವುದೇ ನಮ್ಮ ಗುರಿ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘಾರ್ ಖಾಲಿಬಫ್ ಹೇಳಿದ್ದಾರೆ. ಸೋಮವಾರ ತಡರಾತ್ರಿ ಸಂದರ್ಶನದಲ್ಲಿ ಮಾತನಾಡಿದ ಬಘಾರ್, ಶತ್ರುಗಳು ಯಾವುದೇ(ನೆರೆಯ) ರಾಷ್ಟ್ರಗಳಿಂದ ದಾಳಿ ನಡೆಸಿದರೂ, ನಾವು ಪ್ರಖರ ಪ್ರತಿದಾಳಿ ನಡೆಸುತ್ತೇವೆ ಎಂದು ಬಘಾರ್ ಎಚ್ಚರಿಸಿದ್ದಾರೆ. ಸ್ಪೀಕರ್ ಎಚ್ಚರಿಕೆಯ ನಂತರ ಇರಾನ್ ದಾಳಿ ಇನ್ನಷ್ಟು ಹೆಚ್ಚಿಸಿದೆ.

ಭಾರತದಿಂದ ಹೆಚ್ಚುವರಿ ಡೀಸೆಲ್‌ಗೆ ಬಾಂಗ್ಲಾ ಮನವಿ

ಹೊಸದಿಲ್ಲಿ: ಇಂಧನ ಸಂಗ್ರಹವನ್ನು ಸುಧಾರಿಸಲು ಮತ್ತು ಕೊರತೆಯನ್ನು ತಡೆಗಟ್ಟಲು, ಬಾಂಗ್ಲಾದೇಶವು ಮುಂದಿನ ನಾಲ್ಕು ತಿಂಗಳಲ್ಲಿ ಮಾರ್ಚ್-ಜೂನ್ ಅವಧಿಯಲ್ಲಿ ಭಾರತದಿಂದ ಹೆಚ್ಚುವರಿ 50,000 ಮೆಟ್ರಿಕ್ ಟನ್ ಡೀಸೆಲ್ ಅನ್ನು ನೀಡುವಂತೆ ಔಪಚಾರಿಕವಾಗಿ ವಿನಂತಿಸಿದೆ. ಈ ಕೊರತೆಯನ್ನು ಹಣಕಾಸು ಸಚಿವ ಅಮೀರ್ ಖಸ್ರು ಮಹಮೂದ್ ಚೌಧರಿ ಅವರು ಭಾರತೀಯ ಹೈಕಮಿಷನರ್ ಪ್ರಣಯ್ ವರ್ಮಾ ಅವರಿಗೆ ತಿಳಿಸಿದರು. ಬಾಂಗ್ಲಾದೇಶವು ವಿದ್ಯುತ್ ಉತ್ಪಾದನೆ ಮತ್ತು ಇತರ ಅಗತ್ಯಗಳಿಗಾಗಿ ಆಮದು ಮಾಡಿಕೊಂಡ ಇಂಧನಗಳಾದ ತೈಲ, ಅನಿಲ, ಕಲ್ಲಿದ್ದಲನ್ನು ಹೆಚ್ಚು ಅವಲಂಬಿಸಿದೆ. ಇತ್ತೀಚಿನ ಜಾಗತಿಕ ಅಡೆತಡೆಗಳು ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಸಂಬಂಧಿಸಿವೆ.

ಇನ್ನು 1 ಟನ್ ಬಾಂಬ್ ಅಷ್ಟೇ ಬಳಸುತ್ತೆ ಇರಾನ್!

ಮಧ್ಯ ಪ್ರಾಚ್ಯ ಯುದ್ಧದಲ್ಲಿ ಇಸ್ರೇಲ್ ಮತ್ತು ಅಮೆರಿಕ ಸೇನಾ ನೆಲೆಗಳ ಮೇಲೆ ದಾಳಿ ತೀವ್ರತೆ ಹೆಚ್ಚಿಸಲು ಇರಾನ್ ಹೊಸ ಕಾರ್ಯತಂತ್ರವನ್ನು ರೂಪಿಸಿದೆ. ಯುದ್ಧದಲ್ಲಿನ್ನು 1,000 ಕೆ.ಜಿ. (1 ಟನ್) ಅಥವಾ ಅದಕ್ಕಿಂತ ಹೆಚ್ಚು ಭಾರದ ವಾರ್‌ಹೆಡ್ ಹೊರಬಲ್ಲ ಕ್ಷಿಪಣಿಗಳನ್ನು ಮಾತ್ರ ಉಡಾಯಿಸುವುದಾಗಿ ಇರಾನ್ ಸೇನಾ ಕಮಾಂಡರ್ ನಿಲುವು ತೆಗೆದುಕೊಂಡಿದ್ದಾರೆ. ಇದರಿಂದ ಯುದ್ಧ ಇನ್ನಷ್ಟು ಉಲ್ಬಣಿಸುವುದು ಖಚಿತ. ಶತ್ರುಗಳಿಗೆ ಹೆಚ್ಚಿನ ಹಾನಿಯಾಗಬೇಕು ಎಂಬ ಉದ್ದೇಶದಿಂದ ಇರಾನ್ 1,000 ಕೆ.ಜಿ. ಅಥವಾ ಅದಕ್ಕಿಂತ ಹೆಚ್ಚಿನ ಭಾರದ ಸ್ಫೋಟಕಗಳನ್ನು ಬಳಸಲು ಆರಂಭಿಸಿದೆ. ಭಾರದ ಸ್ಫೋಟಕಗಳನ್ನು ಕ್ಷಿಪಣಿಗಳಲ್ಲಿ ಬಳಸಿದಾಗ ಕ್ಷಿಪಣಿಯೊಂದರ ದಾಳಿ ವ್ಯಾಪ್ತಿ ಮತ್ತು ಹಾನಿ ಮಾಡಬಲ್ಲ ಶಕ್ತಿ ದ್ವಿಗುಣಗೊಳ್ಳುತ್ತದೆ. ಈವರೆಗೆ ಇರಾನ್ 300ರಿಂದ 500 ಕೆಜಿ. ಭಾರದ ಸ್ಫೋಟಕಗಳನ್ನು ಇರಾನ್ ಕ್ಷಿಪಣಿಗಳು ಹೊತ್ತೊಯ್ಯುತ್ತಿದ್ದವು. ಆದರೆ ಇನ್ನು ಕನಿಷ್ಠಪಕ್ಷ 1000 ಕೆಜಿ ಭಾರದ ಸ್ಫೋಟಕಗಳನ್ನು ಬಳಸಲು ಇರಾನ್ ನಿರ್ಧರಿಸಿದೆ.




ಇರಾನ್ ಕ್ಷಿಪಣಿ ಬತ್ತಳಿಕೆ ಹೀಗಿದೆ: ಮಧ್ಯ ಪ್ರಾಚ್ಯದಲ್ಲಿ ಇರಾನ್ ಅತಿ ದೊಡ್ಡ ಮತ್ತು ವಿವಿಧ ರೀತಿಯ ಕ್ಷಿಪಣಿಗಳನ್ನು ಹೊಂದಿದೆ. ಅಣ್ವಸ್ತ್ರ ಸಾಮರ್ಥ್ಯದ 3,000 ಕಿ.ಮೀ. ವ್ಯಾಪ್ತಿಯ ಸೌಮಾರ್, 2,000 ಕಿ.ಮೀ. ವ್ಯಾಪ್ತಿಯ ಸೆಜ್ಜಿಲ್ ಎಂಬ ಖಂಡಾಂತರ ಕ್ಷಿಪಣಿಯನ್ನು ಇರಾನ್ ಬಳಿಯಿದೆ. ಉತ್ತರ ಕೊರಿಯಾದ ಹ್ವಾಸೊಂಗ್-10 ಕ್ಷಿಪಣಿಗೆ ಹೋಲುವ 2,000ದಿಂದ 3,000 ವ್ಯಾಪ್ತಿಯ ಖೋರಮ್‌ಶಹರ್ ಕ್ಷಿಪಣಿ ಇರಾನ್ ಬತ್ತಳಿಕೆಯಲ್ಲಿದ್ದು, ಇದರ ಪೇಲೋಡ್ ಸಾಮರ್ಥ್ಯ 1,800 ಕೆ.ಜಿ. ಆಗಿದೆ.

ಐಇಎ ಯೋಜನೆಗೆ ಭಾರತ ಸೇರಲ್ಲ

ತೈಲ ಬೆಲೆಗಳನ್ನು ತಗ್ಗಿಸುವ ಪ್ರಯತ್ನದ ಭಾಗವಾಗಿ ಕಾರ್ಯತಂತ್ರದ ತೈಲ ನಿಕ್ಷೇಪಗಳನ್ನು ಬಿಡುಗಡೆ ಮಾಡುವ ಅಂತಾರಾಷ್ಟ್ರೀಯ ಇಂಧನ ಸಂಸ್ಥೆ (ಐಇಎ)ಯೋಜನೆಗೆ ಭಾರತ ಸೇರುವುದಿಲ್ಲ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ. ವಿಶ್ವದ ಮೂರನೇ ಅತಿದೊಡ್ಡ ತೈಲ ಆಮದು ಮತ್ತು ಬಳಕೆದಾರ ರಾಷ್ಟ್ರವಾದ ಭಾರತವು 53.3 ಲಕ್ಷ ಟನ್ ಭೂಗತ ವ್ಯೂಹಾತ್ಮಕ ನಿಕ್ಷೇಪಗಳನ್ನು ಹೊಂದಿದೆ. ಆದರೆ, ಸದ್ಯ ಶೇ.80ರಷ್ಟು ಮಾತ್ರ ಭರ್ತಿಯಾಗಿವೆ. ಹೆಚ್ಚುತ್ತಿರುವ ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಕಚ್ಚಾ ತೈಲದ ಬೆಲೆಗಳು ಪ್ರತಿ ಬ್ಯಾರೆಲ್‌ಗೆ 120 ಡಾಲರ್‌ಗೆ ಹತ್ತಿರವಾಗುತ್ತಿರುವ ಹಿನ್ನಲ್ಲೇ ಜಿ7 ರಾಷ್ಟ್ರಗಳು ತೈಲ ನಿಕ್ಷೇಪಗಳನ್ನು ಬಿಡುಗಡೆ ಮಾಡುವ ಸಾಧ್ಯತೆಯ ಬಗ್ಗೆ ಚರ್ಚಿಸಲಿವೆ. ಬಿಕ್ಕಟ್ಟು ನಮ್ಮ ಸೃಷ್ಟಿಯಲ್ಲ. ಇದಕ್ಕೆ ಕಾರಣರಾದವರು ಅದನ್ನು ನಿಭಾಯಿಸಬೇಕು ಮತ್ತು ಸರಾಗಗೊಳಿಸುವ ಪರಿಸ್ಥಿತಿಗಳನ್ನು ಸೃಷ್ಟಿಸಬೇಕು ಎಂದು ಭಾರತೀಯ ಮೀಸಲುಗಳನ್ನು ಬಿಡುಗಡೆ ಮಾಡುವುದನ್ನು ತಳ್ಳಿಹಾಕಿದ ಮೂಲಗಳು ಹೇಳಿವೆ.

ರಫ್ತುದಾರರಿಗೆ ಸಹಾಯ ಮಾಡಲು ಕೇಂದ್ರ ಸಿದ್ಧತೆ

ಹೊಸದಿಲ್ಲಿ: ಪಶ್ಚಿಮ ಏಷ್ಯಾದ ಬಿಕ್ಕಟ್ಟನ್ನು ಎದುರಿಸಲು ಸಹಾಯ ಮಾಡಲು ವಿಮಾ ಕ್ಷೇತ್ರದಲ್ಲಿ ರಫ್ತುದಾರರಿಗೆ ಸಹಾಯ ಮಾಡಲು ಸರ್ಕಾರ ಚಿಂತಿಸುತ್ತಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮಂಗಳವಾರ ಹೇಳಿದ್ದಾರೆ. ಅಂತರ-ಸಚಿವಾಲಯದ ಗುಂಪು ಪ್ರತಿದಿನ ಬೆಳವಣಿಗೆಗಳ ಮೇಲೆ ನಿಗಾ ಇಡುತ್ತಿದೆ. ರಫ್ತುದಾರರೊಂದಿಗೆ ಸಂವಹನ ನಡೆಸುತ್ತಿದೆ ಎಂದು ಹೇಳಿದರು. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಮಧ್ಯೆ ಹಾರ್ಮುಜ್ ಜಲಸಂಧಿಯ ಮುಚ್ಚುವಿಕೆ ಮತ್ತು ಕಡಲ ಮಾರ್ಗಗಳಲ್ಲಿನ ಅಡೆತಡೆಗಳಿಂದಾಗಿ ಭಾರತೀಯ ಬಂದರುಗಳಿಗೆ ಹಿಂದಿರುಗುವ ರಫ್ತು ಸರಕುಗಳನ್ನು ಎದುರಿಸಲು ಕಸ್ಟಮ್ಸ್ ಇಲಾಖೆಯು ಮಾನದಂಡಗಳನ್ನು ಹೊರತಂದಿದೆ.



ಕಪ್ಪು ಮಳೆಗೆ ತತ್ತರಿಸಿದ ಇರಾನ್ ಜನ

ಟೆಹ್ರಾನ್ ನಗರಕ್ಕೆ ಕಪ್ಪು ಮಳೆ ಸುರಿದಂತೆ ವಿಚಿತ್ರ ವಿದ್ಯಮಾನವನ್ನು ಅನುಭವಿಸಿದೆ. ಇರಾನ್‌ನ ರಾಜಧಾನಿ ನಗರದ ನಿವಾಸಿಗಳು ಈ ಮಳೆಯಿಂದ ಉಳಿದ ತೈಲ ಅವಶೇಷವು ಕಟ್ಟಡಗಳು, ಕಾರುಗಳು ಮತ್ತು ರಸ್ತೆಗಳನ್ನು ಆವರಿಸಿದೆ. ಸುಟ್ಟ ಪೆಟ್ರೋಲ್‌ನಂತಹ ಗಾಳಿಯ ವಾಸನೆಯ ಬರುತ್ತಿದೆ ಎಂದು ನಿವಾಸಿಗಳು ಆತಂಕಪಡುತ್ತಿದ್ದಾರೆ. ಅನೇಕರು ಉಸಿರಾಟದ ತೊಂದರೆ ಮತ್ತು ಮೈಗ್ರೇನ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಈ ಹಿನ್ನಲ್ಲೇ ಪ್ರತಿಯೊಬ್ಬರೂ ತಮ್ಮ ಮನೆಗಳಿಂದ ಹೊರಹೋಗುವಾಗ ಮಾಸ್ಕ್ ಧರಿಸುವಂತೆ ಟೆಹ್ರಾನ್‌ನ ರಾಜ್ಯಪಾಲರು ಹೇಳಿಕೆ ನೀಡಿದ್ದಾರೆ. ಹಲವಾರು ಗಂಟೆಗಳ ಕಾಲ ನಗರವನ್ನು ಸುತ್ತುಹಾಕಿದ ನಗರದ ಹಲವಾರು ಇಂಧನ ಸಂಗ್ರಹಣೆ ಮತ್ತು ತೈಲ ಸೌಲಭ್ಯಗಳ ಮೇಲೆ ಇಸ್ರೇಲ್ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಈ ಘಟನೆ ಸಂಭವಿಸಿದೆ.

ಕಿರುಸುದ್ದಿ

ಒಳನುಸುಳುವಿಕೆ ಯತ್ನ ವಿಫಲ: ಉಗ್ರನ ವಧೆ

ಶ್ರೀನಗರ: ಜಮ್ಮು-ಕಾಶ್ಮೀರದ ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಸೇನಾ ಪಡೆಗಳು ಮಂಗಳವಾರ ಒಳನುಸುಳುವಿಕೆ ಯತ್ನ ವಿಫಲಗೊಳಿಸಿದ್ದು, ಎನ್‌ಕೌಂಟರ್‌ನಲ್ಲಿ ಓರ್ವ ಭಯೋತ್ಪಾದಕನನ್ನು ಹೊಡೆದುರುಳಿಸಿದ್ದಾರೆ. ಗುಪ್ತಚರ ಮಾಹಿತಿ ಆಧಾರದ ಮೇಲೆ, ಭದ್ರತಾ ಪಡೆಗಳು ಎಲ್‌ಒಸಿ ನೌಶೆರಾ ಸೆಕ್ಟರ್‌ಲ್ಲಿರುವ ಝಾಂಗರ್‌ನ ಸಾಮಾನ್ಯ ಪ್ರದೇಶದಲ್ಲಿ ಮಧ್ಯಾಹ್ನ 3 ಗಂಟೆಗೆ ಇಬ್ಬರು ಭಯೋತ್ಪಾದಕರ ಚಲನವಲನವನ್ನು ಪತ್ತೆಹಚ್ಚಿವೆ ಎಂದು ವೈಟ್ ನೈಟ್ ಕಾರ್ಪ್ಸ್ ಎಕ್ಸ್‌ನಲ್ಲಿ ತಿಳಿಸಿದೆ. ಆನಂತರ ನಡೆದ ಗುಂಡಿನ ಚಕಮಕಿಯಲ್ಲಿ, ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದಕನೊಬ್ಬನನ್ನು ವಧೆ ಮಾಡಲಾಗಿದೆ ಎಂದು ಹೇಳಿದೆ.

ಗೋಡೆ ಕುಸಿದು ಏಳು ಕಾರ್ಮಿಕರು ಸಾವು

ಗುರುಗ್ರಾಮ: ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ಗೋಡೆ ಕುಸಿದು ಏಳು ಕಾರ್ಮಿಕರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ. ಗುರುಗ್ರಾಮ್‌ನ ಸಿದ್ರಾವಳಿ ಪ್ರದೇಶದ ಸಿಗ್ನೇಚರ್ ಗ್ಲೋಬಲ್ ಸೊಸೈಟಿಯಲ್ಲಿ ಸೋಮವಾರ ಸಂಜೆ ಈ ಘಟನೆ ನಡೆದಿದೆ. ಪೊಲೀಸರ ಪ್ರಕಾರ, ದೊಡ್ಡ ಶಬ್ದದಿಂದ ಗೋಡೆ ಕುಸಿದು ಸುಮಾರು 12ರಿಂದ 15 ಕಾರ್ಮಿಕರು ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದರು. ಸ್ಥಳೀಯ ಪೊಲೀಸರು, ಆಡಳಿತ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು. ಅಧಿಕಾರಿಗಳು ಭಾರೀ ಯಂತ್ರೋಪಕರಣಗಳನ್ನು ಬಳಸಿ ಅವಶೇಷಗಳನ್ನು ತೆಗೆದುಹಾಕಿದ್ದಾರೆ.

ಹೊಸೂರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮತ್ತೊಂದು ವಿಘ್ನ

ಚೆನ್ನೈ: ಹೊಸೂರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮತ್ತೊಂದು ತಡೆ ಎದುರಾಗಿದ್ದು, ಸರ್ಕಾರದ ನಿರ್ಧಾರದ ವಿರುದ್ಧ ರೈತರು ಭಾರೀ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ್ದಾರೆ. ಹೊಸೂರಿನಲ್ಲಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣವನ್ನು ನಿರ್ಮಿಸುವುದು ಸೇರಿದಂತೆ ಮೂಲಸೌಕರ್ಯ ಯೋಜನೆಗಳಿಗಾಗಿ ಸಾವಿರಾರು ಎಕರೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮವನ್ನು ವಿರೋಧಿಸಿ ರೈತರು ಮೆರವಣಿಗೆ ನಡೆಸಿದ್ದಾರೆ. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ವಿಮಾನ ನಿಲ್ದಾಣವು ಕಾರ್ಯಗತಗೊಳಿಸಿದ ರಾಷ್ಟ್ರೀಯ ಪ್ರಾಮುಖ್ಯತೆಯ ರಕ್ಷಣಾ ಯೋಜನೆಗಳಿಗೆ ಆದ್ಯತೆ ನೀಡುವ ಸಲುವಾಗಿ ತಮಿಳುನಾಡು ಮಂಡಿಸಿದ ಹೊಸೂರು ವಿಮಾನ ನಿಲ್ದಾಣ ಯೋಜನೆಯ ಪ್ರಸ್ತಾಪವನ್ನು ಶಿಫಾರಸು ಮಾಡಿರಲಿಲ್ಲ. ಈ ಬೆನ್ನಲ್ಲೇ ರೈತರು ಕೂಡ ಈ ನಿಲ್ದಾಣ ನಿರ್ಮಿಸುವುದನ್ನು ವಿರೋಧಿಸಿದ್ದಾರೆ.

ಅರ್ಹ ಮತದಾರರನ್ನು ಪಟ್ಟಿಯಿಂದ ಹೊರಗಿಡಲ್ಲ

ಕೋಲ್ಕತ್ತಾ: ಯಾರೇ ಅರ್ಹ ಮತದಾರರ ಹೆಸರನ್ನು ಮತದಾರರ ಯಾದಿಯಿಂದ ಕಿತ್ತುಹಾಕುವುದಿಲ್ಲ. ರಾಜ್ಯದಲ್ಲಿ ಮುಕ್ತ, ನ್ಯಾಯೋಚಿತ ಹಾಗೂ ಶಾಂತಿಯುತ ಚುನಾವಣೆ ನಡೆಯಬೇಕೆಂಬುದು ಚುನಾವಣಾ ಆಯೋಗದ ಆಶಯ ಮತ್ತು ಇದಕ್ಕೇ ಪ್ರಾಧಾನ್ಯತೆ ನೀಡುತ್ತದೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮಂಗಳವಾರ ಹೇಳಿದ್ದಾರೆ.

ಚುನಾವಣಾ ಹೊಸ್ತಿನಲ್ಲಿರುವ ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಸಿದ್ಧತೆ ಕುರಿತು ವಿವಿಧ ರಾಜಕೀಯ ಪಕ್ಷಗಳು, ಹಿರಿಯ ಆಡಳಿತಾತ್ಮಕ ಅಧಿಕಾರಿಗಳ ಜತೆ, ಆಯೋಗದ ಎಲ್ಲಾ ಅಧಿಕಾರಿಗಳ ಸಹಿತ ಸರಣಿ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಆಯೋಗದ ಆಶಯವನ್ನು ಸ್ಪಷ್ಟಪಡಿಸಿದರು. ಚುನಾವಣಾ ಆಯೋಗದ ಅಧಿಕಾರಿಗಳ ತಂಡ ದಿಲ್ಲಿಗೆ ಮರಳಿದ ಬಳಿಕ ರಾಜ್ಯದ ಚುನಾವಣಾ ದಿನಾಂಕ ಮತ್ತು ಎಷ್ಟು ಹಂತಗಳಲ್ಲಿ ಚುನಾವಣೆ ನಡೆಸಬೇಕೆಂಬುದನ್ನು ನಿರ್ಧರಿಸುವುದು ಎಂದು ಹೇಳಿದರು.

ರಾಜ್ಯದಲ್ಲಿ ನಿರ್ಭೀತಿಯಿಂದ ಮತ್ತು ಕಟ್ಟುನಿಟ್ಟಾಗಿ ಕಾನೂನು ಸುವ್ಯವಸ್ಥೆ ಅನುಷ್ಠಾನಿಸಲು ಆಯೋಗವು ಅಧಿಕಾರಿಗಳಿಗೆ ನಿರ್ದೇಶವಿತ್ತಿದೆ. ರಾಜ್ಯದ ಕಾನೂನು ಸ್ಥಿತಿಗತಿಗಳನ್ನು ನಾವು ಪರಾಮರ್ಶಿಸಿದ್ದೇವೆ. ಚುನಾವಣೆ ಹಿಂಸಾಚಾರಮುಕ್ತವಾಗಿ ಮತ್ತು ಯಾವುದೇ ಪ್ರಚೋದನೆ ರಹಿತ ನಡೆಯುವುದೆಂದು ಪ.ಬಂಗಾಳ ಸರಕಾರದ ಮುಖ್ಯ ಕಾರ್ಯದರ್ಶಿಗಳು, ಡಿಜಿಪಿ, ಸಿಪಿಗಳು, ಎಸ್‌ಪಿಗಳು ಆಯೋಗಕ್ಕೆ ಆಶ್ವಾಸನೆ ನೀಡಿರುವುದಾಗಿ ಹೇಳಿದರು. ಚುನಾವಣಾ ಪ್ರಕ್ರಿಯೆಗಳ ಸಂದರ್ಭ ರಾಜ್ಯದ ಅಧಿಕಾರಿಗಳು ನಿರ್ದಿಷ್ಟ ಪರಿಮಿತಿಯೊಳಗೆ ಕಾರ್ಯ ನಿರ್ವಹಿಸಬೇಕೆಂದು ಆಯೋಗಕ್ಕೆ ನಿರೀಕ್ಷೆಯಿರುತ್ತದೆ.

ಸ್ವದೇಶಿ ಏರ್ ಡ್ರಾಪೆಬಲ್ ಕಂಟೇನರ್ ಪರೀಕ್ಷೆ ಯಶ

ಹೊಸದಿಲ್ಲಿ: ಡಿಆರ್‌ಡಿಒ ಮತ್ತು ಭಾರತೀಯ ನೌಕಾಪಡೆಯು ಸ್ಥಳೀಯವಾಗಿ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿದ ಏರ್ ಡ್ರಾಪೆಬಲ್ ಕಂಟೇನರ್ ವ್ಯವಸ್ಥೆಯ ನಾಲ್ಕು ಯಶಸ್ವಿ ಇನ್-ಫ್ಲೈಟ್ ಬಿಡುಗಡೆ ಪ್ರಯೋಗಗಳನ್ನು ನಡೆಸಿದೆ. ಇದು ನೌಕಾ ಹಡಗಿಗೆ 150 ಕೆಜಿ ತೂಕದ ಪೇಲೋಡ್ ಅನ್ನು ತಲುಪಿಸಬಲ್ಲದು. ಎಲ್ಲಾ ಅಭಿವೃದ್ಧಿ ವಿಮಾನ ಪ್ರಯೋಗಗಳು ಯಶಸ್ವಿಯಾಗಿ ಪೂರ್ಣಗೊಂಡಿರುವುದರಿಂದ, ಈ ವ್ಯವಸ್ಥೆಯನ್ನು ಶೀಘ್ರದಲ್ಲೇ ನೌಕಾಪಡೆಗೆ ಸೇರಿಸುವ ನಿರೀಕ್ಷೆಯಿದೆ ಎಂದು ರಕ್ಷಣಾ ಸಚಿವಾಲಯ ಮಂಗಳವಾರ ತಿಳಿಸಿದೆ. ನೌಕಾಪಡೆಯ ಅಗತ್ಯವನ್ನು ಪೂರೈಸಲು, ಪಿ8ಐ ವಿಮಾನಕ್ಕಾಗಿ ಎಡಿಸಿ-150 ವ್ಯವಸ್ಥೆಯನ್ನು ಅಲ್ಪಾವಧಿಯಲ್ಲಿಯೇ ಅಭಿವೃದ್ಧಿಪಡಿಸಲಾಯಿತು ಮತ್ತು ಅರ್ಹತೆ ಪಡೆಯಲಾಯಿತು. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ನೌಕಾಪಡೆ ಜಂಟಿಯಾಗಿ ಫೆಬ್ರವರಿ 21 ರಿಂದ ಮಾರ್ಚ್ 1ರ ನಡುವೆ ಗೋವಾ ಕರಾವಳಿಯಲ್ಲಿ ಪಿ8ಐ ವಿಮಾನದಿಂದ ಸ್ಥಳೀಯ ಏರ್ ಡ್ರಾಪೆಬಲ್ ಕಂಟೇನರ್ ಎಡಿಸಿ-150ನ ನಾಲ್ಕು ಯಶಸ್ವಿ ಇನ್-ಫ್ಲೈಟ್ ಬಿಡುಗಡೆ ಪ್ರಯೋಗಗಳನ್ನು ನಡೆಸಿದವು ಎಂದು ಸಚಿವಾಲಯ ತಿಳಿಸಿದೆ. 150 ಕೆಜಿ ಪೇಲೋಡ್ ಅನ್ನು ತಲುಪಿಸಲು ಸ್ಥಳೀಯವಾಗಿ ವಿನ್ಯಾಸಗೊಳಿಸಲಾಗಿರುವ ಮತ್ತು ಅಭಿವೃದ್ಧಿಪಡಿಸಲಾಗಿರುವ 'ಏರ್ ಡ್ರಾಪೆಬಲ್ ಕಂಟೇನರ್' ಕರಾವಳಿಯಿಂದ ದೂರದಲ್ಲಿ ನಿಯೋಜಿಸಲಾಗಿರುವ ಸಮುದ್ರದಲ್ಲಿ ಸಂಕಷ್ಟದಲ್ಲಿರುವ ನೌಕಾ ಹಡಗುಗಳಿಗೆ ತ್ವರಿತ ಪ್ರತಿಕ್ರಿಯೆ ನೀಡಲು, ನಿರ್ಣಾಯಕ ಮಳಿಗೆಗಳು ಅಥವಾ ಉಪಕರಣಗಳು, ವೈದ್ಯಕೀಯ ನೆರವು ಇತ್ಯಾದಿಗಳಿಗೆ ನೌಕಾ ಕಾರ್ಯಾಚರಣೆಯ ಲಾಜಿಸ್ಟಿಕ್ಸ್ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ ಎಂದು ಹೇಳಿದೆ.

ಭಾರತ-ನೇಪಾಳ ಸಂಬಂಧ ಗಾಢವಾಗುವುದು ಖಚಿತ

ಕಠ್ಮಂಡು: ಐತಿಹಾಸಿಕ ನೇಪಾಳ-ಭಾರತ ಸಂಬಂಧಗಳನ್ನು ಮತ್ತಷ್ಟು ಗಾಢವಾಗಿಸುವ ವಿಶ್ವಾಸವನ್ನು ರಾಷ್ಟ್ರೀಯ ಸ್ವತಂತ್ರ ಪಕ್ಷದ (ಆರ್‌ಎಸ್‌ಪಿ) ಪ್ರಧಾನಿ ಅಭ್ಯರ್ಥಿ ಬಲೇಂದ್ರ ಷಾ ಅವರು ಮಂಗಳವಾರ ವ್ಯಕ್ತಪಡಿಸಿದ್ದಾರೆ. ಇವರು ನೇಪಾಳದ ಮೊದಲ ಮಧೇಶಿ ಪ್ರಧಾನಿಯಾಗಲು ಸಿದ್ಧರಾಗಿದ್ದಾರೆ. ಪಕ್ಷದ



ಚುನಾವಣಾ ಯಶಸ್ಸಿಗೆ ಶುಭ ಹಾರೈಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಶುಭಾಶಯಗಳಿಗೆ ಧನ್ಯವಾದಗಳು ಎಂದು ಅವರು ಪೋಸ್ಟ್‌ನಲ್ಲಿ ಬರೆದಿದ್ದಾರೆ. ಮುಂಬರುವ ದಿನಗಳಲ್ಲಿ ನೇಪಾಳ ಮತ್ತು ಭಾರತದ ನಡುವೆ ಇರುವ ಐತಿಹಾಸಿಕ, ನಿಕಟ ಮತ್ತು ಬಹು ಆಯಾಮದ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು, ಗಾಢವಾಗಿಸಲು ಮತ್ತು ಹೆಚ್ಚು ಫಲಿತಾಂಶ ಆಧಾರಿತವಾಗಿಸಲು ನಾವು ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ನಾನು ನನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ ಎಂದು ಹೇಳಿದರು. ಸತತವಾಗಿ ಎರಡು ಬಾರಿ ವಿಶ್ವಕಪ್ ಪ್ರಶಸ್ತಿಯನ್ನು ಯಶಸ್ವಿಯಾಗಿ ಗೆದ್ದ ಭಾರತ ಸರ್ಕಾರ ಮತ್ತು ಭಾರತೀಯ ಜನರಿಗೆ ಷಾ ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅಭಿನಂದನೆಗಳನ್ನು ತಿಳಿಸಿದ್ದಾರೆ. ಮೋದಿ ಅವರು ಸೋಮವಾರ ಆರ್‌ಎಸ್‌ಪಿ ಮುಖ್ಯಸ್ಥ ರಬಿ ಲಮಿಚಾನೆ ಮತ್ತು ಪಕ್ಷದ ಹಿರಿಯ ನಾಯಕ ಷಾ ಅವರನ್ನು ಅವರ ಚುನಾವಣಾ ವಿಜಯಕ್ಕಾಗಿ ಅಭಿನಂದಿಸಿದ್ದರು. ಉಭಯ ದೇಶಗಳ ಪರಸ್ಪರ ಸಮೃದ್ಧಿ, ಪ್ರಗತಿ ಮತ್ತು ಯೋಗಕ್ಷೇಮಕ್ಕಾಗಿ ಅವರೊಂದಿಗೆ ಕೆಲಸ ಮಾಡುವ ಭಾರತದ ಬದ್ಧತೆಯನ್ನು ತಿಳಿಸಿದ್ದರು.

ಮಹಿಳಾ ಮೀಸಲಾತಿ ಶೀಘ್ರ ಕಾಯ್ದೆ ಜಾರಿ?

ಹೊಸದಿಲ್ಲಿ: ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ಜನಗಣತಿಯ ನಂತರದ ಡಿಲಿಮಿಟೇಶನ್ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ಮಹಿಳಾ ಮೀಸಲಾತಿ ಕಾಯ್ದೆ ಜಾರಿಗೆ ತರುವ ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆ. ಕೇಂದ್ರ ಸಚಿವ ಸಂಪುಟಕ್ಕೆ ಔಪಚಾರಿಕ ಪ್ರಸ್ತಾಪವನ್ನು ಸಿದ್ಧಪಡಿಸಲು ಇನ್ನೂ ಯಾವುದೇ ಸೂಚನೆಗಳನ್ನು ನೀಡಲಾಗಿಲ್ಲವಾದರೂ, 2023ರಲ್ಲಿ ಸಂಸತ್ತು ಅಂಗೀಕರಿಸಿದ ಕಾನೂನನ್ನು ತಿದ್ದುಪಡಿ ಮಾಡುವ ಸಾಧ್ಯತೆಯನ್ನು ಅನ್ವೇಷಿಸಲು ಯೋಜನೆಗಳು ನಡೆಯುತ್ತಿವೆ ಎಂದು ಮೂಲಗಳು ತಿಳಿಸಿವೆ. ಸಂವಿಧಾನವನ್ನು ತಿದ್ದುಪಡಿ ಮಾಡುವ ಮೂಲಕ ಲೋಕಸಭಾ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಒದಗಿಸುವ ನಿಬಂಧನೆ ತರಲಾಯಿತು. ಆದರೆ ಇದು ಡಿಲಿಮಿಟೇಶನ್ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಜಾರಿಗೆ ಬರುತ್ತದೆ. ಡಿಲಿಮಿಟೇಶನ್ ಆಯೋಗವು ಲೋಕ ಸಭಾ, ವಿಧಾನಸಭಾ ಕ್ಷೇತ್ರಗಳನ್ನು ಮರುಹೊಂದಿಸಲು ಕಡ್ಡಾಯವಾದ ಸಂಸ್ಥೆಯಾಗಿದೆ. ಅದರ ನಿರ್ಧಾರಗಳನ್ನು ಸುಪ್ರೀಂ ಕೋರ್ಟ್‌ನಲ್ಲಿ ಸಹ ಪ್ರಶ್ನಿಸಲು ಸಾಧ್ಯವಿಲ್ಲ.

100 ಕೋಟಿ ರೂ. ವೆಚ್ಚದಲ್ಲಿ ಸ್ವದೇಶಿ ಉತ್ಪನ್ನಗಳ ಅಪರೂಪದ ವೇದಿಕೆ

ಬರಲಿದೆ ಪಿಎಂ ಏಕತಾ ಮಾಲ್

ಹೊಸದಿಲ್ಲಿ: ದೇಶಾದ್ಯಂತ ತಯಾರಾದ ಸ್ವದೇಶಿ ಉತ್ಪನ್ನಗಳು, ಸ್ಥಳೀಯ ಕರಕುಶಲ ವಸ್ತುಗಳು ಮತ್ತು ವೈವಿಧ್ಯಮಯ ಅಡುಗೆಗಳ ಪ್ರದರ್ಶನ- ವಿಕ್ರಯಕ್ಕೆ ಉತ್ತೇಜಕ ವೇದಿಕೆ ರೂಪದ ಪಿಎಂ ಏಕತಾ ಮಾಲ್ ಶೀಘ್ರದಲ್ಲೇ ದಿಲ್ಲಿಯಲ್ಲಿ ಮೈದಳೆಯಲಿದೆ. ಸುಮಾರು 100 ಕೋಟಿ ರೂ.ವೆಚ್ಚದಲ್ಲಿ ಪಿಎಂ ಏಕತಾ ಮಾಲ್ ನಿರ್ಮಾಣವಾಗಲಿದೆ.



ಪ್ರತೀ ರಾಜ್ಯಕ್ಕೆ ತಲಾ100 ಕೋಟಿ ರೂ.ಬೆಂಬಲ: ದಿಲ್ಲಿ ಪ್ರವಾಸೋದ್ಯಮ ಮತ್ತು ಸಾರಿಗೆ ಅಭಿವೃದ್ಧಿ ನಿಗಮ ಪ್ರಸ್ತಾವಿಸಿರುವ ಪ್ರಸ್ತುತ ಯೋಜನೆಯು, ರಾಜ್ಯಗಳಿಗೆ ಬಂಡವಾಳ ಹೂಡಿಕೆಗಾಗಿ ಕೇಂದ್ರದ ವಿಶೇಷ ನೆರವಿನ ಯೋಜನೆಯಲ್ಲಿ ಸಾಕಾರಗೊಳ್ಳಲಿದೆ. ಕೇಂದ್ರ ವಿಶೇಷ ನೆರವಿನ ಯೋಜನೆಯಲ್ಲಿ ರಾಜ್ಯಗಳಿಗೆ ಸುಮಾರು 50 ವರ್ಷಗಳ ಸುದೀರ್ಘಾವಧಿಯಲ್ಲಿ ಮರುಪಾವತಿಸಬಹುದಾದ ಬಡ್ಡಿಮುಕ್ತ ಸಾಲಸೌಲಭ್ಯ ಕಲ್ಪಿಸಲಾಗುತ್ತದೆ. ಅಂದರೆ ಪ್ರತೀ ರಾಜ್ಯಗಳಿಗೆ ಕನಿಷ್ಠ 100 ಕೋಟಿ ರೂ.ಹಣಕಾಸು ಬೆಂಬಲ ನೀಡಲಾಗುತ್ತದೆ. ದೇಶಾದ್ಯಂತ ಏಕತಾ ಮಾಲ್‌ಗಳ ನಿರ್ಮಾಣಕ್ಕಾಗಿ ಕೇಂದ್ರ ಸರಕಾರ 5ಸಾವಿರ ಕೋಟಿ ರೂ.ಮೀಸಲಿರಿಸಿದೆ.

ದೇಶದ ಕರಕುಶಲ ಕರ್ಮಿಗಳು ಗ್ರಾಹಕರೊಂದಿಗೆ ಸುಲಭವಾಗಿ ವ್ಯವಹರಿಸಲು ಅವಕಾಶವಿರುವ ಪಿಎಂ ಏಕತಾಮಾಲ್ , ಕಾಯಂ ಮಾರುಕಟ್ಟೆ ಕೇಂದ್ರವಾಗಿ ಕಾರ್ಯ ನಿರ್ವಹಿಸಲಿದೆ. ವಾಣಿಜ್ಯಿಕವಾಗಿ ಲಾಭದಾಯಕವಾಗಬಲ್ಲ ಮತ್ತು ಜನರನ್ನು ಸೂಜಿಗಲ್ಲಂತೆ ಸೆಳೆಯಬಲ್ಲ ಹಣಕಾಸು ಕೇಂದ್ರ ಅಥವಾ ಪ್ರಮುಖ ಪ್ರವಾಸೀ ಕೇಂದ್ರದಲ್ಲಿ ಮಾಲ್ ತೆರೆಯಲಾಗುವುದು. ಐಎನ್‌ಎ ದಿಲ್ಲಿ ಹಾತ್‌ಗೆ ಸಮೀಪ ಪೀತಂಪುರದ ನೇತಾಜಿ ಸುಭಾಷ್ ಸ್ಥಳ ಅಥವಾ ಪುರಸಭೆಯ ಆಡಳಿತಾತ್ಮಕ ಸೌಕರ್ಯಗಳು ಈಗಾಗಲೆ ಇರುವ ಮಂಜು ಕಾ ತಿಲ್ಲಾದಲ್ಲಿ ಮಾಲ್ ತಲೆಯೆತ್ತೋ ಸಾಧ್ಯತೆಗಳಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯ ಉತ್ಪಾದಕರಿಗೆ ರಾಷ್ಟ್ರೀಯ ವೇದಿಕೆಯಿದು: ವಿವಿಧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಸುವ 36 ಸ್ಟಾಲ್‌ಗಳು ಮಾಲ್‌ನಲ್ಲಿರಲಿವೆ. ತನ್ಮೂಲಕ ಒಂದು ಜಿಲ್ಲೆ, ಒಂದು ಉತ್ಪನ್ನ ಉಪಕ್ರಮದಡಿ, ತಮ್ಮ ವಿಶಿಷ್ಟ ಉತ್ಪನ್ನಗಳ ಜನರಿಗೆ ಪರಿಚಯಿಸಲು ದೇಶದ ಪ್ರತಿಯೊಂದು ಜಿಲ್ಲೆಗೂ ಮಾಲ್‌ಅತ್ಯುತ್ತಮ ವೇದಿಕೆಯಾಗಲಿದೆ. ಭಾರತದ ಪ್ರತಿಯೊಂದು ಜಿಲ್ಲೆಯ ವಿಶಿಷ್ಟ ಕರಕೌಶಲಗಳು ಹಾಗೂ ವಿಶೇಷತೆಗಳ ಎತ್ತಿ ಹಿಡಿಯೋದು, ತನ್ಮೂಲಕ ಸ್ಥಳೀಯ ಉತ್ಪಾದಕರಿಗೆ ರಾಷ್ಟ್ರೀಯ ವೇದಿಕೆಯನ್ನು ಸೃಜಿಸೋದು ಮಾಲ್‌ನ ಆಶಯವಾಗಿದೆ.

ಗಡಿ ರಾಷ್ಟ್ರಗಳಿಂದ ಹೂಡಿಕೆ ಹರಿದುಬರಲು ಪ್ರೋತ್ಸಾಹ

ನೆರೆರಾಷ್ಟ್ರಗಳಿಗೆ ಎಫ್‌ಡಿಐ ನಿರ್ಬಂಧ ಸಡಿಲ?

ಹೊಸದಿಲ್ಲಿ: ಭಾರತದೊಂದಿಗೆ ಗಡಿ ರೇಖೆ ಹಂಚಿಕೊಳ್ಳುವ ಚೀನಾ ಸಹಿತ ನೆರೆಯ ರಾಷ್ಟ್ರಗಳಿಂದ ಹರಿದುಬರುವ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಮೇಲಿನ ನಿರ್ಬಂಧಗಳನ್ನು ಕೇಂದ್ರ ಸರ್ಕಾರ ಸಡಿಲಗೊಳಿಸಿದೆ ಎಂದು ಸರ್ಕಾರಿ ಮೂಲಗಳು ಮಂಗಳವಾರ ತಿಳಿಸಿವೆ.

ಇವುಗಳಲ್ಲಿ ಬಾಂಗ್ಲಾದೇಶ, ಪಾಕಿಸ್ತಾನ, ಭೂತಾನ್, ನೇಪಾಳ, ಮ್ಯಾನ್ಮಾರ್ ಮತ್ತು ಅಫ್ಘಾನಿಸ್ತಾನವೂ ಒಳಗೊಂಡಿವೆ. ಚೀನಾದಿಂದ ಬರುವ ಎಫ್‌ಡಿಐ ಕಡಿಮೆಯಿದ್ದರೂ, ದ್ವಿಪಕ್ಷೀಯ ವ್ಯಾಪಾರ ಹಲವು ಪಟ್ಟು ಹೆಚ್ಚಾಗಿದೆ.

ಚೀನಾ ಈಗ ಭಾರತದ ಎರಡನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿ ಹೊರಹೊಮ್ಮಿದೆ. ಆದರೆ ಈ ಬಗ್ಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಯಾವುದೇ ಘೋಷಣೆಗಳನ್ನು ಮಾಡಿಲ್ಲ.

ಜೇವರ್ ವಿ.ನಿಲ್ದಾಣದ ರಸ್ತೆ ಅಭಿವೃದ್ಧಿಗೆ 3,630 ಕೋಟಿ: ಉತ್ತರಪ್ರದೇಶದ ನೂತನ ಜೇವರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಸ್ತೆ ಅಭಿವೃದ್ಧಿಗೊಳಿಸಲು 3,630.77 ಕೋಟಿ ರೂ. ವೆಚ್ಚವನ್ನು ಕೇಂದ್ರ ಸಚಿವ ಸಂಪುಟವು ಮಂಜೂರು ಮಾಡಿದೆ. ದಕ್ಷಿಣ ದಿಲ್ಲಿ, ಫರೀದಾಬಾದ್ ಮತ್ತು ಗುರುಗ್ರಾಮದಿಂದ ವಿಮಾನ ನಿಲ್ದಾಣವನ್ನು ನೇರ ಸಂಪರ್ಕಗೊಳಿಸುವ ಅತಿ ವೇಗದ 31.42 ಕಿ.ಮೀ. ರಸ್ತೆ ಯೋಜನೆ ಇದಾಗಿದೆ.

- ಮಧುರೈ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ನಿಲ್ದಾಣವನ್ನಾಗಿ ಘೋಷಿಸಲು ಕೇಂದ್ರ ಸಂಪುಟ ಅನುಮತಿ. ಇದರಿಂದ ಮಧುರೈ ಮೀನಾಕ್ಷಿ, ಕೂಡಲ್ ಅಳಗರ್, ತಿರುಪ್ಪಾರನ್‌ಕೂಂಡ್ರಂ ಮುರುಗನ್, ಪಲಮುದಿರ್‌ಚೋಲೈ ಮುರುಗನ್ ಮತ್ತು ರಾಮೇಶ್ವರಂ ತೀರ್ಥಯಾತ್ರೆ ಇನ್ನಷ್ಟು ಸುಧಾರಣೆ
- ಪಶ್ಚಿಮ ಬಂಗಾಳ-ಜಾರ್ಖಂಡ್ ಸಂಪರ್ಕಿಸುವ 4,474 ಕೋಟಿ ರೂ. ವೆಚ್ಚದ 2 ರೈಲ್ವೆ ಯೋಜನೆಗಳಿಗೆ ಕೇಂದ್ರ ಗ್ರೀನ್ ಸಿಗ್ನಲ್

ದಿವಾಳಿ ಕಾನೂನು ತಿದ್ದುಪಡಿಗೆ ಒಪ್ಪಿಗೆ: ದಿವಾಳಿ ಕಾನೂನು ಮತ್ತು ಕಂಪನಿಗಳ ಕಾಯ್ದೆ 2013ರಲ್ಲಿನ ತಿದ್ದುಪಡಿಗಳಿಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ.

ಜಲ್ ಜೀವನ್ ಮಿಷನ್ ವಿಸ್ತರಣೆ: ಜಲ್ ಜೀವನ್ ಮಿಷನ್ ಯೋಜನೆಯನ್ನು 8.7 ಲಕ್ಷ ಕೋಟಿ ರೂ. ವೆಚ್ಚದಲ್ಲಿ ಡಿಸೆಂಬರ್ 2028ರವರೆಗೆ ವಿಸ್ತರಿಸಲು ಕೇಂದ್ರ ಸಂಪುಟ ಅನುಮೋದನೆ ನೀಡಿದ್ದಾಗಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಆನೆ-ಮಾನವ ಸಂಘರ್ಷ ಶಾಶ್ವತ ಪರಿಹಾರಕ್ಕೆ ಯತ್ನ: ಸಚಿವ ಖಂಡ್ರೆ

ಮಡಿಕೇರಿ: ಆನೆ-ಮಾನವ ಸಂಘರ್ಷ ನಿಯಂತ್ರಿಸಲು 2025-26ನೇ ಸಾಲಿನಲ್ಲಿ ಮಡಿಕೇರಿ ವಿಭಾಗಕ್ಕೆ 7 ಕಿ.ಮೀ ಮತ್ತು ನಾಗರಹೊಳೆ ವಿಭಾಗಕ್ಕೆ 20 ಕಿ.ಮೀ. ರೈಲು ಹಳಿ ತಡೆಗೋಡೆ ಮಂಜೂರಾಗಿದ್ದು, ಶೀಘ್ರ ಕಾಮಗಾರಿ ಆರಂಭಿಸಲಾಗುವುದು ಎಂದು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ವಿಧಾನ ಪರಿಷತ್ತಿನಲ್ಲಿ ಮಂಗಳವಾರ ಶೂನ್ಯವೇಳೆಯಲ್ಲಿ ಸುಜಾ ಕುಶಾಲಪ್ಪ ಅವರ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಫೆ.28ರಂದು ಕಾಡಿನಂಚಿನ ನಿವಾಸಿ 17 ವರ್ಷದ ಬಾಲಕ ಆನೆ ದಾಳಿಯಿಂದ ಮೃತಪಟ್ಟಿದ್ದರೆ, ಮಾ.9ರಂದು ಕಾಡಿನೊಳಗೇ ವಾಸಿಸುತ್ತಿದ್ದ 55 ವರ್ಷದ ಬುಡಕಟ್ಟು ಮಹಿಳೆ ಸಾವಿಗೀಡಾಗಿದ್ದಾರೆ. ಇದು ಅತ್ಯಂತ ನೋವಿನ ಸಂಗತಿ ಎಂದರು.

ಜೀವ ಅತ್ಯಂತ ಅಮೂಲ್ಯವಾದ್ದು, ಇದಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಅರಣ್ಯ ಇಲಾಖೆ ಮಾನವ-ವನ್ಯಜೀವಿ ಸಂಘರ್ಷ ತಡೆಯಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆನೆ ನಿಗ್ರಹ ಕಂದಕ, ಸೌರ ವಿದ್ಯುತ್ ಬೇಲಿ ನಿರ್ವಹಣೆ ಮಾಡಲಾಗುತ್ತಿದೆ. ಎರಡು ಆನೆ ಕಾರ್ಯಪಡೆ ಕಾರ್ಯನಿರ್ವಹಿಸುತ್ತಿದೆ. ಈಗ ಎರಡು ಪುಂಡಾನೆಗಳ ಸೆರೆಗೆ ಮುಖ್ಯ ವನ್ಯಜೀವಿ ಪರಿಪಾಲಕರು ಅನುಮತಿ ನೀಡಿದ್ದಾರೆ ಎಂದು ತಿಳಿಸಿದರು.

ಈ ಎರಡೂ ಪ್ರಕರಣದಲ್ಲಿ ಈಗಾಗಲೇ ತಲಾ 5 ಲಕ್ಷ ರೂ. ಪರಿಹಾರವನ್ನು ಮೃತರ ಹತ್ತಿರದ ಬಂಧುಗಳಿಗೆ ವಿತರಿಸಲಾಗಿದ್ದು, ವಾರದೊಳಗೆ ಉಳಿದ ತಲಾ 15 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ತಿಳಿಸಿದರು. ಆನೆ-ಮಾನವ ಸಂಘರ್ಷ ನಿಯಂತ್ರಿಸಲು ಶಾಶ್ವತ ಪರಿಹಾರ ಕ್ರಮಗಳ ಬಗ್ಗೆಯೂ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಸಂತ್ರಸ್ತ ಕುಟುಂಬಕ್ಕೆ ಅಪ್ಪಚ್ಚುರಂಜನ್ ಸಾಂತ್ವನ



ಕುಶಾಲನಗರ: ಕಾಡಾನೆ ದಾಳಿಯಿಂದ ಮೃತಪಟ್ಟ ವಾಲ್ನೂರು ತ್ಯಾಗತ್ತೂರು ಗ್ರಾಮ ಪಂಚಾಯತ್ ಮಾಜಿ ಸದಸ್ಯೆ ಜಲಜಾಕ್ಷಿ ಅವರ ಬಾಳೆಗುಂಡಿ ನಿವಾಸಕ್ಕೆ ಮಾಜಿ ಶಾಸಕ ಅಪ್ಪಚ್ಚುರಂಜನ್ ಭೇಟಿ ನೀಡಿ ಮೃತರ ಅಂತಿಮ ದರ್ಶನ ಪಡೆದು ಕುಟುಂಬಸ್ಥರಿಗೆ ಸಾಂತ್ವನ ಹೇಳುವುದರೊಂದಿಗೆ ವೈಯಕ್ತಿಕ ಆರ್ಥಿಕ ಸಹಕಾರ ನೀಡಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಡಗು ಜಿಲ್ಲೆಯಲ್ಲಿ ಕಾಡಾನೆ, ವನ್ಯಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಕಳೆದ ಎರಡು ತಿಂಗಳಲ್ಲಿ ಕೊಡಗಿನಲ್ಲಿ ಕಾಡಾನೆ ದಾಳಿಗೆ ನಾಲ್ವರು ಬಲಿಯಾಗಿರುವುದು ಆತಂಕದ ವಿಚಾರ. ನಮ್ಮ ಬಿಜೆಪಿ ಸರಕಾರದ ಅವಧಿಯಲ್ಲಿ ಅನುದಾನ ಕ್ರೋಢೀಕರಿಸಿ ಜಿಲ್ಲೆಯಲ್ಲಿ 350 ಕಿಮೀ ನಷ್ಟು ಆನೆ ಕಂದಕ ನಿರ್ಮಿಸಲಾಗಿದೆ. ಸರಕಾರ ಕೂಡಲೇ ಎಚ್ಚೆತ್ತುಕೊಂಡು ಕಾಡಾನೆ, ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ ಕ್ರಮವಹಿಸಬೇಕಿದೆ ಎಂದರು.

ಈ ಸಂದರ್ಭ ಬಿಜೆಪಿ ಮಂಗಳೂರು ವಿಭಾಗದ ಪ್ರಭಾರಿ, ಕೊಡಗು ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಬಿ.ಬಿ.ಭಾರತೀಶ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಆರ್.ಕೆ.ಚಂದ್ರ, ಸೋಮವಾರಪೇಟೆ ಮಂಡಲ ಅಧ್ಯಕ್ಷ ಗೌತಮ್, ವಾಲ್ನೂರು ತ್ಯಾಗತ್ತೂರು ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ ಭುವನ್, ಗಣೇಶ್, ನಂಜರಾಯಪಟ್ಟಣ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ಸಿ.ಮುರಳಿಮಾದಯ್ಯ, ಕುಶಾಲನಗರ ಎಪಿಎಂಸಿ ಮಾಜಿ ಉಪಾಧ್ಯಕ್ಷ ವಿಜಯ ಜತ್ತ ಮತ್ತಿತರರು ಇದ್ದರು.

ಬದಿಯಡ್ಕ ರಸ್ತೆ ಮಧ್ಯೆ ಕಾಡುಕೋಣ ಪ್ರತ್ಯಕ್ಷ

ಕಾಸರಗೋಡು: ನೀರ್ಚಾಲು ಬಳಿಯ ಕನ್ನೆಪ್ಪಾಡಿಯಲ್ಲಿ ಸೋಮವಾರ ತಡರಾತ್ರಿ 12 ಗಂಟೆ ವೇಳೆ ಕಾಡುಕೋಣ ಕಂಡುಬಂದಿದೆ. ಇಲ್ಲಿನ ಬಸ್ ಪ್ರಯಾಣಿಕರ ತಂಗುದಾಣದ ಮುಂದೆ ಸುಮಾರು ಹೊತ್ತು ನಿಂತಿದ್ದ ಕಾಡುಕೋಣದ ಚಿತ್ರವನ್ನು ಈ ರಸ್ತೆಯಲ್ಲಿ ಸಂಚರಿಸಿದವರು ತೆಗೆದಿದ್ದರು. ಈ ಪ್ರದೇಶದಲ್ಲಿದ್ದ ಬೀದಿ ನಾಯಿಗಳು ಕಾಡುಕೋಣವನ್ನು ಸುತ್ತುವರಿದು ದಾಳಿಗೆ ಮುಂದಾಗಿದ್ದವು. ಇದರಿಂದ ಕಾಡುಕೋಣ ಅಲ್ಲಿಂದ ಪರಾರಿಯಾಯಿತು. ಕೆಲವು ದಿನಗಳ ಹಿಂದೆಯೂ ಕನ್ನೆಪ್ಪಾಡಿಯಲ್ಲಿ ಕಾಡುಕೋಣವನ್ನು ಕಂಡಿರುವುದಾಗಿ ಹೇಳಲಾಗುತ್ತದೆ. ಆದರೆ ಸೋಮವಾರ ರಾತ್ರಿ ಕಂಡ ಕಾಡುಕೋಣದ ದೃಶ್ಯ ಬಹಿರಂಗವಾಗಿರುವುದರಿಂದ ನಾಗರಿಕರಲ್ಲಿ ಭೀತಿ ಉಂಟಾಗಿದೆ.

ತೀವ್ರಗೊಂಡ ಉಷ್ಣತೆ ಹಾಗೂ ನೀರಿನ ಕ್ಷಾಮದಿಂದಾಗಿ ಕಾಡುಕೋಣಗಳು ನಾಡಿಗಿಳಿದಿರುವುದಾಗಿ ಹೇಳಲಾಗುತ್ತಿದೆ.

ಹಣಕಾಸು ಸಚಿವರಿಂದ ಹೊಸದುರ್ಗ ಉಪ ಖಜಾನೆಯ ನೂತನ ಕಟ್ಟಡ ಉದ್ಘಾಟನೆ

ಜನಸ್ನೇಹಿಯಾಗಿ ಸಾಗುತ್ತಿವೆ ಕೇರಳ ಖಜಾನೆ ಸೇವೆ



ಕಾಸರಗೋಡು: ಖಜಾನೆ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ (ಟಿಐಡಿಪಿ)ಯಡಿ ನೂತನವಾಗಿ ನಿರ್ಮಿಸಲಾದ ಆಧುನಿಕ ಸೌಲಭ್ಯಗಳನ್ನು ಹೊಂದಿರುವ ಹೊಸದುರ್ಗ ಉಪ ಖಜಾನೆ (ಸಬ್ ಟ್ರಷರಿ)ಯ ಕಟ್ಟಡವನ್ನು ಕೇರಳ ಹಣಕಾಸು ಖಾತೆ ಸಚಿವ ಕೆ.ಎನ್. ಬಾಲಗೋಪಾಲ್ ಆನ್‌ಲೈನ್ ಮೂಲಕ ಮಂಗಳವಾರ ಉದ್ಘಾಟಿಸಿದರು.

ನೌಕರರು ಮತ್ತು ಪಿಂಚಣಿದಾರರು ಖಜಾನೆ ಇಲಾಖೆಯನ್ನು ಹೆಚ್ಚು ಅವಲಂಬಿಸಿದ್ದಾರೆ ಎಂದು ಸಚಿವರು ಹೇಳಿದರು. ಖಜಾನೆಗೆ ಭೇಟಿ ನೀಡುವವರಲ್ಲಿ ಹೆಚ್ಚಿನವರು ಹಿರಿಯ ನಾಗರಿಕರಾಗಿರುವುದರಿಂದ ಅವರಿಗೆ ವಿಶೇಷ ಆದ್ಯತೆ ನೀಡಬೇಕು ಮತ್ತು ಖಜಾನೆ ನೌಕರರು ತಮ್ಮ ಅಗತ್ಯಗಳನ್ನು ಸಾಧ್ಯವಾದಷ್ಟು ಸರಳ ಮತ್ತು ತ್ವರಿತವಾಗಿ ನಿರ್ವಹಿಸಲು ಕಾಳಜಿ ವಹಿಸಬೇಕು.

ಆಧುನೀಕರಣದ ಭಾಗವಾಗಿ ಮೊಬೈಲ್ ಅಪ್ಲಿಕೇಶನ್‌ಗಳು ಮತ್ತು ವೆಬ್‌ಸೈಟ್‌ಗಳಂತಹ ವಿವಿಧ ಡಿಜಿಟಲ್ ವ್ಯವಸ್ಥೆಗಳನ್ನು ಪರಿಚಯಿಸುವುದರೊಂದಿಗೆ ಖಜಾನೆ ಸೇವೆಗಳು ಜನರಿಗೆ ಹೆಚ್ಚು ವೇಗವಾಗಿ ಹಾಗೂ ಜನಸ್ನೇಹಿಯಾಗಿ ಲಭ್ಯವಾಗುತ್ತಿವೆ ಎಂದು ಅವರು ನುಡಿದರು.


ಕಾಞಂಗಾಡು ನಗರಸಭೆಯ ಮಿನಿ ಕಾನ್ಫರೆನ್ಸ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಕಾಞಂಗಾಡು ಶಾಸಕ ಇ.ಚಂದ್ರಶೇಖರನ್ ಅಧ್ಯಕ್ಷತೆ ವಹಿಸಿ, ಶಿಲಾಫಲಕ ಅನಾವರಣಗೊಳಿಸಿದರು. ಉತ್ತರ ಪ್ರಾಂತ ಉಪನಿರ್ದೇಶಕ ಎಂ.ಶಾಜಿ ವರದಿ ಮಂಡಿಸಿದರು. ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ, ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಕೆ.ಸುಜಾತ, ಕಾಞಂಗಾಡು ನಗರಸಭಾ ಅಧ್ಯಕ್ಷ ವಿ.ವಿ.ರಮೇಶನ್, ನಗರಸಭಾ ಉಪಾಧ್ಯಕ್ಷೆ ಲತಾ ಬಾಲಕೃಷ್ಣನ್, ಅಜಾನೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ವಿ.ವಿ. ತುಳಸಿ, ಪುಲ್ಲೂರು ಪೆರಿಯ ಗ್ರಾಮ ಪಂಚಾಯತ್ ಅಧ್ಯಕ್ಷೆ ಡಾ.ಸಬಿತಾ ಚೂರಿಕ್ಕಾಡ್ ಮಾತನಾಡಿದರು.

ನಗರಸಭೆಯ ಸ್ಥಾಯೀ ಸಮಿತಿ ಅಧ್ಯಕ್ಷರಾದ ಎಂ.ಪಿ.ಜಾಫರ್, ಎಂ.ಸುಮತಿ, ಮುಹಮ್ಮದ್ ಮುರಿಯಾನವಿ, ಫೌಜಿಯಾ ಶರೀಫ್, ಎಂ.ವಿಜಯನ್, ನಗರಸಭೆಯ ಸದಸ್ಯ ಪಿ.ವಿ.ಚಂದ್ರನ್, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಮುಂತಾದವರು ಮಾತನಾಡಿದರು. ಖಜಾನೆ ಇಲಾಖೆ ನಿರ್ದೇಶಕ ವಿ.ಸಾಜನ್ ಸ್ವಾಗತಿಸಿ, ಕಾಸರಗೋಡು ಜಿಲ್ಲಾ ಖಜಾನೆ ಅಧಿಕಾರಿ ಎ.ಸುನೀಲ್‌ಕುಮಾರ್ ವಂದಿಸಿದರು.

ಏಳನೆಯ ಬ್ಲಾಕ್, ಚೊಕ್ಕಬೆಟ್ಟು ಕ್ರಾಸ್‌ನಲ್ಲಿ ಹೆಚ್ಚು ಸಮಸ್ಯೆ

ಇಡ್ಯಾದಲ್ಲೂ ಇದೆ ಮಾರ್ರ್ರೆ ನೀರು ಸಮಸ್ಯೆ!

ದಿಗಂತ ವಾಟರ್ ಚೆಕ್



ವಾರ್ಡ್ ನಂಬರ್ 6 ಇಡ್ಯಾ (ಪೂರ್ವ)

ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂಬರ್ ಆರರಲ್ಲಿ ಈ ಹಿಂದೆ ಎತ್ತರದ ಪ್ರದೇಶಗಳಿಗೆ ನೀರು ಸಿಗದೇ ಜನ ಪರಿತಪಿಸುವುದು ಸಾಮಾನ್ಯವಾಗಿತ್ತು. ಆದರೆ ಇದೀಗ ಜಲಸಿರಿಯ ಅವಾಂತರ ಬರುವ ನೀರನ್ನು ಇಲ್ಲದಂತೆ ಮಾಡಿದೆ ಎಂದು ದೂರುತ್ತಾರೆ ಇಲ್ಲಿನ ನಿವಾಸಿಗಳು.

ಹಲವಾರು ಕಡೆ ಸಂಪರ್ಕ ಸಾಧ್ಯವಾಗದೆ ನೀರು ಪೂರೈಕೆಯಾಗುತ್ತಿಲ್ಲ. ವಾರ್ಡ್ ವ್ಯಾಪ್ತಿಯ ನವನಗರ, ಆಶ್ರಯ ಕಾಲೋನಿ, ಆದರಮೈಲು, ಅಲೆಕ್ಸ್ ಕಟ್ಟಡ ವ್ಯಾಪ್ತಿ, ಏಳನೆಯ ಬ್ಲಾಕ್, ಚೊಕ್ಕಬೆಟ್ಟು ಕ್ರಾಸ್ ಹೀಗೆ ಎಲ್ಲೆಲ್ಲೂ ನೀರಿನ ಸಮಸ್ಯೆ ಇದೆ. ಜನಪ್ರತಿನಿಧಿಗಳು ಈಗ ಇಲ್ಲದಿದ್ದರೂ ನಿಕಟಪೂರ್ವ ಸದಸ್ಯೆ ಸರಿತಾ ಆರ್ ಶಶಿಧರ್ ಅವರ ಮನವಿಯ ಮೇರೆಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ.

ಕೆಟ್ಟು ನಿಂತ ಟ್ಯಾಂಕರ್‌ಗಳು

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಇರುವ ಟ್ಯಾಂಕರ್‌ಗಳಲ್ಲಿ ಒಂದೆರಡು ಕೆಟ್ಟು ನಿಂತಿದ್ದು ಒಂದು ಟ್ಯಾಂಕರ್ ಮೂಲಕ ಸಾವಿರ ಮನೆಗಳಿಗೆ ನೀರು ಪೂರೈಕೆ ಮಾಡುವುದು ಕಷ್ಟಕರವಾಗಿದೆ. ವಿವಿಧ ವಾರ್ಡುಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಅನಿವಾರ್ಯವಾಗಿರುವುದರಿಂದ ಹೆಚ್ಚುವರಿ ಟ್ಯಾಂಕರ್‌ಗಳ ಅಗತ್ಯವಿದೆ.

ನೂತನ ಯೋಜನೆ ಜಲಸಿರಿ ಯೋಜನೆಯ ಮೂಲಕ ಪ್ರಥಮ ಹಂತದಲ್ಲಿ ಸುರತ್ಕಲ್ ಭಾಗದಲ್ಲಿ ನೀರು ಪೂರೈಕೆಗೆ ಸಜ್ಜಾಗಿದೆ. ಆದರೆ ವಿವಿಧ ಬಡಾವಣೆಗಳಲ್ಲಿ ಜಲ ನೇರ ಸಂಪರ್ಕ ಪೂರ್ಣಗೊಂಡಿಲ್ಲ ಎಂಬುದು ಸಾರ್ವಜನಿಕರ ಅಳಲು. ರಾತ್ರಿಯ ವೇಳೆ ಟ್ಯಾಂಕರ್ ಮೂಲಕ ವಾರ್ಡ್‌ನ ಮನೆಗಳಿಗೆ ನೀರು ಪೂರೈಕೆ ಮಾಡಲಾಗುತ್ತಿದೆ. ಈ ಹಿಂದೆ ಕುಳಾಯಿಯ ಟ್ಯಾಂಕ್ ದೊಡ್ಡದಾಗಿದ್ದು, ಕಳೆದ ವರ್ಷದ ಮಳೆಗಾಲದಲ್ಲಿ ಕುಸಿತವಾದ ಬಳಿಕ ಸಾಧಾರಣ ಟ್ಯಾಂಕ್ ನಿರ್ಮಿಸಲಾಗಿದೆ. ಇದರಿಂದ ಪಣಂಬೂರಿನಿಂದ ಬರುವ ನೀರಿನ ಶೇಖರಣೆ ಹೆಚ್ಚು ಸಿಗದೆ ವಾರ್ಡ್ ನಂಬರ್ ಆರಕ್ಕೆ ನೀರಿನ ಲಭ್ಯತೆ ಕೂಡ ಕಡಿಮೆಯಾಗಿದೆ.

ಟ್ಯಾಂಕ್ ಕಾಮಗಾರಿ ಮುಗಿಯಬೇಕಿದೆ

ಕೃಷ್ಣಾಪುರ ಏಳನೆಯ ಬ್ಲಾಕ್‌ನ ಜಲಸಿರಿ ಓವರ್ ಹೆಡ್ ಟ್ಯಾಂಕ್ ಕಾಮಗಾರಿ ಇನ್ನು ಪೂರ್ಣಗೊಳ್ಳದೆ ಇರುವುದರಿಂದ ಜನತೆ ನಿರಂತರ ನೀರಿಗಾಗಿ ತಿಂಗಳುಗಟ್ಟಲೆ ಕಾಯಬೇಕಿದೆ.

ಫೆಬ್ರವರಿ ತಿಂಗಳಲ್ಲೇ ನೀರಿನ ಪೂರೈಕೆ ವಾರ್ಡ್‌ನಲ್ಲಿ ಅಸ್ತವ್ಯಸ್ತಗೊಂಡಿದ್ದು, ಮಂಗಳೂರು ಮಹಾನಗರ ಪಾಲಿಕೆ ತುರ್ತಾಗಿ ನೀರಿನ ಪೂರೈಕೆ ಜಾಲವನ್ನು ಸುಸ್ಥಿತಿಗೆ ತರಬೇಕಿದೆ. ಇನ್ನೊಂದೆಡೆ ಈ ವಾರ್ಡ್‌ನಲ್ಲಿ ಒಳಚರಂಡಿ ಸಮಸ್ಯೆಯಿಂದ ಪ್ರಮುಖ ರಸ್ತೆ ಬದಿಗಳಲ್ಲಿ ಕೊಳಚೆ ನೀರು ಹರಿಯುತ್ತಿದೆ. ಈ ಬಗ್ಗೆ ಬಹಳಷ್ಟು ದೂರುಗಳು ಪಾಲಿಕೆ ಅಧಿಕಾರಿಗಳಿಗೆ ಸಲ್ಲಿಕೆಯಾಗಿವೆ ಆದರೂ ಸಮಸ್ಯೆ ಬಗೆಹರಿದಿಲ್ಲ ಎನ್ನುತ್ತಾರೆ ಇಲ್ಲಿನ ವಾಸಿಗಳು.

ಸಮಸ್ಯೆ ಶೀಘ್ರ ಬಗೆಹರಿಯಲಿ



ಚೊಕ್ಕಬೆಟ್ಟು, ಹಿಲ್‌ಸೈಡ್, ಕಾಲೋನಿ, 7 ನೇ ಬ್ಲಾಕ್ ಪ್ರದೇಶಗಳಲ್ಲಿ ಇರುವ ನೀರಿನ ಕೊರತೆಯನ್ನು ಪಾಲಿಕೆ ಅಧಿಕಾರಿಗಳು ನೀಗಿಸಬೇಕು. ಶೀಘ್ರ ಜಲಸಿರಿ ಯೋಜನೆಯನ್ನು ಅನುಷ್ಠಾನಗೊಳಿಸಿ ಎತ್ತರದ ಪ್ರದೇಶಗಳಿಗೂ ನೀರು ತಲುಪುವಂತೆ ಮಾಡಬೇಕು.

■ ದಿನಕರ್ ಇಡ್ಯಾ

ಅಧಿಕಾರಿಗಳು ಗಮನಹರಿಸಬೇಕು



ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಸದ್ಯ ಚುನಾಯಿತ ಆಡಳಿತ ಇಲ್ಲ. ನೀರಿನ ಸಮಸ್ಯೆಯನ್ನು ಅಧಿಕಾರಿಗಳೇ ವಾರ್ಡಿಗೆ ಆಗಮಿಸಿ , ಪರಿಶೀಲಿಸಿ ಬಗೆಹರಿಸಬೇಕು. ಜನರಿಗೆ ಮೂಲ ಸೌಕರ್ಯ ಒದಗಿಸಲು ಇಚ್ಛಾಶಕ್ತಿಯನ್ನು ತೋರಬೇಕು.

■ ಸುಲತ ಪೂಜಾರಿ, ಇಡ್ಯಾ

ನೀರಿನದ್ದೇ ಸಮಸ್ಯೆ

ನಮ್ಮ ವಾರ್ಡ್‌ನಲ್ಲಿ ನೀರಿನದ್ದೇ ಸಮಸ್ಯೆ. ಅಧಿಕಾರಿಗಳು ಮುತುವರ್ಜಿ ವಹಿಸಿ ನೀರಿನ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳಬೇಕು. ಜನರು ನನಗೆ ಕರೆಮಾಡಿ ದಾಗ ನನ್ನಿಂದಾದಷ್ಟು ಸಹಾಯ ಮಾಡುತ್ತಿದ್ದೇನೆ.

■ ಸರಿತಾ ಶಶಿಧರ್, ನಿಕಟಪೂರ್ವ ಕಾರ್ಪೋರೇಟರ್

ಜಲಸಿರಿ ಯೋಜನೆ ಶೀಘ್ರ ಪೂರ್ಣಗೊಳಿಸಿ

ವಾರ್ಡ್‌ನ ನಂಬರ್ ೬ರ ಇಡ್ಯಾದಲ್ಲೂ ನೀರಿನ ಸಮಸ್ಯೆ ಜನತೆಯನ್ನು ಕಾಡುತ್ತಿದೆ. ಆದರ ಜೊತೆಗೆ ಈ ಭಾಗದಲ್ಲಿ ಸೂಕ್ತ ಒಳ ಚರಂಡಿ ವ್ಯವಸ್ಥೆ, ಮಳೆ ನೀರು ಹರಿಯುವ ತೋಡಿನ ವ್ಯವಸ್ಥೆ, ಜಲಸಿರಿ ಯೋಜನೆಗಾಗಿ ದುರಸ್ತಿ ಕಾರ್ಯ ನಡೆಯುತ್ತಲೇ ಇದ್ದು, ಇದು ಆದಷ್ಟು ಶೀಘ್ರ ಪೂರ್ಣಗೊಳ್ಳಬೇಕು ಎಂಬ ಆಗ್ರಹವನ್ನು ಸಾರ್ವಜನಿಕರು ವ್ಯಕ್ತಪಡಿಸಿದ್ದಾರೆ.

ನಾಳೆ ವಾರ್ಡ್ 7-ಇಡ್ಯಾ ಪಶ್ಚಿಮದ ಸ್ಥಿತಿಗತಿ

ಕಳವು ಪ್ರಕರಣದ ವ್ಯಕ್ತಿ ಸೆರೆ: 3 ಕೋಟಿ ಮೌಲ್ಯದ ವಜ್ರ, ಚಿನ್ನಾಭರಣ ವಶ



ಬೆಂಗಳೂರು: ಯಲಹಂಕದ ಜೂಡಿಷಿಯಲ್ ಲೇಔಟ್‌ನಲ್ಲಿ ನಡೆದಿದ್ದ ಭಾರಿ ಮೊತ್ತದ ಕಳವು ಪ್ರಕರಣವನ್ನು ಭೇದಿಸಿರುವ ನಗರ ಪೊಲೀಸರು, ರಾಜಸ್ಥಾನ ಮೂಲದ ಓರ್ವ ವ್ಯಕ್ತಿಯನ್ನು ಬಂಧಿಸಿ ಸುಮಾರು 3 ಕೋಟಿ ರೂ. ಮೌಲ್ಯದ ವಜ್ರ ಮತ್ತು ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ವೇಲಾರಾಮ ಮೀನಾ ಅಲಿಯಾಸ್ ಸುನೀಲ (19) ಬಂಧಿತ ಆರೋಪಿ. ಈತ ಟೈಲ್ಸ್ ಕೆಲಸ ಮಾಡಿಕೊಂಡು ಜೂಡಿಷಿಯಲ್ ಲೇಔಟ್‌ನಲ್ಲಿ ವಾಸವಾಗಿದ್ದ. ದೂರುದಾರರ ಚಿಕ್ಕಪ್ಪ ಅಮೆರಿಕಾದಲ್ಲಿ ಸಾಫ್ಟ್‌ವೇರ್ ಡೆವಲಪರ್ ಆಗಿ ಕೆಲಸ ಮಾಡುತ್ತಿದ್ದು, ಅವರ ಪತ್ನಿ ಪ್ರತಿ ಆರು ತಿಂಗಳಿಗೊಮ್ಮೆ ಅಲ್ಲಿಗೆ ಹೋಗಿ ಬರುತ್ತಿದ್ದರು. ಈ ಸಂದರ್ಭವನ್ನು ಬಳಸಿಕೊಂಡ ಆರೋಪಿ, ಕಳೆದ ಫೆ.15ರಂದು ರಾತ್ರಿ ಮನೆಯ ಟೇರೆಸ್ ಬಾಗಿಲನ್ನು ಮುರಿದು ಒಳನುಗ್ಗಿ ಚಿನ್ನಾಭರಣಗಳನ್ನು ಕಳವು ಮಾಡಿದ್ದರು. ಈ ಬಗ್ಗೆ ಯಲಹಂಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆ ಕೈಗೆತ್ತಿಕೊಂಡ ಪೊಲೀಸರು ವಿವಿಧ ಆಯಾಮಗಳಲ್ಲಿ ಕಾರ್ಯಾಚರಣೆ ನಡೆಸಿ, ಫೆ.18ರಂದು ರಾಜಸ್ಥಾನದ ಮಣಗಿರಿಪಾಲ ಗ್ರಾಮದಲ್ಲಿ ಆರೋಪಿಯನ್ನು ವಶಕ್ಕೆ ಪಡೆದರು. ವಿಚಾರಣೆಯ ವೇಳೆ ಆರೋಪಿಯು ಕೃತ್ಯವನ್ನು ಒಪ್ಪಿಕೊಂಡಿದ್ದು, ಆತನ ಮನೆಯಲ್ಲಿ ಬಚ್ಚಿಟ್ಟಿದ್ದ 1.833 ಕೆ.ಜಿ. ತೂಕದ ವಜ್ರ ಮತ್ತು ಚಿನ್ನಾಭರಣಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬಂಧಿತನನ್ನು ರಾಜಸ್ಥಾನದ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಟ್ರಾನ್ಸಿಸ್ಟ್ ವಾರೆಂಟ್ ಪಡೆದು ಬೆಂಗಳೂರಿಗೆ ಕರೆತಂದು, ಮಾ.6ರಂದು ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಯಶಸ್ವಿ ಕಾರ್ಯಾಚರಣೆಯನ್ನು ಈಶಾನ್ಯ ವಿಭಾಗದ ಡಿಸಿಪಿ ಮಿಥನ್ ಕುಮಾರ್ ಅವರ ಮಾರ್ಗದರ್ಶನದಲ್ಲಿ, ಎಸಿಪಿ ನರಸಿಂಹಮೂರ್ತಿ ಮತ್ತು ಇನ್‌ಸ್ಪೆಕ್ಟರ್ ಕೃಷ್ಣಮೂರ್ತಿ ಸಿಬ್ಬಂದಿ ತಂಡ ನಡೆಸಿದೆ.

ಗೃಹಬಳಕೆ ಅನಿಲಕ್ಕೆ ಆದ್ಯತೆ

ಪುಟ ೧➡ ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಲಭ್ಯವಿರುವ ಅನಿಲವನ್ನು ಪ್ರಮುಖ ಬಳಕೆದಾರರಿಗೆ ಮರುಹಂಚಿಕೆ ಮಾಡುವ ನಿರ್ಧಾರ ತೆಗೆದುಕೊಂಡಿದೆ.

ಮನೆ ಬಳಕೆ ಮತ್ತು ಸಾರಿಗೆಗೆ 100% ಸರಬರಾಜು: ಸರ್ಕಾರದ ಹೊಸ ಆದೇಶದ ಪ್ರಕಾರ ಎಲ್‌ಪಿಜಿ ಉತ್ಪಾದನೆ, ಸಿಎನ್‌ಜಿ ಹಾಗೂ ಮನೆಗಳಿಗೆ ಪೈಪ್ ಮೂಲಕ ನೀಡುವ ಪಿಎನ್‌ಜಿ ಬಳಕೆದಾರರಿಗೆ ಕಳೆದ ಆರು ತಿಂಗಳ ಸರಾಸರಿ ಬಳಕೆಯ ಶೇ.100ರಷ್ಟು ಅನಿಲವನ್ನು ನೀಡಲಾಗುತ್ತದೆ. ಇದರಿಂದ ಅಡುಗೆ ಅನಿಲ ಸರಬರಾಜು ಮತ್ತು ವಾಹನಗಳಿಗೆ ಬಳಸುವ ಸಿಎನ್‌ಜಿ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ. ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಸಾಮಾಜಿಕ ಜಾಲತಾಣದಲ್ಲಿ ನೀಡಿದ ಪ್ರತಿಕ್ರಿಯೆಯಲ್ಲಿ, ದೇಶೀಯ ಬಳಕೆದಾರರಿಗೆ ಯಾವುದೇ ಕೊರತೆ ಉಂಟಾಗದಂತೆ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಹೇಳಿದ್ದಾರೆ. ಜನರು ಆತಂಕಪಡುವ ಅಗತ್ಯವಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಗೊಬ್ಬರ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಕಡಿತ: ಪ್ರಮುಖ ಕ್ಷೇತ್ರಗಳಿಗೆ ಆದ್ಯತೆ ನೀಡಿದ ನಂತರ ಉಳಿದ ಅನಿಲವನ್ನು ಇತರ ಕ್ಷೇತ್ರಗಳಿಗೆ ನೀಡಲಾಗುತ್ತದೆ. ಗೊಬ್ಬರ ಉತ್ಪಾದನಾ ಘಟಕಗಳಿಗೆ ಕಳೆದ ಆರು ತಿಂಗಳ ಸರಾಸರಿ ಬಳಕೆಯ ಕನಿಷ್ಠ 70ರಷ್ಟು ಅನಿಲ ಒದಗಿಸಲಾಗುತ್ತದೆ.

ಇದಲ್ಲದೆ ಚಹಾ ಉದ್ಯಮ, ತಯಾರಿಕಾ ಕೈಗಾರಿಕೆಗಳು ಹಾಗೂ ಇತರ ಕೈಗಾರಿಕಾ ಬಳಕೆದಾರರಿಗೆ ಸುಮಾರು 80ರಷ್ಟು ಅನಿಲವನ್ನು ಪೂರೈಸಲಾಗುತ್ತದೆ. ನಗರ ಅನಿಲ ವಿತರಣೆ ಸಂಸ್ಥೆಗಳು (ಸಿಜಿಡಿ) ತಮ್ಮ ಕೈಗಾರಿಕಾ ಮತ್ತು ವಾಣಿಜ್ಯ ಗ್ರಾಹಕರಿಗೆ ಇದೇ ಪ್ರಮಾಣದಲ್ಲಿ ಅನಿಲ ಒದಗಿಸಬೇಕಾಗಿದೆ.

ರಿಫೈನರಿಗಳು ಮತ್ತು ಪೆಟ್ರೋಕೆಮಿಕಲ್ ಘಟಕಗಳ ಮೇಲೆ ಪರಿಣಾಮ: ಈ ಮರುಹಂಚಿಕೆಯ ಪರಿಣಾಮವಾಗಿ ಪೆಟ್ರೋಕೆಮಿಕಲ್ ಘಟಕಗಳು, ವಿದ್ಯುತ್ ಉತ್ಪಾದನಾ ಘಟಕಗಳು ಹಾಗೂ ಹೆಚ್ಚಿನ ಬೆಲೆಯ ಅನಿಲ ಬಳಕೆದಾರರಿಗೆ ಅನಿಲ ಸರಬರಾಜಿನಲ್ಲಿ ಕಡಿತವಾಗಲಿದೆ. ತೈಲ ಶುದ್ಧೀಕರಣ ಕಂಪನಿಗಳು ತಮ್ಮ ಅನಿಲ ಬಳಕೆಯನ್ನು ಕಳೆದ ಆರು ತಿಂಗಳ ಸರಾಸರಿಯ ಸುಮಾರು ಶೇ.65 ಕಡಿಮೆ ಮಾಡಿಕೊಳ್ಳಬೇಕಾಗಿದೆ.

ಇದಲ್ಲದೆ ಎಲ್‌ಪಿಜಿ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರ ಈಗಾಗಲೇ ರಿಫೈನರಿಗಳಿಗೆ ಕೆಲವು ಪೆಟ್ರೋಕೆಮಿಕಲ್ ಪ್ರಕ್ರಿಯೆಗಳ ಅನಿಲವನ್ನು ಅಡುಗೆ ಅನಿಲ ಉತ್ಪಾದನೆಗೆ ತಿರುಗಿಸುವಂತೆ ಸೂಚಿಸಿದೆ.

ಹೋಟೆಲ್ ಉದ್ಯಮಕ್ಕೆ ಭಾರೀ ಸಂಕಷ್ಟ

ಪುಟ ೧➡ **ಕೇಂದ್ರ ಸಚಿವರಿಗೆ ತೇಜಸ್ವಿ ಪತ್ರ:** ರೆಸ್ಟೋರೆಂಟ್ ಮತ್ತು ಆಹಾರ ಸೇವಾ ಉದ್ಯಮವು ದೈನಂದಿನ ಅಡುಗೆ ಕಾರ್ಯಾಚರಣೆಗಳಿಗೆ ವಾಣಿಜ್ಯ ಎಲ್‌ಪಿಜಿಯನ್ನು ಅವಲಂಬಿಸಿರುತ್ತದೆ. ಇತರ ಹಲವಾರು ವಲಯಗಳಿಗಿಂತ ಭಿನ್ನವಾಗಿ, ಹೆಚ್ಚಿನ ವಾಣಿಜ್ಯ ಅಡುಗೆಮನೆಗಳು ಪ್ರಸ್ತುತ ಪಿಎನ್‌ಜಿ ಸಂಪರ್ಕ ಅಥವಾ ವಿದ್ಯುತ್ ಅಡುಗೆ ವ್ಯವಸ್ಥೆಗಳಂತಹ ತಕ್ಷಣದ ಪರ್ಯಾಯಗಳನ್ನು ಹೊಂದಿಲ್ಲ. ಎಲ್‌ಪಿಜಿ ಸರಬರಾಜಿನಲ್ಲಿನ ಯಾವುದೇ ಅಡಚಣೆಯು ರೆಸ್ಟೋರೆಂಟ್ ಕಾರ್ಯಾಚರಣೆಗಳು, ವಲಯದಲ್ಲಿನ ಉದ್ಯೋಗ ಮತ್ತು ಗ್ರಾಹಕರಿಗೆ ಒದಗಿಸಲಾದ ಸೇವೆಗಳ ಮೇಲೆ ನೇರವಾಗಿ ಪರಿಣಾಮ ಬೀರಬಹುದು ಎಂದು ತೇಜಸ್ವಿ ಸೂರ್ಯ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಪಾಕ್ ಸೇರಿ ರಾಷ್ಟ್ರಗಳಿಗೆ ಇಂಧನ ಕೊರತೆಯ ಬಿಸಿ

ಪುಟ ೧➡ ಯುರೋಪ್ ಮತ್ತು ಅಮೆರಿಕದಲ್ಲೂ ಆರ್ಥಿಕ ಅಸ್ಥಿರತೆ ಎದುರಾಗುವ ನಿರೀಕ್ಷೆಯಿದೆ. ಇನ್ನು ಪಾಕ್ ಸರ್ಕಾರ ತೈಲ ಕೊರತೆ ಸಮಸ್ಯೆ ಎದುರಿಸಲು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಸರ್ಕಾರದ ವೆಚ್ಚ ಕಡಿತ, ಕಡ್ಡಾಯ ವರ್ಕ್ ಫ್ರಮ್ ಹೋಮ್, ಮುಂದಿನ ಎರಡು ತಿಂಗಳು ಸರ್ಕಾರಿ ವಾಹನಗಳ ಇಂಧನ ಬಳಕೆ ಶೇ.50 ಕಡಿತ ಮತ್ತು ಶೇ.60ರಷ್ಟು ಸರ್ಕಾರಿ ವಾಹನ ಬಳಕೆ ಕಡಿತಗೊಳಿಸಲು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಆದೇಶಿಸಿದ್ದಾರೆ.

ವಿಮಾನಯಾನ ದರ ಏರಿಕೆ ಬಿಸಿ

ಪುಟ ೧➡ ಅಂತೆಯೇ ಅಂತಾರಾಷ್ಟ್ರೀಯ ಮಾರ್ಗಗಳಿಗೂ ಶುಲ್ಕ ಹೆಚ್ಚಿಸಲಾಗಿದೆ. ಪಶ್ಚಿಮ ಏಷ್ಯಾ ಮಾರ್ಗಗಳಿಗೆ 10 ಡಾಲರ್, ಆಫ್ರಿಕಾ ಮಾರ್ಗಗಳಿಗೆ 30 ಡಾಲರ್ ಹೆಚ್ಚಿಸಿ 90 ಡಾಲರ್‌ಗೆ ಮತ್ತು ದಕ್ಷಿಣ ಪೂರ್ವ ಏಷ್ಯಾ ಮಾರ್ಗಗಳಿಗೆ 20 ಡಾಲರ್ ಹೆಚ್ಚಿಸಿ 60 ಡಾಲರ್‌ನಷ್ಟು ಇಂಧನ ಶುಲ್ಕ ವಿಧಿಸಲಾಗುತ್ತದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಹಿಂದುತ್ವ ಸರ್ವರಿಗೂ ಶ್ರೇಯಸ್ಸನ್ನು ಬಯಸುತ್ತದೆ. ಈ ಕಾರಣದಿಂದಾಗಿ ಭಾರತವು ಸರ್ವ ಧರ್ಮಗಳಿಗೆ ಆಶ್ರಯತಾಣವಾಗಿದೆ
– ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ

– ಸರ್ವ ಧರ್ಮಗಳಿಗೂ ಆಶ್ರಯತಾಣವಾಗಿದೆ ಎಂಬುದಕ್ಕಾಗಿ ಹೆಮ್ಮೆಯಾಗುತ್ತಿದೆ. ಇನ್ನೊಂದೆಡೆ ಧರ್ಮದ ಹೆಸರಿನಲ್ಲಿ ಅಧರ್ಮ ಮಾಡುವ ಮಂದಿಗೂ ಆಶ್ರಯತಾಣವಾಗುತ್ತಿದೆಯೋ ಎಂಬ ಭಯವಾಗುತ್ತಿದೆ!

ದಿನ ಭವಿಷ್ಯ

ಮೇಷ ಹೊಂದಾಣಿಕೆ ಸ್ವಭಾವ ತೋರಿ. ಹಠ, ಬೇಕಾಬಿಟ್ಟಿ ಧೋರಣೆ ಸಂಬಂಧ ಕೆಡಿಸೀತು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಸಫಲತೆ.

ವೃಷಭ ನೀವು ನಿರೀಕ್ಷಿಸಿದ ಫಲ ಇಂದು ಸಿಗದು. ವೃತ್ತಿ ಕ್ಷೇತ್ರದಲ್ಲಿ ಬಯಸದ ಬೆಳವಣಿಗೆ. ನಿಮ್ಮ ಮನಸ್ಸು ಕೆಡಿಸುವ ವ್ಯಕ್ತಿಗಳ ಸಂಗದಿಂದ ದೂರವಿರಿ.

ಮಿಥುನ ನಿರಾಳ ದಿನ. ಮುಖ್ಯ ಕೆಲಸವನ್ನು ಬಹುತೇಕ ನೆರವೇರಿಸಿದ ಸಮಾಧಾನ. ಉದ್ಯಮದಲ್ಲಿ ಪ್ರಗತಿ. ಆರೋಗ್ಯ ಸುಸ್ಥಿರ. ಬಂಧುಮಿತ್ರರ ಸಹಕಾರ.

ಕಟಕ ವೃತ್ತಿಯಲ್ಲಿ ಎಲ್ಲವೂ ಉತ್ತಮವಾಗಿ ಸಾಗಲಿದೆ. ಆದರೆ ಕೌಟುಂಬಿಕ ಬದುಕಲ್ಲಿ ಏರುಪೇರು ಎದುರಿಸುವಿರಿ. ಅತಿರೇಕ ವಾಗಿ ವರ್ತಿಸದಿರಿ.

ಸಿಂಹ ಎಂದಿಗಿಂತ ಹೆಚ್ಚೇ ಕೆಲಸದ ಒತ್ತಡ. ಸಹಚರರ ಜತೆ ಸಂಘರ್ಷ. ಹಣಕ್ಕೆ ಸಂಬಂಧಿಸಿ ಪ್ರಮುಖ ನಿರ್ಧಾರ ತಾಳದಿರಿ. ಕಾದು ನೋಡುವುದೊಳಿತು.

ಕನ್ಯಾ ವೃತ್ತಿ ಮತ್ತು ಖಾಸಗಿ ಬದುಕಿನ ಮಧ್ಯೆ ಹೊಂದಾಣಿಕೆಯ ಕೊರತೆ. ಎರಡನ್ನೂ ಸಮಾನವಾಗಿ ನಿಭಾಯಿಸಿ. ಯಾವುದನ್ನೂ ಕಡೆಗಣಿಸಬೇಡಿ.

ತುಲಾ ಕೆಲವು ದಿನಗಳ ಕಠಿಣ ಶ್ರಮಕ್ಕೆ ಸೂಕ್ತ ಫಲ ಸಿಗಲಿದೆ. ಸಂತೃಪ್ತಿ. ವಿದ್ಯಾರ್ಥಿಗಳಿಂದ ಕಠಿಣ ಪರಿಶ್ರಮ ಅಗತ್ಯ. ನಿರ್ಲಕ್ಷ್ಯ ಸಲ್ಲದು.

ವೃಶ್ಚಿಕ ಎಲ್ಲರ ಮಾತೂ ಕೇಳುತ್ತಾ ಹೋದರೆ ನಿಮ್ಮ ಮೇಲಿನ ಒತ್ತಡ ಹೆಚ್ಚಲಿದೆ. ನೀವೇ ವಿವೇಕಯುತವಾಗಿ ಯೋಚಿಸಿ. ಮನೆಯಲ್ಲಿ ಸೌಹಾರ್ದ ಪರಿಸರ.

ಧನು ಸಂತೋಷ ಹೆಚ್ಚಿಸುವ ದಿನ. ಅದೃಷ್ಟ ನಿಮ್ಮ ಜತೆಗಿದೆ. ಕಾಡುತ್ತಿದ್ದ ಸಮಸ್ಯೆ ಪರಿಹಾರ. ಆಪ್ತರ ಜತೆಗಿನ ಭಿನ್ನಮತ ನಿವಾರಣೆ. ವೆಚ್ಚ ಅಧಿಕ.

ಮಕರ ಪ್ರಗತಿಪರ ದಿನ. ದೃಢಚಿತ್ತದಿಂದ ಕೆಲಸ ನಿರ್ವಹಿಸಿ. ಉತ್ತಮ ಫಲ ಖಂಡಿತ. ಆರ್ಥಿಕ ಸ್ಥಿತಿ ತೃಪ್ತಿಕರ. ದಂಪತಿ ಮಧ್ಯೆ ವಿರಸ ಉಂಟಾದೀತು.

ಕುಂಭ ಆರ್ಥಿಕ ಲಾಭ. ಉದ್ಯಮದಲ್ಲಿ ಯಶಸ್ಸು. ವಯಸ್ಸಾದವರು ಆರೋಗ್ಯದ ಕಡೆ ಹೆಚ್ಚು ಗಮನ ಕೊಡಿ. ಕೌಟುಂಬಿಕ ಸಾಮರಸ್ಯ.

ಮೀನ ಗ್ರಹಗತಿ ಒಳಿತನ್ನು ಸೂಚಿಸುತ್ತಿದೆ. ವೃತ್ತಿಯಲ್ಲಿ ಉನ್ನತಿ. ನಿರುದ್ಯೋಗಿಗಳಿಗೆ ಉದ್ಯೋಗವಕಾಶ. ಪ್ರೀತಿ, ಸ್ನೇಹದಲ್ಲಿ ವಿರಸ ಮಾಯ, ಸಮರಸತೆ ಬೆಳೆಯಲಿದೆ.

ರಾಹುಕಾಲ: 12.00–1.30
ಗುಳಿಕಕಾಲ: 10.30–12.00

ಅದೃಷ್ಟ ಸಂಖ್ಯೆ : 5,3,7,1

ಆ್ಯಸಿಡ್ ದಾಳಿ: ಸಂತ್ರಸ್ತರಿಗೆ ಸರ್ಕಾರದ ಬೆಂಬಲ | ಉತ್ತರಿಸಿದ ಸಚಿವ

₹50 ಸಾವಿರ ಮಾಸಾಶನ

ವಿಧಾನ ಪರಿಷತ್: ರಾಜ್ಯದಲ್ಲಿ ಆ್ಯಸಿಡ್ ದಾಳಿಗೊಳಗಾದವರು ಜೀವಂತ ಶವವಾಗಿದ್ದಾರೆ. ಹೆತ್ತ ಮಕ್ಕಳೇ ಅವರನ್ನು ಹೊರಗಟ್ಟುತ್ತಿದ್ದಾರೆ. ಸರ್ಕಾರದಿಂದ ಮನೆಯೂ ಸಿಕ್ಕಿಲ್ಲ. ಮನೆ ಬಾಡಿಗೆ ನೀಡಲು ಯಾರೂ ಮುಂದೆ ಬರುತ್ತಿಲ್ಲ. ಅನಿವಾರ್ಯತೆಯಿಂದ ಅವರು ಆತ್ಮಹತ್ಯೆಯ ಹಾದಿ ತುಳಿದರೆ ಅದಕ್ಕೆ ಸರ್ಕಾರವೇ ಹೊಣೆ ಎಂದು ಸದಸ್ಯ ಶಿವಕುಮಾರ್ ಕೆ. ಮೇಲ್ಮನೆಗೆ ಪ್ರಸ್ತಾಪಿಸಿದರು.

ಗಮನ ಸೆಳೆಯುವ ಸೂಚನೆಗಳ ಅಡಿ ಆ್ಯಸಿಡ್ ದಾಳಿಗೊಳಗಾದ ಸಂತ್ರಸ್ತೆಯರಿಗೆ ವೈದ್ಯಕೀಯ ಚಿಕಿತ್ಸೆ, ಮಾಸಿಕ ಪರಿಹಾರ, ವೇತನ, ವಾಸಸ್ಥಳ ವಸತಿ ಸೌಲಭ್ಯ, ಸರ್ಕಾರಿ ಉದ್ಯೋಗ ಮತ್ತು ಮೀಸಲಾತಿ ಒದಗಿಸುವ ಕುರಿತು ವಿಷಯ ಪ್ರಸ್ತಾಪಿಸಿದ ಅವರು, ರಾಜ್ಯದಲ್ಲಿ ಆ್ಯಸಿಡ್ ದಾಳಿಗೊಳಗಾಗಿರುವ 169 ಜನ ಹೆಣ್ಣು ಮಕ್ಕಳ ಜೀವಂತ ನರಕ ಅನುಭವಿಸುತ್ತಿದ್ದಾರೆ. ಪ್ರೀತಿ, ಪ್ರೇಮ ನಿರಾಕರಣೆ, ದ್ವೇಷ ಮತ್ತಿತರೆ ಕಾರಣದಿಂದ ರಾಜ್ಯದಲ್ಲಿ 169 ಜನ ಹೆಣ್ಣು ಮಕ್ಕಳು ಆ್ಯಸಿಡ್ ದಾಳಿಗೆ ಒಳಗಾಗಿದ್ದಾರೆ. ಬಹುತೇಕರ ಮುಖ ಅತ್ಯಂತ ವಿರೂಪವಾಗಿದೆ. ಅನೇಕರಿಗೆ ತಲೆಯಲ್ಲಿ ಕೂದಲಿಲ್ಲ. ಲಕ್ಷಾಂತರ ರೂ. ಖರ್ಚು ಮಾಡಿ 10 ರಿಂದ 15 ಬಾರಿ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡಿದ್ದರೂ, ಅವರ ಮುಖ ನೋಡುವ ಸ್ಥಿತಿಯಲ್ಲಿಲ್ಲ ಎಂದು ಹೇಳಿದರು.

ಈ ಕೂಡಲೇ ಸರ್ಕಾರ ಸಂತ್ರಸ್ತರಿಗೆ ನೀಡುವ ಮಾಶಾಸನವನ್ನು 10 ರಿಂದ 15 ಸಾವಿರ ರೂ. ಗೆ ಹೆಚ್ಚಿಸಬೇಕು. ಆ್ಯಸಿಡ್ ದಾಳಿ ಮಾಡುವ ಆರೋಪಿಗೆ 3 ರಿಂದ 4 ವರ್ಷದಲ್ಲಿ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು. ಅದಕ್ಕೆ ಧ್ವನಿಗೂಡಿಸಿದ ಭಾರತಿ ಶೆಟ್ಟಿ, ಹೇಮಲತಾ ನಾಯಕ್ ಹಾಗೂ ಉಮಾಶ್ರೀ ಅವರು, ಯಾವುದೇ ತಪ್ಪಿಲ್ಲದಿದ್ದರೂ ಹೆಣ್ಣು ಮಕ್ಕಳ ಮೇಲೆ ಆಸಿಡ್ ದಾಳಿಯಾಗಿರುವುದು ಅನೇಕ ಪ್ರಕರಣಗಳಲ್ಲಿ ಕಂಡು ಬಂದಿದೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ಮೊದಲ ಬಾರಿಗೆ 3 ಸಾವಿರ ರೂ. ಮಾಶಾಸನ ನೀಡಿದ್ದರು. ನಂತರ ಅವರೇ ಅದನ್ನು 10 ಸಾವಿರ ರೂ.ಗೆ ಹೆಚ್ಚಿಸಿದ್ದರು. ಕನಿಷ್ಠ 25 ಸಾವಿರ ರೂ. ಮಾಶಾಸನ ನೀಡಬೇಕು. ಹೊರಗುತ್ತಿಗೆ ನೇಮಕಾತಿಯಲ್ಲಿ ಅವರಿಗೆ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಉತ್ತರಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಅಮಾನವೀಯ ಕೃತ್ಯದ ಸಂತ್ರಸ್ಥರಿಗೆ ನೆರವಾಗುವುದು ನಮ್ಮ ಕರ್ತವ್ಯ. ಈವರೆಗೆ ಸರ್ಕಾರದಿಂದ 59 ಜನರಿಗೆ ತಲಾ 10 ಸಾವಿರ ರೂ. ಮಾಶಾಸನ ಸಿಗುತ್ತಿದೆ. ಇನ್ನುಮುಂದೆ ಎಲ್ಲ 169 ಜನರಿಗೆ ತಲಾ 50 ಸಾವಿರ ರೂ. ಮಾಶಾಸನ ನೀಡಲಾಗುವುದು. ಜತೆಗೆ 5 ಲಕ್ಷ ರೂ. ಸಾಲವನ್ನಾಗಿ ನೀಡದೇ ಒಂದು ಬಾರಿಗೆ ಆರ್ಥಿಕ ನೆರವು ಕಲ್ಪಿಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರು ಮತ್ತು ಮುಖ್ಯಮಂತ್ರಿಗಳ ಮನವೊಲಿಸುವುದಾಗಿ ಭರವಸೆ ನೀಡಿದ್ದಾರೆ. ಅಲ್ಲದೇ, ಆ್ಯಸಿಡ್ ದಾಳಿ ಸಂತ್ರಸ್ತರು ಸರ್ಕಾರದ ಪರಿಹಾರ ಪಡೆಯಲು ದಾಖಲೆಗಳ ಸಲ್ಲಿಕೆಯಲ್ಲಿ ವಿನಾಯಿತಿ ನೀಡಲಾಗುವುದು ಎಂದರು.

ಅದಕ್ಕೆ ಬೆಂಬಲ ಸೂಚಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಕಾರ್ಮಿಕ ಇಲಾಖೆಯ ಅಸಂಘಟಿತ ಕಾರ್ಮಿಕರ ನಿಗಮದಡಿಯೂ ಸಂತ್ರಸ್ತರ ಗಂಭೀರತೆಯನ್ನು ಆಧರಿಸಿ, ಗರಿಷ್ಠ 2 ಲಕ್ಷ ರೂ. ವರೆಗೆ ಪರಿಹಾರ ನೀಡಲು ಕ್ರಮ ವಹಿಸುವುದಾಗಿ ತಿಳಿಸಿದರು.





ಸಂತ್ರಸ್ತರ ಪರ ಧ್ವನಿಗೂಡಿಸಿದ ಡಿಸಿಎಂ, ಛಲವಾದಿ

ಇದೇ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸದಸ್ಯ ಪೂಜಾರ್ ಚರ್ಚೆಯಲ್ಲಿ ಪಾಲ್ಗೊಂಡು, ಸಂತ್ರಸ್ತರ ಪರ ಧ್ವನಿಗೂಡಿಸಿದರು.

» ರಾಜ್ಯದಲ್ಲಿ 169 ಜನ ಹೆಣ್ಣು ಮಕ್ಕಳು ಆ್ಯಸಿಡ್ ದಾಳಿಗೆ ಒಳಗಾಗಿದ್ದಾರೆ

ಎಐಗೆ ತುಳು ಪಾಠ!

ಬೆಂಗಳೂರು: ಡಿಜಿಟಲ್ ಯುಗದಲ್ಲಿ ಕೃತಕ ಬುದ್ಧಿಮತ್ತೆ ವೇಗವಾಗಿ ಅಭಿವೃದ್ಧಿಯಾಗುತ್ತಿದ್ದರೂ, ಡೇಟಾ ಕಡಿಮೆ ಇರುವ ಭಾಷೆಗಳು ತಂತ್ರಜ್ಞಾನದಿಂದ ಹಿಂದೆ ಬೀಳುತ್ತಿರುವುದು ದೊಡ್ಡ ಸವಾಲಾಗಿ ಉಳಿದಿದೆ. ಆದರೆ, ಸವಾಲಾಗಿ ತೆಗೆದುಕೊಂಡು ಕರ್ನಾಟಕದ ತುಳು ಭಾಷೆಯಲ್ಲಿ ಎಐ ಸಂಭಾಷಣೆ ನಡೆಸುವಂತೆ ಮಾಡುವ ಹೊಸ ವಿಧಾನವನ್ನು ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ.

ಸಂಶೋಧಕರಾದ ಪ್ರಥಮೇಶ್ ದೇವಾಗ ಮತ್ತು ಪರಾಸ್ ಚೋಪ್ರಾ ಅವರು ಈ ಅಧ್ಯಯನ ನಡೆಸಿದ್ದು, "ಮೇಕಿಂಗ್ ಲಾರ್ಜ್ ಲಾಂಗ್ವೇಜ್ ಮಾಡೆಲ್ಸ್ ಸ್ಪೀಕ್ ತುಳು: ಸ್ಟ್ರಕ್ಚರ್ಡ್ ಪ್ರಾಂಪ್ಟಿಗ್ ಫಾರ್ ಆ್ಯನ್ ಎಕ್ಸ್ಟ್ರೀಮ್ಲಿ ಲೋ ರಿಸೋರ್ಸ್ ಲಾಂಗ್ವೇಜ್" ಎಂಬ ಶೀರ್ಷಿಕೆಯಲ್ಲಿ ಸಂಶೋಧನಾ ಪ್ರಬಂಧ ಪ್ರಕಟವಾಗಿದೆ. ತುಳು ಭಾಷೆಗೆ ಸುಮಾರು 20 ಲಕ್ಷಕ್ಕೂ ಹೆಚ್ಚು ಭಾಷಿಕರು ಇದ್ದರೂ ಡಿಜಿಟಲ್ ಮಾಹಿತಿಯ ಕೊರತೆ ಇರುವುದರಿಂದ ದೊಡ್ಡ ಭಾಷಾ ಮಾದರಿಗಳು (ಎಲ್‌ಎಲ್‌ಎಂ) ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಸಂಶೋಧಕರು "ಸ್ಟ್ರಕ್ಚರ್ಡ್ ಪ್ರಾಂಪ್ಟಿಂಗ್" ಎಂಬ ವಿಧಾನವನ್ನು ಬಳಸಿದ್ದಾರೆ. ಈ ವಿಧಾನದಲ್ಲಿ ಭಾಷೆಯ ವ್ಯಾಕರಣ ನಿಯಮ ಗಳು, ತಪ್ಪು ಪದಗಳನ್ನು ತಪ್ಪಿಸಲು ನಿಯಂತ್ರಣ ಸೂಚನೆಗಳು, ಹಾಗೂ ಉದಾಹರಣೆಗಳ ಮೂಲಕ ಮಾದರಿಯನ್ನು ಮಾರ್ಗದರ್ಶಿಸುವ ಕ್ರಮವನ್ನು ಬಳಸಲಾಗಿದೆ.

ವ್ಯಾಕರಣ ನಿಖರತೆ

ಈ ವಿಧಾನವನ್ನು ಜಗತ್ತಿನ ಪ್ರಮುಖ ಎಐ ಮಾದರಿಗಳಾದ ಚಾಟ್ ಜಿಪಿಟಿ, ಜೆಮಿನಿ ಮತ್ತು ಎಲ್‌ಎಲ್‌ಎಎಂಎ ಮೇಲೆ ಪರೀಕ್ಷಿಸಲಾಗಿದೆ. ಇದರಲ್ಲಿ ಬಂದ ಫಲಿತಾಂಶದ ಪ್ರಕಾರ, ತುಳು ಭಾಷೆಯ ವ್ಯಾಕರಣ ನಿಖರತೆ ಸುಮಾರು ಶೇ.85 ಮಟ್ಟಕ್ಕೆ ಏರಿದರೆ, ತುಳು ಬದಲು ಕನ್ನಡ ಪದಗಳು ಬಳಕೆಯಾಗುವ ಪ್ರಮಾಣ ಶೇ.80ರಿಂದ ಕೇವಲ ಶೇ.5ಕ್ಕೆ ಇಳಿದಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.

ಈ ಪ್ರಯೋಗವು ಭವಿಷ್ಯದಲ್ಲಿ ತುಳು ಮಾತ್ರವಲ್ಲ, ಡೇಟಾ ಕಡಿಮೆ ಇರುವ ಅನೇಕ ಭಾರತೀಯ ಭಾಷೆಗಳಿಗೂ ಎಐ ತಂತ್ರಜ್ಞಾನವನ್ನು ತಲುಪಿಸಲು ಮಹತ್ವದ ಹೆಜ್ಜೆಯಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಡೇಟಾ ಇಲ್ಲದ ಭಾಷೆಯನ್ನೂ ಮಾತನಾಡುವಂತೆ ಮಾಡಿದ ಹೊಸ ಸಂಶೋಧನೆ



- » ತುಳು ಭಾಷೆಯಲ್ಲಿ ಎಐ ಪ್ರಯೋಗ
- » ಡೇಟಾ ಇಲ್ಲದ ಭಾಷೆಗೆ ಹೊಸ ತಂತ್ರ
- » ಇಬ್ಬರು ಸಂಶೋಧಕರ ಅಧ್ಯಯನ
- » ಸ್ಟ್ರಕ್ಚರ್ಡ್ ಪ್ರಾಂಪ್ಟಿಂಗ್ ವಿಧಾನ ಬಳಕೆ

ಪ್ರತಿಪಕ್ಷದ ವರ್ತನೆ ಬೇಜವಾಬ್ದಾರಿಯುತ: ಶಾ

ಪುಟ ೧➡ **ಪ್ರತಿಪಕ್ಷದ ವರ್ತನೆಯೇ ಕಾರಣ:** ಗೊಗೊಯ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅಮಿತ್ ಶಾ, ರಿಜಿಜು ಹೆಚ್ಚು ಬಾರಿ ಮಧ್ಯಪ್ರವೇಶ ಮಾಡಿದ್ದಾರೆ ಎಂಬುದನ್ನು ಒಪ್ಪಿಕೊಂಡರೂ, ಅದಕ್ಕೆ ಕಾರಣ ಪ್ರತಿಪಕ್ಷದ ವರ್ತನೆ ಎಂದು ಹೇಳಿದರು. ಹೌದು, ರಿಜಿಜು ಅವರು ಹೆಚ್ಚು ಬಾರಿ ಮಧ್ಯಪ್ರವೇಶ ಮಾಡಿದ್ದಾರೆ. ಆದರೆ ಇಷ್ಟು ಬೇಜವಾಬ್ದಾರಿಯುತ ಪ್ರತಿಪಕ್ಷವನ್ನು ನಾವು ಹಿಂದೆ ಕಂಡಿಲ್ಲ ಎಂದು ಶಾ ಹೇಳಿದರು. ಸಂಸತ್ತಿನ ನಿಯಮಗಳನ್ನು ಉಲ್ಲಂಘಿಸಿದಾಗ ಮಧ್ಯಪ್ರವೇಶ ಮಾಡುವುದು ಅಗತ್ಯವಾಗುತ್ತದೆ ಎಂದು ಶಾ ಸ್ಪಷ್ಟಪಡಿಸಿದರು.



ನಿರ್ಣಯಕ್ಕೆ 50ಕ್ಕೂ ಹೆಚ್ಚು ಸಂಸದರ ಬೆಂಬಲ: ಲೋಕಸಭಾ ಸ್ಪೀಕರ್ ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಕಾಂಗ್ರೆಸ್ ಸಂಸದ ಮೊಹಮ್ಮದ್ ಜಾವೇದ್ ಮಂಡಿಸಿದರು. ಈ ನಿರ್ಣಯಕ್ಕೆ 50ಕ್ಕೂ ಹೆಚ್ಚು ಸಂಸದರು ಬೆಂಬಲ ಸೂಚಿಸಿದ ನಂತರ ಸಭಾಧ್ಯಕ್ಷ ಸ್ಥಾನದಲ್ಲಿದ್ದ ಬಿಜೆಪಿ ಸಂಸದ ಜಗದಾಂಬಿಕಾ ಪಾಲ್ ಚರ್ಚೆಗೆ ಅನುಮತಿ ನೀಡಿದರು. ಈ ವಿಷಯದ ಚರ್ಚೆಗೆ ಒಟ್ಟು 10 ಗಂಟೆಗಳ ಸಮಯ ನೀಡಲಾಗಿದೆ ಎಂದು ಪಾಲ್ ತಿಳಿಸಿದ್ದಾರೆ.

ಪ್ರತಿಪಕ್ಷದ ಆರೋಪಗಳೇನು?: ಒಟ್ಟು 118 ಪ್ರತಿಪಕ್ಷ ಸಂಸದರು ಈ ನಿರ್ಣಯಕ್ಕೆ ಸಹಿ ಹಾಕಿದ್ದಾರೆ. ಸ್ಪೀಕರ್ ಪಕ್ಷಪಾತಿ ರೀತಿಯಲ್ಲಿ ನಡೆದುಕೊಂಡಿದ್ದಾರೆ ಎಂಬ ಆರೋಪವನ್ನು ವಿಪಕ್ಷ ಸದಸ್ಯರು ಮಾಡಿದ್ದಾರೆ. ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಲೋಕಸಭೆಯಲ್ಲಿ ಮಾತನಾಡಲು ಅವಕಾಶ ನೀಡಲಾಗಲಿಲ್ಲ ಎಂಬುದು ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಗೊಗೊಯ್ ತಮ್ಮ ಭಾಷಣದಲ್ಲಿ, ಈ ನಿರ್ಣಯವನ್ನು ವೈಯಕ್ತಿಕ ವೈಮನಸ್ಸಿನಿಂದ ತರಲಾಗಿಲ್ಲ. ಸಂಸದೀಯ ಸದನದ ಗೌರವವನ್ನು ಕಾಪಾಡುವ ಜವಾಬ್ದಾರಿಯ ಭಾಗವಾಗಿ ಈ ನಿರ್ಣಯವನ್ನು ತರಲಾಗಿದೆ ಎಂದು ಹೇಳಿದರು.

ಉಪಸಭಾಪತಿ ನೇಮಿಸಲು ಆಗ್ರಹ: ಇದೇ ವೇಳೆ, ಎಐಎಂಐಎಂ ಸಂಸದ ಅಸಾದುದ್ದೀನ್ ಓವೈಸಿ, ಲೋಕಸಭೆ ಉಪಸಭಾಪತಿಯ ನೇಮಕ ಕುರಿತು ಪ್ರಸ್ತಾಪಿಸಿದರು. ಕೇಂದ್ರ ಸರ್ಕಾರವು ಕಳೆದ ಹಲವಾರು ವರ್ಷಗಳಿಂದ ಉಪಸಭಾಪತಿಯನ್ನು ನೇಮಿಸಿಲ್ಲ. ಇದು ಸಾಂವಿಧಾನಿಕ ನಿರ್ವಾತವನ್ನು ಸೃಷ್ಟಿಸಿದೆ ಎಂದು ಕಾಂಗ್ರೆಸ್ ಸಂಸದ ಕೆ.ಸಿ.ವೇಣುಗೋಪಾಲ್ ಹೇಳಿದರು. ಪೀಠದಲ್ಲಿ ಕುಳಿತಿದ್ದ ಜಗದಾಂಬಿಕಾ ಪಾಲ್ ಅವರ ಅಧಿಕಾರ ವ್ಯಾಪ್ತಿಯನ್ನು ಪ್ರಶ್ನಿಸಿದ ಅವರು, ನಿಮ್ಮನ್ನು ಲೋಕಸಭಾ ಸ್ಪೀಕರ್ ನೇಮಿಸಿದ್ದಾರೆ. ಸ್ಪೀಕರ್ ವಿರುದ್ಧದ ನಿರ್ಣಯದ ಚರ್ಚೆಯನ್ನು ಉಪಸಭಾಪತಿಗಳ ಅಧ್ಯಕ್ಷತೆಯಲ್ಲಿ ನಡೆಯಬೇಕಲ್ಲವೇ ಎಂದು ಪ್ರಶ್ನಿಸಿದರು.

ವಿಪಕ್ಷಗಳ ಆಕ್ಷೇಪಣೆಗಳಿಗೆ ತಿರುಗೇಟು ನೀಡಿದ ಬಿಜೆಪಿ ಸಂಸದರಾದ ರವಿಶಂಕರ್ ಪ್ರಸಾದ್ ಮತ್ತು ನಿಶಿಕಾಂತ್ ದುಬೆ, ಈ ಆಕ್ಷೇಪವೇ ಆಧಾರರಹಿತ ಎಂದರು. ಕೇಂದ್ರ ಸಂಸದೀಯ ಸಚಿವ ಕಿರಣ್ ರಿಜಿಜು ಮಾತನಾಡಿ, ಉಪ ಸಭಾಪತಿಗಳ ವಿಷಯವನ್ನು ಚರ್ಚಿಸುವ ಅಗತ್ಯವೇ ಇಲ್ಲ ಎಂದರು.

ಬಜೆಟ್‌ನಲ್ಲಿ ಜನರಿಗೆ ಅನ್ಯಾಯ: ಅಶೋಕ

ಪುಟ ೧➡ ಹಿಂದಿನ ಯೋಜನೆಗಳ ಪ್ರಗತಿಯನ್ನು ಹೇಳದೆ ಸಾಲ ಮಾತ್ರ ಮಾಡಿದ್ದಾರೆ ಎಂದು ಟೀಕಿಸಿದರು.



ಈ ಬಾರಿಯ ಬಜೆಟ್‌ನಲ್ಲಿ 11ಜಿ ಎಂದು ಉಲ್ಲೇಖಿಸಿದ್ದು, ನಗರಾಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದ್ದೇವೆ ಎಂದಿದ್ದಾರೆ. ಆದರೆ ಆಂಧ್ರಪ್ರದೇಶ ಸಿಎಂ ರೇವಂತ್ ರೆಡ್ಡಿ ಬೆಂಗಳೂರನ್ನು ತೆಗಳಿದ್ದಾರೆ. ಬೆಂಗಳೂರಿನ ಯಾವುದೇ ರಸ್ತೆಯು ಕಸಮುಕ್ತವಾಗಿಲ್ಲ. 10 ಸಾವಿರ ರೂ. ಲಂಚ ಪಡೆದು ಇ ಖಾತಾ ಮಾಡುತ್ತಿದ್ದಾರೆ. ಜನರ ಹೆಸರಿನ ಖಾತೆಯನ್ನು ಮರಳಿ ಜನರ ಹೆಸರಿಗೇ ಮಾಡಿಸಿಕೊಡುತ್ತಿದ್ದಾರೆ. ಇದರಿಂದಾಗಿ ಅಧಿಕಾರಿಗಳಿಗೆ ಲಾಭವಾಗಿದೆ ಎಂದು ಆರೋಪಿಸಿದರು.

ಅವೈಜ್ಞಾನಿಕ ಗ್ಯಾರಂಟಿಗಳಿಂದ ಸಾಲ: 2018ರಿಂದ 2023ರವರೆಗೆ ಜಿಎಸ್‌ಡಿಪಿ ಬೆಳವಣಿಗೆ ದರ ಸರಾಸರಿ ಶೇ.12.16ರಷ್ಟು ಇತ್ತು. ಈಗ ಶೇ.11.51ಕ್ಕೆ ಬಂದಿದೆ. ಕೋವಿಡ್ ಸಮಯದ ಹೊರತುಪಡಿಸಿ ಬಿಜೆಪಿ ಅವಧಿಯಲ್ಲಿ ಎಂದೂ ಹೀಗೆ ಕುಸಿತವಾಗಿರಲಿಲ್ಲ. ಅವೈಜ್ಞಾನಿಕ ಗ್ಯಾರಂಟಿಗಳಿಂದ 2024ರಲ್ಲಿ 92,025 ಕೋಟಿ ರೂ. 2025ರಲ್ಲಿ 1.16 ಲಕ್ಷ ಕೋಟಿ ರೂ. ಸಾಲ ಮಾಡಲಾಗಿದೆ. 3 ವರ್ಷಗಳಲ್ಲಿ 2,89,025 ಕೋಟಿ ರೂ. ಸಾಲ ಮಾಡಲಾಗಿದೆ. ಸಿದ್ದರಾಮಯ್ಯ ಅವರೇ ಮುಂದುವರಿದರೆ ಒಟ್ಟು 6 ಲಕ್ಷ ಕೋಟಿ ರೂ. ಆಗಲಿದೆ. ಇದು ಸಿದ್ದರಾಮಯ್ಯ ಅವರದ್ದೇ ಪ್ರತ್ಯೇಕ ದಾಖಲೆ ಎಂದರು.

ಕಡಿಮೆ ವೆಚ್ಚ: ಕಳೆದ ಬಜೆಟ್‌ನಲ್ಲಿ ಶೇ.59.43ರಷ್ಟು ಹಣವನ್ನು ಮಾತ್ರ ಈವರೆಗೆ ಖರ್ಚು ಮಾಡಲಾಗಿದೆ. ಉಳಿದ 41ರಷ್ಟು ಹಣ ಬಳಸಿಯೇ ಇಲ್ಲ. ಬಜೆಟ್ ಗಾತ್ರ ದೊಡ್ಡದಿದ್ದರೂ ಅನುದಾನ ಚಿಕ್ಕದಾಗಿದೆ. ಕಳೆದ ವರ್ಷದ ವೆಚ್ಚಕ್ಕೆ ಹೋಲಿಸಿದರೆ ಶೇ.3.44ರಷ್ಟು ಕಡಿಮೆಯಾಗಿದೆ. ಇಲಾಖೆಗಳಿಗೆ 2,44,465 ಕೋಟಿ ರೂ. ಹಂಚಲಾಗಿದೆ. ಅದರಲ್ಲಿ 2,07,954 ಕೋಟಿ ರೂ. ಮಾತ್ರ ಖರ್ಚು ಮಾಡಲಾಗಿದೆ. 36,510 ಕೋಟಿ ರೂ. ಇನ್ನೂ ಖರ್ಚು ಮಾಡಿಲ್ಲ. ಕಳೆದ ವರ್ಷಕ್ಕೆ ಹೋಲಿಸಿದರೆ 5,239.10 ಕೋಟಿ ರೂ. ಕಡಿಮೆ ವೆಚ್ಚ ಮಾಡಲಾಗಿದೆ ಅಂಕಿ ಅಂಶಗಳನ್ನು ಮುಂದಿಟ್ಟರು.

ಎಸ್‌ಸಿಪಿ, ಟಿಎಸ್‌ಪಿ ಹಣ ವರ್ಗಾವಣೆ

ಎಸ್‌ಸಿಪಿ, ಟಿಎಸ್‌ಪಿಯ ಹಣದಲ್ಲಿ 2026–27ರಲ್ಲಿ ಗೃಹಲಕ್ಷ್ಮಿ ಗೆ 8296 ಕೋಟಿ ರೂ., ಶಕ್ತಿಗೆ 1,537 ಕೋಟಿ ರೂ. ಅನ್ನಭಾಗ್ಯಕ್ಕೆ 1,612 ಕೋಟಿ ರೂ. ಗೃಹಜ್ಯೋತಿಗೆ 2,591 ಕೋಟಿ ರೂ. ಯುವನಿಧಿಗೆ 1,062 ಸೇರಿ ಒಟ್ಟು 14,198 ಕೋಟಿ ರೂ. ಹಣವನ್ನು ವರ್ಗಾವಣೆ ಮಾಡಲಾಗಿದೆ. ಒಟ್ಟಾರೆಯಾಗಿ 53,059.45 ಕೋಟಿ ರೂ. ಹಣ ವರ್ಗಾಯಿಸಲಾಗಿದೆ. ಗ್ಯಾರಂಟಿ ಹೊರತುಪಡಿಸಿ ಯೋಜನೆಗಳಿಗೆ 30 ಸಾವಿರ ಕೋಟಿ ರೂ. ಹಣ ದುರ್ಬಳಕೆಯಾಗಿದೆ ಎಂದು ಗಮನ ಅಶೋಕ ಗಮನ ಸೆಳೆದರು.

ಕೇಂದ್ರದ ನೆರವು

ಕೇಂದ್ರ ಸರ್ಕಾರದಿಂದ 63,049 ಕೋಟಿ ರೂ. ಅನುದಾನ ಬಂದಿದೆ. 50 ವರ್ಷಕ್ಕೆ ಬಡ್ಡಿ ರಹಿತ ಸಾಲ ನೀಡಲಾಗಿದೆ. 8191 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದೆ. ಭಾರತ್ ಮಾಲ ಯೋಜನೆಯಲ್ಲಿ ಕರ್ನಾಟಕಕ್ಕೆ 63,304 ಕೋಟಿ ರೂ. ವೆಚ್ಚದ ಕಾರಿಡಾರ್ ಸಿಕ್ಕಿದೆ. ಮೋದಿ ಅವರಿಂದ ಬೋಯಿಂಗ್ ಸಂಸ್ಥೆ, ಎಚ್‌ಎಎಲ್ ಫ್ಯಾಕ್ಟರಿ ಸಿಕ್ಕಿದೆ. ಕೇಂದ್ರ ಸರ್ಕಾರ ಇಷ್ಟೊಂದು ಹಣ ನೀಡಿದ್ದರೂ ಆರೋಪ ಮಾಡಲಾಗುತ್ತಿದೆ ಅಶೋಕ ಹೇಳಿದರು.

ಯುಸಿಸಿ ಸಮಯ ಬಂದಿದೆ

ಪುಟ ೧➡ 1937ರ ಷರಿಯತ್ ಕಾಯ್ದೆ ತೆಗೆದುಹಾಕಿದರೆ, ನಂತರ ಏನು ಆಗುತ್ತದೆ? ಅದು ಅನಗತ್ಯ ಶೂನ್ಯತೆ ಉಂಟುಮಾಡುವುದಿಲ್ಲವೇ? ಎಂದು ಅರ್ಜಿದಾರರ ಪರ ವಕೀಲ ಪ್ರಶಾಂತ್ ಭೂಷಣ್ ಅವರನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಪ್ರಶ್ನಿಸಿದರು.

ಭೇದಭಾವದ ವಿಚಾರದಲ್ಲಿ ನಿಮ್ಮ ಬಳಿ ಬಹಳ ಉತ್ತಮ ಪ್ರಕರಣ ಇದೆ. ಆದರೆ ಇದನ್ನು ಶಾಸಕಾಂಗದ ವಿವೇಕಕ್ಕೆ ಬಿಟ್ಟರೆ ಉತ್ತಮವಲ್ಲವೇ? ನಿರ್ದೇಶಕ ತತ್ವಗಳ ಪ್ರಕಾರ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವ ಅಧಿಕಾರ ಶಾಸನಸಭೆಗಿದೆ ಎಂದು ಸಿಜೆಐ ಹೇಳಿದರು.

ಒಬ್ಬ ಪುರುಷನಿಗೆ ಒಬ್ಬ ಹೆಂಡತಿ ಎಂಬ ನಿಯಮ ಎಲ್ಲ ಸಮುದಾಯಗಳಿಗೂ ಸಮಾನವಾಗಿ ಅನ್ವಯವಾಗುತ್ತಿಲ್ಲ. ಆದರೆ ಅದರಿಂದಲೇ ಎಲ್ಲಾ ದ್ವಿವಿವಾಹಗಳನ್ನು ಕೋರ್ಟ್ ಅಸಂವಿಧಾನಿಕ ಎಂದು ಘೋಷಿಸಬಹುದೇ? ನಿರ್ದೇಶಕ ತತ್ವಗಳನ್ನು ಜಾರಿಗೆ ತರುವುದು ಶಾಸಕಾಂಗದ ಅಧಿಕಾರ. ಆದ್ದರಿಂದ ಈ ವಿಷಯವನ್ನು ಶಾಸನಸಭೆಯ ವಿವೇಕಕ್ಕೆ ಬಿಡುವುದು ಉತ್ತಮ ಎಂದು ನ್ಯಾ. ಬಾಗ್ಚಿ ಮತ್ತಷ್ಟು ಹೇಳಿದರು. ಈ ನ್ಯಾಯಾಲಯವು ಹಲವು ಬಾರಿ ಶಾಸನಸಭೆಗೆ ಯುಸಿಸಿ ಜಾರಿಗೆ ತರಲು ಶಿಫಾರಸು ಮಾಡಿದೆ ಎಂದು ಕೂಡ ಅವರು ಹೇಳಿದರು.

ಇದಕ್ಕೂ ಮುನ್ನ ಭೂಷಣ್ ಅವರು, ಮುಸ್ಲಿಂ ಮಹಿಳೆಯರಿಗೆ ಪುರುಷರಂತೆ ಸಮಾನ ವಾರಸುದಾರಿಕೆ ಹಕ್ಕುಗಳಿವೆ ಎಂದು ಕೋರ್ಟ್ ಘೋಷಿಸಬಹುದು ಎಂದು ವಾದಿಸಿದರು. 1937ರ ಮುಸ್ಲಿಂ ವೈಯಕ್ತಿಕ ಕಾನೂನು(ಷರಿಯತ್‌ಯತ್) ಅಪ್ಲಿಕೇಷನ್ ಕಾಯ್ದೆ ರದ್ದುಪಡಿಸಿದರೆ ಭಾರತೀಯ ಉತ್ತರಾಧಿಕಾರ ಕಾಯ್ದೆ ಅನ್ವಯವಾಗಬಹುದು ಎಂದು ಅವರು ಹೇಳಿದರು.

ಈ ವೇಳೆ ಪೀಠವು, ಕೋರ್ಟ್ ವೈಯಕ್ತಿಕ ಧಾರ್ಮಿಕ ಕಾನೂನುಗಳ ಸಂವಿಧಾನಿಕ ಸಿಂಧುತ್ವವನ್ನು ಪರಿಶೀಲಿಸಬಹುದೇ ಎಂಬ ಪ್ರಶ್ನೆಯನ್ನು ಎತ್ತಿತು. 1951ರ ಬಾಂಬೆ ಹೈಕೋರ್ಟ್‌ನ ಪ್ರಸಿದ್ಧ ನರಸು ಅಪ್ಪಾ ಮಾಳಿ ಪ್ರಕರಣವನ್ನು ಉಲ್ಲೇಖಿಸಿ, ವೈಯಕ್ತಿಕ ಕಾನೂನುಗಳು ಸಂವಿಧಾನದ ಆರ್ಟಿಕಲ್ 13 ಅನ್ವಯ ಕಾನೂನು ಎಂದು ಪರಿಗಣಿಸಲಾಗುವುದಿಲ್ಲ, ಆದ್ದರಿಂದ ಅವುಗಳನ್ನು ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ಪ್ರಶ್ನಿಸಲು ಸಾಧ್ಯವಿಲ್ಲ ಎಂದು ಹೇಳಿತ್ತು. ಇದಕ್ಕೆ ಪ್ರತಿಯಾಗಿ ಭೂಷಣ್ ಅವರು 2017ರಲ್ಲಿ ಸುಪ್ರೀಂ ಕೋರ್ಟ್ ತ್ರಿವಳಿ ತಲಾಖ್ ಪದ್ಧತಿಯನ್ನು ಅಸಂವಿಧಾನಿಕ ಎಂದು ಘೋಷಿಸಿದ್ದನ್ನು ನೆನಪಿಸಿದರು.

ಇನ್ನಷ್ಟು ಅಧ್ಯಯನ ಮಾಡಿ, ಹೆಚ್ಚಿನ ಉಲ್ಲೇಖಗಳು ಮತ್ತು ಪರ್ಯಾಯ ಪರಿಹಾರಗಳನ್ನು ನೀಡಿ. 1937ರ ಕಾಯ್ದೆಯಿಂದ ಹೊರಬರಲು ಬಯಸುವ ಕೆಲವು ಮುಸ್ಲಿಂ ಮಹಿಳೆಯರು ಮುಂದೆ ಬಂದರೆ ನ್ಯಾಯಾಂಗದ ಹಸ್ತಕ್ಷೇಪ ಸೂಕ್ತವಾಗಬಹುದು ಎಂದು ಪೀಠವು ಅಭಿಪ್ರಾಯಪಟ್ಟಿತು. ಅರ್ಜಿಯನ್ನು ತಿದ್ದುಪಡಿ ಮಾಡಲು ಅನುಮತಿ ನೀಡಿ, ನಾಲ್ಕು ವಾರಗಳ ನಂತರ ಮುಂದಿನ ವಿಚಾರಣೆ ನಡೆಸಲಾಗುತ್ತದೆ ಎಂದು ನ್ಯಾಯಪೀಠ ಹೇಳಿದೆ.

ಕೆಪಿಸಿಸಿ ಅಧ್ಯಕ್ಷ ಡಿಕೆಶಿಗೆ ಶುಭ ಹಾರೈಸಿದ ಸಿಎಂ

ಪುಟ ೧➡ ವಿರೋಧ ಪಕ್ಷವಾದ ಬಿಜೆಪಿ ಸುಳ್ಳು ಪ್ರಕರಣಗಳನ್ನು ಹಾಕಿ ಹಲವು ಬಾರೀ ಕಿರುಕಳ ನೀಡಿದರೂ, ಶಿವಕುಮಾರ್ ಅವರು ಮಣಿಯದೆ ಪಕ್ಷಕ್ಕೆ ನಿಷ್ಠರಾಗಿ ಉಳಿದಿರುವುದು ಕಾಂಗ್ರೆಸ್ ಬಗ್ಗೆ ಅವರಲ್ಲಿರುವ ರಾಜಿಯಿಲ್ಲದ ನಿಷ್ಠೆಗೆ ಸಾಕ್ಷಿಯಾಗಿದೆ. ಇದು ಕಾಂಗ್ರೆಸ್‌ನ ಲಕ್ಷಾಂತರ ಕಾರ್ಯಕರ್ತರಿಗೆ ಸ್ಫೂರ್ತಿದಾಯಕ ನಡವಳಿಕೆ ಆಗಿದೆ ಎಂದು ಹೇಳಿದ್ದಾರೆ. ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಜತೆಯಲ್ಲಿ ಡಿ.ಕೆ.ಶಿವಕುಮಾರ್ ಹಗಲಿರುಳು ದುಡಿದಿದ್ದಾರೆ. ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮತ್ತೆ ಕಟ್ಟುವಲ್ಲಿ ಶಿವಕುಮಾರ್ ನನ್ನ ಹೆಗಲಿಗೆ ಹೆಗಲಾಗಿ ನಿಂತಿದ್ದಾರೆ.ನನಗಿಂತ ಕಿರಿಯರಾದ ಶಿವಕುಮಾರ್ ಅವರಿಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮೆಲ್ಲರ ಬಯಕೆಯಾಗಿದೆ. ಇದಕ್ಕಾಗಿ ನಡೆಯುವ ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ನಾನು ಕೂಡಾ ಜತೆಯಿರುತ್ತೇನೆ ಎಂದು ಪೋಸ್ಟ್‌ನಲ್ಲಿ ಹಂಚಿಕೊಂಡಿದ್ದಾರೆ.

ವೈದ್ಯರ ಮುಷ್ಕರ ವಾಪಸ್

ಪುಟ ೧➡ ಮುಂದಿನ 3 ತಿಂಗಳಿನಲ್ಲಿ ಎಲ್ಲ ಬೇಡಿಕೆ ಈಡೇರಿಸುವುದಾಗಿ ತಿಳಿಸಿದೆ. ಸರ್ಕಾರದ ಈ ಭರವಸೆಗೆ ವೈದ್ಯಾಧಿಕಾರಿಗಳ ಸಂಘ ಕೂಡ ಸಮ್ಮತಿಸಿದ್ದು, ಮಾ.11ರಿಂದ ಕೈಗೊಳ್ಳಬೇಕಾದ ಮುಷ್ಕರವನ್ನು ಹಿಂಪಡೆದುಕೊಂಡಿದೆ. ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ವೈದ್ಯಾಧಿಕಾರಿಗಳ ಜತೆಗೆ ಸಭೆ ನಡೆಸಿದ್ದೇವೆ. ಸಿಎನ್‌ಆರ್ ಮಾಡುತ್ತೇವೆ ಎಂದು ಹೇಳಿದ್ದೇವೆ. ಜೇಷ್ಠತಾಪಟ್ಟಿಯೂ ಸಿದ್ಧವಾಗಿದೆ. ಪಿಜಿ ಕೋರ್ಸ್ ಮಾಡಿ ಎಂದು ಕೇಳಿದ್ದರು ಅದಕ್ಕೂ ಒಪ್ಪಿದ್ದೇವೆ. ಉಳಿದಂತೆ ಹಲವು ವಿಚಾರಗಳನ್ನು ಚರ್ಚಿಸಿ, ತೀರ್ಮಾನ ಮಾಡುತ್ತೇವೆ ಎಂದರು.

ಪಶ್ಚಿಮ ಬಂಗಾಳಕ್ಕೆ ತರಾಟೆ

ಪುಟ ೧➡ ನಿಮಗೆ ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಂಬಿಕೆ ಇಲ್ಲವೆಂದು ನಿಮ್ಮ ಅರ್ಜಿ ನೋಡಿದರೆ ತಿಳಿಯುತ್ತದೆ. ನ್ಯಾಯಾಂಗ ಅಧಿಕಾರಿಗಳನ್ನು ಯಾರೂ ಪ್ರಶ್ನಿಸುವಂತಿಲ್ಲ. ಭಾರತದ ಮುಖ್ಯ ನ್ಯಾಯಮೂರ್ತಿಯಾಗಿ ನಾನಿದನ್ನು ಸಹಿಸಲಾರೆ ಎಂದು ಎಚ್ಚರಿಕೆ ನೀಡಿದ್ದಾರೆ.

ಎಸ್‌ಐಆರ್ ಮೇಲುಸ್ತುವಾರಿ ನೋಡಿಕೊಳ್ಳುವುದಕ್ಕಾಗಿ ಸುಪ್ರೀಂ ಕೋರ್ಟ್ ನೇಮಿಸಿದ ಅಧಿಕಾರಿಗಳ ನಿಷ್ಠೆಯನ್ನು ಪ್ರಶ್ನಿಸುವ ಪ್ರಯತ್ನ ಮಾಡುವವರಿಗೆ ಸುಪ್ರೀಂ ಕೋರ್ಟ್ ನ್ಯಾಯಪೀಠ ಎಚ್ಚರಿಕೆ ನೀಡಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿ ಆರ್.ಮಹಾದೇವನ್ ಮತ್ತು ನ್ಯಾಯಮೂರ್ತಿ ಜೊಯ್‌ಮಲ್ಯ ಬಾಗ್ಚಿ ಅವರನ್ನು ಒಳಗೊಂಡ ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠವು ನ್ಯಾಯಾಂಗ ವ್ಯವಸ್ಥೆಯ ಪ್ರಾಮಾಣಿಕತೆ ಪ್ರಶ್ನಿಸುವ ಅರ್ಜಿಗಳಿಗೆ ಛೀಮಾರಿ ಹಾಕಿದ್ದಾರೆ. ಮತದಾರ ಪಟ್ಟಿಯಿಂದ ತಮ್ಮ ಹೆಸರನ್ನು ಅಳಿಸಿಹೋಗುವ ಭಯದಿಂದ ಸಲ್ಲಿಸಿದ ಅರ್ಜಿಗಳ ಮತ್ತು ಆಕ್ಷೇಪಗಳನ್ನು ನ್ಯಾಯಾಂಗ ಅಧಿಕಾರಿಗಳು ಪರಿಶೀಲಿಸಬಾರದು ಎಂದ ಕೋರಿ ಸಲ್ಲಿಸಲಾದ ಹೊಸ ಅರ್ಜಿಯೊಂದರ ಬಗ್ಗೆ ತ್ರಿಸದಸ್ಯ ಪೀಠವು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

10.16 ಲಕ್ಷ ಅರ್ಜಿ ಪರಿಶೀಲನೆ

ಮಾ.9ರ ಸಂಜೆಯವರೆಗೆ, ಮತದಾರ ಪಟ್ಟಿಯಿಂದ ಹೆಸರು ಅಳಿಸಿಹೋಗುವ ಆತಂಕ ವ್ಯಕ್ತಪಡಿಸಿ ಸಲ್ಲಿಸಿರುವ ಸುಮಾರು 10.16 ಲಕ್ಷ ಅರ್ಜಿ ಮತ್ತು ಆಕ್ಷೇಪಣೆಗಳನ್ನು ನ್ಯಾಯಾಂಗ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ತಿಳಿಸಿದೆ. ಆನ್‌ಲೈನ್ ಪೋರ್ಟಲ್‌ನ ತಾಂತ್ರಿಕ ದೋಷಗಳನ್ನು ಶೀಘ್ರ ಪರಿಹರಿಸಲು ಸೂಚಿಸಿದೆ.

ಕಾಂಗ್ರೆಸ್ ಕಚೇರಿಗೆ ಭೂಮಿ ಮೇಲ್ಮನೆಯಲ್ಲಿ ಗದ್ದಲ

ವಿಧಾನ ಪರಿಷತ್: ರಾಜ್ಯದಲ್ಲಿ ಹಲವು ಕಡೆಗಳಲ್ಲಿ ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಭೂಮಿ ಕೊಟ್ಟಿರುವ ವಿಚಾರ ಸಂಬಂಧ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ಮಧ್ಯೆ ಮೇಲ್ಮನೆಯಲ್ಲಿ ಕೆಲ ಕಾಲ ವಾಗ್ವಾದ ಉಂಟಾಯಿತು.

ಮಂಗಳವಾರ ಪ್ರಶ್ನೋತ್ತರ ಸಮಯದಲ್ಲಿ ಬಿಜೆಪಿಯ ಡಿ.ಎಸ್.ಅರುಣ್ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕಾಗಿ ಸುಮಾರು 40 ಕೋಟಿ ರೂ. ಮೌಲ್ಯದ ಸರ್ಕಾರಿ ಜಾಗವನ್ನು ಕೇವಲ 2 ಕೋಟಿ ರೂ. ಗಳ ರಿಯಾಯಿತಿ ದರದಲ್ಲಿ ಮಂಜೂರು ಮಾಡಲಾಗಿದೆ. ಆದೇಶದಲ್ಲಿ ಎಕರೆಗಳ ಅಂಕಿಗಳಲ್ಲಿ ವ್ಯತ್ಯಾಸವಿದ್ದು, ಇನ್ನೊಂದರಲ್ಲಿ ಒಂದೊಂದು ಎಕರೆ ಜಾಗದಲ್ಲಿ ಕಾಂಗ್ರೆಸ್ ಭವನ ನಿರ್ಮಾಣ ಮಾಡುವುದಕ್ಕೆ ರಾಜ್ಯ ಸರ್ಕಾರ ಮುಂದಾಗಿರುವುದು ಇದೊಂದು ರೀತಿ ಹಗಲು ದರೋಡೆಯಾಗಿದೆ ಎಂದು ಹೇಳಿದರು. ಇದಕ್ಕೆ ಉತ್ತರಿಸಿದ ಸಚಿವ ಬೈರತಿ ಸುರೇಶ್, ಸಚಿವ ಸಂಪುಟದ ತೀರ್ಮಾನದಂತೆ ಕಾಂಗ್ರೆಸ್ ಕಚೇರಿ ನಿರ್ಮಿಸಲು ನಿವೇಶನ ಮಂಜೂರು ಮಾಡಲಾಗಿದೆ. ಕಂದಾಯ ಇಲಾಖೆಯಿಂದ ಯಾವುದೇ ತಕರಾರುಗಳು ಸ್ವೀಕೃತವಾಗಿಲ್ಲ. ಈ ಹಿಂದೆ ಡಿ.ಎಸ್.ಅರುಣ್ ಅವರೂ ಸಾರ್ವಜನಿಕರ ಸದುಪಯೋಗಕ್ಕೆ 2 ನಿವೇಶನವನ್ನು ರಿಯಾಯಿತಿ ದರದಲ್ಲಿ ನೀಡಲಾಗಿದೆ. ಬಿಜೆಪಿ ಕಚೇರಿಗಳಿಗೂ ನಿವೇಶನ ಕೊಡಲಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಭೂಮಿ ನೀಡಿದ ವಿಚಾರ

ಮಧ್ಯೆ ಪ್ರವೇಶಿಸಿದ ಛಲವಾದಿ ನಾರಾಯಣಸ್ವಾಮಿ ಅವರು, ಸರ್ಕಾರ 100 ಕಾಂಗ್ರೆಸ್ ಭವನ ಮಾಡಲು ನಿರ್ಧರಿಸಿದ್ದರು. ರಾಜಕೀಯ ಪಕ್ಷಕ್ಕೆ ನೂರಾರು ನಿವೇಶನಗಳು ಕೊಡುವುದಕ್ಕೆ ಅವಕಾಶ ಇಲ್ಲ. ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದ ಕೂಡಲೇ ಕಾನೂನು ಬಾಹಿರ ಇರುವುದು ಸರಿಯಾಗುತ್ತಾ, ಏನು ಬೇಕಾದರೂ ತೀರ್ಮಾನ ಕೈಗೊಳ್ಳಬಹುದೇ ಎಂದು ಪ್ರಶ್ನಿಸಿದರು.

ಉಪಾಹಾರ ಕೂಟ



ಮಂಗಳವಾರ ರಾಷ್ಟ್ರಪತಿ ಭವನದಲ್ಲಿ ಕರ್ನಾಟಕ, ಆಂಧ್ರಪ್ರದೇಶ ಹಾಗೂ ಕೇರಳದ ಸಂಸದರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಪಾಹಾರ ಕೂಟ ಆಯೋಜಿಸಿದ್ದರು. ಈ ವೇಳೆ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ನಿರ್ಮಲಾ ಸೀತಾರಾಮನ್, ಜೆ.ಪಿ. ನಡ್ಡಾ, ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ರಾಜ್ಯದ ಸಂಸದರು ಉಪಸ್ಥಿತರಿದ್ದರು.

ಬಾಕಿ ಹಣ ವಾರದೊಳಗೆ ನೀಡಲು ಕ್ರಮ: ಖಂಡ್ರೆ

ವಿಧಾನ ಪರಿಷತ್: ಇತ್ತೀಚೆಗೆ ಮಡಿಕೇರಿಯಲ್ಲಿ ಆನೆ ದಾಳಿಯಿಂದ 2 ಪ್ರಕರಣಗಳಲ್ಲಿ ಮೃತಪಟ್ಟ ಇಬ್ಬರೂ ಕುಟುಂಬಸ್ಥರಿಗೆ ಈಗಾಗಲೇ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗಿದ್ದು, 15 ಲಕ್ಷ ರೂ. ಬಾಕಿ ಮೊತ್ತವನ್ನು ವಾರದೊಳಗೆ ನೀಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಮಾಹಿತಿ ನೀಡಿದರು.



ಆನೆ ದಾಳಿಯಿಂದ ಮೃತಪಟ್ಟ ಕುಟುಂಬಸ್ಥರಿಗೆ ತಲಾ 5 ಲಕ್ಷ ಪರಿಹಾರ

ಶೂನ್ಯವೇಳೆಯಲ್ಲಿ ಸುಜಾ ಕುಶಾಲಪ್ಪ ಅವರ ಪ್ರಸ್ತಾವಕ್ಕೆ ಪ್ರತಿಕ್ರಿಯಿಸಿದ ಸಚಿವರು, ಫೆ.28 ರಂದು ಕಾಡಿನಂಚಿನ ನಿವಾಸಿ 17 ವರ್ಷದ ಬಾಲಕಿ ಆನೆ ದಾಳಿಯಿಂದ ಮೃತಪಟ್ಟಿದ್ದರೆ, ಮಾ.9 ರಂದು ಕಾಡಿನೊಳಗೆ ವಾಸಿಸುತ್ತಿದ್ದ 55 ವರ್ಷದ ಬುಡಕಟ್ಟು ಮಹಿಳೆ ಸಾವಿಗೀಡಾಗಿದ್ದಾರೆ ಇದು ಅತ್ಯಂತ ನೋವಿನ ಸಂಗತಿ ಎಂದರು. ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಅರಣ್ಯ ಇಲಾಖೆ ಮಾನವ–ವನ್ಯಜೀವಿ ಸಂಘರ್ಷ ತಡೆಯಲು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆನೆ ನಿಗ್ರಹ ಕಂದಕ, ಸೌರ ವಿದ್ಯುತ್ ಬೇಲಿ ನಿರ್ವಹಣೆ ಮಾಡಲಾಗುತ್ತಿದೆ. 2 ಆನೆ ಕಾರ್ಯಪಡೆ ಕಾರ್ಯನಿರ್ವಹಿಸುತ್ತಿದೆ. ಈಗ 2 ಪುಂಡಾನೆಗಳ ಸೆರೆಗೆ ಮುಖ್ಯ ವನ್ಯಜೀವಿ ಪರಿಪಾಲಕರು ಆದೇಶ ನೀಡಿದ್ದಾರೆ ಎಂದು ತಿಳಿಸಿದರು.

ಆನೆ–ಮಾನವ ಸಂಘರ್ಷ ನಿಯಂತ್ರಿಸಲು ಶಾಶ್ವತ ಪರಿಹಾರ ಕ್ರಮಗಳ ಬಗ್ಗೆಯೂ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು. ಆನೆ–ಮಾನವ ಸಂಘರ್ಷ ನಿಯಂತ್ರಿಸಲು 2025–26ನೇ ಸಾಲಿನಲ್ಲಿ ಮಡಿಕೇರಿ ವಿಭಾಗಕ್ಕೆ 7ಕಿ.ಮೀ. ಮತ್ತು ನಾಗರಹೊಳೆ ವಿಭಾಗಕ್ಕೆ 20 ಕಿ.ಮೀ. ರೈಲು ಹಳಿ ತಡೆಗೋಡೆ ಮಂಜೂರಾಗಿದ್ದು, ಶೀಘ್ರ ಕಾಮಗಾರಿ ಆರಂಭಿಸಲಾಗುವುದು ಎಂದು ವಿವರಿಸಿದರು.

ಕಿರುಸುದ್ದಿ

ಸಾವಯವ ಕೃಷಿಗೆ ಪ್ರೋತ್ಸಾಹ

ವಿಧಾನ ಪರಿಷತ್: ತೆಂಗಿನ ತೋಟ ಸೇರಿದಂತೆ ತೋಟಗಾರಿಕೆ ಬೆಳೆಗಳನ್ನು ಪುನಶ್ಚೇತನಗೊಳಿಸಲು ವೈಜ್ಞಾನಿಕವಾಗಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದರು. ಸದಸ್ಯ ರಮೇಶ್ ಬಾಬು ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ತೆಂಗಿನ ತೋಟಗಳಲ್ಲಿ ವೈಜ್ಞಾನಿಕವಾಗಿ ಸಾವಯವ ಕೃಷಿಯನ್ನು ಅಳವಡಿಸಲು ಮೊದಲನೇ ಹಂತದಲ್ಲಿ ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಎರಡು ಗುಚ್ಚಗಳನ್ನು ಗುರುತಿಸಲಾಗಿದೆ.



ಎರಡನೇ ಹಂತದಲ್ಲಿ ತುಮಕೂರು, ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ಚಿತ್ರದುರ್ಗ ಜಿಲ್ಲೆಗಳಲ್ಲಿ 10 ಗುಚ್ಚಗಳನ್ನು ಗುರುತಿಸಲಾಗುವುದು ಎಂದರು. ತೋಟಗಾರಿಕೆಯಲ್ಲಿ ಸಾವಯವ ಕೃಷಿಯನ್ನು ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಗುಚ್ಚ ಮಾದರಿಯಲ್ಲಿ 640 ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು 2 ಗ್ರಾಮ ಪಂಚಾಯಿತಿಯಲ್ಲಿ ಪರಂಪರಾಗತ ಕೃಷಿ ವಿಕಾಸ ಯೋಜನೆ ಅಡಿ ಅಳವಡಿಸಿಕೊಳ್ಳಲಾಗಿದೆ ಎಂದರು.

900 ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕ: ಸಚಿವ

ವಿಧಾನಸಭೆ: ಕಳೆದ ಒಂದೂವರೆ ವರ್ಷದಲ್ಲಿ 900 ಜನ ಸಬ್ ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿದ್ದೇವೆ. ಮೊದಲ ಹಂತದಲ್ಲಿ 545 ಜನ ಒಂದು ಅಥವಾ ಎರಡು ವಾರಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಾರೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ನಾಲ್ಕೈದು ವರ್ಷಗಳಿಂದ ನೇಮಕಾತಿ ನಡೆದಿಲ್ಲ. ಕಳೆದ ಒಂದೂವರೆ ವರ್ಷದಲ್ಲಿ 900 ಜನ ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕ ಮಾಡಿದ್ದೇವೆ. ಮೊದಲ ಹಂತದಲ್ಲಿ 545 ಜನ ಎರಡು ವಾರಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಾರೆ. ಇನ್ನೂ 400 ಜನರಿಗೆ ತರಬೇತಿ ನಡೆಯುತ್ತಿದೆ. ಇನ್ನೂ ಎರಡು ತಿಂಗಳಲ್ಲಿ ತರಬೇತಿ ಪೂರ್ಣಗೊಳ್ಳಲಿದೆ ಎಂದರು. ಪ್ರಸಕ್ತ 8,000 ಜನ ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಅನುಮತಿ ಸಿಕ್ಕಿದೆ. ಶೀಘ್ರದಲ್ಲೇ ಅವರ ನೇಮಕಕ್ಕೆ ಅಧಿಸೂಚನೆ ಹೊರಡಿಸಲಿದ್ದೇವೆ. ಒಳ ಮೀಸಲಾತಿ ವಿಷಯದಿಂದ ನೇಮಕಾತಿ ವಿಳಂಬವಾಗಿದೆ. ಈಗಾಗಲೇ ಸರ್ಕಾರ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿದೆ. ಅದರಲ್ಲಿ ಈ ಹುದ್ದೆಗಳೂ ಸೇರಿವೆ. ನೇಮಕಾತಿ ಆದ ತಕ್ಷಣ ಯಾವ ಠಾಣೆಯಲ್ಲಿ ತೀವ್ರ ಕೊರತೆ ಇದೆ, ಅಂತಹ ಕಡೆ ನಾವು ನಿಯುಕ್ತಿ ಮಾಡುತ್ತೇವೆ ಎಂದು ತಿಳಿಸಿದರು.

ಮಹಾಮಸ್ತಕಾಭಿಷೇಕ ಪೂರ್ವ ಸಿದ್ಧತೆಗಾಗಿ ಸಮಿತಿ

ವಿಧಾನಸಭೆ: ಮುಂದಿನ ವರ್ಷದ ಫೆಬ್ರವರಿಯಲ್ಲಿ ಜರುಗಲಿರುವ ಕಾರ್ಕಳದ ಬಾಹುಬಲಿ ಮಹಾಮಸ್ತಕಾಭಿಷೇಕ ಧಾರ್ಮಿಕ ಕಾರ್ಯಕ್ರಮಕ್ಕೆ ಸುಮಾರು 7 ಕೋಟಿ ರೂ. ಅನುದಾನ ಬೇಕಾಗಲಿದ್ದು, ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸಮಿತಿ ರಚಿಸಲಿದ್ದು, ಮುಖ್ಯಮಂತ್ರಿಗಳ ಜತೆ ಸಭೆ ನಡೆಸಿ ತೀರ್ಮಾನಿಸಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಮಹಾಮಸ್ತಕಾಭಿಷೇಕ ಪೂರ್ವ ಸಿದ್ಧತೆ ಬಗ್ಗೆ ಗಮನ ಸೆಳೆದ ಬಿಜೆಪಿ ಶಾಸಕ ಸುನೀಲ್ ಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹನ್ನೆರಡು ವರ್ಷಗಳಿಗೆ ಒಮ್ಮೆ ಜರುಗುವ ಈ ಧಾರ್ಮಿಕ ಆಚರಣೆಯನ್ನು ನಡೆಸಲು ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಳ್ಳಲಿದೆ ಎಂದರು.

ಆಯಕಟ್ಟಿನ ಜಾಗದಲ್ಲಿ ವಿಮಾನ ನಿಲ್ದಾಣ ನಿರ್ಮಾಣ: ಎಂಬಿಪಾ

ಸಿಎಂ ಜತೆ ಚರ್ಚಿಸಿ ಕ್ರಮ

ವಿಧಾನ ಪರಿಷತ್: ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ಜನರಿಗೆ ಅನುಕೂಲವಾಗುವಂತೆ ಆಯಕಟ್ಟಿನ ಜಾಗದಲ್ಲಿ ಹೊಸದಾಗಿ ವಿಮಾನ ನಿಲ್ದಾಣ ನಿರ್ಮಿಸುವ ಸಂಬಂಧ ಮೂರೂ ಜಿಲ್ಲೆಗಳ ಜನಪ್ರತಿನಿಧಿಗಳು ಜತೆಗೂಡಿ ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ ನಡೆಸಿದ ನಂತರ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯ ವೈ. ಎಂ.ಸತೀಶ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಅವರು, 2010 ರಲ್ಲಿ ಬಳ್ಳಾರಿಯಲ್ಲಿ ವಿಮಾನ ನಿಲ್ದಾಣಕ್ಕಾಗಿ 900 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಯೋಜನೆಯ ಜವಾಬ್ದಾರಿ ಹೊತ್ತಿದ್ದ ಚೆನ್ನೈ ಮೂಲದ ಮೆ.ಮಾರ್ಗ್ ಶ್ರೀ ಕೃಷ್ಣದೇವರಾಯ ಏರ್ಪೋರ್ಟ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಎರಡು ವರ್ಷ ಕಳೆದರೂ ಕಾಮಗಾರಿ ಆರಂಭಿಸದ ಕಾರಣ ಅದರೊಂದಿಗಿನ ಒಪ್ಪಂದ ವನ್ನು ರದ್ದುಗೊಳಿಸಲಾಗಿದೆ. ಪ್ರಸ್ತುತ ಹೊಸದಾಗಿ ಡಿಪಿಆರ್ ಸಿದ್ಧಪಡಿಸಲು ಸಲಹೆಗಾರರ ನೇಮಕಕ್ಕೆ ಟೆಂಡರ್ ಕರೆಯಲಾಗಿದೆ ಎಂದು ಮಾಹಿತಿ ನೀಡಿದರು.

ಈ ನಡುವೆ ವಿಜಯನಗರ ಮತ್ತು ಕೊಪ್ಪಳ ಭಾಗದವರೂ ವಿಮಾನ ನಿಲ್ದಾಣ ಬೇಕೆನ್ನುತ್ತಿದ್ದಾರೆ. ಹೀಗಾಗಿ ಜಿಲ್ಲೆಗೊಂದು ವಿಮಾನ ನಿಲ್ದಾಣ ಮಾಡುವುದು ಕಾರ್ಯಸಾಧುವಲ್ಲ ಎಂದು ಈ ರೀತಿಯ ಚಿಂತನೆ ಮಾಡಲಾಗುತ್ತಿದೆ. ಆದರೆ ಬಳ್ಳಾರಿ ಯಲ್ಲಿ ವಿಮಾನ ನಿಲ್ದಾಣಕ್ಕೆಂದು ಸ್ವಾಧೀನ ಪಡಿಸಿಕೊಂ ಡಿರುವ ಜಮೀನನ್ನು ವಾಪಸ್ ಕೊಡಲು ಬರುವುದಿಲ್ಲ ಎಂದು ಹೇಳಿದರು.



- ಡಿಪಿಆರ್ ಸಿದ್ಧಪಡಿಸಲು ಸಲಹೆಗಾರರ ನೇಮಕಕ್ಕೆ ಟೆಂಡರ್ ಕರೆಯಲಾಗಿದೆ
- ಜಿಲ್ಲೆಗೊಂದು ವಿಮಾನ ನಿಲ್ದಾಣ ಮಾಡುವುದು ಕಾರ್ಯ ಸಾಧುವಲ್ಲ

ಜಿಲ್ಲೆಗೊಂದು ನಿಲ್ದಾಣ ಅಪ್ರಾಯೋಗಿಕ

ಪ್ರತಿ ಜಿಲ್ಲೆಗೂ ಪ್ರತ್ಯೇಕ ವಿಮಾನ ನಿಲ್ದಾಣ ನಿರ್ಮಿಸುವುದು ಸಮಂಜಸವಲ್ಲ. ಉಡಾನ್ ಯೋಜನೆಯಡಿ ಆರಂಭವಾದ ಬೀದರ್ ಮತ್ತು ಕಲಬುರಗಿ ನಿಲ್ದಾಣಗಳು ಆರಂಭದಲ್ಲಿ ಉತ್ತಮವಾಗಿದ್ದರೂ ನಂತರ ವಿಮಾನ ಸೇವೆ ಸ್ಥಗಿತಗೊಂಡ ಉದಾಹರಣೆಗಳು ನಮ್ಮ ಎದುರಿದೆ. ಬಳ್ಳಾರಿ ವಿಮಾನ ನಿಲ್ದಾಣಕ್ಕೂ ಅಂತಹ ಸ್ಥಿತಿ ಬರಬಾರದು. ಹೀಗಾಗಿ ಮೂರು ಜಿಲ್ಲೆಗಳಿಗೂ ಹತ್ತಿರವಾಗುವ ಸೂಕ್ತ ಸ್ಥಳದ ಬಗ್ಗೆ ಚಿಂತನೆ ನಡೆದಿದೆ. ಆದರೆ ಬಳ್ಳಾರಿಯಲ್ಲಿ ಈಗಾಗಲೇ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ವಾಪಸ್ ನೀಡಲು ಸಾಧ್ಯವಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಹೊಸ ಕೈಗಾರಿಕಾ ನೀತಿ ಜಾರಿಗೆ ಚಿಂತನೆ: ಸಚಿವ

ವಿಧಾನ ಪರಿಷತ್: ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ ಸ್ಥಾಪನೆಗೆ ಬಂಡವಾಳ ಹೂಡಿಕೆ ಆಕರ್ಷಿಸಲು ನಮ್ಮ ಸರ್ಕಾರ, ಹೊಸ ಕೈಗಾರಿಕಾ ನೀತಿಗಳನ್ನು ಜಾರಿಗೆ ತರುತ್ತಿದೆ. ಬಾಗಲಕೋಟೆ ಮತ್ತು ವಿಜಯಪುರದಲ್ಲಿ 8 ರಿಂದ 9 ಕಂಪನಿಗಳು ಬಂಡವಾಳ ಹೂಡಿಕೆ ಮಾಡುತ್ತಿವೆ ಎಂದು ಸಚಿವ ಎಂ.ಬಿ. ಪಾಟೀಲ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಪಿ.ಎಚ್ .ಪೂಜಾರ್ ಪ್ರಶ್ನೆಗೆ ಉತ್ತರಿಸಿದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆಯ ನಿರಾಶ್ರಿತರಿಗೆ ಉದ್ಯೋಗ ನೀಡಬೇಕು. ಇದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಬಿಜೆಪಿಯವರು ಕೇಂದ್ರ ಸರ್ಕಾರವನ್ನು ಒಪ್ಪಿಸುವ ಮೂಲಕ ರಾಜ್ಯದಲ್ಲಿ ದೊಡ್ಡ ಕಂಪನಿಗಳನ್ನು ತರುವ ಕೆಲಸ ಮಾಡಬೇಕು ಎಂದರು.

ಜ್ಞಾನಭಂಡಾರ ಹಸ್ತಪ್ರತಿ, ಡಿಜಿಟಲ್ ಬಿಲ್ ಮಂಡನೆ

ವಿಧಾನಸಭೆ: ಕರ್ನಾಟಕ ರಾಜ್ಯದಲ್ಲಿರುವ ಹಸ್ತಪ್ರತಿಗಳ ಸಮೀಕ್ಷೆ, ದಾಖಲೀಕರಣ, ಸಂರಕ್ಷಣೆ, ಡಿಜಿಟಲೀಕರಣ, ಸಂಶೋಧನೆ, ಪ್ರಕಟಣೆ ಮತ್ತು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲು ಕರ್ನಾಟಕ ಹಸ್ತಪ್ರತಿಗಳ ಪ್ರಾಧಿಕಾರ ಸ್ಥಾಪಿಸಲು ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟಲೀಕರಣ ವಿಧೇಯಕ, 2026ನ್ನು ಮಂಡಿಸಲಾಯಿತು. ಮಂಗಳವಾರ ಸದನ ದಲ್ಲಿ ಎಚ್.ಕೆ.ಪಾಟೀಲ್ ಈ ವಿಧೇಯಕ ವನ್ನು ಮಂಡಿಸಿದರು. ಪುರಾತತ್ತ್ವ ಇಲಾಖೆಯ ಪ್ರಭಾರದಲ್ಲಿರುವ ಸಚಿವರು ಈ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿರಲಿದ್ದಾರೆ. ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಪದನಿಮಿತ್ತ ಸದಸ್ಯ ಕಾರ್ಯದರ್ಶಿ, ಐವರು ಪದನಿಮಿತ್ತ ಸದಸ್ಯರು, ಭಾರತಾಧ್ಯಯನ ಶಾಸ್ತ್ರ, ಕನ್ನಡ ಸಾಹಿತ್ಯ ಅಥವಾ ಹಸ್ತಪ್ರತಿ ಶಾಸ್ತ್ರದಲ್ಲಿ ಮೂವರು ವಿದ್ವಾಂಸರು ಸದಸ್ಯರು, ಖಾಸಗಿ ಹಸ್ತ ಪ್ರತಿಧಾರಕರು ಅಥವಾ ಮಠಗಳ ಇಬ್ಬರು ಪ್ರತಿನಿಧಿಗಳು ಸದಸ್ಯರು, ಡಿಜಿಟಲ್ ಮಾನವಿಕಗಳಲ್ಲಿನ ಒಬ್ಬ ತಜ್ಞ ಸದಸ್ಯ ರಾಗಿರಲಿದ್ದಾರೆ ಎಂದು ವಿಧೇಯಕದಲ್ಲಿ ತಿಳಿಸಲಾಗಿದೆ.

ಪೊಲೀಸ್, ಲೋಕಾಯುಕ್ತ ಕಾಯ್ದೆ ತಿದ್ದುಪಡಿ ವಿಧೇಯಕಗಳು

ಪೊಲೀಸ್ ಠಾಣೆಗಳು, ವೃತ್ತ, ಉಪ ವಿಭಾಗ, ಜಿಲ್ಲೆ ಮತ್ತು ವಲಯಗಳ ಪ್ರಭಾರದಲ್ಲಿರುವ ಅಧಿಕಾರಿಗಳ ಅಧಿಕಾರಾವಧಿ ವಯೋನಿವೃತ್ತಿಗೊಳಪಟ್ಟು, ಕಾಲಕಾಲಕ್ಕೆ ಸರ್ಕಾರದಿಂದ ಅಧಿಸೂಚಿಸಬಹುದಾದಂಥ ಕಾರ್ಯಾಚರಣೆ ಕರ್ತವ್ಯಗಳು ಅಥವಾ ಅಂಥ ಇತರೆ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಅಧಿಕಾರಿಗಳು ಕನಿಷ್ಠ ಒಂದು ವರ್ಷದ ಅಧಿಕಾರಾವಧಿ ಹೊಂದಿರಬೇಕು ಎಂಬ ತಿದ್ದುಪಡಿಯೊಂದಿಗೆ ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕ, 2026 ವಿಧೇಯಕ ಮಂಡಿಸಲಾಯಿತು. ಅಲ್ಲದೇ ಲೋಕಾಯುಕ್ತರ ಭತ್ಯೆಗಳು ಮತ್ತು ಸೇವಾ ಷರತ್ತುಗಳನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಅಥವಾ ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಿಗೆ ಸಂದಾಯವಾಗಬಹುದಾದ ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳಿಗೆ ಸರಿಸಮನಾಗಿರುವಂತೆ ಉಪಬಂಧ ಕಲ್ಪಿಸಲು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ 2026 ನ್ನು ಮಂಡಿಸಲಾಯಿತು.

443 ಅಗ್ನಿಶಾಮಕ ವಾಹನ ಚಾಲನೆ ಸ್ಥಗಿತ: ಪರಮೇಶ್ವರ

ವಿಧಾನಸಭೆ: ಕೇಂದ್ರ ಗೃಹ ಮಂತ್ರಾಲಯದ ಗುಜರಿ ನೀತಿಯನ್ವಯ ಕಾರ್ಯಾಚರಣೆಗೆ ಯೋಗ್ಯವಾಗಿದ್ದರೂ 15 ವರ್ಷ ಮೇಲ್ಪಟ್ಟ 443 ಅಗ್ನಿಶಾಮಕ ವಾಹನಗಳನ್ನು ರಸ್ತೆ ಚಾಲನೆಯಿಂದ ಸ್ಥಗಿತಗೊಳಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಪೈಕಿ 155 ವಾಹನಗಳನ್ನು ಈಗಾಗಲೇ ವಿಲೇವಾರಿ ಮಾಡಲಾಗಿದೆ. ಪ್ರಸ್ತುತ 261 ವಾಹನಗಳ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗಿದೆ ಎಂದರು. ಈ ವಾಹನಗಳ ಬದಲಿಗೆ 15ನೇ ಹಣಕಾಸು ಆಯೋಗದ ಯೋಜನೆಯಲ್ಲಿ ಹಾಗೂ ಕೆ–ಸೇಫ್–2 ಯೋಜನೆಯಲ್ಲಿ ಒಟ್ಟು 270 ವಾಹನಗಳನ್ನು ಖರೀದಿಸಲು ಸರಬರಾಜು ಆದೇಶವನ್ನು ನೀಡಲಾಗಿದೆ. ಇದರಲ್ಲಿ 100 ವಾಹನಗಳು ಸರಬರಾಜು ಮಾಡಿದ್ದು, ಬಾಕಿ ಉಳಿದ 170 ವಾಹನಗಳ ಕವಚ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ವಾಹನಗಳು ಇಲಾಖೆಗೆ ಸರಬರಾಜು ಆದ ನಂತರ ಆದ್ಯತೆಯ ಮೇರೆಗೆ ವಾಹನಗಳನ್ನು ಮಂಜೂರು ಮಾಡಲಾಗುತ್ತದೆ ಎಂದು ವಿವರಿಸಿದರು. ಅಗ್ನಿಶಾಮಕ ದಳಕ್ಕೆ ಒಟ್ಟು 547 ವಾಹನಗಳನ್ನು ಖರೀದಿಸುತ್ತೇವೆ ಡಾ. ಪರಮೇಶ್ವರ ತಿಳಿಸಿದರು.

ಒಂದೇ ಅಗ್ನಿಶಾಮಕ ಠಾಣೆಯ ಎರಡು–ಮೂರು ಕಡೆ ಅಗ್ನಿ ಅವಘಡ ನಡೆದರೆ ಅಥವಾ ಬೃಹತ್ ಪ್ರಮಾಣದಲ್ಲಿ ಅಗ್ನಿ ಅನಾಹುತ ಸಂಭವಿಸಿದರೆ ಅಗ್ನಿಶಾಮಕ ವಾಹನಗಳ ನಿಯೋಜನೆಗೆ ಸಮಸ್ಯೆಯಾಗುತ್ತದೆ. ಇಂತಹ ಸಂದರ್ಭದಲ್ಲಿ 20 ಕಿ.ಮೀ. ವ್ಯಾಪ್ತಿಯಲ್ಲಿರುವ ಬೇರೆ ಠಾಣೆಗಳ ವಾಹನಗಳನ್ನು ನಿಯೋಜಿಸಲಾಗುತ್ತದೆ ಎಂದು ಸಚಿವರು ಹೇಳಿದರು.

ಜವಳಿ ಪಾರ್ಕ್ ಜಮೀನಿಗೆ ಕೇಂದ್ರಕ್ಕೆ ಪತ್ರ

ವಿಧಾನ ಪರಿಷತ್: ಸಿಂಧನೂರು ತಾಲೂಕಿನಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು 15 ಎಕರೆ ಜಮೀನನ್ನು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ್ ತಿಳಿಸಿದರು.



ಚುಕ್ಕೆ ಗುರುತಿನ ಪ್ರಶ್ನೋತ್ತರ ಕಲಾಪದಲ್ಲಿ ಉತ್ತರಿಸಿದ ಸಚಿವರು, ಜವಳಿ ಪಾರ್ಕ್ ಸ್ಥಾಪನೆಯ ಸಂಬಂಧ ಅಗತ್ಯ ವಿರುವ ಕನಿಷ್ಠ 15 ಎಕರೆ ಜಮೀನನ್ನು ಗುರುತು ಮಾಡಿ, ಜವಳಿ ಇಲಾಖೆಯ ಹೆಸರಿಗೆ ಹಸ್ತಾಂತರಿಸಲು ಸಿಂಧನೂರು ತಾಲೂಕಿನ ತಹಸೀಲ್ದಾರರು, ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿದೆ. ಜಮೀನಿನ ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ ಎಂದರು.

ಸಿಂಧನೂರು ತಾಲೂಕಿನಲ್ಲಿ ಒಂದೇ ಕಡೆ 15 ಎಕರೆಯಷ್ಟು ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ. ಆದರೆ, ಸಿಂಧನೂರು ತಾಲೂಕಿನಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸೆಂಟ್ರಲ್ ಸೀಡ್ಸ್ ಫಾರಂ(ಸಿಎಸ್‌ಎಫ್) ನಲ್ಲಿ ಸುಮಾರು 7,500 ಎಕರೆಯಷ್ಟು ಭೂಮಿ ಲಭ್ಯ ವಿದ್ದು, ಈ ಜಮೀನನ್ನು ಇಲಾಖೆಗೆ ಮಂಜೂರು ಮಾಡಿ ದ್ದಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಪರಿಶೀಲಿಸಲಾಗುವುದು ಎಂದು ಹೇಳಿದರು.

ಎಪಿಎಂಸಿಗಳಲ್ಲಿ ₹476 ಕೋಟಿ ಮಾರುಕಟ್ಟೆ ಶುಲ್ಕ ಸಂಗ್ರಹ

ವಿಧಾನ ಪರಿಷತ್: ಪ್ರಸಕ್ತ ಹಣಕಾಸು ವರ್ಷದ ಜನವರಿ ಅಂತ್ಯಕ್ಕೆ ರಾಜ್ಯದ ಎಪಿಎಂಸಿಗಳಲ್ಲಿ ಒಟ್ಟು 71 ಸಾವಿರ ಕೋಟಿ ರೂ. ವಹಿವಾಟು ನಡೆದಿದೆ. 476.65 ಕೋಟಿ ರೂ. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದೆ ಎಂದು ಸಕ್ಕರೆ, ಕಬ್ಬು ಅಭಿವೃದ್ಧಿ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು. ಸದಸ್ಯ ಟಿ. ಶರವಣ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ಕಳೆದ ಹಣಕಾಸು ವರ್ಷದಲ್ಲಿ 82 ಸಾವಿರ ಕೋಟಿ ರೂ. ವಹಿವಾಟು ನಡೆದಿತ್ತು. ಈ ಅವಧಿಯಲ್ಲಿ 498 ಕೋಟಿ ರೂ. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದ್ದು, ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ಪ್ರಮಾಣ ಮತ್ತಷ್ಟು ಹೆಚ್ಚಾಗಲಿದೆ ಎಂದು ಹೇಳಿದರು.

ರಾಜ್ಯದಲ್ಲಿ 170 ಎಪಿಎಂಸಿಗಳಿದ್ದು, ಅಂಗಡಿಗಳ ಹಂಚಿಕೆ ಪ್ರಕ್ರಿಯೆ ನಿರಂತರವಾಗಿರುತ್ತದೆ. 141 ಎಪಿಎಂಸಿಗಳಲ್ಲಿ ಅಂಗಡಿ ಹರಾಜು ಬಾಕಿ ಇದ್ದು, ಕ್ರಮ ಕೈಗೊಳ್ಳಲು ಸಮಿತಿಗಳಿಗೆ ಸೂಚನೆ ನೀಡಲಾಗಿದೆ ಎಂದು ವಿವರಿಸಿದರು. ವಾಣಿಜ್ಯ ಸ್ವರೂಪದ ಚಿಕ್ಕ ಮಳಿಗೆಗಳನ್ನು 55 ತಿಂಗಳ ಹಂಚಿಕೆ ಅವಧಿ ಮುಕ್ತಾಯವಾದ ನಂತರ ಮತ್ತೆ ಮುಂದುವರಿಸಲು ಅವಕಾಶವಿಲ್ಲ. ಅಂತಹ ಅಂಗಡಿಗಳನ್ನು ಹೊಸದಾಗಿ ಟೆಂಡರ್ ಕರೆದು ಬೇಡಿಕೆಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಿದ್ದು, ಬಾಕಿ ಉಳಿಯುವುದಿಲ್ಲ ಎಂದು ತಿಳಿಸಿದರು.

ಕ್ಯಾಂಟೀನ್‌ನಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಗೆ ಕ್ರಮ





ವಿಧಾನ ಪರಿಷತ್: ರಾಜ್ಯದ ಇಂದಿರಾ ಕ್ಯಾಂಟೀನ್‌ಗಳಲ್ಲಿ ಶೀಘ್ರದಲ್ಲೇ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಬೈರತಿ ಸುರೇಶ್ ಭರವಸೆ ನೀಡಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಜಗದೇವ್ ಗುತ್ತೇದಾರ್ ಪ್ರಸ್ತಾಪಿಸಿದ ವಿಷಯ ಪ್ರಸ್ತಾಪಿಸಿದರು. ಕಲಬುರಗಿಯ ಇಂದಿರಾ ಕ್ಯಾಂಟೀನ್‌ನಲ್ಲಿ ಮೆನು ಪ್ರಕಾರ ತಿಂಡಿ ನೀಡಲಾಗುತ್ತಿಲ್ಲ. ಜತೆಗೆ ಆಹಾರದ ಗುಣಮಟ್ಟವೂ ಸರಿಯಿಲ್ಲ ಎಂಬ ಅನೇಕ ದೂರುಗಳು ಬರುತ್ತಿವೆ. ಈ ವ್ಯವಸ್ಥೆಯನ್ನು ಸರಿಪಡಿಸುವುದರ ಜತೆಗೆ ಕ್ಯಾಂಟೀನ್‌ಗಳನ್ನು ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಬೈರತಿ ಸುರೇಶ್, ನಮಗೆ ದೊರೆತ ಮಾಹಿತಿ ಪ್ರಕಾರ ಇಂದಿರಾ ಕ್ಯಾಂಟೀನ್‌ಗಳಲ್ಲಿ ಮೆನು ಪ್ರಕಾರವೇ ಆಹಾರ ನೀಡಲಾಗುತ್ತಿದೆ. ಪ್ರಾದೇಶಿಕತೆಗೆ ಅನುಗುಣವಾಗಿ ತಿಂಡಿ ಮತ್ತು ಊಟವನ್ನು ನೀಡಲಾಗುತ್ತಿದೆ. ಈ ಬಗ್ಗೆ ನನಗೆ ಯಾವುದೇ ಗಂಭೀರ ದೂರುಗಳು ಬಂದಿಲ್ಲ ಎಂದು ಹೇಳಿದರು. ರಾಜ್ಯದ ಎಲ್ಲ ಇಂದಿರಾ ಕ್ಯಾಂಟೀನ್‌ಗಳಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಲು ಆಯಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದು ಬೈರತಿ ತಿಳಿಸಿದರು.

ಮತಪತ್ರ ಬಳಕೆ: ವಿಧೇಯಕ ಮಂಡನೆ

ವಿಧಾನಸಭೆ: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಯಂತ್ರಗಳ ಬದಲಿಗೆ ಮತ ಪತ್ರವನ್ನು ಬಳಸಲು ಅನುವು ಮಾಡುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಮಂಗಳವಾರ ಮಂಡನೆ ಮಾಡಲಾಯಿತು.



ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪರವಾಗಿ ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ–2026 ಮಂಡಿಸಿದರು.

ಗ್ರಾಮ ಪಂಚಾಯತ್ ಸೇರಿದಂತೆ ಇತರೆ ಚುನಾವಣೆ ಸಂದರ್ಭದಲ್ಲಿ ಮತದಾರ ಮೇಲಿನ ದಬ್ಬಾಳಿಕೆ, ಬೆದರಿಕೆ ಹಾಗೂ ಅನಗತ್ಯ ಪ್ರಭಾವ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳುವ ಅಂಶವನ್ನು ಈ ವಿಧೇಯಕದಲ್ಲಿ ಸೇರ್ಪಡೆಗೊಳಿಸಲಾಗಿದೆ. ಸಂವಿಧಾನದ 326ನೇ ಅನುಚ್ಛೇದದಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವ ಸಲುವಾಗಿ ಈ ವಿಧೇಯಕ ಅಗತ್ಯತೆವಿದೆ. ಅದರಲ್ಲೂ ಮುಖ್ಯವಾಗಿ ಮತದಾರರ ಮತಪತ್ರದ ಗೌಪ್ಯತೆ ಖಚಿತಪಡಿಸಿಕೊಳ್ಳಲು ಮತ್ತು ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯ ಸುರಕ್ಷಿತಗೊಳಿಸಲು ಈ ವಿಧೇಯಕ ತರಲಾಗಿದೆ. ಇವಿಎಂ ಕಾರ್ಯನಿರ್ವಹಣೆಯ ಕುರಿತು ಕಳವಳ ವ್ಯಕ್ತವಾಗಿದ್ದು, ಸಾರ್ವಜನಿಕ ನಂಬಿಕೆಯನ್ನು ಮರುಸ್ಥಾಪಿಸಲು ಸದೃಢ ರಹಸ್ಯ ಮತದಾನ ಪದ್ಧತಿಗೆ ಮರಳುವುದು ಅವಶ್ಯಕ ಎಂದು ವಿವರಿಸಲಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರಹಸ್ಯ ಮತದಾನ ವ್ಯವಸ್ಥೆಯ ಬಳಕೆ ಕಡ್ಡಾಯಗೊಳಿಸಲು ಶಾಸನ ರೂಪಿಸುವುದು ಅಗತ್ಯವಾಗಿದೆ. ರಾಜ್ಯ ಕಾಗದ ಪತ್ರಗಳನ್ನು ಬಳಸಿಕೊಂಡು ರಹಸ್ಯ ಮತದಾನ ವ್ಯವಸ್ಥೆ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲು ಸ್ಥಳೀಯ ಸಂಸ್ಥೆಗಳನ್ನು ನಿಯಂತ್ರಿಸುವ ಸಂಬಂಧ ಕಾನೂನು ತಿದ್ದುಪಡಿ ಮಾಡಲು ಈ ತಿದ್ದುಪಡಿ ವಿಧೇಯಕ ಮಂಡಿಸಲಾಗಿದೆ.

ಜಿಲ್ಲಾ ಪಂಚಾಯತ್‌ನ ಪ್ರತಿಯೊಂದು ಮತಕ್ಷೇತ್ರಗಳಲ್ಲಿ ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಾಧಿಕಾರಿ ಮತದಾರರ ಪಟ್ಟಿ ಸಿದ್ಧಪಡಿಸಬೇಕು. ಈ ಸಂಬಂಧ ಮೂಲ ಅಧಿನಿಯಮದ 165ನೇ ಪ್ರಕರಣಕ್ಕೆ ತಿದ್ದುಪಡಿ ಮಾಡಲಾಗಿದೆ. ಜಿ.ಪಂ. ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲಾಗಿರುವ ಯಾರೇ ವ್ಯಕ್ತಿ, ಆ ಮತಕ್ಷೇತ್ರದ ಚುನಾವಣೆಯಲ್ಲಿ ಮತದಾನಕ್ಕೆ ಹಕ್ಕುವುಳ್ಳವನಾಗಿರಲಿದ್ದಾನೆ. ಮೂಲ ಅಧಿನಿಯಮದಲ್ಲಿದ್ದ ಜಿಲ್ಲಾ ಪಂಚಾಯತ್‌ನ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ವಿಧಾನಸಭೆಯ ಮತದಾರರ ಪಟ್ಟಿಯನ್ನು ಜಿಲ್ಲಾ ಪಂಚಾಯತ್‌ನ ಮತದಾರರ ಪಟ್ಟಿಯ ಸಿದ್ಧತೆಯ ಉದ್ದೇಶಕ್ಕಾಗಿ ಅಳವಡಿಸಿಕೊಳ್ಳುವ ಅಂಶವನ್ನು ಕೈಬಿಡಲಾಗಿದೆ.

ಕೋವಿಗಳ ಪರವಾನಗಿ ನವೀಕರಣಕ್ಕೆ ರೈ ಮನವಿ

ವಿಧಾನಸಭೆ: ಕೃಷಿ ಬೆಳೆ ರಕ್ಷಣೆ ಸಂಬಂಧಿಸಿ ಕೋವಿ ಪರವಾನಗಿ ನವೀಕರಿಸಲು ಜಮೀನಿಗೆ ಕಾಡುಪ್ರಾಣಿ ಬಂದಿರಬೇಕು, ಅದು ಬೆಳೆಗೆ ಹಾನಿಮಾಡಿರಬೇಕು ಮತ್ತು ಅದಕ್ಕೆ ಅರಣ್ಯ ಇಲಾಖೆಯಿಂದ ಪರಿಹಾರ ಸಿಕ್ಕಿರಬೇಕು ಎಂದು ಪೊಲೀಸರು ಹೇಳುತ್ತಿರುವಾಗಿ ಕಾಂಗ್ರೆಸ್ ಶಾಸಕ ಅಶೋಕ್ ಕುಮಾರ್ ರೈ ಗಮನ ಸೆಳೆದರು.

ಪ್ರಶ್ನೋತ್ತರ ಕಲಾಪದಲ್ಲಿ ಪ್ರಸ್ತಾಪಿಸಿದ ಅವರು, ಈಗ ಕೃತಕ ಕೋವಿಗಳನ್ನು ಇಟ್ಟುಕೊಂಡು ಮಂಗಗಳು, ಕಾಡುಹಂದಿಗಳನ್ನು ಓಡಿಸಲು ಸಾಧ್ಯವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡಾನೆ ದಾಳಿಗೆ ಮೂವರು ಬಲಿಯಾಗಿದ್ದಾರೆ. ಆದರೆ, ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲಿ ಕೋವಿಗಳ ಪರವಾನಗಿ ನವೀಕರಿಸುತ್ತಿಲ್ಲ ಎಂದು ಅಲವತ್ತುಗೊಂಡರು.

ಇದಕ್ಕೆ ಉತ್ತರಿಸಿದ ಡಾ.ಜಿ.ಪರಮೇಶ್ವರ, ಕೋವಿ ಪರವಾನಗಿ ನವೀಕರಣ ಪೊಲೀಸರು ಮಾಡುವುದಿಲ್ಲ. ಪೊಲೀಸರು ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಮಾತ್ರ ನೀಡುತ್ತಾರೆ. ನವೀಕರಣಕ್ಕಾಗಿ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಅದನ್ನು ಉಪಯೋಗಿಸಲು ದೈಹಿಕ ಶಕ್ತಿ ಇರಬೇಕು, ಮಾನಸಿಕವಾಗಿ ಸದೃಢವಾಗಿರಬೇಕು, ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗವಹಿಸಿರಬಾರದು ಮೊದಲಾದ ಮಾನದಂಡಗಳಿವೆ. ಕೆಲವು ಸಂದರ್ಭದಲ್ಲಿ ಪರವಾನಗಿ ಒಂದು ಊರಿನಲ್ಲಿ ಇರುತ್ತದೆ. ಅವರು ಬೇರೆ ಕಡೆ ವಾಸವಿರುತ್ತಾರೆ. ಅಂತಹ ಸಂದರ್ಭದಲ್ಲಿ ಅವರಿಗೆ ಯಾಕೆ ಪರವಾನಗಿ ನೀಡಬೇಕೆಂಬ ಉದ್ದೇಶದಿಂದ ತಿರಸ್ಕರಿಸಲಾಗುತ್ತದೆ ಎಂದು ಹೇಳಿದರು.

ಪರಿಶೀಲಿಸಿ ಕ್ರಮ

ಕೋವಿಗಳ ನವೀಕರಣ ನಿಯಮಾವಳಿಗೆ ಸಂಬಂಧಿಸಿದ ವಿಚಾರವಾಗಿರುವುದರಿಂದ ಈ ಬಗ್ಗೆ ಪರಿಶೀಲನೆ ನಡೆಸುತ್ತೇವೆ. ರಾಜ್ಯದಲ್ಲಿಯೂ ತಾಲೂಕು ಕೇಂದ್ರದಲ್ಲೇ ಕೋವಿ ಪರವಾನಗಿ ನವೀಕರಿಸಲು ಅವಕಾಶ ನೀಡಬೇಕೆಂಬ ಬೇಡಿಕೆಯಿದೆ. ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಗೃಹ ಸಚಿವರು ಭರವಸೆ ನೀಡಿದರು.



ವಯಸ್ಸಾದರೆ ಮಗನಿಗೆ ಪರವಾನಗಿ ಕೊಡಿ

ಈ ವೇಳೆ ಅಶೋಕ್ ಕುಮಾರ್ ರೈ ಮಾತನಾಡಿ, ನನ್ನ ಕ್ಷೇತ್ರದಲ್ಲಿ ಗ್ರಾಮದಲ್ಲೇ ವಾಸವಿರುವ 250–300 ಜನರ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ವಯಸ್ಸಾದವರಿದ್ದರೆ ಅವರ ಮಗನ ಹೆಸರಿಗೆ ಕೋವಿಯನ್ನು ನವೀಕರಿಸಿ ಕೊಡಬೇಕು. ಹೊಸ ಕೋವಿ ಪರವಾನಗಿ ಕೇಳುತ್ತಿಲ್ಲ, ಈಗಿರುವ ಪರವಾನಗಿಯನ್ನೇ ನವೀಕರಿಸಲು ಮನವಿ ಮಾಡುತ್ತಿದ್ದೇವೆ. ಆದರೆ, ಅರ್ಜಿ ಸಲ್ಲಿಸಿದ ಕೂಡಲೇ ಅದನ್ನು ತಿರಸ್ಕರಿಸಲಾಗುತ್ತಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವರು, ತಿರಸ್ಕೃತಗೊಂಡ ಪಟ್ಟಿ ನೀಡಿ ಅರ್ಹತೆ ಇದ್ದರೆ ನವೀಕರಿಸಿ ನೀಡಲಾಗುತ್ತದೆ ಎಂದರು. ಕಳೆದ ನಾಲ್ಕು ವರ್ಷಗಳಲ್ಲಿ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕೋವಿ ಪರವಾನಗಿ ನವೀಕರಣ ಅರ್ಜಿಗಳನ್ನು ತಮ್ಮ ಕಚೇರಿಯಲ್ಲಿ ಸ್ವೀಕರಿಸಿ, ಕೋವಿ ಪರವಾನಗಿ ನವೀಕರಿಸಿ ಕೊಟ್ಟಿದ್ದಾರೆ. ಕ್ರಿಮಿನಲ್ ಪ್ರಕರಣಗಳು ದಾಖಲಾದ ಕೋವಿ ಪರವಾನಗಿದಾರರ ಪ್ರಕರಣಗಳನ್ನು ಹೊರತುಪಡಿಸಿದಂತೆ ಯಾವುದೇ ಪ್ರಕರಣಗಳು ಬಾಕಿಯಿಲ್ಲ ಎಂದು ಮಾಹಿತಿ ನೀಡಿದರು. ಮಧ್ಯೆ ಪ್ರವೇಶಿಸಿದ ಬಿಜೆಪಿ ಶಾಸಕ ಸಿಮೆಂಟ್ ಮಂಜು, ಕೋವಿಯನ್ನು ಬಸ್ಸಿನಲ್ಲಿ ದೂರದ ಜಿಲ್ಲಾ ಕೇಂದ್ರಕ್ಕೆ ತಂದು ಪರವಾನಗಿ ನವೀಕರಿಸುವುದು ಕಷ್ಟದ ಕೆಲಸ. ಆದ್ದರಿಂದ ತಾಲೂಕು ಕೇಂದ್ರಗಳಲ್ಲಿಯೇ ಪರವಾನಗಿ ನವೀಕರಣಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಸಂಪಾದಕೀಯ

ನೇಪಾಳ: ಹೊಸ ರಾಜಕೀಯ ಯುಗ

ನೆರೆಯ ನೇಪಾಳದಲ್ಲಿ ನಡೆದ ಸಂಸದೀಯ ಚುನಾವಣೆಯ ಫಲಿತಾಂಶವು ಅಲ್ಲಿ ನೂತನ ರಾಜಕೀಯ ಯುಗವೊಂದು ಆರಂಭವಾಗುವುದನ್ನು ಸಂಕೇತಿಸಿದೆ. ಕಳೆದ ವರ್ಷ ಯುವ ಜನಾಂಗದಿಂದ ನಡೆದ ಭಾರೀ ಜನಾಂದೋಲನವು ಸರಕಾರದ ಪತನಕ್ಕೆ ಕಾರಣವಾಗಿದ್ದರೆ, ಈಗ ಅದೇ ಯುವ ಜನಾಂಗವು ಹೊಸ ಸರಕಾರವನ್ನು ಅಧಿಕಾರಕ್ಕೆ ತಂದಿದೆ. ಇದು ಕೇವಲ ಸರಕಾರದ ಬದಲಾವಣೆಯಷ್ಟೇ ಅಲ್ಲ, ಬದಲಾಗಿ ಇದು ನೇಪಾಳದ ಇಡೀ ರಾಜಕೀಯ ವ್ಯವಸ್ಥೆಯ ಕ್ರಾಂತಿಕಾರಿ ಸ್ಥಿತ್ಯಂತರಕ್ಕೆ ನಾಂದಿ ಹಾಡಿದೆ ಎನ್ನಬಹುದು. ಹೊಸ ಪೀಳಿಗೆಯ ರಾಜಕೀಯ ಕ್ರಾಂತಿಯು ತಂದಿರುವ ಬದಲಾವಣೆಯು ಕಣ್ಣಿಗೆ ರಾಚುವಂತಿದೆ. ಈವರೆಗೆ ನೇಪಾಳದ ರಾಜಕೀಯದಲ್ಲಿ ಪ್ರಧಾನ ಪಾತ್ರ ವಹಿಸಿಕೊಂಡು ಬಂದ ನೇಪಾಳಿ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷ ಮೊದಲಾದ ರಾಜಕೀಯ ಪಕ್ಷಗಳೆಲ್ಲ ಮೂಲೆಗುಂಪಾಗಿವೆ. ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಕೂಡಾ ಸೋಲು ಕಂಡಿದ್ದಾರೆ. ಹೊಸದಾದ ಸುಧಾರಣಾವಾದಿ ನಿಲುವಿನ ರಾಷ್ಟ್ರೀಯ ಸ್ವತಂತ್ರ ಪಾರ್ಟಿ(ಆರ್‌ಎಸ್‌ಪಿ) ಭಾರೀ ಬಹುಮತ ಪಡೆದು ಅಧಿಕಾರಕ್ಕೇರಿದೆ. 35ರ ಹರೆಯದ ಬಾಲೇಂದ್ರ ಶಾ ನೂತನ ಪ್ರಧಾನಿಯಾಗಲಿದ್ದಾರೆ.



ನೇಪಾಳದ ಪ್ರತಿಯೊಂದು ಬೆಳವಣಿಗೆ ಕೂಡಾ ಭಾರತದ ಪಾಲಿಗೆ ಮಹತ್ವದ್ದಾಗುತ್ತದೆ. ನೇಪಾಳದೊಂದಿಗೆ 1,800 ಕಿ.ಮೀ.ಗಳ ಮುಕ್ತ ಗಡಿಯನ್ನು ಭಾರತವು ಹೊಂದಿದ್ದು, ಉಭಯದೇಶಗಳ ಮಧ್ಯೆ ಸಾಂಸ್ಕೃತಿಕ ಮತ್ತು ಧಾರ್ಮಿಕ ಬಂಧವು ನಿಕಟವಾಗಿದೆ. ಉಭಯತ್ರರ ಆರ್ಥಿಕತೆಯೂ ಒಂದನ್ನೊಂದು ಆಧರಿಸಿದ್ದು, ಲಕ್ಷಾಂತರ ನೇಪಾಳಿಗಳು ಭಾರತದಲ್ಲಿ ವಾಸಿಸುತ್ತಿದ್ದಾರೆ. ಇದರ ಜತೆಗೆ ನೇಪಾಳವು ಭಾರತ ಮತ್ತು ಚೀನಾಗಳ ನಡುವೆ ಆಯಕಟ್ಟಿನ ಜಾಗದಲ್ಲಿ ಇರುವುದರಿಂದ ಭಾರತವು ಅಲ್ಲಿನ ಬೆಳವಣಿಗೆಯನ್ನು ಸದಾ ಗಮನಿಸುತ್ತಿರಬೇಕಾಗುತ್ತದೆ.

ಈ ಹಿಂದೆಲ್ಲ ನೇಪಾಳದ ರಾಜಕೀಯವನ್ನು ನಿರ್ದೇಶಿಸುವಲ್ಲಿ ಭಾರತದ ಪಾತ್ರವೂ ಇತ್ತು. ಆದರೆ ಬಳಿಕ ಚೀನಾವು ಅಲ್ಲಿನ ಕಮ್ಯುನಿಸ್ಟ್ ಪಕ್ಷದ ಮುಖಾಂತರವಾಗಿ ತನ್ನ ಪ್ರಭಾವ ಹೇರುವಲ್ಲಿ ಸಫಲವಾಗಿತ್ತು. ಕೆಲವು ಸಂದರ್ಭದಲ್ಲಿ ಭಾರತ ವಿರೋಧಿ ಭಾವನೆಯನ್ನು ಬಿತ್ತುವಲ್ಲೂ ಚೀನಾ ಹಾಗೂ ಕಮ್ಯುನಿಸ್ಟ್ ಪಕ್ಷಗಳು ಸಫಲವಾಗಿದ್ದವು. ಇನ್ನೀಗ ಭಾರತವು ನೇಪಾಳದ ರಾಜಕೀಯವನ್ನು ನಿರ್ದೇಶಿಸುವುದಕ್ಕಿಂತಲೂ ಅಲ್ಲಿನ ಬದಲಾದ ಪರಿಸ್ಥಿತಿಯನ್ನು ಹೊಂದಿಕೊಂಡು ಅದನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬದಲಿಸಿಕೊಳ್ಳುವ ರಾಜತಾಂತ್ರಿಕ ಚಾಣಾಕ್ಷತೆಯನ್ನು ಪ್ರದರ್ಶಿಸಬೇಕಾಗಿದೆ. ತಮಗೆ ಅಮೆರಿಕ, ಚೀನಾ, ಭಾರತ, ರಷ್ಯಾ ಯಾರೂ ಹತ್ತಿರವಲ್ಲ; ತಮ್ಮದು ಸ್ವತಂತ್ರ ನಡೆ ಎಂಬುದಾಗಿ ಪ್ರಧಾನಿಯಾಗಲಿರುವ ಬಾಲೇಂದ್ರ ಶಾ ಈ ಮೊದಲು ಹೇಳಿದ್ದರಾದರೂ, ಇನ್ನೀಗ ಅಧಿಕಾರಕ್ಕೇರಿದ ಬಳಿಕ ಅವರ ಸರಕಾರವು ಯಾವ ಧೋರಣೆಯನ್ನು ಪ್ರದರ್ಶಿಸುತ್ತದೆ ಎಂದು ಕಾದು ನೋಡಬೇಕು. ನೇಪಾಳಿ ಜನರ ಆದ್ಯತೆಯು ಈಗ ದೇಶದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ನಿಗ್ರಹಿಸಿ, ಉತ್ತಮ ಮೂಲಸೌಕರ್ಯಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿದೆ. ಆ ನಿಟ್ಟಿನಲ್ಲಿ ಹೊಸ ಸರಕಾರದ ಮುಂದೆ ದೊಡ್ಡ ಸವಾಲು ಇರುವುದೂ ನಿಜ.

ಪರಶಿವನನ್ನು ನಿತ್ಯ ಧ್ಯಾನಿಸಬೇಕು

ಶ್ರೋತವ್ಯಃ ಸೌಗತೋ ಧರ್ಮಃ ಕರ್ತವ್ಯಃ ಪುನರಾರ್ಹತಃ ।
ವೈದಿಕೋ ವ್ಯವಹರ್ತವ್ಯಃ ಧ್ಯಾತವ್ಯಃ ಪರಮಃ ಶಿವಃ ॥

ಬೌದ್ಧ ಧರ್ಮವನ್ನು ಕೇಳಬೇಕು. ಜೈನಧರ್ಮವನ್ನು ನಡವಳಿಕೆಯಲ್ಲಿ ಇರಿಸಿಕೊಳ್ಳಬೇಕು. ವ್ಯವಹಾರದಲ್ಲಿ ವೈದಿಕ ಧರ್ಮವನ್ನು ಚಾಲ್ತಿಗೆ ತರಬೇಕು. ಪರಶಿವನನ್ನು ಧ್ಯಾನ ಮಾಡುತ್ತಿರಬೇಕು –ಎಂಬುದು ಶ್ಲೋಕಾರ್ಥ.

ಪ್ರಕೃತ ಶ್ಲೋಕ ನಮ್ಮ ದಿನನಿತ್ಯದ ಬದುಕು ಹೇಗಿರಬೇಕು ಎಂಬುದನ್ನು ತಿಳಿಸಿಕೊಡುತ್ತದೆ. ಬೌದ್ಧ ಎಂಬುದು ಧರ್ಮವಲ್ಲ. ಅದೊಂದು ಮತ. ಜೈನ ಧರ್ಮವಲ್ಲ; ಅದೊಂದು ಮತ. ವೈದಿಕ ಧರ್ಮವೆಂದರೆ ಸನಾತನ ಧರ್ಮ, ಹಿಂದೂ ಧರ್ಮ ಎಂದರ್ಥ. ಇದು ಮಾತ್ರ ಧರ್ಮ. ಉಳಿದವುಗಳು ಮತಗಳು. ಹೀಗೆ ಹೇಳುವುದಕ್ಕೆ ಜ್ಞಾನಿಗಳು ಕಾರಣವನ್ನೂ ನೀಡುತ್ತಾರೆ. ಯಾವುದೋ ಒಬ್ಬನ ಮತಿಯಿಂದ ಮೂಡಿ ಬಂದು ನಿರ್ದಿಷ್ಟ ಒಂದು ಗ್ರಂಥವನ್ನು ಮತಗಳು ಆಶ್ರಯಿಸುತ್ತೇವೆ.



• ಡಾ. ಸೋಂದಾ ಭಾಸ್ಕರ ಭಟ್

ಆದರೆ ಧರ್ಮ ಹಾಗಲ್ಲ. ಧರ್ಮ ಯಾವಾಗ ಹುಟ್ಟಿದೆ ಎಂಬುದು ಗೊತ್ತಿಲ್ಲ. ಯಾವುದೋ ಒಬ್ಬ ಮತಿಯ ಪಡಿಯಚ್ಚಲ್ಲ. ಯಾವುದೇ ಒಂದು ಗ್ರಂಥ ಎಂಬುದಿಲ್ಲ. ವೇದದಿಂದ ಆರಂಭಿಸಿ ವಚನ, ದಾಸವಾಣಿ, ಕಾವ್ಯವಾಣಿ ಎಲ್ಲವೂ ಧರ್ಮಕ್ಕೆ ಪೂರಕ ಹಾಗೂ ಪ್ರೇರಕ. ಕಾಲಬಾಹಿರವಾದುದನ್ನು ಬಿಟ್ಟು ಮನುಕುಲದ ಏಳ್ಗೆಗೆ ಬೇಕಾದುದೆಲ್ಲವನ್ನೂ ಜತೆಗಿರಿಸಿಕೊಂಡು ಮುಂದುವರಿಯುತ್ತದೆ. ವೈದಿಕ ಧರ್ಮ ಎಂದು ಕರೆಯುವ ಸನಾತನ ಹಿಂದೂ ಧರ್ಮ ಇವನ್ನು ಅಳವಡಿಸಿಕೊಂಡು ಸಾಗುತ್ತಿರುವುದರಿಂದ ಇದನ್ನು ಮಾತ್ರ ಜ್ಞಾನಿಗಳು ಧರ್ಮವೆಂದಿದ್ದಾರೆ.

ಹೀಗೆಂದ ಮಾತ್ರಕ್ಕೆ ಮತಗಳು ತ್ಯಾಜ್ಯವಲ್ಲ. ಅವುಗಳು ಬೋಧಿಸುವ ದಿವ್ಯ ತತ್ತ್ವಗಳ ಅನುಷ್ಠಾನವು ಮನುಕುಲವನ್ನು ಮೇಲೆತ್ತುತ್ತದೆ. ಬೌದ್ಧ ವಿಚಾರ ಬುದ್ಧನ ಅನುಭವಗಳ ಹಾಗೂ ಅವನು ಕಂಡುಕೊಂಡ ಶಾಶ್ವತ ಸತ್ಯದ ಪ್ರಕಟ ಸ್ವರೂಪ. ಬೌದ್ಧ ಧರ್ಮವನ್ನು ಕೇಳಬೇಕು. ಅದರಲ್ಲಿ ಕೇಳಲೇಬೇಕಾದ ಅಪೂರ್ವ ವಿಷಯಗಳಿವೆ. ಬೌದ್ಧ ಮತವು ದೇಹ ಅಶಾಶ್ವತ, ಭೋಗಭಾಗ್ಯಗಳು ಕ್ಷಣಿಕ, ಎಲ್ಲವೂ ನಶ್ವರ ಎಂಬುದನ್ನು ಸವಿಸ್ತಾರವಾಗಿ ತಿಳಿಸಿ, ಮತ್ತೆ ಮತ್ತೆ ಚಿಂತಿಸಿ, ಜೀವನದಲ್ಲಿ ಅಳವಡಿಸಿಕೊಂಡು ಶ್ರೇಷ್ಠ ಮಟ್ಟದ ಜೀವನ ನಡೆಸಬೇಕು ಎಂಬುದನ್ನು ಸಾರುತ್ತದೆ. ಆದ್ದರಿಂದ ಬೌದ್ಧ ಉಪದೇಶವನ್ನು ಕೇಳಿ ಅಳವಡಿಸಿಕೊಳ್ಳಬೇಕು. ಜೈನ ಮತದ ಬೋಧನೆ ನಮ್ಮ ನಡೆ–ನುಡಿಗಳಲ್ಲಿ ಅಭಿವ್ಯಕ್ತವಾಗಬೇಕು. ಹಸಿದವರಿಗೆ ಆಹಾರ ನೀಡುವುದು, ರೋಗಿಗಳ ಉಪಚಾರ, ಅಜ್ಞಾನಿಗಳಿಗೆ ಸಮ್ಯಕ್ ಜ್ಞಾನದ ಅರಿವು ಇವೆಲ್ಲ ಜೈನಮತ ತಿಳಿಸಿಕೊಡುವ ಶಾಶ್ವತವಾಗಿ ಅನುಷ್ಠಾನಿಸಬೇಕಾದ ತತ್ತ್ವಗಳು. ದೇವತಾ ಪೂಜೆ, ಮಾತಾ–ಪಿತೃ, ಅತಿಥಿಗಳ ಪೂಜೆ, ಜೀವನೋನ್ನತಿಗೆ ಬೇಕಾದ ಸಂಸ್ಕಾರಗಳನ್ನು ನಡೆಸುವುದು ಇವೆಲ್ಲವನ್ನೂ ವೈದಿಕಧರ್ಮ ಹೇಳುತ್ತದೆ.

ಹೀಗೆ ಕೇಳುವಿಕೆ, ನಡವಳಿಕೆ, ಅನುಷ್ಠಾನಗಳು ಮನುಷ್ಯನ ಬದುಕನ್ನು ಶ್ರೇಷ್ಠತೆಯತ್ತ ಕೊಂಡೊಯ್ಯುತ್ತದೆ. ಇವೆಲ್ಲವೂ ಹೇಗೇ ಇರಲಿ, ಬೋಧಿಸಲಿ, ಪರಶಿವನ ಧ್ಯಾನವನ್ನು ಮಾತ್ರ ಮರೆಯಬಾರದು. ಧ್ಯಾನವೇ ಬದುಕನ್ನು ಸುಂದರ ಹಾಗೂ ಸಮೃದ್ಧಿಗೊಳಿಸುತ್ತದೆ. ಜೀವನದಲ್ಲಿ ಭಗವಂತನನ್ನು ಆಧಾರವಾಗಿರಿಸಿ, ಧರ್ಮದ ಮಾರ್ಗದಲ್ಲಿ ಮುಂದುವರಿಯೋಣ.

ತತ್ವಾರದ ಸಮಯದಲ್ಲಿ ತತ್ತ್ವಾದರ್ಶ ಪಾಲಿಸೋಣ

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು
vakradanta@gmail.com



ನಮ್ಮ ದೇಶದ ತೈಲದ ವಿಷಯದಲ್ಲಿ ಬೇರೆ ಬೇರೆ ದೇಶಗಳನ್ನು ಅವಲಂಬಿಸಿರುವುದು ಗೊತ್ತೇ ಇದೆ. ದಿನಕ್ಕೆ 60 ಲಕ್ಷ ಬ್ಯಾರಲ್ ತೈಲ ಬಳಸುವ ನಾವು, ಹೆಚ್ಚಿನ ಪ್ರಮಾಣದ ತೈಲಕ್ಕಾಗಿ ವಿದೇಶಗಳನ್ನೇ ಅವಲಂಬಿಸಿದ್ದೇವೆ. ಇತ್ತೀಚೆಗೆ ರಷ್ಯಾದಿಂದ ಹೆಚ್ಚು ತೈಲ ಖರೀದಿಸುತ್ತಿದ್ದೇವಾದರೂ, ನಾವು ಇರಾನ್ ಹಾಗೂ ಅರಬ್ ದೇಶಗಳಿಂದಲೂ ತೈಲ ಆಮದು ಮಾಡಿಕೊಳ್ಳುತ್ತಿದ್ದೇವೆ. ಇರಾನ್ ಹಾಗೂ ಅರಬ್ ದೇಶಗಳಲ್ಲಿ ತೈಲ ಉತ್ಪಾದನೆ ಕುಸಿತಗೊಂಡಿದೆ. ಜತೆಗೆ ತೈಲ ಸಾಗಾಟ ಸಮಸ್ಯೆಯೂ ಉದ್ಭವಿಸಿದೆ. ಹರ್ಮೋಜ್ ಜಲಸಂಧಿಯಲ್ಲಿ ಚೀನಾ ಮತ್ತು ಭಾರತಕ್ಕೆ ಹೋಗುವ ಹಡಗುಗಳಿಗೆ ಅವಕಾಶ ನೀಡುವುದಾಗಿ ಇರಾನ್ ಈಗಾಗಲೇ ಹೇಳಿದೆಯಾದರೂ, ಅಲ್ಲಿ ಹಡಗುಗಳ ಟ್ರಾಫಿಕ್ ಜಾಂ ಆಗಿರುವುದರಿಂದ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಇದರ ಅಲ್ಪ–ಸ್ವಲ್ಪ ಪರಿಣಾಮ ನಮ್ಮ ಮೇಲೆ ಆದರೂ ಆಗಬಹುದು. ಸಮಸ್ಯೆ ಆಗಬಹುದು ಎಂದು ಆತಂಕಪಡುತ್ತ ಇರುವ ಬದಲು ಸಮಸ್ಯೆ ಆಗದಂತೆ ನಾವೇ ಪ್ರಯತ್ನಿಸಲು ಸಾಧ್ಯವಿದೆಯಾ ಎಂದು ಯೋಚಿಸಬಹುದು.

ಎಲ್ಲವನ್ನೂ ಸರ್ಕಾರವೇ ಮಾಡಲಿ ಎಂದು ಯೋಚಿಸುವ ಬದಲು ನಾವಾಗೇ ಕೆಲವು ಪ್ರಯತ್ನಗಳ ಮೂಲಕ ಬಳಕೆ ಕಡಿಮೆ ಮಾಡಲು ಸಾಧ್ಯವಿದೆ. ಉದಾಹರಣೆಗೆ ಕಾರು ಬಳಸುವವರು ಸಾಧ್ಯವಾದಲ್ಲೆಲ್ಲ ಸ್ಕೂಟರ್ ಅಥವಾ ಬೈಕ್ ಬಳಸಬಹುದು. ಬೈಕ್‌ಗಳನ್ನು ಬಳಸುವವರು ಸಾಧ್ಯವಾದಷ್ಟು ಮೆಟ್ರೊ ಅಥವಾ ಬಸ್ ಬಳಸಬಹುದು. ತೀರಾ ಅಗತ್ಯವಿರುವ ಓಡಾಟಗಳನ್ನು ಮಾತ್ರ ಮಾಡಬಹುದು. ಎರಡು–ಮೂರು ಓಡಾಟಗಳ ಬದಲು ಒಂದೇ ಓಡಾಟದಲ್ಲಿ ಕೆಲಸ ಮುಗಿಸಲು ಸಾಧ್ಯವಿದೆಯೇ ಎಂದು ಯೋಚಿಸಬಹುದು.

ಇವೆಲ್ಲವೂ ತುಂಬಾ ಚಿಕ್ಕ ಚಿಕ್ಕ ಪ್ರಯತ್ನಗಳು. ನಾವು ಮಾಡಲಾಗದ ಪ್ರಯತ್ನಗಳೇನಲ್ಲ. ಈ ರೀತಿಯ ಪ್ರಯತ್ನಗಳನ್ನು ಸ್ವಲ್ಪ ಜನ ಅನುಸರಿಸಿದರೂ ದೇಶದ ತೈಲ ಬಳಕೆಯ ಮೇಲಿನ ಒತ್ತಡ ಗಣನೀಯವಾಗಿ ಕಡಿಮೆಯಾಗುತ್ತದೆ. ನಾವೊಬ್ಬರು ಹೀಗೆ ಮಾಡುವುದರಿಂದ ಏನುಪಯೋಗ ಎಂದು ಯೋಚಿಸುವ ಬದಲು, ಉಳಿದವರು ಮಾಡುತ್ತಾರೊ ಇಲ್ಲವೊ ನಾವು ಮಾಡೋಣ ಎಂದು ಯೋಚಿಸಿದರೆ ಹೆಚ್ಚು ಪರಿಣಾಮಕಾರಿಯಾಗಬಹುದು. ಇದ್ಯಾವುದೂ ಕಷ್ಟವಲ್ಲ. ಯಾಕೆಂದರೆ ಕೊರೋನಾ ಸಂದರ್ಭದಲ್ಲಿ ನಾವೆಲ್ಲ ಎಂತಹ ಸ್ಥಿತಿ ಎದುರಿಸಿದ್ದೇವೆ ಎಂಬುದನ್ನು ಒಮ್ಮೆ ನೆನಪಿಸಿಕೊಳ್ಳಿ. ವಾರಗಟ್ಟಲೆ ಮನೆಯಿಂದ ಹೊರಗೆ ಹೋಗದೆಯೂ ಜೀವನ ಸಾಗಿಸಿದ್ದೇವೆ. ಕಾರು–ಬೈಕು, ಪೆಟ್ರೋಲ್ ಇತ್ಯಾದರೂ ಓಡಾಡುವ ಹಾಗೆ ಇರಲಿಲ್ಲ. ಈಗ ಪರಿಸ್ಥಿತಿ ಹಾಗಿಲ್ಲ. ಸ್ವಲ್ಪ ನಮ್ಮನ್ನು ನಾವು ನಿಯಂತ್ರಿಸಿಕೊಳ್ಳಬೇಕಿದೆ ಅಷ್ಟೇ.

ಈಗ ಅಂತಹ ಅನಿವಾರ್ಯ ಸ್ಥಿತಿ ಏನಿದೆ ಈಗ ಎಂದು ಕೆಲವರು ಪ್ರಶ್ನಿಸಬಹುದು. ಖಂಡಿತ ಅನಿವಾರ್ಯ ಸ್ಥಿತಿ ಇಲ್ಲ. ಭಾರತಕ್ಕೆ ತೈಲದ ಕೊರತೆ ಆಗದ ಹಾಗೆ ಕಚ್ಚಾ ತೈಲ ನೀಡುವುದಾಗಿ ರಷ್ಯಾ ಈಗಾಗಲೇ ಹೇಳಿಕೆ ನೀಡಿದೆ. ದೇಶದಲ್ಲಿ ತೈಲ ಸಂಗ್ರಹವೂ ಇದೆ. ಆದರೆ ಯುದ್ಧ ಸ್ಥಿತಿ ಯಾವಾಗ ತಿಳಿಯಾಗುತ್ತದೆ ಎಂಬ ಸ್ಪಷ್ಟತೆ ಈಗ ಸದ್ಯಕ್ಕಿಲ್ಲ. ಆಕಸ್ಮಾತ್ ಯುದ್ಧ ಒಂದು ಅಥವಾ ಎರಡು ತಿಂಗಳು ಮುಂದುವರಿದರೆ ಆಗೇನು ಕತೆ? ನಮ್ಮ ಸರ್ಕಾರ ಅದಕ್ಕೊಂದು ದಾರಿ ಖಂಡಿತ ಕಂಡುಕೊಳ್ಳುತ್ತದೆ ಎಂಬುದರಲ್ಲಿಯೂ ಅನುಮಾನವಿಲ್ಲ. ಆದರೆ ನಾವು ನಮ್ಮದೊಂದು ಕಿರುಪ್ರಯತ್ನದ ಮೂಲಕ ಸರ್ಕಾರದ ಮೇಲಿನ ಒತ್ತಡ ಕಡಿಮೆ ಮಾಡಬಹುದೆ? ದೇಶದ ಹಿತದೃಷ್ಟಿಯಿಂದ ನಾವು ಪ್ರಯತ್ನಿಸಬಹುದೆ ಎಂಬ ಯೋಚನೆ ಅಷ್ಟೆ. ಯಾಕೆಂದರೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ವಿಪರೀತ ಏರಿಕೆಯಾಗಿದೆ. ಈ ಸಮಯದಲ್ಲಿ ನಾವು ತೈಲ ಖರೀದಿ ಮಾಡಿದರೆ ಸಹಜವಾಗಿ ಹೆಚ್ಚು ಹಣ ನೀಡಿ ಖರೀದಿ ಮಾಡಬೇಕಾಗುತ್ತದೆ. ಆಗ ದೇಶದ ಆರ್ಥಿಕತೆಯ ಮೇಲೆ ಒತ್ತಡ ಬೀಳುತ್ತದೆ. ಸರ್ಕಾರ ಜನರ ಹಿತದೃಷ್ಟಿಯಿಂದ ಪೆಟ್ರೋಲ್– ಡೀಸೆಲ್ ಬೆಲೆ ಏರಿಕೆ ಮಾಡದೆ ಇರಬಹುದು ಅಥವಾ ಸ್ವಲ್ಪ ಮಾತ್ರ ಏರಿಕೆ ಮಾಡುವ ನಿರ್ಧಾರ ಕೈಗೊಳ್ಳಬಹುದು. ನಿರ್ಧಾರ ಯಾವುದೇ ಆದರೂ ನಮಗೆ ನಷ್ಟವೆ ಎಂಬುದರಲ್ಲಿ ಅನುಮಾನವಿಲ್ಲ. ಕೇಂದ್ರ ಸರ್ಕಾರ ಸುಮಾರು ವರ್ಷಗಳಿಂದ ಪೆಟ್ರೋಲ್ ಬೆಲೆ ಏರಿಕೆಯಾಗದಂತೆ ತನ್ನ ತೈಲ ಖರೀದಿ ನೀತಿಯನ್ನು ನಿಭಾಯಿಸಿದೆ. ಪರಿಸ್ಥಿತಿಯ ಅನಿವಾರ್ಯದಿಂದ ದರ ಹೆಚ್ಚಳ ಮಾಡುವಂತಾದರೆ ಅದರ ಪರಿಣಾಮ ನಮ್ಮೆಲ್ಲರ ಮೇಲೂ ಆಗುತ್ತದೆ. ಆ ಪರಿಣಾಮಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ನಾವು ಈಗಲೇ ಮುಂದಡಿ ಇಡಬಹುದೆ ಎಂಬದಷ್ಟೇ ಚಿಂತನೆ.

ಸದ್ಯಕ್ಕೆ ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಕಡಿಮೆ ಮಾಡುವಂತೆ ಸರ್ಕಾರವೇನೂ ಮನವಿ ಮಾಡಿಲ್ಲ. ಅಂತಹ ಸ್ಥಿತಿ ನಿರ್ಮಾಣವಾಗಲಿಕ್ಕೂ ಇಲ್ಲ. ಆದರೆ ದೇಶದ ಪ್ರಜೆಗಳಾಗಿ ನಾವೇನಾದರೂ ಕೊಡುಗೆ ನೀಡಬಹುದಾ? ಸರ್ಕಾರ ಅಥವಾ ಪ್ರಧಾನಿ ಕರೆ ನೀಡುವ ಮೊದಲೇ ನಾವು ಅಳಿಲುಸೇವೆ ಸಲ್ಲಿಸಬಹುದಾ? ಒಳ್ಳೆಯ ಪ್ರಜೆಗಳಾಗಿ ನಮ್ಮ ಕೆಲಸ ಮಾಡಬಹುದಾ? ಎಂಬುದಷ್ಟೇ ಇಲ್ಲಿನ ಚಿಂತನೆ.

ಇಬ್ಬರ ಜಗಳ ಮೂರನೆಯವರಿಗೆ ಲಾಭ ಎಂಬುದು ಹಳೆಯ ಮಾತು. ಕೆಲವೊಮ್ಮೆ ಇಬ್ಬರ ಜಗಳದಲ್ಲಿ ಸಂಬಂಧವೇ ಇಲ್ಲದ ಮೂರನೆಯವರಿಗೆ ನಷ್ಟವೂ ಆಗಬಹುದು. ಈ ಯುದ್ಧದಲ್ಲಿ ಭಾರತ ಯಾವ ರೀತಿಯಲ್ಲೂ ಭಾಗೀದಾರನಲ್ಲ. ಆದರೆ ಎಲ್ಲೋ ದೂರದಲ್ಲಿ ಯುದ್ಧ ನಡೆಯುತ್ತಿದೆ ಎಂದು ನಾವು ಹಾಯಾಗಿರುವುದು ಸಾಧ್ಯವಿಲ್ಲ. ಯಾಕೆಂದರೆ ಯುದ್ಧ ತುಂಬಾ ದೂರದಲ್ಲೇನೂ ನಡೆಯುತ್ತಿಲ್ಲ. ಯುದ್ಧ ನಡೆಯುತ್ತಿರುವ ದೇಶಗಳೂ ಸೇರಿದಂತೆ ಮಧ್ಯಪ್ರಾಚ್ಯದ ಎಲ್ಲ ದೇಶಗಳ ಜತೆ ಭಾರತ ಒಂದಲ್ಲ ಒಂದು ರೀತಿಯಲ್ಲಿ ಬಾಂಧವ್ಯ ಹೊಂದಿದೆ. ಅವರೆಲ್ಲ ಯುದ್ಧ ಪರಿಸ್ಥಿತಿಯಲ್ಲಿರುವಾಗ ಅದರ ಪರಿಣಾಮಗಳು ನಮ್ಮ ದೇಶದ ಮೇಲೂ ಆಗುವುದು ಸಹಜ. ವ್ಯಾಪಾರ, ರಫ್ತು– ಆಮದು ಎಲ್ಲವೂ ವ್ಯತ್ಯಯವಾಗಿದೆ. ಹಾಗಾಗಿ ನಾವೂ ಸ್ವಲ್ಪ ಜೀವನಶೈಲಿಯ ವ್ಯತ್ಯಾಸದ ಮೂಲಕ ಆ ನಿಟ್ಟಿನಲ್ಲಿ ಪ್ರಯತ್ನಿಸಬಹುದೇನೊ. ಎಲ್ಲದಕ್ಕೂ ಸರ್ಕಾರವನ್ನೇ ದೂಷಿಸುವವರು, ಸರ್ಕಾರವೇ ಎಲ್ಲವನ್ನೂ ಮಾಡಲಿ ಬಿಡಿ ಎನ್ನುವವರ, ನಮ್ಮೆಲ್ಲ ಸಮಸ್ಯೆಗೂ ಪರಿಹಾರ ನೀಡಬೇಕಾದ್ದು ಸರ್ಕಾರದ ಕೆಲಸ ಎನ್ನುವವರ ಬಗ್ಗೆ ಚರ್ಚೆ ಅನಗತ್ಯ. ಅವರು ಸಿಕ್ಕ ಅವಕಾಶವನ್ನು ಟೀಕೆಗೆ, ಜನರನ್ನು ಸರ್ಕಾರದ ವಿರುದ್ಧ ರೊಚ್ಚಿಗೆಬ್ಬಿಸಲು ಪ್ರಯತ್ನ ಮಾಡಬಹುದು. ಆದರೆ ಒಳ್ಳೆಯ ಯೋಚನೆಯ ಒಂದಷ್ಟು ಜನ ನಾವೇನು ಮಾಡಬಹುದು ಎಂದು ಯೋಚಿಸಲು ಇದು ಸಕಾಲ.

ನರಕಕ್ಕೆ ಕಾರಣವಾಗುವ ಆಸುರೀ ಸಂಪತ್ತು

ಪದಸಂಚಲನ

• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಹಿಂದಿನ ಲೇಖನದಲ್ಲಿ ಗರುಡಪುರಾಣದಲ್ಲಿ ವಿವರಿಸಿರುವಂತೆ ನರಕಗಳ ವರ್ಣನೆಯನ್ನು ನೋಡಿದೆವು. ಭಾಗವತದಲ್ಲಿಯೂ ಇದೇ ರೀತಿಯಲ್ಲಿ ನರಕಗಳ ವರ್ಣನೆಯನ್ನು ಮತ್ತು ಅಂಥ ನರಕಗಳಿಗೆ ಹೋಗಲು ಕಾರಣವಾಗುವ ಅಕಾರ್ಯಗಳ ವಿವರಣೆಯನ್ನು ಕೊಡಲಾಗಿದೆ. ಶ್ರೀಮದ್ಭಗವದ್ಗೀತೆಯಲ್ಲಿ ನರಕದ ದ್ವಾರವನ್ನಾಗಿ ನಮ್ಮ ಕೆಲವು ಗುಣಗಳನ್ನು ತಿಳಿಸಲಾಗಿದೆ. **ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ । ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ॥** ಎಂಬುದಾಗಿ. ದೈವೀಸಂಪತ್ತು ಮತ್ತು ಆಸುರೀಸಂಪತ್ತೆಂಬುದಾಗಿ ಎರಡು ವಿಧದ ವ್ಯಕ್ತಿತ್ವವನ್ನು ತಿಳಿಸಿ, ಆಸುರೀಸಂಪತ್ತನ್ನು ಅತ್ಯಂತ ವಿಸ್ತೃತವಾಗಿ ವರ್ಣಿಸಲಾಗಿದೆ. ಇದರ ಸಂಕ್ಷೇಪವಾಗಿ ಈ ಮೇಲಿನ ಶ್ಲೋಕವನ್ನು ಹೇಳುತ್ತಾ, ಕಾಮ, ಕ್ರೋಧ ಮತ್ತು ಲೋಭಗಳೇ ನಮ್ಮನ್ನು ನರಕಕ್ಕೆ ದೂಡುವ ಕೆಟ್ಟಸ್ವಭಾವಗಳಾಗಿವೆ ಎಂಬುದಾಗಿ ಪರಮಾತ್ಮನು ತಿಳಿಸುತ್ತಾನೆ.

ದೈವೀಸಂಪತ್ತು ಮೋಕ್ಷಕ್ಕೆ ಕಾರಣವಾದರೆ, ಆಸುರೀಸಂಪತ್ತು ನಮ್ಮ ಅಧಃಪತನಕ್ಕೆ ಕಾರಣವಾಗುತ್ತವೆ. ವ್ಯಕ್ತಿಯ ಅಧೋಗತಿಗೆ ಕಾರಣವಾಗುವ ಗುಣಗಳು ಯಾವುವು ಎಂಬುದನ್ನು ಹದಿನಾರನೆಯ ದೈವಾಸುರ ಸಂಪದ್ವಿಭಾಗಯೋಗದಲ್ಲಿ ಪರಮಾತ್ಮನು ವಿಸ್ತೃತವಾಗಿ ತಿಳಿಸಿದ್ದಾನೆ. ಅಲ್ಲಿ ಮೊದಲು ದೈವೀಸಂಪತ್ತುಳ್ಳವರ ಗುಣಗಳನ್ನು ಪಟ್ಟಿಮಾಡುತ್ತಾನೆ. ಅಭಯ, ಮನಶ್ಶುದ್ಧಿ, ಆತ್ಮಜ್ಞಾನೋಪಾಯದಲ್ಲಿಯೇ ಸರ್ವದಾ ಆಸಕ್ತನಾಗಿರುವಿಕೆ, ದಾನ, ಬಾಹ್ಯೇಂದ್ರಿಯ ನಿಗ್ರಹ, ದ್ರವ್ಯಾದಿ ಯಜ್ಞಗಳು, ಸ್ವಾಧ್ಯಾಯ, ತಪಸ್ಸು, ಅಹಿಂಸೆ, ಸತ್ಯವಚನ, ಕ್ರೋಧರಾಹಿತ್ಯ, ತ್ಯಾಗಬುದ್ಧಿ, ಮನೋನಿಗ್ರಹ, ಚಾಡಿ ಹೇಳದಿರುವಿಕೆ, ಭೂತದಯೆ, ಲೋಲುಪತೆ ಇಲ್ಲದೇ ಇರುವಿಕೆ, ಮೃದುತ್ವ, ಲಜ್ಜಾ, ಕರ್ಮೇಂದ್ರಿಯಗಳ ನಿಗ್ರಹ, ಬಲ, ಕ್ಷಮಾಗುಣ, ಧೈರ್ಯ, ಹೊರಗಿನ ಮತ್ತು ಒಳಗಿನ ಶುಚಿತ್ವ, ತನ್ನ ಬಗ್ಗೆಯೇ ತನಗೆ ಅತಿಯಾದ ಪೂಜ್ಯಭಾವ ಇಲ್ಲದೇ ಇರುವಿಕೆ, ಇವೆಲ್ಲ ದೈವೀಸಂಪತ್ತಾಗಿವೆ. ಇಂಥ ಗುಣಗಳು ನಮ್ಮ ಅಭ್ಯುದಯ ಮತ್ತುನಿಃಶ್ರೇಯಸ್ಸಿಗೆ ಕಾರಣವಾಗುತ್ತವೆ. ಆಮೂಲಕ ಮರಣದ ಅನಂತರ ಉತ್ತಮಜನ್ಮಕ್ಕೆ ಕಾರಣವಾಗಿ ಕ್ರಮೇಣ ಮೋಕ್ಷಮಾರ್ಗದಲ್ಲಿ ಮುನ್ನಡೆಯುವ ಇಚ್ಛೆಯನ್ನೂ, ಸಾಮರ್ಥ್ಯವನ್ನೂ ಉಂಟುಮಾಡುತ್ತವೆ.

ಇದಕ್ಕೆ ವಿರುದ್ಧವಾಗಿ ಆಸುರೀಸಂಪತ್ತು ನಮ್ಮ ನಮ್ಮ ಅಧೋಗತಿಗೆ ಕಾರಣವಾಗುತ್ತವೆ. ಅವು ಇಹದಲ್ಲೂ, ಪರದಲ್ಲೂ ಶ್ರೇಯಸ್ಸಿಗೆ ಪ್ರತಿಬಂಧಕವೇ ಆಗಿರುವುದರಿಂದ ಎಲ್ಲೂ ಸುಖಕ್ಕೆ ಕಾರಣವಾಗುವುದಿಲ್ಲ. ಅಂಥ ಗುಣಗಳು ನಮ್ಮಲ್ಲಿವೆಯೇ ಎಂದು ಪರಾಮರ್ಶಿಸಿಕೊಳ್ಳುವ ಸಲುವಾಗಿಯೇ ಭಗವದ್ಗೀತೆಯಲ್ಲಿ ಇವುಗಳ ವಿವರಣೆಯನ್ನು ಮಾಡಲಾಗಿದೆ. ಅವು ಯಾವವು ಎಂದರೆ, ದಂಭ. ದಂಭವನ್ನು ಧರ್ಮಧ್ವಜಿತ್ವ ಎಂಬುದಾಗಿ ಶಂಕರರು ತಮ್ಮ ಭಾಷ್ಯದಲ್ಲಿ ತಿಳಿಸಿದ್ದಾರೆ. ಅರ್ಥಾತ್ ತಾನು ಪರಮ ಧಾರ್ಮಿಕ ಎಂಬುದಾಗಿ ತಿಳಿಸಲು ಬೇಕಾದ ಬಾಹ್ಯವೇಷಗಳು. ಆತ ನಿಜವಾಗಿ ಎಷ್ಟು ಧರ್ಮಾಚರಣೆಯನ್ನು ಮಾಡುತ್ತಾನೋ ಇಲ್ಲವೋ, ಆದರೆ ಅದಕ್ಕಿಂತ ಹೆಚ್ಚು ತೋರಿಸಿಕೊಳ್ಳಲು ಬಯಸುತ್ತಾನೆ. ಎರಡನೆಯದು, ದರ್ಪ. ವಿದ್ಯೆ, ಧನ, ಯಶಸ್ಸು ಮೊದಲಾದ ನಿಮಿತ್ತದಿಂದ ಉಂಟಾಗುವ ಮದವಿದು. ಇವುಗಳ ಜೊತೆಗೆ ಕ್ರೋಧ, ಮತ್ತೊಬ್ಬರನ್ನು ನೋಯಿಸುವಂಥ ಕಠಿಣ ಮಾತುಗಳು, ಕರ್ತವ್ಯಾಕರ್ತವ್ಯ ಅವಿವೇಕ ಇವೆಲ್ಲ ಆಸುರೀಸಂಪತ್ತನ್ನುಳ್ಳವರಲ್ಲಿ ಕಾಣಬರುವ ದೋಷಗಳಾಗಿವೆ. ಹೀಗೆ ಈ ದೋಷಗಳು ವ್ಯಕ್ತಿಯನ್ನು ಕಟ್ಟಿಹಾಕಿ ನರಕಪ್ರಾಪ್ತಿಗೆ ಕಾರಣವಾಗುತ್ತವೆ. ಯಾಕೆ ಪರಮಾತ್ಮನು ಈ ಅಧ್ಯಾಯದಲ್ಲಿ ಈ ರೀತಿಯಲ್ಲಿ ವ್ಯಕ್ತಿತ್ವದ ವಿಭಾಗವನ್ನು ಮಾಡಿಕೊಟ್ಟಿದ್ದಾನೆಂದರೆ, ದೈವೀಸಂಪತ್ತು ನನ್ನಲ್ಲಿದೆಯೇ? ಎಂದು ನೋಡಿಕೊಂಡು, ಇಲ್ಲದಿದ್ದರೆ ಅದನ್ನು ಹೊಂದಲು ಪ್ರಯತ್ನಿಸಬೇಕು. ಒಂದು ವೇಳೆ ಆಸುರೀಸಂಪತ್ತು ಇದ್ದರೆ ಅದನ್ನು ನಿವಾರಿಸಿಕೊಳ್ಳಬೇಕು ಎಂಬ ಕಾರಣಕ್ಕೆ.

ಆಸುರೀಸಂಪತ್ತಿನವರು ಹೇಗೆಲ್ಲ ಯೋಚಿಸುತ್ತಾರೆ, ಹೇಗೆಲ್ಲ ವರ್ತಿಸುತ್ತಾರೆ ಎಂಬಿತ್ಯಾದಿಗಳನ್ನು ವಿಶದವಾಗಿ ತಿಳಿಸಿಕೊಡಬೇಕೆಂಬ ಕಾರಣಕ್ಕೆ ಇನ್ನೂ ವಿಸ್ತೃತವಾಗಿ ಪರಮಾತ್ಮನು ಆಸುರೀಸಂಪತ್ತಿನವರ ವರ್ಣನೆಯನ್ನೇ ಮುಂದುವರೆಸುತ್ತಾನೆ. ಅಸುರಸ್ವಭಾವದವರು ಹೇಗೆ ಯೋಚಿಸುತ್ತಾರೆಂದರೆ, ಈ ಜಗತ್ತೆಲ್ಲವೂ ಅಶಾಶ್ವತ ಮತ್ತು ಇದಕ್ಕೆ ಧರ್ಮವೆಂಬುದು ಈ ಜಗತ್ತಿಗೆ ಆಧಾರವಲ್ಲ. ಈ ಜಗತ್ತು ಸ್ವಭಾವತಃ ನಡೆದುಕೊಂಡು ಹೋಗುತ್ತಿದೆ. ಅದಕ್ಕೋಸ್ಕರ ಒಬ್ಬ ಈಶ್ವರನಾಗಲೀ, ಧರ್ಮವಾಗಲೀ ಬೇಕಾಗಿಲ್ಲ. ಗಂಡು–ಹೆಣ್ಣಿನ ಮೈಥುನ ಮಾತ್ರದಿಂದಲೇ ಈ ಜಗತ್ತು ಹುಟ್ಟಿದೆ ಮತ್ತು ಮುಂದುವರೆ ಯುತ್ತಿದೆ. ಹಾಗಾಗಿ ಧರ್ಮಕ್ಕಿಂತಲೂ ಕಾಮವೇ ಈ ಜಗತ್ತಿನ ಕೀಲಿಕೈ ಆಗಿದೆ ಎಂಬಿತ್ಯಾದಿಯಾಗಿ ರಮಣೀಯವಾದ ಮಾತಿನ ಮೂಲಕ ಜಗತ್ತನ್ನು ಮರುಳುಗೊಳಿಸುತ್ತಾರೆ. ಈ ದೃಷ್ಟಿಯನ್ನೇ ನಂಬಿಕೊಂಡ ಅಂಥವರೂ ಮತ್ತು ಅವರನ್ನು ನಂಬಿದ ಇತರರೂ ಸೇರಿ, ಪರಲೋಕವೆಂಬುದೇ ಇಲ್ಲವೆಂಬುದಾಗಿ ಭಾವಿಸಿ ಸ್ವೇಚ್ಛಾಚಾರದಲ್ಲಿ ತೊಡಗಿಕೊಂಡು ಕ್ರೂರಕರ್ಮಗಳನ್ನು ಮಾಡುತ್ತಾ ಜಗತ್ತಿಗೆ ಕಂಟಕರಾಗುತ್ತಾರೆ. ಆ ಮೂಲಕ ಜಗತ್ತಿಗೆ ಕಂಟಕರಾಗುತ್ತಾರೆ.

ಅಷ್ಟೇ ಅಲ್ಲ, ಅವರು ತಮ್ಮ ಇಚ್ಛೆಯನ್ನೆಲ್ಲ ತೀರಿಸಿಕೊಳ್ಳುವುದಕ್ಕಾಗಿಯೇ ತಮ್ಮ ಇಡೀ ಜೀವನವನ್ನು ಮುಡಿಪಾಗಿಡುತ್ತಾರೆ. ಅಂಥವರು ದಂಭ, ಅಭಿಮಾನ, ಮದವೇ ಮೊದಲಾದ ಎಲ್ಲ ದುರ್ಗುಣಗಳನ್ನೂ ತಮ್ಮೊಳಗೆ ಬಿಟ್ಟುಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ. ಹೀಗೆ ಅವಿವೇಕದಿಂದ ಯಾವತ್ತೂ ನಕಾರಾತ್ಮಕ ಚಿಂತನೆಯಲ್ಲೇ ತಮ್ಮ ಸಮಯ ಕಳೆಯುತ್ತಾರೆ. ಅಷ್ಟೇ ಅಲ್ಲ, ಕಾಮೋಪಭೋಗವೇ ಶ್ರೇಷ್ಠವಾದದ್ದು ಎಂಬ ನಿಶ್ಚಯ ಅವರದ್ದು. ಹಾಗಾಗಿ ಯಾವ ಒಳ್ಳೆಯ ಗುಣಗಳಿಗೂ ಅವರ ವ್ಯಕ್ತಿತ್ವದಲ್ಲಿ ಜಾಗ ದೊರೆಯುವುದಿಲ್ಲ. ಆಶಾಪಾಶಕ್ಕೆ ಒಳಗಾಗಿ, ಕಾಮಕ್ರೋಧವನ್ನೇ ತಮ್ಮ ಸ್ವಭಾವವನ್ನಾಗಿಸಿಕೊಂಡು, ಅದನ್ನು ಪೂರೈಸಿಕೊಳ್ಳುವ ಸಲುವಾಗಿ ನಿಧಾನವಾಗಿ ಅವರು ಅನ್ಯಾಯದ ಮಾರ್ಗವನ್ನು ಹಿಡಿಯುತ್ತಾರೆ. ಒಮ್ಮೆ ಈ ಮಾರ್ಗಕ್ಕೆ ಇಳಿದರೆ ಮತ್ತೆ ಎದ್ದು ಬರುವುದು ಕಷ್ಟ. ಇದನ್ನೇ **ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ । ಈಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಞ್ಚಯಾನ್ ॥** ಎಂಬುದಾಗಿ ಹೇಳಲಾಗಿದೆ.

ಈ ರೀತಿಯ ಸ್ವಭಾವದವರು ನಿತ್ಯವೂ ಕೂಡ ತಾನಿಷ್ಟು ದುಡಿದೆ, ಇದರಿಂದ ಇಷ್ಟು ದೊರೆಯಿತು, ನಾಳೆ ಇಷ್ಟನ್ನು ಪಡೆದುಕೊಳ್ಳಬೇಕು, ಆಮೇಲೆ ಇಷ್ಟಿಷ್ಟನ್ನು ನನ್ನದಾಗಿಸಿಕೊಳ್ಳಬೇಕು ಎಂಬಿತ್ಯಾದಿ ಚಿಂತನೆಯಲ್ಲಿಯೇ ತಮ್ಮ ಇಡೀ ಜೀವನವನ್ನು ಕಳೆದು, ಜೀವನವನ್ನು ಲೌಕಿಕಚಿಂತನೆಗಾಗಿಯೇ ಮೀಸಲಾಗಿಸಿ ಹೊರಡುತ್ತಾರೆ. ಅಷ್ಟೇ ಅಲ್ಲ, ಈತ ನನ್ನ ಶತ್ರು, ಇವನನ್ನು ನಾನು ನಾಶಮಾಡಬೇಕು, ಅಷ್ಟೇ ಅಲ್ಲ, ಇಂತಿಂಥವರು ನನ್ನ ಶತ್ರುಗಳಿದ್ದಾರೆ, ಅವರನ್ನೆಲ್ಲ ನಾಶ ಮಾಡುತ್ತೇನೆ ಎಂಬಿತ್ಯಾದಿಯಾಗಿಯೇ ಅವರ ಆಲೋಚನೆಯು ಸಾಗುತ್ತದೆ. ಇದು ನಿಧಾನಕ್ಕೆ ಆತನಲ್ಲಿ ಅಹಂಕಾರವನ್ನು ವರ್ಧಿಸುತ್ತಾ, ತಾನೇ ಸರ್ವಶಕ್ತನೆಂಬ ಭ್ರಮೆಯನ್ನು ಉಂಟುಮಾಡುತ್ತದೆ. ಹಾಗಾಗಿ ಆತ ನಿಧಾನಕ್ಕೆ ಎಲ್ಲ ಮೌಲ್ಯವನ್ನೂ ಬಿಟ್ಟುಬಿಡುತ್ತಾನೆ. ತನ್ನಂಥ ಇನ್ನೊಬ್ಬರಿಲ್ಲ ಎಂಬ ಭಾವ ಬೆಳೆಯುತ್ತಿದ್ದಂತೆಯೇ ಆತ ಲೋಕಕಂಟಕನಾಗುತ್ತಾನೆ. ನನ್ನಷ್ಟು ಸುಖಿಗಳೂ, ಶ್ರೀಮಂತರೂ, ಬುದ್ಧಿವಂತರೂ, ನನ್ನಷ್ಟು ಪರಿಣತರೂ ಯಾರಿದ್ದಾರೆ ಎಂಬಿತ್ಯಾದಿಯಾಗಿಯೇ ಅವರ ಭಾವವಿರುತ್ತದೆಯೇ ಹೊರತೂ, ಯಶಸ್ಸು ಬಂದಾಗ ಇನ್ನಷ್ಟು ಬಾಗಬೇಕು, ವಿಧೇಯನಾಗಬೇಕು ಎಂದು ಅವರಿಗೆ ಅನ್ನಿಸುವುದೇ ಇಲ್ಲ. ಹಣ, ಅಧಿಕಾರ ಇತ್ಯಾದಿಗಳು ಒದಗಿದಾಗ ಸಹಜವಾಗಿಯೇ ಲೋಕವು ಆತನ ಹಿಂದೆ ಬರುತ್ತದೆ. ಅದನ್ನು ನೋಡಿ ಆತ ಒಂದು ರೀತಿಯ ಉನ್ಮತ್ತತೆಗೆ ಒಳಗಾಗುತ್ತಾನೆ. ಹಿತವಚನವನ್ನು ಕಡೆಗಣಿಸುತ್ತಾನೆ. ಎಚ್ಚರವನ್ನು ತಪ್ಪುತ್ತಾನೆ. ಪ್ರಮಾದವು ವ್ಯಕ್ತಿಯ ಶ್ರೇಯಸ್ಸಿಗೆ ಅತಿ ದೊಡ್ಡ ಶತ್ರು. ಆದರೆ ಅದನ್ನೆಲ್ಲ ಆತ ಉಪೇಕ್ಷಿಸುತ್ತಾನೆ.

ನನ್ನದೇ ಪರಿಶ್ರಮ, ನನ್ನದೇ ದುಡ್ಡು, ನಾನು ಅದನ್ನು ಹೇಗೆ ಬೇಕಾದರೂ ಬಳಸಿಕೊಳ್ಳುತ್ತೇನೆ, ಏನು ಬೇಕಾದರೂ ಮಾಡುತ್ತೇನೆ ಎಂಬಿತ್ಯಾದಿಯಾಗಿ ಆತನೊಳಗೆ ಮದವು ಹೆಚ್ಚುತ್ತಾ ಬರುತ್ತದೆ. ಹೊರಗೆ ಒಳ್ಳೆಯ ವ್ಯಕ್ತಿಯಂತೆ ನಟನೆಯನ್ನು ಮಾಡಿದರೂ ಆತನ ನಡತೆಯಲ್ಲಿ ಇವೆಲ್ಲ ಸೂಕ್ಷ್ಮವಾಗಿ ಕಾಣಲು ತೊಡಗುತ್ತವೆ. ಕೊನೆಗೊಮ್ಮೆ ಬಾಹ್ಯದಲ್ಲಿಯೂ ಇದು ಅಭಿವ್ಯಕ್ತಿಸಲು ತೊಡಗಿ ನಿಧಾನವಾಗಿ ಆತ ಎಲ್ಲ ಕಲ್ಯಾಣಗುಣಗಳಿಂದ, ಶಿಷ್ಟರಿಂದ, ಸಮಾಜದಿಂದ ದೂರವಾಗುತ್ತಾನೆ, ಪುಣ್ಯದಿಂದಲೂ ದೂರವಾಗುತ್ತಾ, ಪಾಪವನ್ನೇ ಆಶ್ರಯಿಸುತ್ತಾನೆ. ಈ ಮೂಲಕ ನರಕಕ್ಕೆ ಬೀಳುತ್ತಾನೆ. ಅದನ್ನೇ ಗೀತೆಯಲ್ಲಿ ಹೀಗೆ ಹೇಳಿದೆ:

ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ ॥ಎಂಬುದಾಗಿ.

ಅವರ ದುರಾಚಾರದ ವರ್ಣನೆ ಇಷ್ಟಕ್ಕೇ ನಿಲ್ಲುವುದಿಲ್ಲ. ತಮ್ಮನ್ನು ತಾವೇ ಸಂಭಾವಿತರೆಂದು ಭಾವಿಸುವ ಈ 'ಆತ್ಮಸಂಭಾವಿತರು', ಅವಿಧೇಯತೆಯನ್ನೇ ತುಂಬಿಕೊಂಡು, ಧನ–ಮಾನ–ಮದಗಳಿಂದ ಕೂಡಿದವರಾಗಿ ತೋರಿಕೆಗಾಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ. ಅವರಿಗೆ ಬೇಕಿರುವುದು ನಾಲ್ಕು ಜನರ ಹೊಗಳಿಕೆಯೇ ಹೊರತೂ ವಿಧಿ–ವಿಧಾನಗಳಲ್ಲಾಗಲೀ, ಪಾಪ–ಪುಣ್ಯದಲ್ಲಾಗಲೀ, ಹಿರಿಯರ ಮಾತಿನಲ್ಲಾಗಲೀ, ಶಾಸ್ತ್ರವಾಕ್ಯದಲ್ಲಾಗಲೀ ಅವರು ಶ್ರದ್ಧೆ ಉಳ್ಳವರಲ್ಲ. ಈ ರೀತಿಯಲ್ಲಿ ವ್ಯಕ್ತಿತ್ವದ ರಂಧ್ರದಂತಿರುವ ಎಲ್ಲ ದೋಷಗಳನ್ನೂ ತನ್ನಲ್ಲಿ ತುಂಬಿಕೊಂಡು ತನ್ನೊಳಗಿರುವ ಆ ಪರಮಾತ್ಮನನ್ನೇ ಉಪೇಕ್ಷಿಸುತ್ತಾರೆ. ಜೊತೆಗೆ ಒಳ್ಳೆಯವರನ್ನೂ, ಒಳ್ಳೆತನವನ್ನೂ ದ್ವೇಷಿಸಲು ತೊಡಗುತ್ತಾರೆ. ಕೊನೆಗೆ ಅಧರ್ಮವೇ ಧರ್ಮದಂತೆಯೂ, ಅವಿವೇಕವೇ ವಿವೇಕವೆಂಬುದಾಗಿಯೂ, ತಾನು ಮಾಡುವ ಕೆಟ್ಟ ಕೆಲಸಗಳನ್ನೆಲ್ಲ ಒಳ್ಳೆಯದೆಂಬುದಾಗಿಯೂ ಸಮರ್ಥಿಸಿಕೊಳ್ಳುತ್ತಾ ತನ್ನ ಅಧೋಗತಿಗೆ ತಾನೇ ಕಾರಣರಾಗಿಬಿಡುತ್ತಾರೆ. ಹಾಗಾಗಿ ಇಂಥ ವ್ಯಕ್ತಿಗಳನ್ನು ಒಬ್ಬ ವಿವೇಕಿಯಾದವನು ಸರ್ವಥಾ ದೂರ ಇಡಬೇಕು. ಇಂಥ 'ನರಾಧಮ'ರನ್ನು ಅನೇಕ ನರಕಗಳ ಮಾರ್ಗದಲ್ಲಿ ಎಸೆಯುತ್ತೇನೆ ಎಂಬುದಾಗಿ ಗೀತೆಯಲ್ಲಿ ಕೃಷ್ಣ ಎಚ್ಚರಿಸಿದ್ದಾನೆ.

ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥ಎಂಬುದಾಗಿ.

ಒಮ್ಮೆ ಆಸುರೀಯೋನಿಗಳಲ್ಲಿ ಹುಟ್ಟಿದರೆ ಮತ್ತಷ್ಟು ಮತ್ತಷ್ಟು ಕೆಳಮುಖವಾಗಿಯೇ ಅವರ ಪ್ರಯಾಣ ಸಾಗುತ್ತದೆ. ಈ ರೀತಿಯಲ್ಲಿ ಪರಮಾತ್ಮನಿಂದ ದೂರವಾಗಿ, ಜನ್ಮಜನ್ಮಗಳಲ್ಲಿಯೂ ಮೂಢಯೋನಿಗಳಲ್ಲೇ ಜನ್ಮವನ್ನು ಪಡೆಯುತ್ತಾರೆ. ಇದಕ್ಕೆ ವಿರುದ್ಧವಾಗಿ ಯಾರು ದೈವೀಸಂಪತ್ತನ್ನು ಉಳ್ಳವರೋ ಅಥವಾ ಅದನ್ನು ಪಡೆಯಲು ನಿರಂತರ ಯತ್ನಿಸುತ್ತಾರೋ ಅಂಥವರು ನಿಧಾನವಾಗಿಯಾದರೂ ಶ್ರೇಯಸ್ಸನ್ನು ಹೊಂದುತ್ತಾರೆ ಎಂಬುದಾಗಿ ಪರಮಾತ್ಮನು ತಿಳಿಸಿದ್ದಾನೆ. ಈ ರೀತಿಯಲ್ಲಿ ಪುರಾಣಗಳಲ್ಲಿ ಬರುವ ನರಕಗಳ ವರ್ಣನೆಯು ಈ ನಿಟ್ಟಿನಲ್ಲಿ ನಮಗೆ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳದಿದ್ದರೆ ಆಗುವ ಪರಿಣಾಮವನ್ನು ತಿಳಿಸಲೋಸುಗವೇ ಬಂದಿವೆ ಎನ್ನಬಹುದು.

'ಭಾರತದ ಟ್ರಂಪ್' ರಾಹುಲ್ ಗಾಂಧಿ!

ರಾಹುಲ್‌ಗಾಂಧಿ ತಮ್ಮ ನಡೆನುಡಿಗಳಿಂದ 'ಟ್ರಂಪ್'ರಂತೆಯೇ ವರ್ತಿಸುತ್ತಿದ್ದಾರೆ.

▸ ಭಾವದೀಪ್

ರಾಹುಲ್ ಗಾಂಧಿಯವರ ಅಷಾಢಭೂತಿತನವು ಡೊನಾಲ್ಡ್ ಟ್ರಂಪ್‌ರನ್ನೇ ಹೆಚ್ಚೆಚ್ಚು ಹೋಲುವಂತಿದೆ. ಟ್ರಂಪ್‌ರಂತೆ ರಾಹುಲ್ ಗಾಂಧಿ ಕೂಡಾ ಮಾತಿನ ಬಾಟಲ್ ಬಾಂಬುಗಳನ್ನು ಎತ್ತಿ ಎತ್ತಿ ಒಗೆಯುವುದರಲ್ಲಿ ನಿಷ್ಣಾತರು. ಇಂತಹ ಬಾಂಬುಗಳು ದೊಡ್ಡ ತಲೆಬರಹದ ಸುದ್ದಿಗಳಾಗಿ ಕಿಡಿ ಹಚ್ಚಲಿ ಎಂಬುದು ಅವರ ನಿರೀಕ್ಷೆ.


ಅವರ ಆರೋಪಗಳು ಹೆಚ್ಚು ವಿಚಿತ್ರಗೊಂಡಷ್ಟೂ ಅವರು ಬಳಸುವ ಭಾಷೆ ಹೆಚ್ಚೆಚ್ಚು ಘೋರವಾಗುತ್ತದೆ. ಆ ಮೂಲಕ ಜನರ ಗಮನವನ್ನು ಹೆಚ್ಚು ಸೆಳೆಯುವಂತಿರುತ್ತದೆ. ನಿಮ್ಮಲ್ಲಿ ಮಾತಿಗೆ ವಸ್ತುವಿಲ್ಲವಾದರೆ ನೀವೇ ಮಾತಿನ ವಸ್ತುವಾಗಿ ಎಂಬುದು ಅವರ ನಿಲುವು. ಎಲ್ಲೋ ಮೂಲೆ(ಡಂಪ್)ಗೆಸೆಯಲ್ಪಡುವ ಬದಲಾಗಿ ಟ್ರಂಪ್‌ರಂತಾಗುವ ಬಯಕೆ.

ರಾಹುಲ್ ಗಾಂಧಿಯ ಉದ್ದೇಶಪೂರ್ವಕ ಜಗಳಗಂಟತನ, ಸದಾ ಕಾರುವ ದ್ವೇಷ, ಹಠಾತ್ತನೆ ಎಗರಿಬೀಳುವ ಸ್ವಭಾವ ಎಲ್ಲವೂ 'ಟ್ರಂಪ್‌ತನ'ವನ್ನು ಸೂಚಿಸುತ್ತದೆ. ಟ್ರಂಪ್‌ರಂತೆಯೇ ಅವರು ವಾಸ್ತವಾಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಹಾಗಾಗಿಯೇ ಅವರು 'ಭಾರತದ್ದು ಮೃತ ಆರ್ಥಿಕತೆ' ಎಂಬ ಟ್ರಂಪ್‌ರ ಮಾತನ್ನು ಅನಾಮತ್ತು ಎತ್ತಿ ಬಿಡುತ್ತಾರೆ. ಪ್ರಗತಿಯ ನೈಜ ಅಂಕಿಅಂಶಗಳನ್ನು ಕಡೆಗಣಿಸುತ್ತಾರೆ.

ಆಪರೇಶನ್ ಸಿಂದೂರ್ ನಿಲ್ಲಿಸುವಲ್ಲಿ ಟ್ರಂಪ್‌ರ ಒತ್ತಡವಿತ್ತು ಎಂಬುದನ್ನು ಭಾರತವು ನಿರಾಕರಿಸಿದಾಗ, ರಾಹುಲ್ 'ಪಾಕಿಸ್ತಾನದಲ್ಲಿ ಭಯೋತ್ಪಾದಕ ಕೇಂದ್ರಗಳ ವಿರುದ್ಧ ಭಾರತದ ದಾಳಿಯು ಟ್ರಂಪ್ ಸೂಚನೆಯ ಮೇರೆಗೆ ನಿಂತಿತು' ಎನ್ನುತ್ತಾರೆ. ಟ್ರಂಪ್‌ರನ್ನು ಪ್ರಾಮಾಣಿಕತೆಗೆ ಮಾದರಿಯಾಗಿ ತೆಗೆದುಕೊಳ್ಳುವಂತೆಯೇ ಇಲ್ಲ ಎಂಬುದು ಅವರಿಗೆ ಗಣನೆಯಿಲ್ಲ. ಕೇಂದ್ರ ಸರಕಾರವು ಯಾವುದೇ ಬಿಕ್ಕಟ್ಟನ್ನು ಸಮರ್ಥವಾಗಿ ನಿಭಾಯಿಸಿದ್ದನ್ನು ಕಾಂಗ್ರೆಸಿಗರು ಎಂದೂ ಹೊಗಳಿದ್ದಿಲ್ಲ.

ಮೋದಿಯವರು 2017ರಲ್ಲಿ ಇಸ್ರೇಲಿಗೆ ನೀಡಿದ ಭೇಟಿಯನ್ನು ಆಯೋಜಿಸಿದ್ದು ಜೆಫ್ರಿ ಎಪ್‌ಸ್ಟೀನ್ ಎನ್ನುತ್ತಾರೆ ರಾಹುಲ್. ಆದರೆ ಎಪ್‌ಸ್ಟೀನ್‌ನ ಇಡೀ ವ್ಯವಹಾರವೇ ವಂಚನೆಯದ್ದು. ಆವನೊಂದಿಗೆ ಮೋದಿ ಸಖ್ಯ ಕಲ್ಪಿಸಿಕೊಳ್ಳಲೂ ಅಸಾಧ್ಯ. ಆದರೂ ರಾಹುಲ್ ತಮ್ಮ ಆರೋಪವನ್ನು ಜನರು ನಂಬಬೇಕೆಂದು ಬಯಸುತ್ತಾರೆ.

ಪ್ರತಿಯೊಂದು ಚುನಾವಣೆಯ ಸೋಲಿನ ಬಳಿಕವೂ ರಾಹುಲ್ ಹೆಚ್ಚೆಚ್ಚು ಹತಾಶರಾಗುತ್ತಿದ್ದಾರೆ. ಕಾಂಗ್ರೆಸ್ ಪಕ್ಷವು ಚುನಾವಣಾ ವಿಜಯದಿಂದ ಈಗ ಸುದ್ದಿಯಾಗುವುದಿಲ್ಲ. ರಾಹುಲ್ ಮಾಧ್ಯಮಗಳ ಮುಂದೆ ಹಾಜರಾಗಿ ಏನಾದರೂ ಹೇಳಿದಾಗ ಮಾತ್ರ ಸುದ್ದಿಯಾಗುತ್ತದೆ. ಈಗಂತೂ ಅವರು ಮುಖಪುಟದ ಸುದ್ದಿಯಾಗುವುದು ಪಿತೂರಿ ಸಿದ್ಧಾಂತ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ನೀಡುವಾಗ ಮಾತ್ರ.



ಒಂದು ಸುಳ್ಳನ್ನು ನೂರು ಬಾರಿ ಹೇಳಿದರೆ ಅದೇ ಸತ್ಯವಾಗುತ್ತದೆ ಎಂಬ ಗೋಬೆಲ್ಸ್ ಸಿದ್ಧಾಂತವನ್ನು ರಾಜಕೀಯದಲ್ಲಿ ಎಲ್ಲರೂ ಅನುಸರಿಸುತ್ತಾರೆ. ರಾಹುಲ್ ಅದನ್ನು ಎಲ್ಲರಿಗಿಂತ ಹೆಚ್ಚೇ ಪಾಲಿಸುತ್ತಾರೆ. ಆದರೆ ನಿಮ್ಮ ವಿರೋಧಿಗಳು ಹೆಚ್ಚು ವಿಶ್ವಾಸಭರಿತರಾಗಿದ್ದಾಗ ಈ ಸಿದ್ಧಾಂತ ಕೆಲಸ ಮಾಡುವುದಿಲ್ಲ. ಹಾಗಾಗಿ ಮೋದಿ ಬ್ರಾಂಡ್‌ನ್ನು ಹಳಿಯುವುದು ಕಾಂಗ್ರೆಸಿಗೆ ಅನಿವಾರ್ಯ ಕರ್ಮವಾಗಿದೆ.

ಟ್ರಂಪ್ ಪ್ರೇರಿತ 'ವೋಟ್ ಚೋರಿ' ಆರೋಪ ಇದೇ ಉದ್ದೇಶ ಹೊಂದಿರುವಂತದ್ದು. 2024ರಲ್ಲಿ ಚುನಾವಣಾ ಪ್ರಚಾರದ ವೇಳೆ ಟ್ರಂಪ್ "ಡೆಮಾಕ್ರಾಟರು ನಾಯಿ ತರಹ ವಂಚನೆ ಮಾಡುತ್ತಾರೆ" ಎಂದು ವಿರೋಧ ಪಕ್ಷವನ್ನು ತೆಗಳಿದ್ದರು. ಕೆಲವು ತಿಂಗಳ ಬಳಿಕ ರಾಹುಲ್ ಅದೇ ವಿಷಯವನ್ನು ಹಿಡಿದುಕೊಂಡರು. ಆದರೆ ಚೌಕಿದಾರ್ ಚೋರ್ ಹೈ ಆರೋಪದಂತೆಯೆ ಅವರ ವೋಟ್ ಚೋರಿಯ ಹೈಡ್ರೋಜನ್ ಬಾಂಬ್ ಕೂಡ ಠುಸ್ಸೆಂದಿತು. ಏಕೆಂದರೆ ಅವರಲ್ಲಿ ವೋಟ್ ಚೋರಿ ಸಾಬೀತುಪಡಿಸುವ ಪುರಾವೆಯೆ ಇರಲಿಲ್ಲ.

ರಿಯಾಲಿಟಿ ಟಿವಿಯಲ್ಲಿ ಟ್ರಂಪ್ ವರ್ತನಾ ಶೈಲಿಯನ್ನು ಅನುಕರಿಸಿದ ರಾಹುಲ್ ಸಂಸತ್ತಿನಲ್ಲಿ ಅಂತಹ ಗಿಮಿಕ್‌ಗಳನ್ನು ಪ್ರದರ್ಶಿಸಲೆತ್ನಿಸುತ್ತಾರೆ. ನರವಣೆಯವರ ಪುಸ್ತಕವನ್ನು ಓದುವ ಪ್ರಹಸನ, ಆಳುವ ಪಕ್ಷದವರತ್ತ ಫ್ಲೈಯಿಂಗ್ ಕಿಸ್ ತೂರಿದ್ದು, ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟುರನ್ನು 'ದ್ರೋಹಿ' ಎಂದು ಕರೆದುದು ಇಂತಹುದೇ ಗಿಮಿಕ್‌ಗಳು. ತಮ್ಮ ನಾಯಕನನ್ನೆ ಅನುಕರಿಸಿದ ಯುವ ಕಾಂಗ್ರೆಸ್‌ನ ಕೆಲವು ಸದಸ್ಯರು ಎಐ ಜಾಗತಿಕ ಸಮ್ಮೇಳನದಲ್ಲಿ ಶರ್ಟ್ ಬನಿಯನ್ ಬಿಚ್ಚಿ ಬೆತ್ತಲೆ ಪ್ರದರ್ಶನ ನಡೆಸಿದರು. ಅವರನ್ನು ರಾಹುಲ್ 'ಬಬ್ಬರ್ ಶೇರ್' ಎಂದು ಬಣ್ಣಿಸಿದ್ದು ಅವರ ನಡತೆಗೆ ಸೂಕ್ತವಾಗಿಯೇ ಇತ್ತು.

ಇವೆಲ್ಲ ನೋಡುವಾಗ, ರಾಹುಲ್ ಗಾಂಧಿ ಮತ್ತು ಟ್ರಂಪ್‌ರ ಎಡಬಿಡಂಗಿತನವನ್ನು ತುಲನೆ ಮಾಡುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದರಲ್ಲಿ ಆಶ್ಚರ್ಯವಿದೆಯೆ?! ಸಮಸ್ಯೆಯೇನೆಂದರೆ ಕಾಂಗ್ರೆಸ್‌ನಲ್ಲಿ ಈಗ ಸಂಘಟನಾತ್ಮಕ ಬಲವಿಲ್ಲ. ದೊಡ್ಡ ಚಿಂತನೆಗೂ ಬರವಿದೆ. ಎನ್‌ಡಿಎ ರಕ್ಷಣಾ ಕವಚದಲ್ಲಿ ಬಿರುಕು ಕಂಡುಕೊಳ್ಳಲು ಕಾಂಗ್ರೆಸಿಗಿನ್ನೂ ಸಾಧ್ಯವಾಗಿಲ್ಲ. ಸರಕಾರದ ಅಭಿವೃದ್ಧಿಶೀಲ ಮತ್ತು ಕಲ್ಯಾಣ ಕಾರ್ಯಗಳಿಂದಾಗಿ ಕಾಂಗ್ರೆಸಿಗೆ ಎನ್‌ಡಿಎಯನ್ನು ಸೋಲಿಸಲು ಸಾಧ್ಯವಾಗದಿರುವುದು ಒಂದು ಕಡೆಯಾದರೆ, ಮತ್ತೊಂದೆಡೆಯಿಂದ ಸರಿಯಾದ ವಿಷಯವನ್ನು ಪ್ರಚಾರತಂತ್ರವಾಗಿ ಆರಿಸಲೂ ಅದಕ್ಕೆ ಸಾಧ್ಯವಾಗಿಲ್ಲ. ಅದು ಎತ್ತಿಕೊಂಡ ವಿಷಯಗಳಾವುವೂ ಜನರ ವಿಶ್ವಾಸ ಗಳಿಸಲಿಲ್ಲ. ರಾಹುಲ್ ಬಿಜೆಪಿ ಸರಕಾರದ ಮೇಲೆ ಹೊರಿಸಿದ ಬಹಳಷ್ಟು ಆರೋಪಗಳಿಗೆ ಪುರಾವೆಗಳೇ ಇರಲಿಲ್ಲ.

ಭಾರತೀಯ ಮತದಾರರು ವಿರೋಧ ಪಕ್ಷ ನಾಯಕನಿಂದ ಇದಕ್ಕಿಂತ ಹೆಚ್ಚು ಪ್ರಬುದ್ಧ ನಡೆಯನ್ನು ಅಪೇಕ್ಷಿಸುತ್ತಾರೆ. ಕೇವಲ ಪೊಳ್ಳು ಘೋಷಣೆಗಳಿಗೆ ಜನರು ಮರುಳಾಗುವ ಕಾಲ ಸಂದುಹೋಯಿತು. ರಾಹುಲ್‌ರವರು ತಮ್ಮ ನಡೆನುಡಿಯಿಂದ 'ಭಾರತದ ಟ್ರಂಪ್'ರಂತಾಡುತ್ತಿದ್ದಾರೆ.

ಕಿರುಸುದ್ದಿ

ಕುಂದಾಪುರ ಮಹಿಳಾ-ಮಕ್ಕಳ ಶ್ರೇಯೋಭಿವೃದ್ಧಿ ಸಮಿತಿಯಿಂದ ವಿಶ್ವ ಮಹಿಳಾ ದಿನಾಚರಣೆ

ಕುಂದಾಪುರ: ಮಹಿಳೆಯ ಹಕ್ಕು ಮತ್ತು ಸಮಾನತೆಗಾಗಿ ಹೋರಾಟದ ನೆನಪಿನಲ್ಲಿ 1907ರಲ್ಲಿ ಆರಂಭವಾದ ವಿಶ್ವ ಮಹಿಳಾ ದಿನಾಚರಣೆ 1910ರಲ್ಲಿ ವಿಶ್ವದಾದ್ಯಂತ ಆಚರಿಸಲ್ಪಡುತ್ತಿದೆ. ಮಹಿಳೆಯ ಮಹತ್ವಿಕೆ, ಸಾಧನೆ, ಸಮಾನತೆಯ ವಿಚಾರವನ್ನು ಪ್ರಚುರ ಪಡಿಸುವುದು, ಸ್ವಾವಲಂಬಿಯಾಗಿ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿಯೂ ಗುರುತಿಸಿಕೊಳ್ಳುವಂತಾಗಬೇಕು ಎನ್ನುವುದು ಈ ಆಚರಣೆಯ ಉದ್ದೇಶವಾಗಿದೆ. ಸಮಾಜದಲ್ಲಿ ಮಹಿಳೆಯನ್ನು ಗೌರವಿಸುವುದು ಎಲ್ಲರ ಕರ್ತವ್ಯ ಎಂದು ಕುಂದಾಪುರ ಮಹಿಳಾ ಮತ್ತು ಮಕ್ಕಳ ಶ್ರೇಯೋಭಿವೃದ್ಧಿ ಸಮಿತಿಯ ಅಧ್ಯಕ್ಷೆ ಗುಣರತ್ನ ಹೇಳಿದರು.

ಕುಂದಾಪುರ ಮಹಿಳಾ ಮತ್ತು ಮಕ್ಕಳ ಶ್ರೇಯೋಭಿವೃದ್ಧಿ ಸಮಿತಿ ವತಿಯಿಂದ ಕುಂದಾಪುರದ ಬಾಲಭವನದಲ್ಲಿ ಭಾನುವಾರ ನಡೆದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಶಿಶು ಅಭಿವೃದ್ಧಿಯ ಯೋಜನಾಧಿಕಾರಿ ಉಮೇಶ್ ಟಿ.ಎಲ್. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭ ಉತ್ತಮವಾಗಿ ಚುನಾವಣಾ ಕರ್ತವ್ಯ ನಿರ್ವಹಿಸಿದ ಅಂಗನವಾಡಿ ಕಾರ್ಯಕರ್ತೆ ಉಷಾ ಅವರನ್ನು ಅಭಿನಂದಿಸಲಾಯಿತು. ಶಿಶು ಅಭಿವೃದ್ಧಿಯ ಯೋಜನೆಯ ಮೇಲ್ವಿಚಾರಕಿ ನಿವೇದಿತಾ, ಪುರಸಭಾ ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಉಪಸ್ಥಿತರಿದ್ದರು. ಉಷಾ ಸ್ವಾಗತಿಸಿ, ಲಲಿತಾ ಪ್ರಾಸ್ತಾವಿಕ ಮಾತನಾಡಿದರು. ವಿದ್ಯಾ ಪ್ರಾರ್ಥನೆಗೈದರು. ಪ್ರಭಾವತಿ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಹಂಗಾರಕಟ್ಟೆ: ಸ್ಪೋಕನ್ ಇಂಗ್ಲಿಷ್ ಫೆಸ್ಟ್-ಪೋಷಕರ ಸಭೆ

ಕೋಟ: ಹಂಗಾರಕಟ್ಟೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಪೋಕನ್ ಇಂಗ್ಲಿಷ್ ಫೆಸ್ಟ್ ಮತ್ತು ಪೋಷಕರ ಸಭೆ ಶನಿವಾರ ಜರಗಿತು. ಶಾಲಾ ಎಸ್‌ಡಿಎಂಸಿ ಅಧ್ಯಕ್ಷೆ ರೇಖಾ ಉಡುಪ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಹಿರಿಯ ವಿದ್ಯಾರ್ಥಿ ಸುಮಿತ್ರ ಗಾಣಿಗ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶಾಲೆಯ ವಿದ್ಯಾರ್ಥಿಗಳು ಆಂಗ್ಲ ಭಾಷೆಯ ವೈವಿಧ್ಯಮಯ ಚಟುವಟಿಕೆಗಳನ್ನು ನಡೆಸಿ ಕೊಟ್ಟರು. ಮಾರ್ಗದರ್ಶಿ ಶಿಕ್ಷಕ ಉಪಾಧ್ಯಾಯ ಮಾರ್ಗದರ್ಶನ ನೀಡಿದರು. ವಿಜ್ಞಾನ ಶಿಕ್ಷಿಕೆ ವೀಣಾ ಶೆಟ್ಟಿ ಪೋಷಕರಿಗೆ ಪರೀಕ್ಷಾ ಸಮಯದಲ್ಲಿ ಪೋಷಕರ ಪಾತ್ರ ಈ ಕುರಿತಾಗಿ ಮಾಹಿತಿ ನೀಡಿದರು.

ಎಂ.ಜಿ.ಎಂ. ಸಂಧ್ಯಾ ಕಾಲೇಜಿನಲ್ಲಿ ಐಟಿ ಕ್ಲಬ್ ಚಟುವಟಿಕೆಗಳ ಉದ್ಘಾಟನೆ



ಉಡುಪಿ: ಮಹಾತ್ಮ ಗಾಂಧಿ ಮೆಮೋರಿಯಲ್ ಸಂಧ್ಯಾ ಕಾಲೇಜು, ಉಡುಪಿ ಇದರ ಐಟಿ ಕ್ಲಬ್ 2025-26ನೇ ಶೈಕ್ಷಣಿಕ ಸಾಲಿನ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮವು ಮಾರ್ಚ್ 5ರಂದು ಮಧ್ಯಾಹ್ನ 2.15ಕ್ಕೆ ಟಿ. ಮೋಹನದಾಸ್ ಪೈ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ನಡೆಯಿತು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ. ದೇವಿದಾಸ್ ಎಸ್. ನಾಯಕ್ ವಹಿಸಿದ್ದು, ವಿದ್ಯಾರ್ಥಿಗಳು ತಾಂತ್ರಿಕ ಹಾಗೂ ವಿಶ್ಲೇಷಣಾತ್ಮಕ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವುದು ಇಂದಿನ ಐಟಿ ಕ್ಷೇತ್ರದಲ್ಲಿ ಅತ್ಯಂತ ಅಗತ್ಯ ಎಂದು ಅವರು ಹೇಳಿದರು. ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಮಣಿಪಾಲದ ಆನ್‌ಲೈನ್ ಶಿಕ್ಷಣ ನಿರ್ದೇಶನಾಲಯದ ಎಂಸಿಎ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಶೆಟ್ಟಿ ಅವರು ಉಪನ್ಯಾಸ ನೀಡಿದರು. ಬಿಸಿಎ ಸಂಯೋಜಕರಾದ ಡಾ. ಎಂ. ವಿಶ್ವನಾಥ ಪೈ ಅವರು ಕೃತಕ ಬುದ್ಧಿಮತ್ತೆಯ ಮಹತ್ವ ಮತ್ತು ಅದರ ಶಿಕ್ಷಣ, ವ್ಯಾಪಾರ ಹಾಗೂ ತಂತ್ರಜ್ಞಾನ ಕ್ಷೇತ್ರಗಳ ಮೇಲೆ ಇರುವ ಪ್ರಭಾವದ ಬಗ್ಗೆ ಮಾತನಾಡಿದರು. ಬಿಸಿಎ ಮತ್ತು ಬಿಕಾಂ ಸಂಯೋಜಕರಾದ ಡಾ. ಮಲ್ಲಿಕಾ ಎ. ಶೆಟ್ಟಿ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥೆ ಡಾ. ರೇಖಾ ಎಸ್. ಚಂದ್ರ ಹಲವಾರು ಉಪಸ್ಥಿತರಿದ್ದರು. ಐಟಿ ಕ್ಲಬ್ ಸಂಯೋಜಕಿ ಅಂಜಲಿನ್ ಜೊಯಿತಾ ಅತಿಥಿಗಳನ್ನು ಸ್ವಾಗತಿಸಿದರು. ಐಟಿ ಕ್ಲಬ್ ಕಾರ್ಯದರ್ಶಿ ದರ್ಶನ್ ಅತಿಥಿಗಳನ್ನು ಪರಿಚಯಿಸಿದರು. ಕೊನೆಯಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ಉಪನ್ಯಾಸಕಿ ಅಕ್ಷತಾ ವಂದನಾರ್ಪಣೆ ಸಲ್ಲಿಸಿದರು. ದ್ವಿತೀಯ ಬಿಸಿಎ ವಿದ್ಯಾರ್ಥಿನಿ ಉನ್ನತಿ ಕಾರ್ಯಕ್ರಮವನ್ನು ನಿರೂಪಿಸಿದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ
1. ಎಕ್ಕಾರು ಹತ್ತು ಸಮಸ್ತರು, ಮುಗ್ಗಾ ನಗರ, ಎಕ್ಕಾರು.
2. ಬ್ರಹ್ಮಶ್ರೀ ಫ್ರೆಂಡ್ಸ್ ಕ್ಲಬ್ (ರಿ.) ಕುಕ್ಕುಮೊಟ್ಟು, ತೆಂಕ ಮಿಜಾರು.
3. ಮಂಜನಾಡಿ, ಶ್ರೀ ವಿಷ್ಣುಮೂರ್ತಿ ಜನಾರ್ಧನ ದೇವಸ್ಥಾನ ವಠಾರದಲ್ಲಿ.
4. ಪರಂಡ ಪೂಜಾರಿ, 'ಪರಂಡ ಸಂದಣಿಕೆ', ದುರ್ಗಾನ ಮನೆ, ದಾಮ್ಲಾದಿ ವಯಾ ಶಿರ್ತಾಡಿ, ಮೂಡುಬಿದ್ರಿ.
5. ಬಯಲಾಟ ಸೇವಾ ಸಮಿತಿ ಮತ್ತು ಹತ್ತು ಸಮಸ್ತರು, ನಿಡ್ಡೆ, ವಯಾ ಧರ್ಮಸ್ಥಳ, ಬೆಳ್ತಂಗಡಿ (ತಾ).
6. ಗಿರಿಜಾ ಮತ್ತು ತಾಂಬಪ್ಪ ಪೂಜಾರಿ, 'ಗಿರಿಜಾ ನಿವಾಸ', ಪಾಲ್ಲಂಚ್ಚ ಮನೆ, ಮುಂಡಾಜೆ, ಬೆಳ್ತಂಗಡಿ (ತಾ).
7. ರಮೇಶ ಶೆಟ್ಟಿ, 'ಸುಮಲ ನಿವಾಸ', ಆಜಿಲಾರು
ಶ್ರೀ ಕಟೀಲು ಕ್ಷೇತ್ರ ಸನ್ನಿಧಿಯಲ್ಲಿ.

ಶ್ರೀ ಧರ್ಮಸ್ಥಳ ಮೇಳ
ಅಭಿನಂದನೆಯಲ್ಲಿ
ಶ್ರೀ ದುರ್ಗಾಂಬಾ ಯಕ್ಷಗಾನ ಬಯಲಾಟ ಸೇವಾ ಸಮಿತಿ

ಶ್ರೀ ಸಾಲಿಗ್ರಾಮ ಮೇಳ
ಮುರ್ಡೇಶ್ವರದಲ್ಲಿ
ಕಾರ್ತವೀರ್ಯ-ಚಂದ್ರಾವಳಿ

ಶ್ರೀ ಪೆರ್ಡೂರು ಮೇಳ
ಶಿರಗುಂಜಿಯಲ್ಲಿ- ಚದುರಂಗ

ಶ್ರೀ ಹನುಮಗಿರಿ ಮೇಳ
ಪುದಕೋಳಿ ನೀರ್ಮಾರ್ಗದಲ್ಲಿ

ಶ್ರೀ ಪಾವಂಜೆ ಮೇಳ
ಗಾಣದಕೊಟ್ಟ ಆಟದ ಮೈದಾನ, ಕಾಯರಕೆ, ಮೂಡುಬಿದಿರೆ
ಛಾಯಾನಂದನ



ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ಸ್ವಾಭಿಮಾನ ಸಾರಥಿ ಯೋಜನೆಯಡಿ ಆಯ್ಕೆಯಾದ ಬಂಟ್ವಾಳ ತಾಲೂಕಿನ ಪಿಲಿಮೊಗ್ರು ಗ್ರಾಮದ ಬಸ್ತಿಕೋಡಿ ಅಶೋಕ್ ಪೂಜಾರಿ ಅವರಿಗೆ ಪಿಕಪ್ ವಾಹನವನ್ನು ಸಂಸದ ಕ್ಯಾ. ಬ್ರಿಜೇಶ್‌ಚ ಚೌಟ ಹಸ್ತಾಂತರಿಸಿದರು. ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ, ಬಿಜೆಪಿ ಬಂಟ್ವಾಳ ಮಂಡಲದ ಅಧ್ಯಕ್ಷ ಚೆನ್ನಪ್ಪ ಕೋಟ್ಯಾನ್, ಜಿಲ್ಲಾ ಕಾರ್ಯದರ್ಶಿ ದಿನೇಶ್ ಅಮ್ಟೂರು, ಪುರುಷೋತ್ತಮ ಶೆಟ್ಟಿ ವಾಮದಪದವು, ದಯಾನಂದ ಎರ್ಮೆನಾಡು ಮಾದಲಾದವರಿದ್ದರು.

ರೋಗ ಬಾರದಂತೆ ತಡೆಯುವುದು ಜಾಣತನ: ದಯಾನಂದ ಗೌಡ ಆರಿಗ

ಕಡಬ: ಮನುಷ್ಯನಿಗೆ ಆರೋಗ್ಯ ಎನ್ನುವುದು ಬಲುದೊಡ್ಡ ಸಂಪತ್ತು. ರೋಗ ಬಂದ ಮೇಲೆ ಚಿಕಿತ್ಸೆಗಾಗಿ ಪರಿತಪಿಸುವ ಬದಲು ರೋಗ ಬಾರದಂತೆ ಮುಂಜಾಗರೂಕತೆ ವಹಿಸುವುದು ಜಾಣತನ ಎಂದು ಕಡಬ ಏಕಾಹ ಭಜನೋತ್ಸವ ಸಮಿತಿಯ ಅಧ್ಯಕ್ಷ ದಯಾನಂದ ಗೌಡ ಆರಿಗ ಅವರು ಅಭಿಪ್ರಾಯಪಟ್ಟರು.

ಅವರು ಜೇಸಿಐ ಕಡಬ ಕದಂಬ ಹಾಗೂ ಜೇಸಿಐ ಕಡಬ ಕದಂಬ ಚಾರಿಟೇಬಲ್ ಟ್ರಸ್ಟ್ ನೇತೃತ್ವದಲ್ಲಿ ಪಶುಸಂಗೋಪನಾ ಇಲಾಖೆ ಹಾಗೂ ಕಡಬದ ಶ್ರೀಗಣೇಶ್ ಮೆಡಿಕಲ್ಸ್‌ನ ಸಹಕಾರದೊಂದಿಗೆ ಆಯೋಜಿಸಲಾಗಿದ್ದ ಹುಚ್ಚು ನಾಯಿ ರೋಗ ನಿರೋಧಕ ಲಸಿಕೆ ನೀಡಿಕೆ ಶಿಬಿರವನ್ನು ಕಡಬದ ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದ ವಠಾರದಲ್ಲಿ ಉದ್ಘಾಟಿಸಿ ಮಾತನಾಡಿದರು. ಎಲ್ಲೆಡೆ ಹುಚ್ಚುನಾಯಿಗಳು ಹಾಗೂ ಬೀದಿ ನಾಯಿಗಳ ಹಾವಳಿ ಹೆಚ್ಚುತ್ತಿರುವ ಸಂದರ್ಭದಲ್ಲಿ ಸಂಘಟಕರು ಈ ರೀತಿಯ ಶಿಬಿರವನ್ನು ನಡೆಸುತ್ತಿರುವುದು ಸಮಯೋಚಿತವಾಗಿದೆ ಎಂದರು. ಕಡಬ ಪಶು ವೈದ್ಯಕೀಯ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ। ಅಜಿತ್ ಎಂ.ಸಿ. ಅವರು ಮುಖ್ಯಅತಿಥಿಯಾಗಿ ಆಗಮಿಸಿದ್ದರು. ಜೇಸಿಐ ಕಡಬ ಕದಂಬ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ನಾಗರಾಜ್ ಎನ್.ಕೆ., ಕಾರ್ಯಕ್ರಮ ನಿರ್ದೇಶಕ ಅನೀಶ್ ಲೋಬೋ, ಪದಾಧಿಕಾರಿಗಳಾದ ಕೃಷ್ಣ ಕಾರಂತ್, ದಿನೇಶ್ ತುಂಬೆತಡ್ಕ ಮೆಬಿನ್, ರಾಜೇಶ್ ಎ.ಕೆ., ಎಲಿಜಬೆತ್, ಚೇತನ್ ಪ್ರಭು, ಕಿರಿಯ ಪಶು ವೈದ್ಯಕೀಯ ಪರೀಕ್ಷಕರಾದ ವೀರೇಶ್, ರವಿತೇಜ್ ಪಡೆಜ್ಜಾರ್ ಮುಂತಾದವರು ಉಪಸ್ಥಿತರಿದ್ದರು.

ಜೇಸಿಐ ಕಡಬ ಕದಂಬದ ಅಧ್ಯಕ್ಷ ಜೇಮ್ಸ್ ಕ್ರಿಶಲ್ ಡಿಸೋಜ ಅಧ್ಯಕ್ಷತೆ ವಹಿಸಿ ಸ್ವಾಗತಿಸಿದರು. ಕಾರ್ಯದರ್ಶಿ ಅಬ್ದುಲ್‌ರಹಿಮಾನ್ ವಂದಿಸಿದರು.

217 ನಾಯಿಗಳಿಗೆ ಲಸಿಕೆ
ಕಡಬ, ಕೋಡಿಂಬಾಳ, 102ನೇ ನೆಕ್ಕಿಲಾಡಿ, ಬಂಟ್ರ, ರೆಂಜಿಲಾಡಿ, ನೂಜಿಬಾಳ್ತಿಲ, ಕುಟ್ರುಪ್ಪಾಡಿ ಹಾಗೂ ಬಲ್ಯ ಗ್ರಾಮಗಳ ವ್ಯಾಪ್ತಿಯಲ್ಲಿ ಜೇಸಿ ಸದಸ್ಯರು, ಪಶು ವೈದ್ಯರು ಹಾಗೂ ಪಶು ವೈದ್ಯಕೀಯ ಪರೀಕ್ಷಕರು 3 ತಂಡಗಳಲ್ಲಿ ಸಂಚರಿಸಿ ನಿಗದಿಪಡಿಸಿದ ಸ್ಥಳಗಳಲ್ಲಿ ಒಟ್ಟು 217 ನಾಯಿಗಳಿಗೆ ಲಸಿಕೆ ನೀಡಲಾಯಿತು. ಕಡಬದ ಶ್ರೀಗಣೇಶ್ ಮೆಡಿಕಲ್ಸ್‌ನ ಮಾಲಕ ಅಜಿತ್ ಶೆಟ್ಟಿ ಅವರು ಲಸಿಕೆಯನ್ನು ಉಚಿತವಾಗಿ ನೀಡಿ ಸಹಕರಿಸಿದರು.

ಸಾಂಪ್ರದಾಯಿಕ ಆಚರಣೆ ಉಳಿಸಲು ಹಕ್ಕೊತ್ತಾಯ ಸಭೆ | ಶಿವಣ್ಣ ಗೌಡ ಇಡ್ಯಾಡಿ ಸ್ಪಷ್ಟೋಕ್ತಿ

ಕೋಳಿ ಅಂಕಕ್ಕಾಗಿ ಹೋರಾಟಕ್ಕೆ ಸಿದ್ಧ

ಆಲಂಕಾರು: ತುಳುನಾಡಿನ ಜಾನಪದ ಕ್ರೀಡೆ ಪಾರಂಪರಿಕ ಕೋಳಿ ಅಂಕವನ್ನು ಅಧಿಕೃತ ಮಾಡುವ ನಿಟ್ಟಿನಲ್ಲಿ ನಮ್ಮ ಹೋರಾಟ ತೀವ್ರಗೊಳ್ಳಲಿದೆ. ಈ ಹೋರಾಟದಲ್ಲಿ ಯಾವುದಾದರೂ ಒಂದು ನಿರ್ಧಾರ ಪ್ರಕಟವಾಗಬೇಕು. ನಮ್ಮ ಹೋರಾಟ ಮಾಡು ಇಲ್ಲವೇ ಮಡಿ ಎನ್ನುವಂತಾಗಬೇಕು ಎಂದು ಸಾಂಪ್ರದಾಯಿಕ ಆಚರಣಾ ಹಿತರಕ್ಷಣಾ ವೇದಿಕೆಯ ಜಿಲ್ಲಾ ಪ್ರಮುಖ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಶಿವಣ್ಣ ಗೌಡ ಇಡ್ಯಾಡಿ ಹೇಳಿದರು.

ಅವರು ಆಲಂಕಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ದೀನ ದಯಾಳು ರೈತ ಸಭಾ ಭವನದಲ್ಲಿ ಸಾಂಪ್ರದಾಯಿಕ ಆಚರಣೆಗಳನ್ನು ಉಳಿಸುವ ನಿಟ್ಟಿನಲ್ಲಿ ಅದರಲ್ಲೂ ಪ್ರಮುಖವಾಗಿ ಜಾನಪದ ಕ್ರೀಡೆ ಕೋಳಿ ಅಂಕವನ್ನು ಸರಕಾರ ಅಧಿಕೃತ ಮಾಡಬೇಕು ಎಂದು ನಡೆದ ಹಕ್ಕೊತ್ತಾಯ ಸಭೆಯಲ್ಲಿ ಮಾತನಾಡಿದರು.

ಕರಾವಳಿಯಿಂದ ಘಟ್ಟದ ಅಂಚಿನ ವರೆಗೆ ವ್ಯಾಪಿಸಿರುವ ಕೋಳಿ ಅಂಕಕ್ಕೆ 850 ವರ್ಷದ ಇತಿಹಾಸ ಇದೆ. ಇಂತಹ ಈ ಮಣ್ಣಿನ ನಂಬಿಕೆಯಾಗಿರುವ ಪಾರಂಪರಿಕ ಜಾನಪದ ಕ್ರೀಡೆಗೆ ಕಡಿವಾಣ ಹಾಕುವುದರಿಂದ ತುಳುನಾಡಿನ ಜನರ ಧಾರ್ಮಿಕ ಭಾವನೆಗೆ ಧಕ್ಕೆ ತರಲಾಗುತ್ತಿದೆ. ಇದು ಮೋಜು ಮಸ್ತಿಗೆ ಅಲ್ಲ. ಇದರಲ್ಲಿ ಎಲ್ಲಾ ಜಾತಿ ಧರ್ಮದವರು ಭಾಗವಹಿಸುತ್ತಾರೆ. ಕಂಬಳ, ಕುದುರೆ ರೇಸ್, ಜಲ್ಲಿಕಟ್ಟು, ಹೋರಿ ಓಟ ಮುಂತಾದ ಜೂಜು ಕಟ್ಟುವ ಕ್ರೀಡೆಗಳಿಗೆ ಅನುಮತಿ ನೀಡುತ್ತಿರುವಾಗ ಕೋಳಿ ಅಂಕಕ್ಕೆ ಮಾತ್ರ ಕಾನೂನು ಚೌಕಟ್ಟು ತರಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಶಿವಣ್ಣ ಗೌಡ, ಈ ಕುರಿತು ರಾಜಕೀಯ ರಹಿತವಾಗಿ ಹೋರಾಟವನ್ನು ರೂಪಿಸಿ ಮುಂದೆ ಉಗ್ರ ನಡೆಸಲಾಗುವುದು ಎಂದರು.

ಶರವೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಡಾ. ಹೇಮಂತ್ ರೈ ಮನವಳಿಕೆ ಮಾತನಾಡಿ, ನಮ್ಮ ತುಳುನಾಡಿ ನಾಗಾರಧಾನೆ, ದೈವಾರಾದನೆ, ಕಂಬಳ, ಯಕ್ಷಗಾನ, ಕೋಳಿಅಂಕ ಮುಂತಾದ ಆಚರಣೆಗಳು ನಮ್ಮ ಜೀವನದ ಭಾಗವಾಗಿದೆ. ಇಂತಹ ನಂಬಿಕೆಗಳಿಗೆ ಹೊಡೆದ ಬಿದ್ದಿದೆ. ನಮ್ಮ ಸಂಪ್ರದಾಯ ಸಂಸ್ಕೃತಿಯ ಉಳಿವಿಗಾಗಿ ಹೋರಾಟದ ಅನಿವಾರ್ಯತೆ ಇದೆ, ಅದಕ್ಕೆ ಎಲ್ಲರೂ ಬೆಂಬಲ ನೀಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಮನವಳಿಕೆಗುತ್ತು ದೈವ-ದೇವರುಗಳ ಟ್ರಸ್ಟ್ ಅಧ್ಯಕ್ಷ ದಯಾನಂದ ರೈ ಮನವಳಿಕೆ ಮಾತನಾಡಿ, ನಮ್ಮ ಸಂಸ್ಕೃತಿ ಸಂಪ್ರದಾಯಗಳ ಮೇಲೆ ನಿರಂತರ ಕಡಿವಾಣ ಹೇರುವ ಕೃತ್ಯ ಸರಿಯಲ್ಲ. ಯಾವುದೇ ಆಮಂತ್ರಣವಿಲ್ಲದೆ ಸಾವಿರಾರು ಜನ ಸೇರುವ ಕೋಳಿ ಅಂಕ ತುಳುನಾಡಿನಲ್ಲಿ ಭಾರೀ ಜನಪ್ರಿಯತೆ ಪಡೆದಿದೆ. ಇದರ ಉಳಿವಿನ ನಿಟ್ಟಿನಲ್ಲಿ ನಡೆಯುತ್ತಿರುವ ಹೋರಾಟಕ್ಕೆ ಪ್ರತೀ ಗ್ರಾಮದಿಂದ ಜನ ಸಂಘಟಿತರಾಗಬೇಕು ಎಂದರು.

ರಕ್ಷಣಾ ವೇದಿಕೆಯ ಜಿಲ್ಲಾ ಸಂಚಾಲಕ ಬೆಳಿಯಪ್ಪ ಗೌಡ ತಿಮರೆಗುಡ್ಡೆ ಮಾತನಾಡಿ, ಜಿಲ್ಲೆಯಲ್ಲಿ ಲಕ್ಷಾಂತರಜನರು ಸಾಂಪ್ರದಾಯಿಕ ಕೋಳಿ ಅಂಕ ಪ್ರಿಯರಿದ್ದಾರೆ. ಇದಕ್ಕೆ ಕಡಿವಾಣ ಹಾಕಿದರೆ ಅದು ಅನ್ಯಾಯದ ಪರಮಾವಧಿಯಾಗುತ್ತದೆ. ಇದನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಜಿಲ್ಲೆಯ ಜನಪ್ರತಿನಿಧಿಗಳಿಗೆ ಮನವಿ ಮಾಡಿ, ಬಳಿಕ ಕಾನೂನು ಹೋರಾಟಕ್ಕೂ ಸಿದ್ಧತೆ ನಡೆಸುತ್ತಿದ್ದೇವೆ. ಈ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಮುಂದೆ ಮಂಗಳೂರಿನಲ್ಲಿ ನಡೆಯುವ ಬೃಹತ್ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಎ.ಪಿ.ಎಂ.ಸಿ. ಮಾಜಿ ಅಧ್ಯಕ್ಷ ದಿನೇಶ್ ಮೆದು ಮಾತನಾಡಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಈ ಸಂದರ್ಭ ಹಿರಿಯ ಸಾಂಪ್ರದಾಯಿಕ ಆಚರಣಾ ವ್ಯಕ್ತಿ ಹೊನ್ನಪ್ಪ ಗೌಡ ಕೇವಳ ಅವರನ್ನು ಸನ್ಮಾನಿಸಲಾಯಿತು.

ರಾಮಮೋಹನ್ ರೈ ಸುರುಳಿ ಉದ್ಘಾಟಿಸಿದರು. ಮೋಹನ್‌ದಾಸ್ ರೈ ಪರಾರಿ ಗುತ್ತು, ರಾಧಾಕೃಷ್ಣ ರೈ ಪರಾರಿಗುತ್ತು, ರಾಜೇಶ್ ಬೊಟ್ಟು, ಪುರಂದರ ರೈ ಅರ್ಲ್ವಾರ, ಕೇಶವ ಗೌಡ ಆಲಡ್ಕ, ಆನಂದ ಪೂಜಾರಿ ಕಡಬ, ಕೃಷ್ಣಪ್ಪ ಕಡಬ ಮತ್ತಿತರರು ಉಪಸ್ಥಿತರಿದ್ದರು.

ವಿವೇಕ ರೈ ಬೆಳ್ಳಾರೆ ಸ್ವಾಗತಿಸಿ, ಸಂತೋಷ್ ರೈ ಮನವಳಿಕೆ ವಂದಿಸಿದರು. ರವೀಂದ್ರದಾಸ್ ಪೂಂಜಾ ಹಾಗೂ ಚಂದ್ರಶೇಖರ ಪೂಂಜಾ ನಿರ್ವಹಿಸಿದರು.



ನಂಬಿಕೆ ಆಧಾರದಲ್ಲಿ ನಮ್ಮ ಸಂಪ್ರದಾಯಗಳು ನಡೆಯುತ್ತಿವೆ. ಧಾರ್ಮಿಕ ಆಚರಣೆಗಳಲ್ಲಿ ಕೋಳಿ ಅಂಕ ಕೂಡಾ ಒಂದು. ಭೂಮಿಗೆ ರಕ್ತದ ಬಿಂದು ಬೀಳಬೇಕು ಎನ್ನುವ ನಂಬಿಕೆಯೊಂದಿಗೆ ನೂರಾರು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಈ ಕ್ರೀಡೆ ಮುಂದೆಯೂ ಜೂಜು ರಹಿತವಾಗಿ ನಡೆಯಬೇಕು.
■ ಅಧ್ಯಕ್ಷ ಗೋಪಾಲಕೃಷ್ಣ ಪಡ್ಡಿಲ್ಲಾಯ,
ಅಧ್ಯಕ್ಷ, ಶರವೂರು ಬ್ರಹ್ಮಕಲಶೋತ್ಸವ ಸಮಿತಿ

ಉಚ್ಚಂಗಿ ಮಾರಿಯಮ್ಮ ದೇವಸ್ಥಾನ ಬ್ರಹ್ಮಕಲಶ-ಧಾರ್ಮಿಕ ಸಭೆ

ದೈವೀ ಶಕ್ತಿಯ ಅನುಗ್ರಹ ಬೇಕು: ಶ್ರೀ

ಮೂಡುಬಿದಿರೆ: ಕರಾವಳಿಯು ಅತೀಂದ್ರಿಯ ಶಕ್ತಿಗಳ ತಾಣವಾಗಿದೆ. ದೈವಶಕ್ತಿಯ ನೆರಳಿನಲ್ಲಿ ಬದುಕುತ್ತಿರುವ ನಮಗೆ ದೈವೀ ಶಕ್ತಿಯ ಅನುಗ್ರಹ ಬೇಕು. ಮುಗ್ಧ ಜನರು ತಮ್ಮ ಕಾಯಿಲೆಯ ಪರಿಹಾರಕ್ಕೆ ಮಾರಿಯಮ್ಮನ ಮೊರೆ ಹೋಗುತ್ತಿದ್ದಾರೆ. ಮಾರಿಯಮ್ಮ ಮನಸ್ಸಿಗೆ ಶಕ್ತಿ ತುಂಬುವ ದೇವರಾಗಿದ್ದಾರೆ ಎಂದು ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಇಲ್ಲಿನ ಕೋಡಂಗಲ್ಲು ಉಚ್ಚಂಗಿ ಮಾರಿಯಮ್ಮ ದೇವಸ್ಥಾನದಲ್ಲಿ ಭಾನುವಾರ ನಡೆದ ಬ್ರಹ್ಮಕಲಶಾಭಿಷೇಕದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.

ಮಾಜಿ ಸಚಿವ ಕೆ. ಅಭಯಚಂದ್ರ ಜೈನ್ ದೀಪ ಬೆಳಗಿಸಿ ಉದ್ಘಾಟಿಸಿ ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಪುರಸಭೆ ಅನುದಾನದಿಂದ 30 ಲಕ್ಷ ವೆಚ್ಚದಲ್ಲಿ ಸಭಾಭವನ ನಿರ್ಮಿಸಲು ಸಹಕರಿಸಿದ ರೂಪಾ ಸಂತೋಷ್ ಶೆಟ್ಟಿ, ಸುಮಾರು 25 ಲಕ್ಷ ರೂ. ವೆಚ್ಚದಲ್ಲಿ ಪುರಸಭೆ ಅನುದಾನದಿಂದ ಶಾಶ್ವತ ಚಪ್ಪರ ನಿರ್ಮಾಣಕ್ಕೆ ಸಹಕರಿಸಿದ ಪುರಸಭಾ ಸದಸ್ಯ ಕೊರಗಪ್ಪ, ಸುಮಾರು 3 ಲಕ್ಷ ವೆಚ್ಚದಲ್ಲಿ ಸ್ವಾಗತಗೋಪುರವನ್ನು ನಿರ್ಮಿಸಿಕೊಟ್ಟ ದಾನಿ ನಾಗೇಶ್, ಹಾಸುಗಲ್ಲು ಕಾಮಗಾರಿ ನಿರ್ವಹಿಸಿದ ಉದಯ್ ಕುಮಾರ್ ಹಾಗೂ ಪಂಜುರ್ಲಿ ದೈವದ ಕಟ್ಟೆಗೆ ಸ್ಟೀಲ್ ತಡೆ ಬೇಲಿ ನಿರ್ಮಿಸಿಕೊಟ್ಟ ಕೆ. ಆರ್. ಪರಶವನ್ ಅವರನ್ನು ಸನ್ಮಾನಿಸಲಾಯಿತು. ಕುದ್ರೋಳಿ ಗೋಕರ್ಣನಾಥ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್ ಆರ್. ಪೂಜಾರಿ, ವ್ರತಾನಿರೀಕ್ಷಿಕ ಸಂದೇಶ್ ಪಿ.ಜಿ, ಉದ್ಯಮಿ ಶ್ರೀಪತಿ ಭಟ್, ಮೊನ್ನೆಚಾರಿ ವೆಂಕಟರಮಣ ದೇವಸ್ಥಾನದ ಆಡಳಿತ ಮೊಕ್ತೇಸರು ಅಶೋಕ್ ಕಾಮಾತ್, ವೈಬ್ರೆಂಟ್ ಪಿಯು ಕಾಲೇಜು ಪ್ರಾಂಶುಪಾಲ ಡಾ. ಎಸ್. ಎನ್. ವೆಂಕಟೇಶ ನಾಯಕ್ ಗುತ್ತಿಗೆದಾರ ಗಿರೀಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಬ್ರಹ್ಮಕಲಶೋತ್ಸವ ಸಮಿತಿಯ ಗೌರವಾಧ್ಯಕ್ಷರಾದ ತಿಮ್ಮಯ್ಯ ಶೆಟ್ಟಿ, ರವಿಪ್ರಸಾದ್ ಉಪಾಧ್ಯಾಯ, ಕೋಶಾಧಿಕಾರಿ ಸಂತೋಷ್ ಶೆಟ್ಟಿ, ಆಡಳಿತ ಮಂಡಳಿಯ ಉಪಾಧ್ಯಾಕ್ಷ ಸಂತೋಷ್, ಕಾರ್ಯದರ್ಶಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರಧಾನ ಕಾರ್ಯದರ್ಶಿ ಬಿ. ಸೀತರಾಮ ಆಚಾರ್ಯ ಸ್ವಾಗತಿಸಿದರು. ಶಿವಪ್ರಸಾದ್ ಹೆಗ್ಡೆ ಕಾರ್ಯಕ್ರಮ ನಿರ್ವಹಿಸಿದರು. ಬೆಳುವಾಯಿ ಯಕ್ಷದೇವ ಮಿತ್ರಕಲಾ ಮಂಡಳಿ ಸಂಯೋಜನೆಯಲ್ಲಿ ಯಕ್ಷ-ಗಾನ- ಹಾಸ್ಯ-ವೈಭವ, ಪಿಂಗಾರ ಕಲಾವಿದರು ಬೆದ್ರ ತಂಡದಿಂದ ಓಂಕಾರ ನಾಟಕ ನಡೆಯಿತು.



ಇನ್ನು ಮುಂದೆ ಪ್ರವಾಸಿ ನಕ್ಷೆಯಲ್ಲಿ ಪಕ್ಷಿ ಗ್ರಾಮ ಕಿದೂರು: ಪಕ್ಷಿ ವೀಕ್ಷಕರು ಖುಷ್!

ಕಾಸರಗೋಡು: ಕುಂಬಳೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕಿದೂರು ಪಕ್ಷಿ ಗ್ರಾಮವು ಪಕ್ಷಿ ವೀಕ್ಷಕರು ಮತ್ತು ಪ್ರಕೃತಿ ಪ್ರಿಯರಿಗೆ ನೆಚ್ಚಿನ ತಾಣವಾಗಲು ಸಜ್ಜಾಗಿದೆ. ಆದರಂತೆ ಬಹುನಿರೀಕ್ಷಿತ ಕಿದೂರು ಜೀವವೈವಿಧ್ಯ ಅಧ್ಯಯನ ಕೇಂದ್ರವನ್ನು ಶುಭಾರಂಭಗೊಳಿಸಲಾಗಿದೆ. ಕುಂಬಳೆ ಗ್ರಾಮೀಣ ಪ್ರವಾಸೋದ್ಯಮ ಯೋಜನೆಯ ಭಾಗವಾಗಿರುವ ಈ ಯೋಜನೆಯನ್ನು ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಮಂಗಳವಾರ ಲೋಕಾರ್ಪಣೆಗೊಳಿಸಿದರು.

ಕುಂಬಳೆ ಗ್ರಾ.ಪಂ. ಅಧ್ಯಕ್ಷ ವಿ.ಪಿ. ಅಬ್ದುಲ್ ಖಾದರ್ ಅಧ್ಯಕ್ಷತೆ ವಹಿಸಿದ್ದರು. ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಎಂ.ಎ.ನಸೀಬ್ ವರದಿ ಮಂಡಿಸಿದರು. ಜಿ. ಪಂ. ಸದಸ್ಯ ಅಜೀಜ್ ಕಳತ್ತೂರು, ಬ್ಲಾಕ್ ಪಂಚಾಯತ್ ಸದಸ್ಯೆ ಪಿ.ಎಂ.ನಸೀಮಾ, ಗ್ರಾ.ಪಂ. ಸದಸ್ಯ ಮಂಜುನಾಥ ಆಳ್ವ ಮಡ್ವ, ನಿರ್ಮಿತಿ ಕೇಂದ್ರದ ಪ್ರಧಾನ ವ್ಯವಸ್ಥಾಪಕ ಇ.ಪಿ.ರಾಜ್‌ಮೋಹನ್, ಗ್ರಾ.ಪಂ. ಸ್ಥಾಯೀ ಸಮಿತಿ ಅಧ್ಯಕ್ಷರಾದ ಎ.ಕೆ.ಆರಿಫ್, ಎಂ.ಪಿ.ಖಾಲಿದ್, ಪಂಚಾಯತ್‌ನ ಮಾಜಿ ಅಧ್ಯಕ್ಷ ಕೆ.ಎಲ್. ಪುಂಡರೀಕಾಕ್ಷ, ರಾಜು ಮಾಸ್ತರ್ ಕಿದೂರು ಮಾತನಾಡಿದರು.

ಕಾಸರಗೋಡು ಪ್ರವಾಸೋದ್ಯಮ ಇಲಾಖೆಉಪನಿರ್ದೇಶಕಎಂ.ಎ.ನಸೀಬ್ ಸ್ವಾಗತಿಸಿ, ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿ ಕಾರ್ಯದರ್ಶಿ ಜೆ.ಕೆ. ಜಿಜೇಶ್ ಕುಮಾರ್ ಧನ್ಯವಾದವಿತ್ತರು.

ಅಪರೂಪದ ಪಕ್ಷಿ ಗ್ರಾಮ ಕಿದೂರು

ಕುಂಬಳೆ ಗ್ರಾ.ಪಂ.ನಲ್ಲಿರುವ ಕಿದೂರು ಪ್ರದೇಶವು ಕೇರಳದ ಅಪರೂಪದ ಪಕ್ಷಿ ಗ್ರಾಮವಾಗಿದೆ. ಅಳಿವಿನಂಚಿನಲ್ಲಿರುವ ಬೂದು ತಲೆಯ ಬುಲ್‌ಬುಲ್ ಮತ್ತು ಬಿಳಿ ಕಿರೀಟದ ಕ್ರೇನ್‌ಗಳಿಂದ ತೊಡಗಿ ಸೀಗಲ್ ಮತ್ತು ಸಾಮಾನ್ಯ ಮರಕುಟಿಕ ಅಲ್ಲದೆ 38 ಇತರ ವಲಸೆ ಹಕ್ಕಿಗಳವರೆಗೆ 170ಕ್ಕೂ ಹೆಚ್ಚು ವಿವಿಧ ಜಾತಿಯ ಪಕ್ಷಿಗಳಿಗೆ ನೆಲೆಯಾಗಿದೆ. ಪಶ್ಚಿಮ ಘಟ್ಟಗಳಲ್ಲಿ ಮಾತ್ರ ಕಂಡುಬರುವ ಹಾರ್ನ್ಡ್ ವಾರ್ಬ್ಲರ್ ಮತ್ತು ಗರುಡ ವಾರ್ಬ್ಲರ್ ಪಕ್ಷಿಗಳನ್ನು ವೀಕ್ಷಿಸಲು ಸಂಶೋಧಕರು ಇಲ್ಲಿಗೆ ಆಗಮಿಸುತ್ತಾರೆ.

ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನ ಭಾಗವಾಗಿ 60 ಲಕ್ಷ ರೂ. ವೆಚ್ಚದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವ ಈ ವಸತಿ ನಿಲಯವನ್ನು ಕಿದೂರಿನಲ್ಲಿ ಸ್ಥಾಪಿಸಲಾಗಿದೆ. ಈ ಅಧ್ಯಯನ ಕೇಂದ್ರ ಮತ್ತು ಅದರೊಂದಿಗೆ ಪೂರ್ಣಗೊಂಡಿರುವ ಆರಿಕ್ಕಾಡಿ ರಸ್ತೆಯು ಕುಂಬಳೆ ಗ್ರಾಮೀಣ ಪ್ರವಾಸೋದ್ಯಮ ಯೋಜನೆಯಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದ್ದು, ಇದನ್ನು ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನಡಿ 2.74 ಕೋಟಿ ರೂ.ಗಳ ಅನುದಾನದೊಂದಿಗೆ ಜಾರಿಗೆ ತರಲಾಗುತ್ತಿದೆ. ಆರಿಕ್ಕಾಡಿಯಲ್ಲಿ ದೋಣಿ ವಿಹಾರ ಸೌಲಭ್ಯಗಳನ್ನು ಕೂಡಾ ಸ್ಥಾಪಿಸಲು ನಿರ್ಧರಿಸಲಾಗಿದೆ.



ಸಮರ್ಪಣಾ ಪರಿವಾರ್ ಟ್ರಸ್ಟ್ ಆಶ್ರಯದಲ್ಲಿ ಸಾಧಕಿಯರಿಗೆ ಸನ್ಮಾನ, ಪರಿವಾರ ಕುಟುಂಬ ಮಿಲನ ಕಾರ್ಯಕ್ರಮ

ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆಗೆ ಮಹಿಳಾ ಮೀಸಲಾತಿ ಬಲ

ಉಳ್ಳಾಲ: ಪ್ರತಿಯೋರ್ವ ಮಹಿಳೆಗೂ ದೇವರು ವಿಭಿನ್ನವಾದ ಶಕ್ತಿ ಕೊಟ್ಟಿದ್ದಾನೆ. ಹತ್ತು ಮಕ್ಕಳನ್ನು ಸಾಕುವ ಶಕ್ತಿಯೂ ಕೂಡ ತಾಯಿಗಿದೆ. ಆದರೆ ಹತ್ತು ಮಕ್ಕಳಿಗೆ ಒಂದು ತಾಯಿಯನ್ನು ಸಾಕುವ ಶಕ್ತಿ ಇಲ್ಲದ ಪರಿಸ್ಥಿತಿಯನ್ನು ನಾವಿಂದು ಕಾಣುತ್ತಿದ್ದೇವೆ. ದೇಶದಲ್ಲಿ ಮಹಿಳಾ ಮೀಸಲಾತಿ ಬಂದ ಬಳಿಕ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುವಂತಾಗಿದೆ ಎಂದು ಕರ್ನಾಟಕ ರಾಜ್ಯ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಡಿ.ಎಸ್.ಗಟ್ಟಿ ಅಭಿಪ್ರಾಯಪಟ್ಟರು.

ಮಂಗಳೂರಿನ ಸಮರ್ಪಣಾ ಪರಿವಾರ್ ಟ್ರಸ್ಟ್ ಆಶ್ರಯದಲ್ಲಿ 'ಮಹಿಳಾ ದಿನಾಚರಣೆ-2026' ಪ್ರಯುಕ್ತ ಕೊಲ್ಯದ ಖಾಸಗಿ ಸಭಾಂಗಣದಲ್ಲಿ ಭಾನುವಾರ ನಡೆದ ಸಾಧಕಿಯರಿಗೆ ಸನ್ಮಾನ ಹಾಗೂ ಪರಿವಾರ ಕುಟುಂಬ ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದೆ ಅಡುಗೆ ಕೋಣೆಗೆ ಸೀಮಿತಳಾಗಿದ್ದ ಮಹಿಳೆಯರು ಇಂದು ಅಂತರಿಕ್ಷವನ್ನು ಸುತ್ತುವ ಮೂಲಕ ಎಲ್ಲಾ ರಂಗದಲ್ಲೂ ಸಾಧನೆ ಮಾಡಿದ್ದಾರೆ. ಎಲ್ಲಿ ಮಹಿಳೆಯರನ್ನು ಪೂಜಿಸಿ ಗೌರವಿಸುವರೋ ಅಲ್ಲಿ ದೇವರು ನೆಲೆಸುತ್ತಾರೆ ಎಂಬುದು ವಾಸ್ತವ ಸತ್ಯ. ಮನೆಯಲ್ಲಿ ಹೆಣ್ಣೊಬ್ಬಳು ನೆಮ್ಮದಿ, ಆರೋಗ್ಯಕರವಾಗಿ ಸಕಾರಾತ್ಮಕವಾಗಿ ಬದುಕಿದರೆ ಆ ಮನೆ ಬೆಳಗುತ್ತದೆಯೆಂದರು.

ಹೈನುಗಾರಿಕೆ ಕ್ಷೇತ್ರದಲ್ಲಿ ಸಾಧನೆಗೈದ ಮೈಮೂನ ಎಂ.ಎ.ಹರೇಕಳ, ಸಮಾಜ ಸೇವೆಯಲ್ಲಿ ಚಂದ್ರಕಲಾ ಎಸ್., ವಾಣಿಜ್ಯ ಕ್ಷೇತ್ರದಲ್ಲಿ ಲಿಜಿ ನೊರೋನ್ಹ, ಕಲಾ ಕ್ಷೇತ್ರದಲ್ಲಿ ಸುಮಂಗಲಿ ರಾವ್, ಮಾಧ್ಯಮ ಕ್ಷೇತ್ರದಲ್ಲಿ ಸಾಧನೆಗೈದ ವಜ್ರ ಗುಜರನ್ ಅವರನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು.

ಸಮರ್ಪಣಾ ಪರಿವಾರ್ ಟ್ರಸ್ಟ್ ಮಹಿಳಾ ಘಟಕದ ಅಧ್ಯಕ್ಷೆ ಕುಸುಮಾ ಪ್ರಶಾಂತ್ ಉಡುಪ ಅಧ್ಯಕ್ಷತೆ ವಹಿಸಿದ್ದರು. ದೇರಳಕಟ್ಟೆ ವಿದ್ಯಾರತ್ನ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಸೌಮ್ಯ ಆರ್. ಶೆಟ್ಟಿ, ಭಾರತೀಯ ತೀಯಾ ಸಮಾಜ ಉಳ್ಳಾಲ ವಲಯದ ಅಧ್ಯಕ್ಷ ಜಯಂತ್ ಕೊಂಡಾಣ, ಲಯನ್ಸ್ ಕ್ಲಬ್ ಪೆರ್ಮನ್ನೂರು ವಲಯಾಧ್ಯಕ್ಷೆ ಜೆಸಿಂತಾ ಮೆಂಡೋನ್ಸ, ಲಯನ್ಸ್ ಕ್ಲಬ್ ಥೋಟಾ ಮಂಗಳೂರು ಘಟಕಾಧ್ಯಕ್ಷೆ ಹರಿಣಾಕ್ಷಿ, ಮುಡಿಪು ವಿಶ್ವಕರ್ಮ ಸಂಘದ ಅಧ್ಯಕ್ಷ ಸುರೇಶ್ ಆಚಾರ್ಯ, ರೈಲ್ವೇ ಸಲಹಾ ಮಂಡಳಿ ಸದಸ್ಯೆ ಸುಷ್ಮಾ ಕೋಟ್ಯಾನ್, ಸರ್ವಜ್ಞ ಅಕಾಡೆಮಿ ಆಡಳಿತ ವ್ಯವಸ್ಥಾಪಕ ಸುರೇಶ್ ಎಂ.ಎಸ್, ಉಳ್ಳಾಲ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ದಿನೇಶ್ ನಾಯಕ್, ಸಮಾಜ ಸೇವಕಿ ಗಾಯತ್ರಿ ಕಿಶೋರ್ ಕುತ್ತಾರ್, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಲಿಲ್ಲಿ ಪಾಯ್ಸ್ ಮೊದಲಾದವರು ಉಪಸ್ಥಿತರಿದ್ದರು.

ಸಮರ್ಪಣಾ ಪರಿವಾರ್ ಟ್ರಸ್ಟ್ ಅಧ್ಯಕ್ಷ ಮೋಹನ್ ಶಿರ್ಲಾಲ್ ಸ್ವಾಗತಿಸಿದರು. ಶಿಕ್ಷಕರಾದ ಜಯಲಕ್ಷ್ಮಿ, ಚಂದ್ರಶೇಖರ ಹಾಗೂ ವಸಂತ ರೈ ಸನ್ಮಾನ ಪತ್ರ ವಾಚಿಸಿದರು. ವಸಂತ ಕೋಡಿ ವಂದಿಸಿದರು. ಜಗನ್ನಾಥ ಶಿರ್ಲಾಲ್ ಕಾರ್ಯಕ್ರಮ ನಿರೂಪಿಸಿದರು.



ಯಾವುದೇ ಕ್ಷೇತ್ರಗಳಲ್ಲೂ ಮಹಿಳೆಯರು ಮುಂದುವರಿದು ಸಾಧನೆಗೈಯಲು ಮೊದಲಿಗೆ ಮನೆ ಮಂದಿಯ ಸಂಪೂರ್ಣ ಸಹಕಾರ ಅಗತ್ಯ. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದು ಸನ್ಮಾನಿಸಲ್ಪಟ್ಟ ಮಹಿಳಾ ಸಾಧಕಿಯರು ಮುಂದಿನ ದಿನಗಳಲ್ಲಿ ಮತ್ತಷ್ಟು ಮಹತ್ತರ ಸಾಧನೆಗಳನ್ನು ಮಾಡಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಮಿಂಚುವಂತಾಗಲಿ.
■ ಸೌಮ್ಯ ಆರ್.ಶೆಟ್ಟಿ.
ಕಾರ್ಯದರ್ಶಿ, ವಿದ್ಯಾರತ್ನ ಶಿಕ್ಷಣ ಸಂಸ್ಥೆ.

ತ್ಯಾಜ್ಯ: ಸೂಪರ್ ಮಾರ್ಕೆಟಿಗೆ ಇಲಾಖೆ ತಾಕೀತು

ಕುಂಬಳೆ: ಭಾಸ್ಕರನಗರದಲ್ಲಿ ರಸ್ತೆ ಹಾಗೂ ಪರಿಸರ ಪ್ರದೇಶವನ್ನು ಶುಚಿಯಾಗಿಸಲು ನವೋದಯ ಫ್ರೆಂಡ್ಸ್ ಕ್ಲಬ್ ಕಾರ್ಯಕರ್ತರು ಸಹಿತ ನಾಗರಿಕರು ಪ್ರಯತ್ನಿಸುತ್ತಿರುವಾಗ ಮತ್ತೊಂದೆಡೆ ಇದೇ ಸ್ಥಳದಲ್ಲಿ ತ್ಯಾಜ್ಯ ಎಸೆಯುತ್ತಿರುವುದು ಮುಂದುವರಿದಿದೆ. ಇತ್ತೀಚೆಗೆ ಈ ಸ್ಥಳದಲ್ಲಿ ತ್ಯಾಜ್ಯ ಪತ್ತೆಯಾಗಿತ್ತು. ಇದರಿಂದ ಕ್ಲಬ್‌ನ ಕಾರ್ಯಕರ್ತರು ನಡೆಸಿದ ಪ್ರಯತ್ನದ ಫಲವಾಗಿ ತ್ಯಾಜ್ಯ ಎಸೆದ ವ್ಯಕ್ತಿಯನ್ನು ಪತ್ತೆಹಚ್ಚಿ ಆತನ ಮೂಲಕ ಅದನ್ನು ತೆರವುಗೊಳಿಸಲಾಗಿತ್ತು. ನಂತರವೂ ಅಲ್ಲಿ ತ್ಯಾಜ್ಯ ಕಂಡುಬಂದಿದೆ. ಅದನ್ನು ಕೂಡಾ ಕ್ಲಬ್ ಕಾರ್ಯಕರ್ತರು ಪರಿಶೀಲಿಸಿದಾಗ ಅದು ಶಾಂತಿಪಳ್ಳ ಸೂಪರ್ ಮಾರ್ಕೆಟ್‌ನ ತ್ಯಾಜ್ಯ ಎಂದು ಖಚಿತಗೊಂಡಿತು. ಕೂಡಲೇ ಕ್ಲಬ್ ಕಾರ್ಯಕರ್ತರು ಸೂಪರ್ ಮಾರ್ಕೆಟ್‌ಗೆ ತಲುಪಿ ವಿಚಾರಿಸಿದಾಗ ಸೂಪರ್ ಮಾರ್ಕೆಟ್‌ನ ಮೆನೇಜರ್ ಈ ತ್ಯಾಜ್ಯ ತಮ್ಮದೆಂದು ಒಪ್ಪಿಕೊಂಡಿದ್ದಾರೆ. ಇದರಿಂದ ತ್ಯಾಜ್ಯ ತೆರವುಗೊಳಿಸುವಂತೆ ಕ್ಲಬ್ ಕಾರ್ಯಕರ್ತರು ವಿನಂತಿಸಿದಾಗ ಮೆನೇಜರ್ ಅದಕ್ಕೆ ಸಿದ್ಧರಾಗಲಿಲ್ಲ. ಅಲ್ಲದೆ ತ್ಯಾಜ್ಯ ಕೊಂಡೊಯ್ಯಲು ಓರ್ವ ರಿಕ್ಷಾ ಚಾಲಕನಿಗೆ ವಹಿಸಿಕೊಟ್ಟಿದ್ದು, ಅದಕ್ಕಾಗಿ ಆತನಿಗೆ ಹಣ ನೀಡಲಾಗಿದೆ. ಆದ್ದರಿಂದ ಅದರ ಜವಾಬ್ದಾರಿ ನಮಗಿಲ್ಲ. ಬೇಕಾದರೆ ಆತನ ಮೂಲಕ ತ್ಯಾಜ್ಯವನ್ನು ತೆಗೆಸುವುದಾಗಿ ಸೂಪರ್ ಮಾರ್ಕೆಟ್ ಮೆನೇಜರ್ ತಿಳಿಸಿದರು. ಆದ್ದರಿಂದ ಇನ್ನು ಹೆಚ್ಚು ಚರ್ಚಿಸಿ ಅಥವಾ ಪಂಚಾಯತ್‌ಗೆ ತಿಳಿಸಿ ಪ್ರಯೋಜನವಿಲ್ಲವೆಂದು ತಿಳಿಸಿ ಕ್ಲಬ್ ಕಾರ್ಯಕರ್ತರು ಸರಕಾರದ ಶುಚಿತ್ವ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ದೂರು ದಾಖಲಿಸಿದ್ದಾರೆ.

ತ್ಯಾಜ್ಯ ಬಗ್ಗೆ ಪಂಚಾಯತ್‌ಗೆ ದೂರು ನೀಡಿದರೆ ರಾಜಕಾರಣಿಗಳು, ಸೂಪರ್ ಮಾರ್ಕೆಟ್ ಮೆನೇಜರ್ ಅಲ್ಲಿಗೇ ಮುಗಿಸಿಬಿಡುವರೆಂದೂ ಆದರಿಂದ ಸರಕಾರದ ಶುಚಿತ್ವ ಪೋರ್ಟಲ್‌ನಲ್ಲಿ ದೂರು ದಾಖಲಿಸಿರುವುದಾಗಿ ಕ್ಲಬ್ ಕಾರ್ಯಕರ್ತರು ತಿಳಿಸಿದ್ದಾರೆ.

ದೂರು ನೀಡಿ ಕೆಲವೇ ಹೊತ್ತಿನಲ್ಲಿ ಕುಂಬಳೆ ಪಂಚಾಯತ್ ಹೆಲ್ತ್ ಇನ್‌ಸ್ಪೆಕ್ಟರ್ ಸ್ಥಳಕ್ಕೆ ತಲುಪಿದ್ದು, 24 ಗಂಟೆಯೊಳಗೆ ತ್ಯಾಜ್ಯ ತೆರವುಗೊಳಿಸಬೇಕೆಂದು ಸೂಪರ್ ಮಾರ್ಕೆಟ್ ಮೆನೇಜರ್‌ಗೆ ತಿಳಿಸಿದ್ದಾರೆ. ತ್ಯಾಜ್ಯತೆರವುಗೊಳಿಸಿದ ಬಳಿಕ ಗಂಟೆಯೊಳಗೆ ತಿಳಿಸಬೇಕೆಂದೂ ನಂತರವೇ ದಂಡ ಮೊತ್ತ ತಿಳಿಸುವುದಾಗಿ ಹೆಲ್ತ್ ಇನ್‌ಸ್ಪೆಕ್ಟರ್ ಮೆನೇಜರ್‌ಗೆ ತಿಳಿಸಿದರು.

ವಿವಿಧೆಡೆ ದಾಳಿ: ದಂಡ ವಸೂಲಿ

ಕುಂಬಳೆ: ಸ್ಥಳೀಯಾಡಳಿತ ಇಲಾಖೆಯ ಜಿಲ್ಲಾ ಎನ್‌ಫೋರ್ಸ್‌ಮೆಂಟ್ ಸ್ಕ್ವಾಡ್ ನಡೆಸಿದ ತಪಾಸಣೆಯಲ್ಲಿ ಕುಂಬಳೆ ಪಂ.ವ್ಯಾಪ್ತಿಯ ನಾಯ್ಕಾಪು ಮಿನಿಮಾರ್ಟ್, ಮೀಂಜ ಪಂಚಾಯತ್‌ನ ಮೀಯಪದವಿನಲ್ಲಿರುವ 5 ಸೂಪರ್‌ಮಾರ್ಕೆಟ್ ಎಂಬೆಡೆಗಳಲ್ಲಿ ಸಂಗ್ರಹಿಸಿಟ್ಟಿರುವ 5 ನಿಷೇಧಿತ ಪ್ಲಾಸ್ಟಿಕ್ ಪ್ಲೇಟ್, ಗ್ಲಾಸ್ ಎಂಬೀ ಉತ್ಪನ್ನಗಳನ್ನು ಪತ್ತೆಹಚ್ಚಿ 10,000 ರೂ.ನಂತೆ ದಂಡ ವಿಧಿಸಲಾಗಿದೆ.

ನಾಯ್ಕಾಪು ರಸ್ತೆ ಬದಿಯಲ್ಲಿರುವ ಅನ್ಯರಾಜ್ಯ ಕಾರ್ಮಿಕರು ವಾಸಿಸುವ ಎರಡು ಮಹಡಿಯ ಕಟ್ಟಡದ ಕೆಳಭಾಗದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಪತ್ತೆಯಾಗಿದ್ದು, ಕಟ್ಟಡ ಮಾಲಕನಿಗೆ 10,000 ರೂ. ದಂಡ ಹೇರಲಾಗಿದೆ. ಮುಂದಿನ ಕ್ರಮ ಕೈಗೊಳ್ಳುವುದಕ್ಕಾಗಿ ನಿರ್ದೇಶನ ನೀಡಲಾಗಿದೆ. ತ್ಯಾಜ್ಯಗಳನ್ನು ಅಂಗಡಿಯ ಮುಂಭಾಗದಲ್ಲಿ ಉರಿಸಿದ ಹಿನ್ನೆಲೆಯಲ್ಲಿ ನೀಲೇಶ್ವರದಲ್ಲಿರುವ ಸಂಸ್ಥೆಯ ಮಾಲಕನಿಗೆ 5000 ರೂ., ತ್ಯಾಜ್ಯವನ್ನು ಉಪೇಕ್ಷಿಸಿದ ಸ್ಟೋರ್ ಮಾಲಕನಿಗೆ 2000 ರೂ. ದಂಡ ವಿಧಿಸಲಾಗಿದೆ. ಕೋಳಿ ತ್ಯಾಜ್ಯಗಳನ್ನು ವಿವಿಧ ಅಂಗಡಿಗಳಿಂದ ಅಂಗೀಕೃತ ಏಜೆನ್ಸಿಗೆ ನೀಡುವುದರ ಬಗ್ಗೆಯೂ ತಪಾಸಣೆ ನಡೆಸಲಾಯಿತು.

ತಪಾಸಣಾ ತಂಡದಲ್ಲಿ ಸ್ಕ್ವಾಡ್ ಲೀಡರ್ ಕೆ.ವಿ. ಮುಹಮ್ಮದ್ ಮದನಿ, ಸದಸ್ಯ ಜೋಸ್ ವಿ.ಎಂ., ಹೆಲ್ತ್ ಇನ್‌ಸ್ಪೆಕ್ಟರ್ ಪಿ.ವಿ.ಸೌಮ್ಯಾ, ವಿ.ವಿ.ಬೀನಾ, ಕ್ಲರ್ಕ್ ಮುಹಮ್ಮದ್ ಮುಸ್ತಫ ಭಾಗವಹಿಸಿದ್ದರು.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ

ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಎಇ-1/ಐಎಫ್‌ಟಿ-59/2025-26

ದಿನಾಂಕ: 10-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ಸಮಾಲೋಚಕರಿಂದ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:10-03-2026 ರಿಂದ 17-03-2026

3054-03-337-0-05-200 ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ

1. ಶಿವಮೊಗ್ಗ ವಿಭಾಗ - 1 ಕಾಮಗಾರಿ (ಇ.ನಂ:32130)

3054-04-337-1-10-200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ

2. ಶಿವಮೊಗ್ಗ ವಿಭಾಗ - 1 ಕಾಮಗಾರಿ (ಇ.ನಂ:31804)

ಕ್ರಸಂ: 01ರ ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿ) : 09 ತಿಂಗಳುಗಳು

ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ-2.0 kppp.karnataka.gov.in ನಲ್ಲಿಯೇ ಪ್ರಕಟಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182- 274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080-25501216/ 080-25501227 ರಿಂದ ಮಾಹಿತಿ ಪಡೆಯಬಹುದು.

ಸಹಿ/- ಕಾ.ಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/69/03/1980

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.

ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ

ಶಿಮನಪಾಶಿ:ಕಾ.ಅ:ವಿದ್ಯುತ್:ಡಿ:ಎಂ/ಸಿ.ಆರ್:22/2025-26 ದಿನಾಂಕ: 10.03.2026

ಟೆಂಡರ್ ಪ್ರಕಟಣೆ

ಇ-ಪ್ರಕ್ಯೂರ್ ಮೆಂಟ್ www.kppp.karnataka.gov.in ಮುಖಾಂತರ

ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ & ಸಮಯ: 18.03.2026 10.00 AM

ಟೆಂಡರ್ ತೆರೆಯುವ ದಿನಾಂಕ & ಸಮಯ: 20.03.2026 10.30 AM

ಕ್ರ.ಸಂ. 1. ಇಂಡೆಂಟ್ ಸಂಖ್ಯೆ: DMA/2025-26/SE7463 Providing vehicles along with driver on hire basis for Shivamogga City Corporation (3 numbers A/C Cars and 12 numbers Non A/C Cars) Package 1 ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ: 6541920.00 ಇ.ಎಂ.ಡಿ ಮೊತ್ತ (ರೂ.ಗಳಲ್ಲಿ): 164000.00

ಕ್ರ.ಸಂ. 2. ಇಂಡೆಂಟ್ ಸಂಖ್ಯೆ: DMA/2025-26/SE7464 Providing vehicles along with driver on hire basis for Shivamogga City Corporation (3 numbers A/C Cars and 12 numbers Non A/C Cars) - Package 2 ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ: 6541920.00 ಇ.ಎಂ.ಡಿ ಮೊತ್ತ (ರೂ.ಗಳಲ್ಲಿ): 164000.00

ಕ್ರ.ಸಂ. 3. ಇಂಡೆಂಟ್ ಸಂಖ್ಯೆ: DMA/2025-26/WT/WORK_INDENT 56247 ಪಾಲಿಕೆ ವ್ಯಾಪ್ತಿಯಲ್ಲಿನ ಮಲಿನ ನೀರು ಶುದ್ಧೀಕರಣ ಘಟಕಕ್ಕೆ ಸಂಬಂಧಿಸಿದಂತೆ ಗುಂಡಪ್ಪ ಶೆಡ್ ವೆಟ್ ವೆಲ್ ನ ಡಿ-ಸಿಲ್ಟಿಂಗ್ ಕಾಮಗಾರಿ ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ: 1671411.84 ಇ.ಎಂ.ಡಿ ಮೊತ್ತ (ರೂ.ಗಳಲ್ಲಿ): 41800.00

ಸೂಚನೆ: ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ವೆಬ್ ಸೈಟ್ www.kppp.karnataka.gov.in ಮೂಲಕ ಪಡೆಯಬಹುದು.

ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರರು(ವಿ) ರವರ ಕಛೇರಿಯನ್ನು ಕರ್ತವ್ಯದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ) ಮಹಾನಗರ ಪಾಲಿಕೆ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/58/03/1985

ಕರ್ನಾಟಕ ಸರಕಾರ
ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ವನ್ಯಜೀವಿ ಉಪ ವಿಭಾಗ ದಾಂಡೇಲಿ-581325

email: acfwldandeli@gmail.com

ಕ್ರಸಂ:ಸ.ಅ.ಸಂ/ದಾಂಡೇಲಿ/ಇ-ಟೆಂಡರ್/ಫೀಡ್&ಫೊಡರ್/2025-26 ದಿನಾಂಕ: 05/03/2026

ಸವಿವರ ಮರು ಟೆಂಡರು ಪ್ರಕಟಣೆ

ವಿಷಯ: 2026-27 ನೇ ಸಾಲಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವನ್ಯಜೀವಿ ಉಪ ವಿಭಾಗದ ದಾಂಡೇಲಿ ವ್ಯಾಪ್ತಿಯಲ್ಲಿನ ಫಣಸೋಲಿ ವನ್ಯಜೀವಿ ವಲಯದ ಐದು ಇಲಾಖಾ ಸಾಕಾನೆಗಳಿಗೆ ಆನೆ ಪಡಿತರಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ್ ಕರೆದಿರುವ ಬಗ್ಗೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವನ್ಯಜೀವಿ ಉಪ ವಿಭಾಗದ ದಾಂಡೇಲಿ ವ್ಯಾಪ್ತಿಯಲ್ಲಿನ ಫಣಸೋಲಿ ವನ್ಯಜೀವಿ ವಲಯದ ಐದು ಇಲಾಖಾ ಸಾಕಾನೆಗಳಿಗೆ ಒಂದು ವರ್ಷದ ಅವಧಿಗೆ ಅಗತ್ಯವಿರುವ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವ ಸಲುವಾಗಿ ಅಧಿಕೃತ ಏಜೆನ್ಸಿಗಳಿಂದ ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮೂಲಕ ದರಪಟ್ಟಿಯ ಈ ಮುಂದೆ ಕಾಣಿಸಲಾದ ದಿನಾಂಕ ಮತ್ತು ವೇಳೆಯಲ್ಲಿ ಮರು ಟೆಂಡರ್ ಆಹ್ವಾನಿಸಲಾಗಿದೆ.

(1) ಟೆಂಡರ ನಡೆಯುವ ಸ್ಥಳ: (ಇ-ಟೆಂಡರ್), ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ದಾಂಡೇಲಿ-581325 ಉತ್ತರ ಕನ್ನಡ ಜಿಲ್ಲೆ. (2) ಟೆಂಡರ್ ಪ್ರಶ್ನೆಗಳು ಮತ್ತು ಸ್ಪಷ್ಟಿಕರಣ ಕೊನೆಯ ದಿನಾಂಕ: 12-03-2026 ರಂದು ಸಾಯಂಕಾಲ 4.00 ಘಂಟೆಯವರೆಗೆ (3) ಟೆಂಡರ ಹಾಕಲು ಅಂತಿಮ ದಿನಾಂಕ ಮತ್ತು ವೇಳೆ: ದಿನಾಂಕ: 13-03-2026 ರಂದು ಬೆಳಿಗ್ಗೆ 11:00 ಘಂಟೆಯುವರೆಗೆ ಟೆಂಡರ ಸ್ವೀಕರಿಸಲಾಗುವದು. (ಇ-ಪೋರ್ಟಲ್‌ನಲ್ಲಿ) (4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ: ದಿನಾಂಕ: 16-03-2026 ರಂದು ಬೆಳಿಗ್ಗೆ 11:00 ಘಂಟೆಯ ನಂತರ ತಾಂತ್ರೀಕ ಟೆಂಡರ್ ತೆರೆಯಲಾಗುವುದು. (ಷರತ್ತುಗಳನ್ನು ಪೂರೈಸದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. (5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ. ದಿನಾಂಕ: 17-03-2026 ರಂದು ಬೆಳಿಗ್ಗೆ 11.00 ಘಂಟೆಯ ನಂತರ ಆರ್ಥಿಕ ಟೆಂಡರ ತೆರೆಯಲಾಗುವುದು. (ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು) (6) ಟೆಂಡರ ಸ್ವೀಕರಿಸುವ ಅಧಿಕಾರಿಗಳು: (ಇ-ಟೆಂಡರ್), ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ದಾಂಡೇಲಿ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ವನ್ಯಜೀವಿ ಉಪ ವಿಭಾಗ ದಾಂಡೇಲಿ

DIPR/KWR/KSMCA/1188/25-26 Dt. 09.03.2026

ಪಟ್ಟಣ ಪಂಚಾಯತ್ ಕಾರ್ಯಾಲಯ ಕಡಬ ದ.ಕ.ಜಿಲ್ಲೆ

TOWN PANCHAYATH KADABA, D.K.574221

e-mail: co.kadaba2@gmail.com phone : 08251-298002

ಕ.ಪ.ಪಂ/ಆ.ವಿ.ಸಿ.ಆರ್.ನಂ.71/2025-26 ದಿನಾಂಕ :10/03/2026

ಕೊಟೇಶನು ಪ್ರಕಟಣೆ

ಕಡಬ ಪಟ್ಟಣ ಪಂಚಾಯತ್ ಆರೋಗ್ಯ ವಿಭಾಗಕ್ಕೆ ನೈರ್ಮಲ್ಯ ಸಾಮಾಗ್ರಿ ಒದಗಿಸುವ ಬಗ್ಗೆ ಅರ್ಹರಿಂದ ಕೊಟೇಶನ್ ಆಹ್ವಾನಿಸಲಾಗಿದೆ. ಕೊಟೇಶನ್ ದಿನಾಂಕ: 17/03/2026 ರ ಸಂಜೆ 5.00 ಗಂಟೆಯೊಳಗೆ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್ ಕಡಬ ಇವರಿಗೆ ಕೊಟೇಶನ್ ಸಲ್ಲಿಸುವುದು. ನಿಗದಿತ ಸಮಯದ ನಂತರ ಬಂದ ಕೊಟೇಶನ್‌ಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆ ಆರೋಗ್ಯ ವಿಭಾಗವನ್ನು ಸಂಪರ್ಕಿಸುವುದು.

ಕ್ರ. ಸಂ.	ಸಾಮಗ್ರಿಗಳು	ಸಂಖ್ಯೆ	ಪ್ರತಿಯೊಂದರ ಮೊತ್ತ
1	ರಬ್ಬರ್ ಗ್ಲೌಸ್ : SNGLEUSE	100	
2	ಲಾರ್ವ ನಿಯಂತ್ರಣ ದ್ರಾವಣ (Larvicide (ಸೊಳ್ಳೆ ಸಂತಾನ ನಿಯಂತ್ರಣ ದ್ರಾವಣ)	5	
3	ಸುಣ್ಣದ ಹುಡಿ	100	
4	ಫಿನಾಯಿಲ್ (ಕಪ್ಪು)	200	
5	ಫಿನಾಯಿಲ್ ಸುಗಂಧಭರಿತ	200	
6	ಬ್ಲೀಚಿಂಗ್ ಹುಡಿ	100	
7	ಹಾರ್ಪಿಕ್	100	
8	ಡಿಯೋಡ್ರೆಂಟ್ ಕೇಕ್	5	
9	ಜೈವಿಕ ತ್ಯಾಜ್ಯ ನಿರ್ವಹಣೆಗಾಗಿ ಹಾಗೂ ದ್ರವ ತ್ಯಾಜ್ಯ ನೀರು ನಿರ್ವಹಣೆಗಾಗಿ : BACON PRO(SW) (ಪುಡಿ ಅಥವಾ ದ್ರಾವಕ)	10	
10	ಜೈವಿಕ ತ್ಯಾಜ್ಯ ನಿರ್ವಹಣೆಗಾಗಿ ಹಾಗೂ ದ್ರವ ತ್ಯಾಜ್ಯ ನೀರು ನಿರ್ವಹಣೆಗಾಗಿ : BACON PRO(ST) (ಪುಡಿ ಅಥವಾ ದ್ರಾವಕ)	10	
11	ಗೋಣಿ ಚೀಲ (GUNNY BAG)	1500	

ಸಹಿ/- ಅಧ್ಯಕ್ಷರು, ಪಟ್ಟಣ ಪಂಚಾಯತ್ ಕಡಬ — ಸಹಿ/- ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಕಡಬ

ಸೋಮೇಶ್ವರ ಪುರಸಭೆ, ದ.ಕ.

ನಂಬ್ರ: ಸೋ.ಪು.ಸ/ಜೆ.ಇ/ಪುನಿ/ಟೆಂಡರ್/ಸಿಆರ್/03/2025-26 ದಿನಾಂಕ: 10-03-2026

ಟೆಂಡರ್ ಪ್ರಕಟಣೆ

(ಕರ್ನಾಟಕ ಸರಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಸೋಮೇಶ್ವರ ಪುರಸಭೆಯ 2026-27 ನೇ ಸಾಲಿನ ಪುರಸಭಾ ನಿಧಿಯಲ್ಲಿ ಈ ಕೆಳಗಿನ ಕಾಮಗಾರಿಗೆ ಟೆಂಡರನ್ನು ಮುಖ್ಯಾಧಿಕಾರಿ ಸೋಮೇಶ್ವರ ಪುರಸಭೆ, ಇವರಿಂದ ಕರ್ನಾಟಕ ಪಾರದರ್ಶಕ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ 1999 ಮತ್ತು 2000ರ ಅನ್ವಯ ದರಗಳನ್ನು ಅರ್ಹ ಸಿವಿಲ್ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರು ಡಾಕ್ಯುಮೆಂಟ್ KW1 ಪ್ರಕಾರ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರುಗಳ ಸಂಪೂರ್ಣ ವಿವರಗಳನ್ನು ಪುರಸಭೆಯ ವೆಬ್‌ಸೈಟ್ www.someshwaratown.mrc.gov.in ನಲ್ಲಿ www.kppp.karnataka.gov.in ಹಾಗೂ ಸೋಮೇಶ್ವರ ಪುರಸಭೆ ಕಚೇರಿ ನಾಮಫಲಕದಲ್ಲಿ ನೋಡಬಹುದು. ಇನ್ನು ಹೆಚ್ಚಿನ ಮಾಹಿತಿ ಬೇಕಾದ್ದಲ್ಲಿ ಪುರಸಭಾ ಕಚೇರಿಯಲ್ಲಿ ಕಚೇರಿಯ ಸಮಯದಲ್ಲಿ ಪಡೆದುಕೊಳ್ಳಬಹುದು.

ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21-03-2026 ಅಪರಾಹ್ನ 4.00 ಗಂಟೆಗೆ, ಟೆಂಡರುಗಳನ್ನು ತೆರೆಯುವ ದಿನಾಂಕ: 23-03-2026 ಪೂರ್ವಾಹ್ನ 4.30 ಗಂಟೆಗೆ. DMA/2025-26/EL/WORK-INDENT_56025 – 9.95

ಸಹಿ/- ಅಧ್ಯಕ್ಷರು, ಸೋಮೇಶ್ವರ ಪುರಸಭೆ — ಸಹಿ/- ಮುಖ್ಯಾಧಿಕಾರಿ, ಸೋಮೇಶ್ವರ ಪುರಸಭೆ

DIPR/DK/KSMCA/1723/25-26 dt: 10.03.2026

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮಿಪ್ಯಕ್ಕೊಳಪಟ್ಟಿರುತ್ತದೆ.)

ಅಧಿಕ್ಷಕ ಅಭಿಯಂತರರು(ವಿ), ಟೆಂಡರಿಂಗ್ & ಪ್ರೊಕ್ಯುರ್‌ಮೆಂಟ್ ಗೋಪನಕೊಪ್ಪ ಹುಬ್ಬಳ್ಳಿ-23

Phone : 9448277602, mail.ID: seetp.hescom@gmail.com

Corporate Identity Number (CIN): U31401KA2002SGC030437

ಸಂ: ಹುವಿಸಕಂನಿ/ಅಇಂ(ಟಿ&ಪಿ)/ಇ-7/ಎಇಇ-2/2025-26/cys-12158

ದಿನಾಂಕ : 10.03.2026

ಟೆಂಡರ್ ಅಧಿಸೂಚನೆ

ಅಧೀಕ್ಷಕ ಅಭಿಯಂತರರು (ವಿ), (ಟೆಂಡರಿಂಗ್ & ಪ್ರೊಕ್ಯೂರಮೆಂಟ್), ಹುವಿಸಕಂನಿ, ಹುಬ್ಬಳ್ಳಿ, ಇವರು ಈ ಕೆಳಕಂಡ ಸಾಮಗ್ರಿಗಳನ್ನು ತಯಾರಿಸಿ ಪೂರೈಸಲು ಇ.ಪ್ರೊಕ್ಯೂರಮೆಂಟ್ ಕಟ್ಟೆಯಡಿ, ದ್ವಿ-ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ.

ಕ್ರ.ಸಂ.	ವಿವರಗಳು	ವಿಚಾರಣೆ ಸಂಖ್ಯೆ
1	ಹೆಚ್ ಟಿ ಸ್ಥಾವರಗಳಿಗೆ ಬೇಕಾಗಿರುವ ವಿವಿಧ ಅನುಪಾತಗಳುಳ್ಳ 11ಕೆವ್ಹಿ & 33 ಕೆವ್ಹಿ ಸಿಟಿ & ಪಿಟಿ ಗಳನ್ನು ತಯಾರಿಸಿ ವಿತರಿಸುವುದು	HESCOM/2025-26/IND0173.

ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ವೆಬ್‌ಸೈಟ್‌ನ್ನು ದಿನಾಂಕ : 12.03.2026 ಅಥವಾ ನಂತರದಲ್ಲಿ ಸಂಪರ್ಕಿಸಬಹುದು.

ಸಹಿ/- ಅಧೀಕ್ಷಕ ಅಭಿಯಂತರರು(ವಿ),
ಟೆಂಡರ್ & ಪ್ರೊಕ್ಯೂರಮೆಂಟ್, ಹುವಿಸಕಂನಿ, ನವನಗರ ಹುಬ್ಬಳ್ಳಿ.

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/1333/2025-26

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,

ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.

ದೂರವಾಣಿ: 080-22255210

ಸಂ: ಕಾಅ/ಕವಿ.1/ಎಇ-4/2025-26/82 ದಿನಾಂಕ: 07.03.2026

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯು ಕೆಳಕಂಡ ಕಾಮಗಾರಿಗಳಿಗೆ ಅರ್ಹ ಟೆಂಡರ್-ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. **ಕಾಮಗಾರಿ ಹೆಸರು: 1)** ತಿರುಪತಿಯ ತಿರುಚನೂರ್‌ನಲ್ಲಿರುವ ಮೈಸೂರು ಮಹಾರಾಜ ಚೌಲ್ಟ್ರಿಯ ನವೀಕರಣ ಕಾಮಗಾರಿ (ಇತರೆ ವರ್ಗಕ್ಕೆ ಮೀಸಲು) (ಟೆಂಡರ್ ಉಲ್ಲೇಖ: ಪಿಡಬ್ಲ್ಯೂಡಿ/2025-26/ಬಿಡಿ/ವರ್ಕ್-ಇಂಡೆಂಟ್33697) (1ನೇ ಕರೆ). ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.308.14 ಲಕ್ಷಗಳು**. ಇಎಂಡಿ: **ರೂ.4,62,300/-** (ರೂ.1,00,000/- ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ಉಳಿದ ಹಣ ರೂ.3,62,300/-ನ್ನು ಬಿಜಿ, ಎಫ್‌ಡಿಆರ್, ಬ್ಯಾಂಕರ್ಸ್ ಸರ್ಟಿಫಿಕೇಟ್ ಮೂಲಕ ಪಾವತಿಸುವುದು). ಕಾಲಾವಧಿ: **9 ತಿಂಗಳು (ಮಳೆಗಾಲ ಸೇರಿದಂತೆ)**. **2)** ಬೆಂಗಳೂರಿನ ಕುಮಾರ ಕೃಪ ರಸ್ತೆಯಲ್ಲಿರುವ ನೂತನ ಕುಮಾರ ಕೃಪ ಅತಿಥಿಗೃಹದಲ್ಲಿ ಗ್ರೌಟಿಂಗ್, ಕ್ರ್ಯಾಕ್ ಫಿಲ್ಲಿಂಗ್, ವಾಟರ್ ಪ್ರೂಫಿಂಗ್ ಒದಗಿಸುವ ಮೂಲಕ 4ನೇ ಮತ್ತು 7ನೇ ಮಹಡಿಯಲ್ಲಿನ ಟೆರೇಸ್‌ಗಳಿಂದ ಮತ್ತು 4ನೇ ಮಹಡಿಯಲ್ಲಿನ ಎಕ್ಸ್‌ಪಾನ್ಷನ್ ಜಾಯಿಂಟ್‌ಗಳಿಂದ ಸೋರಿಕೆಯನ್ನು ತಡೆಯುವುದು ಮತ್ತು ಇತರ ಸಂಬಂಧಿತ ಕೆಲಸಗಳು (IIA ವರ್ಗಕ್ಕೆ ಮೀಸಲು). (ಟೆಂಡರ್ ಉಲ್ಲೇಖ: ಪಿಡಬ್ಲ್ಯೂಡಿ/2025-26/ಬಿಡಿ/ವರ್ಕ್-ಇಂಡೆಂಟ್30266/ಕರೆ-2) (2ನೇ ಕರೆ). ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.40.70 ಲಕ್ಷಗಳು**. ಇಎಂಡಿ: **ರೂ.40,710/-**. ಕಾಲಾವಧಿ: **2 ತಿಂಗಳು**. ಪ್ರತೀ ಕಾಮಗಾರಿಯ ದಸ್ತಾವೇಜು ಬೆಲೆ: ಇ-ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **16.03.2026, ಸಂಜೆ 4.00 ಗಂಟೆಯೊಳಗೆ**. ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರಗಳು, ಮೀಸಲಾತಿ, ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ ಉನಿ-ಸಿ.ಪಿ/ 6122/ ಕೆಎಸ್‌ಎಂಸಿಎ/ 2025-26

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ

Phone No: 08372-238782 Fax No. 08372-237268

E.Mail : eepwdgad@gmail.com

ನಂ:ಕಾನಿಇಂಗ/ಲೋಇ:ಪಿಬಿ-1 3: ವಿವಿಧ:2025-26/5597 ದಿನಾಂಕ: 10.03.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **1762.65 ಲಕ್ಷ** ಮೊತ್ತದಲ್ಲಿ ಒಟ್ಟು **24** ಕಾಮಗಾರಿಗೆ (ಕನಿಷ್ಠ ಮೊತ್ತ **ರೂ: 10.00 ಲಕ್ಷ** ಹಾಗೂ ಗರಿಷ್ಠ ಮೊತ್ತ **ರೂ: 196.00 ಲಕ್ಷ**) ಕೆಪಿಪಿಪಿ (KPPP) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (KPPP) ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ ಡಬ್ಲ್ಯೂ-1, 2 3 ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http://www.kppp.karnataka.gov.in/** ನಲ್ಲಿ ನೋಡಿಕೊಳ್ಳಬಹುದು.

"Work Indent No:- Part 1- 32772, 32776 ,32785 ,32751, 33839/Call-2

ಮೇಲಿನ ಕಾಮಗಾರಿಯು ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ: 13-03-2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17-03-2026 ಮಧ್ಯಾಹ್ನ 4.00 ಗಂಟೆಯವರೆಗೆ , ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18-03-2026 ಆರ್ಥಿಕ ಬಿಡ್ ತೆರೆಯುವ ದಿನಾಂಕ: 20-03-2026

Work Indent No: Part 2- 32754, 32755- Category-2A, 32757, 32758- Category-2A, 32761, 32771-ST, 32774, 32775, 32759, 32764-SC,

ಮೇಲಿನ ಕಾಮಗಾರಿಗಳ ಟೆಂಡರ್ ವಿವರ ಪ್ರಶ್ನೋತ್ತರ ದಿನಾಂಕ: 16.03.2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18.03.2026 ಮಧ್ಯಾಹ್ನ 4.00 ಗಂಟೆಯ ವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.03.2026. ಆರ್ಥಿಕ ಬಿಡ್ ತೆರೆಯುವ ದಿನಾಂಕ: 23.03.2026.

Work Indent No: Part 3- 29111/Call-2, 22511/Call-2/SC, 33179/ Category-2A, 33340, 33746/Category-2A 33444, 33451, 33035, 33084

ಮೇಲಿನ ಕಾಮಗಾರಿಗಳ ಟೆಂಡರ್ ವಿವರ ಪ್ರಶ್ನೋತ್ತರ ದಿನಾಂಕ: 02.04.2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 04.04.2026 ಮಧ್ಯಾಹ್ನ 4.00 ಗಂಟೆಯ ವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 06.04.2026. ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.04.2026.

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-1 ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರಿದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

ವಾ.ಸಾ.ಇ/ಗದಗ/700/ ದೇಶಪಾಂಡೆಪಬ್ಲಿಸಿಟಿ/2025-26

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಬಂಟ್ವಾಳ ಇವರ ನ್ಯಾಯಾಲಯದಲ್ಲಿ

ಕ್ರಿ.ಎಮ್.ಸಿ ನಂಬ್ರ. 274/2025

ಇವರೊಳಗೆ:-

ಮಜೀದ ಎಂ. ಮತ್ತು ಇತರರು

ಅರ್ಜಿದಾರರು

ಮತ್ತು

ತಹಶೀಲ್ದಾರರು ಬಂಟ್ವಾಳ

ಎದ್ರಿದಾರರು

ನೋಟೀಸು

ಮೇಲೆ ತಿಳಿಸಿದ ಅರ್ಜಿದಾರರು ಮೇಲ್ಕಾಣಿಸಿದ ನ್ಯಾಯಾಲಯದಲ್ಲಿ ನೆಬಿಸ, ಕೋಂ.ಅಬ್ದುಲ್ ರಹಿಮಾನ್, ಮರಕ್ಕಿಣಿ ಮನೆ, ಕೇಪು ಗ್ರಾಮ ಮತ್ತು ಅಡ್ಯನಡ್ಕ ಅಂಚೆ, ಬಂಟ್ವಾಳ ತಾಲೂಕು, ದ.ಕ ಜಿಲ್ಲೆ. ಇವರ ಮರಣ ಪ್ರಮಾಣ ದಾಖಲಾತಿ ಕೋರಿ ಮೇಲಿನಂತೆ ಕೇಸನ್ನು ಸದ್ರಿ ನ್ಯಾಯಾಲಯದಲ್ಲಿ ದಾಖಲಿಸಿದ್ದು,

ಎದ್ರಿದಾರರ ಹಾಜರಾತಿಗಾಗಿ ದಿನಾಂಕ.06/04/2026 ರಂದು ವಾಯಿದೆ ಇರುವುದಾಗಿದೆ. ಸದ್ರಿ ದಿವಸದಂದು ತಾವು ಬೆಳಿಗ್ಗೆ ಗಂಟೆ 11-00ಕ್ಕೆ ಮೇಲೆ ನಮೂದಿಸಿದ ಘನ ನ್ಯಾಯಾಲಯದಲ್ಲಿ ಖುದ್ದಾಗಿ ಯಾ ವಕೀಲರ ಮೂಲಕ ಹಾಜರಾಗಿ ತಮ್ಮ ಆಕ್ಷೇಪವನ್ನು ಸಲ್ಲಿಸುವುದು. ತಪ್ಪಿದಲ್ಲಿ ಸದ್ರಿ ಪ್ರಕರಣವನ್ನು ಕಾನೂನು ಪ್ರಕಾರ ತನಿಖೆ ನಡೆಸಿ ವಿಲೇವಾರಿ ಮಾಡಲಾಗುವುದು.

ಈ ನ್ಯಾಯಾಲಯದ ಮೊಹರು ಮತ್ತು ಸರಿಯಾದ ದಿನಾಂಕ 9-3-2026 ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ

ಸಹಿ/ಶಿರಸ್ತೇದಾರರು
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮುಖ್ಯ ನ್ಯಾಯ ದಂಡಾಧಿಕಾರಿ ಬಂಟ್ವಾಳ

ಸಹಿ/-(ಮೋಹನ್ ಪ್ರಭು.ಕೆ)
ಅರ್ಜಿದಾರರ ಪರ ವಕೀಲರು

ಸ್ಥಳ : ಬಂಟ್ವಾಳ

ಪುತ್ತೂರು ಮಾರುಕಟ್ಟೆ ಧಾರಣೆ

10-03-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 465	ಹಸಿ ಕೊಕ್ಕೋ	80 - 110
ಚೋಲ್ ಅಡಿಕೆ	505 - 530	ಒಣ ಕೊಕ್ಕೋ	300 - 330
ಡಬಲ್ ಚೋಲ್	505 - 530	**ಕಾಳುಮೆಣಸು ಧಾರಣೆ**	
ಹೊಸ ಪಠೋರ	340 - 390	ಕಾಳುಮೆಣಸು	465 - 660
ಹಳೆ ಪಠೋರ	380 - 410	**ರಬ್ಬರ್ ಧಾರಣೆ : ಗ್ರೇಡ್**	
ಹೊಸ ಉಳ್ಳಿ	115 - 295	ಆರ್‌ಎಸ್‌ಎಸ್ 1	211.50
ಹಳೆ ಉಳ್ಳಿ	105 - 295	ಆರ್‌ಎಸ್‌ಎಸ್ 2	197.00
ಹೊಸ ಕೋಕಾ	325 - 345	ಸ್ಕ್ರಾಪ್ 1	131.00
ಹಳೆ ಕೋಕಾ	340 - 360	ಸ್ಕ್ರಾಪ್ 2	130.00
ಹೊಸ ಕರಿಗೋಟು	230 - 260		
ಹಳೆ ಕರಿಗೋಟು	230 - 260		

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.ಕಾನಿಇಂಹಾ/ಪಿಬಿ/ಗುತ್ತಿಗೆ/ಸಿಎಂಐಡಿಪಿ-5054/2025-26/5368 ದಿನಾಂಕ : 05-03-2026

ಇ-ಟೆಂಡರ್ ಪ್ರಕಟಣೆ

ದಿನಾಂಕ : 05-03-2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 29488-2ನೆ ಕರೆ ಮತ್ತು 30731-2ನೆ ಕರೆ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **16-03-2026** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.kppp.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಪಡಿಸಿದ ಗುತ್ತಿಗೆ ದಿನಾಂಕಗಳು ಬದಲಾದಲ್ಲಿ, ಮರು ಗುತ್ತಿಗೆ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/- (ಎನ್.ಎನ್.ಪಾಟೀಲ) ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/790/2025-26

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ, ಬಳ್ಳಾರಿ.

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್-4/6638/2025-26 ದಿನಾಂಕ : 09-03-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿ)ರ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತಿಗೆದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಅಥವಾ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತಿಗೆದಾರರು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ **https://kppp.karnataka.gov.in** ವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಅಥವಾ ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹೀರಾತು ಹೊರಡಿಸಲಾಗುವುದಿಲ್ಲ.

ಕ್ರ ಸಂ	ಕಾಮಗಾರಿಯ ವಿವರ	ಕಾಮಗಾರಿ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
	ಲೆಕ್ಕ ಶೀರ್ಷಿಕೆ : 3054-(ಯೋಜನೇತರ)-ರಾಜ್ಯ ಹೆದ್ದಾರಿಗಳ ನಿರ್ವಹಣೆ ;	
1)	PWD/2025-26/RD/WORK_INDENT34220	100.00
	ಲೆಕ್ಕ ಶೀರ್ಷಿಕೆ : 3054-(ಯೋಜನೇತರ)-ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ :	
2)	PWD/2025-26/RD/WORK_INDENT34357	200.00

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **13-03-2026 ರಂದು 12.00 ಗಂಟೆಯ ವರೆಗೆ.** ಆ)ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **16-03-2026 ರಂದು 16.00 ಗಂಟೆಯ ವರೆಗೆ.** ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **17-03-2026 ರಂದು 16.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು.**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/1110/ಕೆಎಸ್‌ಎಂಸಿಎ/2025-26

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಧಾರವಾಡ.

ದೂರವಾಣಿ ಸಂಖ್ಯೆ. (0836)-2213838 ಇ-ಮೇಲ್: eedharwad@gmail.com

ಸಂಖ್ಯೆ: ಹೆಚ್‌ಡಿಎಂಸಿ/66/07/02/2025-26 ದಿನಾಂಕ: 10-03-2026

ಅಲ್ಪಾವಧಿ/ಪೂರ್ಣಾವಧಿ ಇ-ಟೆಂಡರ್ ಅಧಿಸೂಚನೆ

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000 ರ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಅಹ್ವಾನಿಸಲಾಗಿದ್ದು, PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಪಾಲಿಕೆ ವಾರ್ಡ್ ಸದಸ್ಯರ / ಹಳ್ಳಿಗಳ ಅಭಿವೃದ್ಧಿ / ಪೂಜ್ಯ ಮಹಾಪೌರರ ಮತ್ತು ಉಪ ಮಹಾಪೌರರ / ಮಾನ್ಯ ವಿಧಾನಸಭಾ ಪರಿಷತ್ ಸದಸ್ಯರ / ಎಸ್.ಬಿ.ಎಂ / 15ನೇ ಹಣಕಾಸು / ಎಚ್‌ಡಿಎಂಸಿ / ಎಸ್‌ಸಿಪಿ ಟಿಎಸ್‌ಪಿ ಅನುದಾನ

1) ಇಂಡೆಂಟ್ ನಂ. 49139 / 2.00 ಲಕ್ಷ / ಸಾಮಾನ್ಯ, **2)** ಇಂಡೆಂಟ್ ನಂ. 53896 / 9.93 ಲಕ್ಷ / ಪರಿಶಿಷ್ಟ ಜಾತಿ, **3)** ಇಂಡೆಂಟ್ ನಂ. 54149 / 13.00 ಲಕ್ಷ / ಸಾಮಾನ್ಯ, **4)** ಇಂಡೆಂಟ್ ನಂ. 54105 / 14.00 ಲಕ್ಷ / ಸಾಮಾನ್ಯ, **5)** ಇಂಡೆಂಟ್ ನಂ. 54147 / 2.25 ಲಕ್ಷ / ಪರಿಶಿಷ್ಟ ಜಾತಿ, **6)** ಇಂಡೆಂಟ್ ನಂ. 54612 / 10.00 ಲಕ್ಷ / ಪರಿಶಿಷ್ಟ ಜಾತಿ, **7)** ಇಂಡೆಂಟ್ ನಂ. 54610 / 10.00 ಲಕ್ಷ / ಪ್ರವರ್ಗ-2ಎ, **8)** ಇಂಡೆಂಟ್ ನಂ. 54100 / 20.00 ಲಕ್ಷ / ಪರಿಶಿಷ್ಟ ಪಂಗಡ, **9)** ಇಂಡೆಂಟ್ ನಂ. 54075 / 15.00 ಲಕ್ಷ / ಪ್ರವರ್ಗ-1, **10)** ಇಂಡೆಂಟ್ ನಂ. 54145 / 15.00 ಲಕ್ಷ / ಪ್ರವರ್ಗ-2ಎ, **11)** ಇಂಡೆಂಟ್ ನಂ. 53571 / 25.00 ಲಕ್ಷ / ಸಾಮಾನ್ಯ, **12)** ಇಂಡೆಂಟ್ ನಂ. 53145 / 18.45 ಲಕ್ಷ / ಪ್ರವರ್ಗ-2ಎ, **13)** ಇಂಡೆಂಟ್ ನಂ. 53141 / 7.10 ಲಕ್ಷ / ಪರಿಶಿಷ್ಟ ಜಾತಿ, **14)** ಇಂಡೆಂಟ್ ನಂ. 54159 / 4.05 ಲಕ್ಷ / ಸಾಮಾನ್ಯ, **15)** ಇಂಡೆಂಟ್ ನಂ. 54158 / 5.11 ಲಕ್ಷ / ಸಾಮಾನ್ಯ, **16)** ಇಂಡೆಂಟ್ ನಂ. 54141 / 10.00 ಲಕ್ಷ / ಸಾಮಾನ್ಯ, **17)** ಇಂಡೆಂಟ್ ನಂ. 51287 / 14.10 ಲಕ್ಷ / ಸಾಮಾನ್ಯ, **18)** ಇಂಡೆಂಟ್ ನಂ. 54629 / 7.00 ಲಕ್ಷ / ಪ್ರವರ್ಗ-2ಎ, **19)** ಇಂಡೆಂಟ್ ನಂ. 54630 / 35.00 ಲಕ್ಷ / ಸಾಮಾನ್ಯ, **20)** ಇಂಡೆಂಟ್ ನಂ. 54626 / 4.10 ಲಕ್ಷ / ಪರಿಶಿಷ್ಟ ಪಂಗಡ, **21)** ಇಂಡೆಂಟ್ ನಂ. 52924 / 4.00 ಲಕ್ಷ / ಪ್ರವರ್ಗ-2ಎ, **22)** ಇಂಡೆಂಟ್ ನಂ. 52884 / 5.00 ಲಕ್ಷ / ಸಾಮಾನ್ಯ, 23) ಇಂಡೆಂಟ್ ನಂ. 52330 / 16.00 ಲಕ್ಷ / ಸಾಮಾನ್ಯ, **24)** ಇಂಡೆಂಟ್ ನಂ. 53994 / 32.00 ಲಕ್ಷ / ಸಾಮಾನ್ಯ, **25)** ಇಂಡೆಂಟ್ ನಂ. 53101 / 38.00 ಲಕ್ಷ / ಪ್ರವರ್ಗ-1, **26)** ಇಂಡೆಂಟ್ ನಂ. 53103 / 6.50 ಲಕ್ಷ / ಸಾಮಾನ್ಯ, **27)** ಇಂಡೆಂಟ್ ನಂ. 53075 / 13.00 ಲಕ್ಷ / ಸಾಮಾನ್ಯ, **28)** ಇಂಡೆಂಟ್ ನಂ. 53901 / 25.00 ಲಕ್ಷ / ಸಾಮಾನ್ಯ, **29)** ಇಂಡೆಂಟ್ ನಂ. 54213 / 10.00 ಲಕ್ಷ / ಸಾಮಾನ್ಯ, **30)** ಇಂಡೆಂಟ್ ನಂ. 54088 / 26.60 ಲಕ್ಷ / ಪರಿಶಿಷ್ಟ ಜಾತಿ, **31)** ಇಂಡೆಂಟ್ ನಂ. 53099 / 16.45 ಲಕ್ಷ / ಸಾಮಾನ್ಯ, **32)** ಇಂಡೆಂಟ್ ನಂ. 53113 / 40.00 ಲಕ್ಷ / ಪ್ರವರ್ಗ-2ಎ, **33)** ಇಂಡೆಂಟ್ ನಂ. 49822 / 5.00 ಲಕ್ಷ / ಸಾಮಾನ್ಯ, **34)** ಇಂಡೆಂಟ್ ನಂ. 49066 / 7.27 ಲಕ್ಷ / ಸಾಮಾನ್ಯ, **35)** ಇಂಡೆಂಟ್ ನಂ. 51130 / 15.00 ಲಕ್ಷ / ಸಾಮಾನ್ಯ, **36)** ಇಂಡೆಂಟ್ ನಂ. 51957 / 10.00 ಲಕ್ಷ / ಸಾಮಾನ್ಯ, **37)** ಇಂಡೆಂಟ್ ನಂ. 52551 / 3.00 ಲಕ್ಷ / ಪ್ರವರ್ಗ-2ಎ, **38)** ಇಂಡೆಂಟ್ ನಂ. 52217 / 23.60 ಲಕ್ಷ / ಸಾಮಾನ್ಯ, **39)** ಇಂಡೆಂಟ್ ನಂ. 54391 / 2.20 ಲಕ್ಷ / ಸಾಮಾನ್ಯ, **40)** ಇಂಡೆಂಟ್ ನಂ. 52688 / 20.00 ಲಕ್ಷ / ಪ್ರವರ್ಗ-2ಎ, **41)** ಇಂಡೆಂಟ್ ನಂ. 54161 / 10.00 ಲಕ್ಷ / ಪರಿಶಿಷ್ಟ ಜಾತಿ, **42)** ಇಂಡೆಂಟ್ ನಂ. 55124 / 30.00 ಲಕ್ಷ / ಸಾಮಾನ್ಯ, **43)** ಇಂಡೆಂಟ್ ನಂ. 54745 / 6.00 ಲಕ್ಷ / ಸಾಮಾನ್ಯ, **44)** ಇಂಡೆಂಟ್ ನಂ. 55128 / 10.00 ಲಕ್ಷ / ಸಾಮಾನ್ಯ, **45)** ಇಂಡೆಂಟ್ ನಂ. 56116 / 8.50 ಲಕ್ಷ / ಪರಿಶಿಷ್ಟ ಜಾತಿ, **46)** ಇಂಡೆಂಟ್ ನಂ. 56120 / 7.00 ಲಕ್ಷ / ಪ್ರವರ್ಗ-2ಎ, **47)** ಇಂಡೆಂಟ್ ನಂ. 56117 / 10.00 ಲಕ್ಷ / ಸಾಮಾನ್ಯ, **48)** ಇಂಡೆಂಟ್ ನಂ. 55243 / 47.00 ಲಕ್ಷ / ಸಾಮಾನ್ಯ, **49)** ಇಂಡೆಂಟ್ ನಂ. 56145 / 25.00 ಲಕ್ಷ / ಸಾಮಾನ್ಯ, **50)** ಇಂಡೆಂಟ್ ನಂ. 55242 / 25.00 ಲಕ್ಷ / ಪರಿಶಿಷ್ಟ ಜಾತಿ, **51)** ಇಂಡೆಂಟ್ ನಂ. 56152 / 12.00 ಲಕ್ಷ / ಪ್ರವರ್ಗ-2ಎ, **52)** ಇಂಡೆಂಟ್ ನಂ. 56191 / 8.05 ಲಕ್ಷ / ಸಾಮಾನ್ಯ, **53)** ಇಂಡೆಂಟ್ ನಂ. 56212 / 38.00 ಲಕ್ಷ / ಸಾಮಾನ್ಯ, **54)** ಇಂಡೆಂಟ್ ನಂ. 56203 / 8.05 ಲಕ್ಷ / ಪರಿಶಿಷ್ಟ ಜಾತಿ, **55)** ಇಂಡೆಂಟ್ ನಂ. 52272 / 6.00 ಲಕ್ಷ / ಪರಿಶಿಷ್ಟ ಜಾತಿ, **56)** ಇಂಡೆಂಟ್ ನಂ. 56196 / 190.00 ಲಕ್ಷ / ಸಾಮಾನ್ಯ, **57)** ಇಂಡೆಂಟ್ ನಂ. DMA/2025-26/IND6060 / 40.00 ಲಕ್ಷ / ಸಾಮಾನ್ಯ, **58)** ಇಂಡೆಂಟ್ ನಂ. 30806 / 490.00 ಲಕ್ಷ / ಸಾಮಾನ್ಯ, **59)** ಇಂಡೆಂಟ್ ನಂ. 55926 / 14.56 ಲಕ್ಷ / ಸಾಮಾನ್ಯ, **60)** ಇಂಡೆಂಟ್ ನಂ. 54555 / 150.00 ಲಕ್ಷ / ಸಾಮಾನ್ಯ, **61)** ಇಂಡೆಂಟ್ ನಂ. 56194 / 34.66 ಲಕ್ಷ / ಸಾಮಾನ್ಯ, **62)** ಇಂಡೆಂಟ್ ನಂ. 49114 / 34.00 ಲಕ್ಷ / ಸಾಮಾನ್ಯ, **63)** ಇಂಡೆಂಟ್ ನಂ. 54078 / 45.00 ಲಕ್ಷ / ಸಾಮಾನ್ಯ, **64)** ಇಂಡೆಂಟ್ ನಂ. 42407 / 11.00 ಲಕ್ಷ / ಸಾಮಾನ್ಯ, **65)** ಇಂಡೆಂಟ್ ನಂ. 56235 / 30.27 ಲಕ್ಷ / ಪರಿಶಿಷ್ಟ ಜಾತಿ, **66)** DMA/2025-26/Auction5955

ಒಟ್ಟು 66 ಕಾಮಗಾರಿಗಳು ಮೊತ್ತ ರೂ. 1894.80 ಲಕ್ಷಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು **ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ** ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: **0836-2213838** ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್ ಜಾಲದ ಮೂಲಕ ವೆಬ್‌ಸೈಟ್: **https://www.kppp.karnataka.gov.in** ರಲ್ಲಿ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪ್ರೊಕ್ಯೂರಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರ ಇ-ಪ್ರೊಕ್ಯೂರಮೆಂಟ್‌ನಲ್ಲಿ **ಅ.ನಂ. 1 ರಿಂದ 66 ರವರೆಗೆ ದಿನಾಂಕ: 11-03-2026 ರಿಂದ** ಪಡೆಯಬಹುದಾಗಿದೆ.

ಈ ಮೇಲಿನ ಕಾಮಗಾರಿಗಳಿಗೆ (1 ರಿಂದ 58)

1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **02-04-2026 ರಂದು ಸಂಜೆ 4.00 ಗಂಟೆವರೆಗೆ.**
2) ಟೆಂಡರ್ ತೆರೆಯುವ ದಿನಾಂಕ: **04-04-2026 ರಂದು ಬೆಳಿಗ್ಗೆ 10.30 ಗಂಟೆಗೆ.**
3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **08-04-2026 ರಂದು ಸಂಜೆ 4.30 ಗಂಟೆಗೆ.**

ಈ ಮೇಲಿನ ಕಾಮಗಾರಿಗಳಿಗೆ (59 ರಿಂದ 65 ಕ್ಕೆ)

1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **20-03-2026 ರಂದು ಸಂಜೆ 4.00 ಗಂಟೆವರೆಗೆ.**
2) ಟೆಂಡರ್ ತೆರೆಯುವ ದಿನಾಂಕ: **23-03-2026 ರಂದು ಬೆಳಿಗ್ಗೆ 10.30 ಗಂಟೆಗೆ.**
3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **24-03-2026 ರಂದು ಸಂಜೆ 4.30 ಗಂಟೆಗೆ.**

ಈ ಮೇಲಿನ ಕಾಮಗಾರಿಗಳಿಗೆ (66 ಕ್ಕೆ)

1) ಹರಾಜು ಪ್ರಕ್ರಿಯೆ ದಿನಾಂಕ: **04-04-2026 ರಂದು ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆವರೆಗೆ.**

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡ.

ವಾ.ಸಾ.ಇ/ಧಾರವಾಡ/1335/ಅಡ್ವಟೋರ್/2025-26

ಮಾಣಿ, ಸಜಿಪ ಹೊಸ ಪೊಲೀಸ್ ಠಾಣೆ: ಸರಕಾರಕ್ಕೆ ಗ್ರಾಮಗಳ ಪ್ರಸ್ತಾವನೆ ಸಲ್ಲಿಕೆ

ಬಂಟ್ವಾಳ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಳೆದ ಶುಕ್ರವಾರ ಮಂಡಿಸಿದ ಬಜೆಟಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಒಟ್ಟು 12 ಪೊಲೀಸ್ ಠಾಣೆಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ವಿಧಾನಸಭಾ ಕ್ಷೇತ್ರದ ಸಜಿಪನಡು ಹಾಗೂ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಮಾಣಿಗೆ ಎರಡು ಪ್ರತ್ಯೇಕ ನೂತನ ಪೊಲೀಸ್ ಠಾಣೆಗಳನ್ನು ಘೋಷಿಸಿದ್ದು, ಈ ಎರಡು ನೂತನ ಪೊಲೀಸ್ ಠಾಣೆಗಳ ವ್ಯಾಪ್ತಿಗೊಳಪಡುವ ಗ್ರಾಮಗಳನ್ನು ಜಿಲ್ಲಾ ಪೊಲೀಸ್ ಇಲಾಖೆ ಗುರುತಿಸಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಹೇಗಿದೆ ಠಾಣೆಯ ವ್ಯಾಪ್ತಿ?

ಸಜಿಪನಡು ಪೊಲೀಸ್ ಠಾಣಾ ವ್ಯಾಪ್ತಿಗೆ ಮಂಚಿ, ಇರಾ, ಸಜಿಪ ನಡು, ಸಜಿಪಪಡು, ಚೇಳೂರು, ಬೋಳಂತೂರು, ವೀರಕಂಭ, ಕೊಳ್ನಾಡು, ಸಾಲೆತ್ತೂರು, ಸಜಿಪ ಮೂಡ ಹಾಗೂ ಸಜಿಪ ಮುನ್ನೂರು ವ್ಯಾಪ್ತಿಯನ್ನು ಒಳಗೊಂಡಿದೆ. ಹಾಗೆಯೇ ಮಾಣಿ ಪೊಲೀಸ್ ಠಾಣಾ ವ್ಯಾಪ್ರಿಗೆ ಶಂಭೂರು, ಬರಿಮಾರು, ಕಡೇಶೀವಾಲಯ, ನೆಟ್ಲ ಮಡ್ನೂರು ಅನಂತಾಡಿ, ಇಡ್ಕಿದು, ಮಾಣಿ, ಪೆರಾಜೆ, ಬಾಳ್ತಿಲ, ಗೋಳ್ತಮಜಲು, ಕೊಡಿಪ್ಪಾಡಿ, ಕಬಕ, ಕೆದಿಲ ಗ್ರಾಮವನ್ನು ಒಳಪಡಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಸರಕಾರದಿಂದ ಈ ಪ್ರಸ್ತಾವನೆಗೆ ಗ್ರೀನ್ ಸಿಗ್ನಲ್ ಸಿಕ್ಕಿದ ಬಳಿಕ ಠಾಣೆಗೆ ಸಬ್ ಇನ್ಸ್ ಪೆಕ್ಟರ್ ಸಹಿತ



ಸಿಬ್ಬಂದಿಗಳ ನಿಯೋಜನೆಯಾದಾಕ್ಷಣದಿಂದ ನೂತನ ಪೊಲೀಸ್ ಠಾಣೆ ತಾತ್ಕಲಿಕ ನೆಲೆಯಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯಾಚರಿಸುವ ನಿರೀಕ್ಷೆ ಇದೆ.

ಈ ಠಾಣೆಗೆ 30ಕ್ಕೂ ಹೆಚ್ಚು ಗ್ರಾಮಗಳು!

ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ 30ಕ್ಕೂ ಹೆಚ್ಚು ಗ್ರಾಮಗಳನ್ನು ಹೊಂದಿರುವ ಹಿನ್ನಲೆಯಲ್ಲಿ ಮಾಣಿ ಹಾಗೂ ಸಜೀಪದಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ತೆರೆಯುವ ಬೇಡಿಕೆ ಇಲಾಖೆಯ ಮುಂದಿತ್ತು. ಇದಕ್ಕೆ ಪೂರಕವಾಗಿ ಜಿಲ್ಲಾ ಪೊಲೀಸ್ ಇಲಾಖೆ ಪ್ರಸ್ತಾವವನ್ನು ಸರಕಾರಕ್ಕೆ ಸಲ್ಲಿಸಿತ್ತು. ಮಾಣಿ ಅಕ್ಕಪಕ್ಕದ ಕೆಲಗ್ರಾಮಗಳು ವಿಟ್ಲ ಹಾಗೂ ಉಪ್ಪಿನಂಗಡಿ ಠಾಣಾ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಯಾವುದೇ ಘಟನೆಗಳಾದಾಗ ಪೊಲೀಸರು ಸ್ಥಳಕ್ಕಾಗಮಿಸಲು ಒಂದಷ್ಟು ಹೊತ್ತು ತಗಲುತ್ತದೆ.ಇದರಿಂದಾಗಿ ಕಾನೂನು ಸುವ್ಯವಸ್ಥೆ ಸಹಿತ ಸ್ಥಳೀಯವಾಗಿಯು ತೊಂದರೆಯಾಗುತ್ತಿರುವ ಹಿನ್ನಲೆಯಲ್ಲಿ ಮಾಣಿಯಲ್ಲಿ ಪೂರ್ಣಕಾಲಿಕವಾದ ಪೊಲೀಸ್ ಠಾಣೆ ತೆರೆಯಬೇಕೆಂಬುದು ಸ್ಥಳೀಯರ ಆಗ್ರಹಕ್ಕೆ ಪೂರಕವಾಗಿ ಪ್ರಯತ್ನಗಳು ಸಾಗಿತ್ತು. ಈ ಬಾರಿಯ ಬಜೆಟ್ ನಲ್ಲಿ ಘೋಷಣೆಯಾಗುವ ಮೂಲಕ ಅದೀಗ ಈಡೇರಿದೆ. ಬಂಟ್ವಾಳ ಗ್ರಾಮಾಂತರ, ವಿಟ್ಲ ಹಾಗೂ ಉಪ್ಪಿನಂಗಡಿ ಪೊಲೀಸ್ ಠಾಣಾ ವ್ಯಾಪ್ತಿಯ ಆಯ್ದ ಕೆಲ ಗ್ರಾಮಗಳು ಸೇರಿ ಒಟ್ಟು 13 ಗ್ರಾಮಗಳನ್ನು ಮಾಣಿಯ ಹೊಸ ಠಾಣೆಗೆ ಒಳಪಡಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಕಡಿಮೆಯಾಗಲಿದೆ ಕಾರ್ಯದೊತ್ತಡ

ಅದೇ ರೀತಿ ಉಳ್ಳಾಲ ತಾಲೂಕಿನ ಸಜೀಪನಡು ಪೊಲೀಸ್ ಠಾಣೆಗೆ ಬಂಟ್ವಾಳ ಗ್ರಾಮಾಂತರ ಮತ್ತು ವಿಟ್ಲ ಠಾಣಾ ವ್ಯಾಪ್ತಿಯನ್ನು ಹೊಂದಿದ್ದ 11 ಗ್ರಾಮಗಳನ್ನು ಒಳಪಡಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಮಾಣಿ ಮತ್ತು ಸಜೀಪದಲ್ಲಿ ಪ್ರತ್ಯೇಕ ಎರಡು ಪೊಲೀಸ್ ಠಾಣೆ ತೆರೆಯಲಿರುವುದರಿಂದ ಇನ್ನು ಮುಂದೆ ಬಂಟ್ವಾಳ ಗ್ರಾಮಂತರ,ವಿಟ್ಲ ಠಾಣೆಯ ಸಿಬ್ಬಂದಿಗಳಿಗೆ ಕಾರ್ಯದೊತ್ತಡ ಕೊಂಚ ಕಡಿಮೆಯಾಗಲಿದೆ.

ವೈಯಕ್ತಿಕ ಮಾಹಿತಿ ಬಗ್ಗೆ ಎಚ್ಚರಿಕೆ ಇರಲಿ: ಕುಲಕರ್ಣಿ

ಉಳ್ಳಾಲ: ಇಲ್ಲಿನ ಕೆ.ಎಸ್.ಹೆಗ್ಡೆ ಮೆಡಿಕಲ್ ಅಕಾಡೆಮಿಯಲ್ಲಿ ಮಂಗಳವಾರ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಯಿತು. ವಿದ್ಯಾರ್ಥಿಗಳು, ಉಪನ್ಯಾಸಕರು, ಸಿಬ್ಬಂದಿಗಳ ಉತ್ಸಾಹದ ಪಾಲ್ಗೊಳ್ಳುವಿಕೆಯ ಈ ಕಾರ್ಯಕ್ರಮವನ್ನು ಕ್ಷೇಮದ ಆಂತರಿಕ ಸಮಿತಿ (ಪಿಒಎಸ್ಎಚ್) ಆಯೋಜಿಸಿದ್ದು, ಮಹಿಳಾ ಸಬಲೀಕರಣ ಮತ್ತು ಸುರಕ್ಷತೆ ಕುರಿತಂತೆ ಜಾಗೃತಿ ಮೂಡಿಸಲಾಯಿತು.



ಮುಖ್ಯ ಅತಿಥಿಗಳಾಗಿ ಮಂಗಳೂರು ಪೊಲೀಸ್ ಕಮಿಷನರೇಟ್‌ನ ಸಿಸಿಆರ್‌ಬಿಯ ಅಸಿಸ್ಟೆಂಟ್ ಕಮಿಷನರ್ ಆಫ್ ಪೊಲೀಸ್ ಗೀತಾ ಕುಲಕರ್ಣಿ ಅವರು, ಸೈಬರ್ ಸುರಕ್ಷತೆಯ ಬಗ್ಗೆ ಮಾತನಾಡಿ, ಸಾಮಾಜಿಕ ಮಾಧ್ಯಮ ಮತ್ತು ಡಿಜಿಟಲ್ ಪ್ಲ್ಯಾಟ್‌ಫಾರ್ಮ್‌ಗಳ ದುರ್ಬಳಕೆಯ ಅಪಾಯಗಳ ಕುರಿತಂತೆ ಅರಿವು ಮೂಡಿಸಿದರು. ಸೈಬರ್ ಕಿರುಕುಳ, ಆನ್ ಲೈನ್ ವಂಚನೆ, ಗುರುತು ಕಳವು ಇತ್ಯಾದಿಗಳ ಬಗೆಗೂ ಅವರು ಎಚ್ಚರಿಸಿದ್ದು, ಆನ್‌ಲೈನ್‌ನಲ್ಲಿ ನಿಮ್ಮ ವೈಯಕ್ತಿಕ ಮಾಹಿತಿಗಳ ಸುರಕ್ಷತೆಯ ಬಗ್ಗೆ ಸದಾ ಎಚ್ಚರಿಕೆ ವಹಿಸುವಂತೆ ಸೂಚಿಸಿದರು.

ಸೈಬರ್ ಕ್ರೈಮ್‌ಗಳ ಬಗ್ಗೆ ಸದಾ ಜಾಗೃತರಾಗಿದ್ದು, ವಂಚನೆಯ ಬಗ್ಗೆ ವರದಿ ಮಾಡಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ತಿಳಿಹೇಳಿದರು.

ಈ ಸಂದರ್ಭ ಕೆ.ಎಸ್.ಹೆಗ್ಡೆ ಮೆಡಿಕಲ್ ಅಕಾಡೆಮಿಯ ಡೀನ್ ಡಾ.ಸಂದೀಪ್ ರೈ, ವೈಸ್ ಡೀನ್ ಡಾ.ಸುಕನ್ಯಾ ಶೆಟ್ಟಿ, ಜಸ್ಟೀಸ್ ಕೆ.ಎಸ್. ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಸುಮಲತಾ ಶೆಟ್ಟಿ ಉಪಸ್ಥಿತರಿದ್ದರು. ಸುಮಾರು 300ರಷ್ಟು ಮಂದಿ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಈ ಅರ್ಥಪೂರ್ಣ ಕಾರ್ಯಕ್ರಮದ ಬಗ್ಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು.

ಅನುಪಮಾ ಹೊಳ್ಳಗೆ ಪ್ರಥಮ ರ‍್ಯಾಂಕ್

ಬೈಂದೂರು: ಬೀದರ್‌ನ ಎಚ್.ಕೆ.ಇ ಸೊಸೈಟಿಯ ಬಸವೇಶ್ವರ ಶಿಕ್ಷಣ ಮಹಾ ವಿದ್ಯಾಲಯದ ಪ್ರಥಮ ವರ್ಷದ ವಿದ್ಯಾರ್ಥಿನಿ ಅನುಪಮಾ ಹೊಳ್ಳ ಇವರು ಇಂಗ್ಲೀಷ್, ವಿಜ್ಞಾನ ವಿಭಾಗದ ಬಿ.ಎಡ್ ನಲ್ಲಿ 8.88 ಎಸ್‌ಜಿಪಿಎ ಶ್ರೇಣಿಗಳಿಸಿ ಕಾಲೇಜಿಗೆ ಪ್ರಥಮ ರ‍್ಯಾಂಕ್‌ಗಳಿಸಿದ್ದಾರೆ. ಈ ಯಶಸ್ಸಿನ ಹಿನ್ನೆಲೆಯಲ್ಲಿ ಜಿಲ್ಲೆಯ ಸಾಹಿತಿಗಳು, ಬೌದ್ಧಿಕ ವಲಯದವರು ಹಾಗೂ ಕಾಲೇಜಿನ ಆಡಳಿತ ವರ್ಗದವರು ಅನುಪಮಾ ಹೊಳ್ಳ ಇವರನ್ನು ಅಭಿನಂದಿಸಿದ್ದಾರೆ. ಅನುಪಮ ಹೊಳ್ಳ ಅವರು ರಾಜ್ಯಪ್ರಶಸ್ತಿ ಪುರಸ್ಕೃತ ಸಾಹಿತಿ ವಂಡ್ಸೆ ಗೋಪಾಲಕೃಷ್ಣ ಹೊಳ್ಳ ಹಾಗೂ ಮಾಲಿನಿ ಹೊಳ್ಳ ದಂಪತಿಗಳ ಪುತ್ರಿಯಾಗಿದ್ದು, ಮೂಲತಃ ಉಡುಪಿ ಜಿಲ್ಲೆಯ ಸಾಲಿಗ್ರಾಮದವರು.



ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸ್ತ್ರೀ ಶಕ್ತಿ (ನಂ.SS-510th) ಡ್ರಾ ಮಾರ್ಚ್ 10ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
SC 224420 (KOZHIKKODE)

Cons Prize-Rs: 5000/-
SA 224420 SB 224420 SD 224420 SE 224420
SF 224420 SG 224420 SH 224420 SJ 224420
SK 224420 SL 224420 SM 224420

2nd Prize Rs: 30,00,000/- [30 Lakhs]
SJ 217940 (THIRUVANANTHAPURAM)

3d Prize Rs: 5,00,000/- [5 Lakhs]
SM 707674 (CHERTHALA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0693 0844 1128 1623 2774 3386 3632 3876 4660 4863
6270 6690 6890 7038 8439 8837 9626 9771 9822

5th Prize Rs.2,000/-
3196 7097 7525 7702 8310 8432

6th Prize Rs.1,000/-
0252 0759 1218 1246 1957 2121 2757 2771 2857 2947
3407 3664 4232 4381 4565 4756 5415 5887 6286 7942
8276 9202 9314 9355 9520

7th Prize Rs.500/-
0016 0101 0236 0499 0662 0674 1173 1190 1222 1394 1403 1509
1523 1688 1764 1797 1826 1915 1938 2061 2100 2246 2350 2602
2654 2708 2939 2980 3121 3164 3732 3899 4027 4123 4131 4158
4333 4617 4624 4717 4744 4946 4982 5017 5023 5208 5303 5340
5547 5609 5627 5652 5860 5862 5955 6067 6135 6149 6325 6829
7002 7194 7743 7979 8272 8346 8636 8644 8908 8923 9079 9087
9422 9800 9968 9971

8th Prize Rs.200/-
0014 0035 0125 0778 0813 0873 0944 1107 1182 1262 1514
1614 1843 1870 2065 2130 2157 2267 2391 2617 2670 2686
2916 3021 3180 3351 3542 3616 3932 4016 4069 4106 4129
4144 4250 4310 4350 4382 4390 4445 4470 4542 4671 4801
4984 5125 5160 5195 5246 5275 5450 5552 5561 5785 5809
6249 6379 6389 6396 6521 6557 6773 6883 7013 7149 7158
7338 7345 7372 7391 7659 7672 7674 7745 7775 7825 8203
8441 8459 8480 8565 8600 9093 9126 9405 9482 9526 9594
9744 9745

9th Prize Rs.100/-
0056 0189 0207 0213 0221 0412 0449 0519 0575 0627 0634 0767
0770 0833 0834 0897 1073 1113 1221 1227 1376 1420 1474 1536
1540 1592 1707 1728 1741 1763 1993 2080 2312 2354 2451 2504
2610 2679 2709 3182 3187 3220 3375 3708 4095 4207 4230 4233
4370 4469 4509 4562 4583 4647 4683 4702 4710 4711 4734 4745
4866 5097 5113 5135 5204 5211 5239 5319 5399 5403 5457 5542
5590 5612 5726 5727 5734 5735 5789 5847 5871 5877 5880 5888
5938 5995 6045 6097 6113 6144 6256 6353 6366 6407 6451 6480
6679 6721 6803 6826 6904 6907 7046 7165 7298 7318 7337 7351
7400 7510 7538 7640 7773 7808 7816 7891 7900 7940 8069 8200
8254 8324 8332 8385 8394 8522 8523 8778 8780 8850 8892 8893
8912 8972 8998 9217 9231 9262 9287 9338 9362 9545 9671 9681
9865 9867 9913 9927 9935 9937

ಸುಂಕದಕಟ್ಟೆ ಪ್ರದೇಶದಲ್ಲಿ ತಡರಾತ್ರಿ ಕಾಡಾನೆ ಪ್ರತ್ಯಕ್ಷ

ಕಡಬ: ಕಡಬ ತಾಲೂಕಿನ ಐತ್ತೂರು ಗ್ರಾ.ಪಂ. ವ್ಯಾಪ್ತಿಯ ಸುಂಕದಕಟ್ಟೆ ಪರಿಸರದಲ್ಲಿ ಸೋಮವಾರ ತಡ ರಾತ್ರಿ ಕಾಡಾನೆಯೊಂದು ಕಾಣಿಸಿಕೊಂಡಿದ್ದು, ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

ಕಾಡಿನಿಂದ ಹೊರಟು ರಬ್ಬರ್ ತೋಟದ ಮೂಲಕ ಆನೆ ಸಂಚರಿಸುತ್ತಿರುವುದನ್ನು ಗಮನಿಸಿದ ಸ್ಥಳೀಯರು, ತಮ್ಮ ಮೊಬೈಲ್‌ನಲ್ಲಿ ಆ ದೃಶ್ಯವನ್ನು ಸೆರೆಹಿಡಿದಿದ್ದಾರೆ. ಆ ವಿಡಿಯೋ ಸದ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿದ್ದು, ಸಾರ್ವಜನಿಕರು ಎಚ್ಚರಿಕೆಯಿಂದ ಇರುವಂತೆ ಸಂದೇಶ ರವಾನಿಸಲಾಗಿದೆ. ಐತ್ತೂರು ಭಾಗದಲ್ಲಿ ಕಾಡಾನೆಗಳ ಸಂಚಾರ ಇತ್ತೀಚೆಗೆ ಸಾಮಾನ್ಯವಾಗಿದೆ.

ನೆಟ್ಟಣ ಬೈಲು ಎಂಬಲ್ಲಿ ಕಾಣಿಸಿಕೊಂಡಿತ್ತು

ಕೆಲವು ದಿನಗಳ ಹಿಂದೆ ಐತ್ತೂರು ಗ್ರಾಮದ ನೆಟ್ಟಣ ಬೈಲು ಎಂಬಲ್ಲಿ ಕಾಡಾನೆಯು ಅಡಿಕೆ ತೋಟಕ್ಕೆ ಲಗ್ಗೆಯಿಟ್ಟು ನೂರಾರು ಬಾಳೆಗಿಡಗಳು ಹಾಗೂ ಅಡಿಕೆ ಮರಗಳನ್ನು ನಾಶ ಮಾಡಿ ಅಪಾರ ನಷ್ಟ ಉಂಟು ಮಾಡಿತ್ತು. ಈಗ ಮತ್ತೆ ಸುಂಕದಕಟ್ಟೆ ಪರಿಸರದಲ್ಲಿ ಆನೆ ಕಾಣಿಸಿಕೊಂಡಿರುವುದು ಗ್ರಾಮಸ್ಥರ ನಿದ್ದೆಗೆಡಿಸಿದೆ. ಜನವಸತಿ ಪ್ರದೇಶಗಳಲ್ಲಿ ಕಾಡಾನೆಗಳು ರಾಜಾರೋಷದಿಂದ ಸಂಚರಿಸುತ್ತಿರುವುದರಿಂದ ಕೃಷಿ ತೋಟಗಳಿಗೆ ರೈತರು ತೆರಳಲು ಜನರು ಭಯಪಡುತ್ತಿದ್ದಾರೆ.

ಅರಣ್ಯ ಇಲಾಖೆಯು ಆನೆಗಳ ಚಲನವಲನಗಳ ಮೇಲೆ ನಿಗಾವಹಿಸಿದ್ದರೂ, ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲವಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಅರಣ್ಯ ಇಲಾಖೆ ಕಾರ್ಯಪ್ರವೃತ್ತರಾಗಿ ಕಾಡಾನೆಗಳನ್ನು ಕಾಡಿಗಟ್ಟಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಓಮ್ನಿ ಕಾರು ಚರಂಡಿಗೆ: ವ್ಯಕ್ತಿಗೆ ಗಾಯ

ಕಡಬ: ಉಪ್ಪಿನಂಗಡಿ-ಕಡಬ- ಸುಬ್ರಹ್ಮಣ್ಯ ರಾಜ್ಯಹೆದ್ದಾರಿಯ ಬಲ್ಯ ಸಮೀಪದ ಕುದ್ರಡ್ಕ ಎಂಬಲ್ಲಿ ಆಮ್ನಿ ಕಾರೊಂದು ರಸ್ತೆ ಬದಿಯ ಧರೆಗೆ ಡಿಕ್ಕಿ ಹೊಡೆದು ಪಲ್ಟಿಯಾಗಿ ಚರಂಡಿಗೆ ಬಿದ್ದ ಘಟನೆ ಭಾನುವಾರ ಸಂಜೆ ನಡೆದಿದ್ದು, ಕಾರಿನಲ್ಲಿದ್ದ ವ್ಯಕ್ತಿಗೆ ಗಂಭೀರ ಗಾಯವಾಗಿದೆ. ಕಡಬ ತಾಲೂಕಿನ ಕೊಣಾಜೆ ಗ್ರಾಮದ ಕೊಡಿಯಡ್ಕ ನಿವಾಸಿ ದಯಾನಂದ (43) ಗಾಯಗೊಂಡವರು. ಅವರು ಪತ್ನಿ ಚಿತ್ರಾವತಿ ಅವರೊಂದಿಗೆ ತನ್ನ ತಂಗಿ ಮನೆಯಾದ ಕಾಣಿಯೂರಿಗೆ ಹೋಗಿ ವಾಪಸಗುತ್ತಿದ್ದ ವೇಳೆ ಈ ಘಟನೆ ನಡೆದಿದೆ. ಪತ್ನಿ ಚಿತ್ರಾವತಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಅಪಾಯದಿಂದ ಪಾರಾಗಿದ್ದಾರೆ.

ಹವ್ಯಕ ಭಾಷಾ ಅಕಾಡೆಮಿ ಸ್ಥಾಪನೆ ಸ್ವಾಗತಾರ್ಹ, ಶಿವಳ್ಳಿ, ಕುಂದ ಕನ್ನಡಕ್ಕೂ ಮಾನ್ಯತೆ ಸಿಗಲಿ: ಕಲ್ಕೂರ

ಮಂಗಳೂರು: ಭಾಷಾ ಅಧ್ಯಯನ, ಸಂಶೋಧನೆ ಹಾಗೂ ಅಸ್ತಿತ್ವದ ಮಾನ್ಯತೆಯ ನೆಲೆಯಲ್ಲಿ ಹವ್ಯಕ ಭಾಷಾ ಅಕಾಡೆಮಿಯ ಸ್ಥಾಪನೆಗೆ ಮುಂದಾಗಿರುವ ಕರ್ನಾಟಕ ಸರ್ಕಾರದ ನಿಲುವು ಸ್ವಾಗತಾರ್ಹ ಹೆಜ್ಜೆಯಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ, ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಹಾಗೂ ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಎಸ್.ಪ್ರದೀಪ ಕುಮಾರ ಕಲ್ಕೂರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಕನ್ನಡದ ಛತ್ರದಡಿಯಲ್ಲಿ ಇತರ ಎಲ್ಲಾ ಭಾಷೆಗಳಿಗೂ ಸಮಾನವಾದ ಮಾನ್ಯತೆ ಹಾಗೂ ಪ್ರಾಶಸ್ತ್ಯ ನೀಡುವ ಸರ್ಕಾರದ ಈ ನಿಲುವು ದೇಶದ ಇನ್ನಿತರ ರಾಜ್ಯಗಳಿಗೂ ಮಾದರಿಯಾಗಬಲ್ಲುದು. ಇದೇ ತೆರನಾಗಿ ತುಳು ಶಿವಳ್ಳಿ, ಸ್ಥಾನಿಕ, ಪದಾತಿ ಭಾಷೆ ಮನೆ ಮಾತಾಗಿರುವ ಮಂದಿ ಕನ್ನಡ ಕರಾವಳಿ, ಕಾಸರಗೋಡು ಸೇರಿದಂತೆ ಕೇರಳದಿಂದ ಕನ್ಯಾಕುಮಾರಿಯ ತನಕವಲ್ಲದೆ, ಮುಂಬೈ, ಮದ್ರಾಸ್, ಹೈದರಾಬಾದ್ ಪ್ರದೇಶಗಳಲ್ಲೂ ವ್ಯಾಪಕವಾಗಿ ನೆಲೆಸಿದ್ದು , ಮಾತ್ರವಲ್ಲ ವಿಶ್ವ ವ್ಯಾಪಿಯಾಗಿ ಬದುಕು ಕಟ್ಟಿಕೊಂಡು, ಜೊತೆ ಜೊತೆಗೆ ತುಳು ಭಾಷಾ ಸಹಿತವಾಗಿ ತುಳು ಲಿಪಿಯನ್ನು ಆರಾಧನಾ ನೆಲೆಯಲ್ಲಿ ಬೆಳೆಸುತ್ತಿರುವುದು ಪ್ರಾಜ್ಞರ ಹಾಗೂ ಸಂಶೋಧಕರ ಅಭಿಮತವಾಗಿದೆ.

ಕರಾವಳಿಯ ಇನ್ನೊಂದು ಭಾಷೆ ಕುಂದ ಕನ್ನಡಕ್ಕೂ ಅಕಾಡೆಮಿಯ ಮಾನ್ಯತೆಯು ಲಭಿಸಬೇಕಾಗಿದೆ. ತುಳು ಶಿವಳ್ಳಿ ಹಾಗೂ ಕುಂದ ಕನ್ನಡದ ನೂರಾರು ಮಂದಿ ಸಾಧಕರು ನಾಡಿನ ಹೆಮ್ಮೆಯೆನಿಸಿರುವರು. ಯತಿ ಶ್ರೇಷ್ಠರೆನಿಸಿದ ಆಚಾರ್ಯ ಮಧ್ವರು, ವಾದಿರಾಜರಲ್ಲದೆ ಪೇಜಾವರ ವಿಶ್ವೇಶತೀರ್ಥ ಶ್ರೀಪಾದರು, ಎಡನೀರು ಮಠಾಧೀಶ ಶ್ರೀ ಕೇಶವಾನಂದ ಭಾರತೀ ಸ್ವಾಮೀಜಿ ಅವರಲ್ಲದೆ, ವಿದ್ಯಾ ವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ, ಪಾದೂರು ಗುರುರಾಜ ಭಟ್, ಕೆ.ಕೆ. ಹೆಬ್ಬಾರ್, ಕು.ಶಿ. ಹರಿದಾಸ ಭಟ್, ಕೋಟ ಶಿವರಾಮ ಕಾರಂತ, ಕವಿ ಗೋಪಾಲಕೃಷ್ಣ ಅಡಿಗ, ಉಡುಪಿ ರಾಮಚಂದ್ರ ರಾವ್, ವಿಜ್ಞಾನಿ ಯು.ಆರ್. ರಾವ್, ಕಡಂದಲೆ ಕೃಷ್ಣ ಭಟ್, ಡಾ. ವಿ.ಎಸ್ ಆಚಾರ್ಯ ಹೀಗೆ ನೂರಾರು ಮಂದಿ ಮಹಾನ್ ಸಾಧಕರ ಕೊಡುಗೆ ಕನ್ನಡ ನಾಡಿಗೆ ಪ್ರಾಪ್ತವಾಗಿದೆ.

ಈ ದಿಸೆಯಲ್ಲಿ ಕರ್ನಾಟಕ ಘನ ಸರಕಾರವು ಚಿಂತಿಸಿ ಹವ್ಯಕ ಭಾಷಾ ಅಕಾಡೆಮಿ ಸ್ಥಾಪಿಸುವ ರೀತಿಯಲ್ಲೇ ಪ್ರಾಚೀನ ತುಳು ಶಿವಳ್ಳಿ ಭಾಷೆ ಹಾಗೂ ಕುಂದ ಕನ್ನಡ ಭಾಷೆಗೂ ಮಾನ್ಯತೆಯನ್ನು ನೀಡುವ ಮೂಲಕ ಪ್ರತ್ಯೇಕ ಅಕಾಡೆಮಿಯನ್ನು ಸ್ಥಾಪಿಸುವುದರೊಂದಿಗೆ, ತುಳು ಭಾಷೆಯನ್ನು ರಾಜ್ಯದ ಅಧಿಕೃತ ಭಾಷೆಯಾಗಿ ಮಾನ್ಯ ಮಾಡಬೇಕೆಂದು ಕಲ್ಕೂರ ಮನವಿ ಮಾಡಿಕೊಂಡಿರುವರಲ್ಲದೆ,

ಹವ್ಯಕ ಭಾಷಾ ಅಕಾಡೆಮಿ ಸ್ಥಾಪಿಸುವ ನೆಲೆಯಲ್ಲಿ ಕರ್ನಾಟಕ ಸರ್ಕಾರವನ್ನು ಹಾಗೂ ಮುಖ್ಯಮಂತ್ರಿಗಳನ್ನು ಅಭಿನಂದಿಸಿದ್ದಾರೆ.

ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿಯಾದ ಕಾರು: ಪ್ರಯಾಣಿಕರು ಪವಾಡಸದೃಶ ಪಾರು

ಬೆಳ್ತಂಗಡಿ: ಮಂಗಳೂರು-ವಿಲ್ಲು ಪುರಂ ರಾಷ್ಟ್ರೀಯ ಹೆದ್ದಾರಿಯ ಮುಂಡಾಜೆ ಗ್ರಾಮದ ಕಾವು ಎಂಬಲ್ಲಿ ಕಾರೊಂದು ವಿದ್ಯುತ್ ಕಂಬಕ್ಕೆ ಬಡಿದು ಕಂಬ ತುಂಡಾಗಿ, ಕಾರು ಮಗುಚಿ ಬಿದ್ದ ಘಟನೆ ನಡೆದಿದೆ.

ತಿಪಟೂರಿನಿಂದ ಉಜಿರೆ ಕಡೆ ಸಂಚರಿಸುತ್ತಿದ್ದ ಕಾರು ಮಂಗಳವಾರ ಮುಂಜಾನೆ 4 ಗಂಟೆ ಸುಮಾರಿಗೆ ರಸ್ತೆಯ ತೀರಾ ಬಲಬದಿಗೆ ಚಲಿಸಿ ವಿದ್ಯುತ್ ಕಂಬಕ್ಕೆ ಬಡಿದು ವಿದ್ಯುತ್ ಕಂಬ ತುಂಡಾದ ಕಾರಣ ಕಕ್ಕಿಂಜೆ ವಿದ್ಯುತ್ ಸಬ್ ಸ್ಟೇಷನ್‌ನ ಮುಂಡಾಜೆ ಹಾಗೂ ದಿಡುಪೆ ಫೀಡರ್‌ನ ಸಾವಿರಾರು ಗ್ರಾಹಕರಿಗೆ ಮಧ್ಯಾಹ್ನ 2 ಗಂಟೆ ತನಕವು ವಿದ್ಯುತ್ ವ್ಯತ್ಯಯ ಉಂಟಾಯಿತು. ಘಟನೆಯಲ್ಲಿ ಕಾರು ಮಗುಚಿ ಬಿದ್ದು ಕಾರಿನಲ್ಲಿ ಪ್ರಯಾಣಿಸುತ್ತಿದ್ದ ತಿಪಟೂರು ಮೂಲದ ಶ್ರೀನಿವಾಸ (53) ಹಾಗೂ



ಷಣ್ಮುಖ (46) ಎಂಬವರು ಸಣ್ಣಪುಟ್ಟ ಗಾಯಗಳಿಂದ ಅಪಾಯದಿಂದ ಪಾರಾಗಿದ್ದು ಕಕ್ಕಿಂಜೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಯುವಕ ನಾಪತ್ತೆ: ಪತ್ತೆಗೆ ಮನವಿ

ಮಂಗಳೂರು: ಎಂದಿನಂತೆ ಕೆಲಸಕ್ಕೆ ತೆರಳಿದ್ದ ಯುವಕೊಬ್ಬ ಮರಳಿ ಮನೆಗೆ ಬಾರದೆ ನಾಪತ್ತೆಯಾದ ಕುರಿತು ಕೊಣಾಜೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಉಳ್ಳಾಲ ತಾಲೂಕಿನ ಕೊಣಾಜೆ ಗ್ರಾಮ ಪಂ ಚಾಯತ್ ವ್ಯಾಪ್ತಿಯ ಮುಚ್ಚಿಲಕೋಡಿ ನಿವಾಸಿ ವಿವೇಕ್ ಶೆಟ್ಟಿಗಾರ್ (32) ನಾಪತ್ತೆಯಾದವರು. ಇವರು ಮಾ.9ರಂದು ಬೆಳಗ್ಗೆ ಮನೆಯಿಂದ ತೆರಳಿದವರು ಕಾಣೆಯಾಗಿದ್ದಾರೆ. ನಾಪತ್ತೆಯಾದ ಯುವಕನ ಗುರುತು ಪತ್ತೆಯಾದಲ್ಲಿ ಕೊಣಾಜೆ ಪೊಲೀಸ್ ಠಾಣೆ 0824-2220536, 9480802350 ಸಂಖ್ಯೆಗೆ ಮಾಹಿತಿ ನೀಡುವಂತೆ ಪೊಲೀಸರು ಮನವಿ ಮಾಡಿದ್ದಾರೆ.

ಚಿನ್ನಾಭರಣ ಕಳವು

ಬಂಟ್ವಾಳ: ಬಿ.ಸಿ.ರೋಡಿನ ಕೈಕುಂಜೆ ಎಂಬಲ್ಲಿ ಮನೆಯೊಂದರಿಂದ ಭಾನುವಾರ ಮಧ್ಯರಾತ್ರಿ ಅವಧಿಯಲ್ಲಿ ಚಿನ್ನಾಭರಣ ಕಳವುಗೈದ ಘಟನೆ ಬೆಳಕಿಗೆ ಬಂದಿದ್ದು, ಈ ಬಗ್ಗೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಳ್ಳರು ಮಧ್ಯರಾತ್ರಿಯಿಂದ ಬೆಳಗಿನ ಅವಧಿಯಲ್ಲಿ ಹಿಂಬದಿ ಬಾಗಿಲನ ಚಿಲಕವನ್ನು ಯಾವುದೋ ಸಾಧನದಿಂದ ಮುರಿದು ಮನೆಯ ಒಳಪ್ರವೇಶಿಸಿ ಚಿನ್ನಾಭರಣಗಳನ್ನು ಕಳವುಗೈದಿದ್ದು, ಒಟ್ಟು ಚಿನ್ನ 61 ಗ್ರಾಂ ಕಳವಾಗಿದೆ. ಇದರ ಒಟ್ಟು ಅಂದಾಜು ಮೌಲ್ಯ 7,00,000 ಆಗ ಬಹುದೆಂದು ಅನಿಷಾ ಎಂಬವರು ನೀಡಿದ ದೂರಿನಂತೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಮಾದಕ ವಸ್ತು ಗಾಂಜಾ ಸಾಗಾಟ, ಮಾರಾಟ ಪ್ರಕರಣ

ಮಾ.16ರಂದು ಶಿಕ್ಷೆಯ ಪ್ರಮಾಣ ಪ್ರಕಟ

ಮಂಗಳೂರು: ಮಾದಕ ವಸ್ತು ಗಾಂಜಾ ಸಾಗಾಟ ಮತ್ತು ಮಾರಾಟ ಪ್ರಕರಣವೊಂದರ ಅಂತಿಮ ತೀರ್ಪು ಮಾ.16ರಂದು ಹೊರಬೀಳಲಿದೆ.

ಆರೋಪಿ ಮಂಗಳೂರಿನ ಬಂದರು ನಿವಾಸಿ ಟಿ.ಪಿ. ಫಾರೂಕ್ (56) ಎಂಬಾತನ ವಿರುದ್ಧ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಮಾದಕ ವಸ್ತು ಸಾಗಾಟದ ಅಪರಾಧ ಸಾಬೀತಾಗಿದ್ದು, ಶಿಕ್ಷೆಯ ಮೇಲೆ ವಾದ ಆಲಿಸಲು ಪ್ರಕರಣವನ್ನು ಮಾ.16ಕ್ಕೆ ನಿಗದಿ ಪಡಿಸಲಾಗಿದೆ.

ಫಾರೂಕ್ ಹಾಗೂ ನೇಪಾಳದ ರಾಜಪುರ ವಿಡಿಸಿ, ದಾಂಗ್ ಝೋನ್ ನಿವಾಸಿ ಸಾಗರ್ ಸಿಂಗ್ (28) ಎಂಬವರು 2020ರ ನ.10ರಂದು ಕಾರಿನಲ್ಲಿ ಮಂಗಳೂರಿನಿಂದ ಮೆಲ್ಕಾರ್ ಗೆ ತೆರಳಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿಯಂತೆ ಸಂಜೆ 6.20ರ ವೇಳೆಗೆ ಬಂಟ್ವಾಳ ನಗರ ಠಾಣೆ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದ್ದರು. ವಿಚಾರಣೆ ವೇಳೆ ಟಿ.ಪಿ. ಫಾರೂಕ್ ಕಾರಿನ ಡಿಕ್ಕಿಯಿಂದ 1 ಕೆ.ಜಿ. 375 ಗ್ರಾಂ. ತೂಕದ ಗಾಂಜಾ ವಶಪಡಿಸಿಕೊಳ್ಳಲಾಗಿತ್ತು. ಆರೋಪಿಗಳನ್ನು ಅಂಗಶೋಧನೆಗೆ ಒಳಪಡಿಸಿದಾಗ ಟಿ.ಪಿ. ಫಾರೂಕ್‌ನ ಬಳಿ ಮಾದಕ ವಸ್ತುಗಳು ಪತ್ತೆಯಾಗಿದ್ದವು.

ಬಂಟ್ವಾಳ ನಗರ ಠಾಣೆಯಲ್ಲಿ ಎನ್ ಡಿಪಿ ಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು. ಆಗಿನ ಬಂಟ್ವಾಳ ಪೊಲೀಸ್ ವೃತ್ತ ನಿರೀಕ್ಷಕ ಟಿ.ಡಿ. ನಾಗರಾಜ್ ಅವರು ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಸವರಾಜ್ ಅವರು ಟಿ.ಪಿ.ಫಾರೂಕ್ ನನ್ನು ಎನ್ ಡಿಪಿ ಎಸ್ ಕಾಯ್ದೆಯ ಕಲಂ 8(ಸಿ), 20(ಬಿ)(2)(ಬಿ) ಅಡಿ ದೋಷಿ ಎಂದು ಮಾ.9ರಂದು ತೀರ್ಪು ನೀಡಿದ್ದಾರೆ. ಮಾ.16ರಂದು ಶಿಕ್ಷೆಯ ಮೇಲೆ ವಾದ ಆಲಿಕೆ ನಡೆಯಲಿದೆ.

ಜಾಮೀನಿನಲ್ಲಿದ್ದ ಫಾರೂಕ್ ನನ್ನು ನ್ಯಾಯಾಂಗ ವಶಕ್ಕೆ ಪಡೆಯಲಾಗಿದ್ದು, ಗರಿಷ್ಠ 10 ವರ್ಷಗಳ ವರೆಗೆ ಶಿಕ್ಷೆಯಾಗುವ ಸಾಧ್ಯತೆಯಿದೆ ಎಂದು ಸರ್ಕಾರಿ ಅಭಿಯೋಜಕಿ ತಿಳಿಸಿದ್ದಾರೆ.

ಟಿ.ಪಿ.ಫಾರೂಕ್ ವಿರುದ್ಧ ಇನ್ನೊಂದು ಗಾಂಜಾ ಪ್ರಕರಣ ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. 2023 ಫೆ.5ರಂದು ಈ ಪ್ರಕರಣ ದಾಖಲಾಗಿದ್ದು, ಪ್ರಸ್ತುತ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ.

ಬಸ್‌ನಿಂದ ಬ್ಯಾಗ್ ಕಳವು ಪ್ರಕರಣ ಬೇಧಿಸಿದ ಪೊಲೀಸರು: ಆರೋಪಿ ಸೆರೆ

ಬಂಟ್ವಾಳ: ಕಲ್ಲಡ್ಕ ಸಮೀಪ ಕುದ್ರೆಬೆಟ್ಟು ಎಂಬಲ್ಲಿ ಹೋಟೆಲ್ ಒಂದರ ಬಳಿ ಉಪಾಹಾರ ಸೇವನೆಗೆಂದು ಬಸ್ ಅನ್ನು ನಿಲ್ಲಿಸಿದ್ದ ವೇಳೆ ಪ್ರಯಾಣಿಕರು ಯಾರೂ ಇಲ್ಲದಿದ್ದಾಗ ಚಿನ್ನಾಭರಣವಿದ್ದ ಬ್ಯಾಗನ್ನೇ ಎತ್ತಿಕೊಂಡು ಹೋಗಿದ್ದ ಪ್ರಕರಣವನ್ನು ಬೇಧಿಸುವಲ್ಲಿ ಬಂಟ್ವಾಳ ನಗರ ಪೊಲೀಸರು ಯಶಸ್ವಿಯಾಗಿದ್ದು, ಈ ಸಂಬಂಧ ಆರೋಪಿಯನ್ನು ಬಂಧಿಸಿದ್ದಾರೆ.

ಮಧ್ಯಪ್ರದೇಶದ ರಾಜ್ಯದ ಧಾರಾ ಜಿಲ್ಲೆಯ ಸಮದ್ ಖಾನ್ (37) ಬಂಧಿತ ಆರೋಪಿಯಾಗಿದ್ದಾನೆ. ಈತನಿಂದ ಸುಮಾರು 20 ಲಕ್ಷ ರೂಪಾಯಿ ಮೌಲ್ಯದ 174 ಗ್ರಾಂ. ಚಿನ್ನಾಭರಣವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

2025 ರ ನವೆಂಬರ್ 19 ರಂದು ಬ್ರಹ್ಮಾವರ ತಾಲೂಕಿನ ಚೆರ್ಕಾಡಿಗ್ರಾಮದ ಸೂರೆಬೆಟ್ಟು ಸಿದ್ದಿವಿನಾಯಕ ದೇವಸ್ಥಾನದ ಬಳಿಯ ನಿವಾಸಿ ವಾಸುದೇವ ಸೂರ್ಯ ದಂಪತಿ ಸಂಬಂಧಿಕರ ಮದುವೆ ಕಾರ್ಯಕ್ರಮದ ನಿಮಿತ್ತ ಬ್ರಹ್ಮಾವರದಿಂದ ಬೆಂಗಳೂರಿಗೆ ಖಾಸಗಿ ಬಸ್ಸೊಂದರಲ್ಲಿ ಪ್ರಯಾಣಿಸುತ್ತಿದ್ದರು. ಕಲ್ಲಡ್ಕದ ಕುದ್ರೆಬೆಟ್ಟು ಬಳಿಯ ಹೊಟೇಲೊಂದರ ಬಳಿ ಉಪಾಹಾರಕ್ಕೆ ಬಸ್ ನಿಂತಿದ್ದಾಗ ದಂಪತಿ ಶೌಚಾಲಯಕ್ಕೆ ಹೋಗಿ ವಾಪಸ್ ಬರುವಷ್ಟರಲ್ಲಿ ಸೀಟ್‌ನಲ್ಲಿರಿಸಲಾಗಿದ್ದ ವ್ಯಾನಿಟಿ ಬ್ಯಾಗ್‌ನಿಂದ ಸುಮಾರು 170 ರಿಂದ 180 ಗ್ರಾಂ ಚಿನ್ನಾಭರಣವನ್ನು ಎಗರಿಸಿ, ಪರ್ಸ್‌ನ್ನು ಅಲ್ಲೇ ಬಿಸಾಡಿ ಆರೋಪಿ ಪರಾರಿಯಾಗಿದ್ದ. ಈಬಗ್ಗೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಬಂಟ್ವಾಳ ಉಪವಿಭಾಗದ ಡಿವೈಎಸ್ಪಿ ಯಶ್‌ಕುಮಾರ್ ಶರ್ಮಾ ಅವರ ನಿರ್ದೇಶನದಂತೆ ಬಂಟ್ವಾಳ ನಗರ ಠಾಣಾ ಇನ್ಸ್‌ಪೆಕ್ಟರ್ ಅನಂತ ಪದ್ಮನಾಭ ಅವರ ನೇತೃತ್ವದಲ್ಲಿ ಎಸ್‌ಐ ಸಂದೀಪ್ ಕುಮಾರ್ ಶೆಟ್ಟಿ ಮತ್ತವರ ಸಿಬ್ಬಂದಿಗಳು ಆರೋಪಿಯ ಸುಳಿವು ಪತ್ತೆಹಚ್ಚಿ ಬಂದಿಸುವ ಮೂಲಕ ಚಿನ್ನಾಭರಣವನ್ನು ವಶಪಡಿಸುವಲ್ಲಿ ಸಫಲರಾಗಿದ್ದಾರೆ. ಬಂಧಿತ ಆರೋಪಿಯನ್ನು ಬಂಟ್ವಾಳ ನ್ಯಾಯಲಯಕ್ಕೆ ಹಾಜರುಪಡಿಸಲಾಗಿದೆ.



ಪುಂಜಾಲಕಟ್ಟೆಯಿಂದ ಚಾರ್ಮಾಡಿ ತನಕ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಪ್ರಗತಿಯಲ್ಲಿದೆ. ಬೆಳ್ತಂಗಡಿ ಸೇತುವೆ ಬಳಿ ಹೆದ್ದಾರಿ ವಿಸ್ತರಣಾ ಕಾರ್ಯದ ಸಂದರ್ಭ ಕಟ್ಟಡವೊಂದು ಧರಾಶಾಯಿಯಾಗಲು ಸಿದ್ಧವಾಗಿರುವುದು.

ಕಿರುಸುದ್ದಿ

ಮಾ.14: ಪ್ರಚಂಡ ಲಂಕೇಶ್ವರ' ಬಯಲಾಟ

ಮಂಗಳೂರು: ರಂಗಸ್ಥಳ ಮಂಗಳೂರು ಇದರ 11ನೇ ವರ್ಷದ ವಾರ್ಷಿಕೋತ್ಸವ ಪ್ರಯುಕ್ತ ಶ್ರೀ ಅನಂತ ಪದ್ಮನಾಭ ಯಕ್ಷಗಾನ ಮಂಡಳಿ ಪೆರ್ಡೂರು ಮೇಳದ 'ಪ್ರಚಂಡ ಲಂಕೇಶ್ವರ' ಯಕ್ಷಗಾನ ಬಯಲಾಟ ಮಾ. 14ರಂದು ಸಂಜೆ 7ರಿಂದ ನಗರದ ಶ್ರೀ ಕ್ಷೇತ್ರ ಕದ್ರಿಯ ರಾಜಾಂಗಣದಲ್ಲಿ ನಡೆಯಲಿದೆ.ಪುರಾಣಗಳ ಸಾರವನ್ನು ಯುವ ಪೀಳಿಗೆಗೆ ತಲುಪಿಸುವ ನಿಟ್ಟಿನಲ್ಲಿ ಯಕ್ಷಗಾನ ಆಯೋಜಿಸಲಾಗಿದೆ. ರಾವಣನ ಜನನದಿಂದ ರಾವಣ ವಧೆಯವರೆಗಿನ ಸಮಗ್ರ ರಾವಣನ ಕಥೆಯನ್ನೊಳಗೊಂಡ ಪ್ರದರ್ಶನ ಇದಾಗಿದೆ. ಭಾಗವತರಾಗಿ ರಾಘವೇಂದ್ರ ಆಚಾರ್ಯ ಜನ್ಸಾಲೆ, ಪ್ರಸನ್ನ ಭಟ್ ಬಾಳ್ಕಲ್, ಸಂಗೀತದಲ್ಲಿ ಸತೀಶ್ ಪಟಗಾರ ಬ್ರಹ್ಮೂರು, ಮದ್ದಳೆಯಲ್ಲಿ ಶಶಾಂಕ ಆಚಾರ್ಯ ಕಿರಿಮಂಜೇಶ್ವರ ಹಾಗೂ ಅನಿರುದ್ಧ ಹೆಗಡೆ ವರ್ಗಾಸರ, ಚೆಂಡೆಯಲ್ಲಿ ಪ್ರಜ್ವಲ್ ಮುಂಡಾಡಿ ಮತ್ತು ನಯನ್ ಕುಮಾರ್ ನಿಟ್ಟೂರು, ಹಾಸ್ಯ ಪಾತ್ರದಲ್ಲಿ ರವೀಂದ್ರ ದೇವಾಡಿಗ ಕಮಲಶಿಲೆ ಮತ್ತು ಪುರಂದರ ಮೂಡ್ಕಣಿ ಸಹಕರಿಸಲಿದ್ದಾರೆ ಎಂದು ರಂಗಸ್ಥಳ ಮಂಗಳೂರು ಅಧ್ಯಕ್ಷ ದಿನೇಶ್ ಪೈ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ತೆಂಕಿನ ನೆಲದಲ್ಲಿ ಬಡಗಿನ ಆಟ, ತೆಂಕಿನ ಕೂಟ ಹಾಗೂ ತೆಂಕುಬಡಗಿನ ಕೂಟವನ್ನು ಆಡಿಸಿ ಮೆಚ್ಚುಗೆಗೆ ಪಾತ್ರವಾಗಿದ್ದೇವೆ. ಮಂಗಳೂರನ್ನು ಕೇಂದ್ರವಾಗಿರಿಸಿಕೊಂಡು, ಮೂಡುಬಿದಿರೆ, ಬ್ರಹ್ಮಾವರ, ಸಾಸ್ತಾನಗಳಲ್ಲಿ ಯಕ್ಷಗಾನ ಆಟ ಕೂಟಗಳನ್ನು ಏರ್ಪಡಿಸಲಾಗಿದೆ ಎಂದರು. ಯಕ್ಷಗಾನಕ್ಕೆ ಕಾಲಮಿತಿ ಮಾಡಿರುವ ಕಾರಣದಿಂದ ವೀಕ್ಷಕರ ಸಂಖ್ಯೆ ಹೆಚ್ಚಳವಾಗಿದೆ. ಪ್ರದರ್ಶನದ ಕೊನೆಯವರೆಗೂ ಪ್ರೇಕ್ಷಕರು ಉಪಸ್ಥಿತರಿದ್ದು ಬೆಂಬಲಿಸುತ್ತಾರೆ. ಕೆಲವೊಂದು ಕಡೆಗಳಲ್ಲಿ ಯಕ್ಷಗಾನ ಇತಿಮಿತಿ ಮೀರುತ್ತಿರುವುದು ವಿಷಾದನೀಯ ಎಂದು ಅವರು ಹೇಳಿದರು. ರಂಗಸ್ಥಳ ಮಂಗಳೂರು ಸಂಸ್ಥಾಪಕ ಸದಸ್ಯ ಎಸ್.ಎಲ್. ನಾಯಕ್, ಖಜಾಂಚಿ ಎ.ಎಸ್. ಭಟ್ ಇದ್ದರು.

ದಕ್ಷಿಣ ಭಾರತ ವಿಭಾಗದ ಆಫ್ ರೋಡ್ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದ ಜಾಕ್ ಅನಿಲ್



ಪುತ್ತೂರು: ಉಪ್ಪಿನಂಗಡಿಯ ಇಳಂತಿಲದಲ್ಲಿ ಎರಡು ದಿನಗಳ ಕಾಲ ನಡೆದ ಆಫ್ ರೋಡ್ ಜೀಪ್ ವಿಭಾಗದ ಸ್ಪರ್ಧೆಯಲ್ಲಿ ಹವ್ಯಾಸಿ ಆಫ್ ರೋಡ್ ಡ್ರೈವರ್ ಜಾಕ್ ಅನಿಲ್ ಪ್ರಥಮ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ. ಮಾ.7ರಂದು ನಡೆದ ದಕ್ಷಿಣ ಭಾರತ ಮಟ್ಟದ ಈ ರೇಸ್ ನಲ್ಲಿ ತನ್ನ ಅದ್ಭುತ ಚಾಲನಾ ಸಾಮರ್ಥ್ಯವನ್ನು ಪ್ರದರ್ಶಿಸುವ ಮೂಲಕ ಜಾಕ್ ಅನಿಲ್ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜೀಪ್, ಥಾರ್, ಜಿಮ್ನಿ, ಜಿಪ್ಸಿ ಮತ್ತು ಮೋಡಿಫೈಡ್ ಎಂಬ ಐದು ವಿಭಾಗದಲ್ಲಿ ನಡೆದ ಪ್ರತ್ಯೇಕ ಸ್ಪರ್ಧೆಯಲ್ಲಿ ಜಾಕ್ ಅನಿಲ್ ಅವರು ಥಾರ್ ಜೀಪ್ ವಿಭಾಗದಲ್ಲಿ ಸ್ಪರ್ಧೆಗೆ ಇಳಿದಿದ್ದರು. ಕೇರಳ ಹಾಗೂ ಕರ್ನಾಟಕದ ಬೆಂಗಳೂರು, ಕೊಡಗು, ಚಿಕ್ಕಮಗಳೂರು ಸೇರಿದಂತೆ ನೂರಕ್ಕೂ ಮಿಕ್ಕಿದ ಆಫ್ ರೋಡ್ ಸವಾರರು ಎರಡು ದಿನಗಳ ಕಾಲ ನಡೆದ ಈ ಸ್ಪರ್ಧೆಯಲ್ಲಿ ಭಾಗಿಯಾಗಿದ್ದರು. ವಿವಿಧ ತಳಿಗಳ ಹಲಸಿನ ಗಿಡಗಳನ್ನು ಕಸಿ ಮಾಡಿ ಸಂರಕ್ಷಿಸಿ ಮಾರಾಟ ಮಾಡುವ ಕಾಯಕದಲ್ಲಿ ತೊಡಗಿರುವ ಜಾಕ್ ಅನಿಲ್ ತಮ್ಮ ಬಿಡುವಿನ ಸಮಯದಲ್ಲಿ ರೇಸ್‌ಗೆ ಹೋಗುತ್ತಾರೆ. ಕರ್ನಾಟಕ-ಕೇರಳ ಭಾಗದಲ್ಲಿ ನಡೆಯುವ ಆಫ್ ರೋಡ್ ಸ್ಪರ್ಧೆಯಲ್ಲಿ ಭಾಗವಹಿಸಿದ ಅನುಭವವೂ ಇದೆ.

ಸಿಎ ಫೌಂಡೇಷನ್ ಪರೀಕ್ಷೆಯಲ್ಲಿ ವಿವೇಕಾನಂದದ ಗುರುದೀಪ್ ಉತ್ತೀರ್ಣ



ಪುತ್ತೂರು: 2026 ಜನವರಿಯಲ್ಲಿ ನಡೆದ ಸಿಎ ಫೌಂಡೇಷನ್ ಪರೀಕ್ಷೆಯಲ್ಲಿ ವಿವೇಕಾನಂದ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜಿನ(ಸ್ವಾಯತ್ತ) ಪ್ರಥಮ ಬಿಕಾಂ ವಿದ್ಯಾರ್ಥಿ ಗುರುದೀಪ್ ಉತ್ತೀರ್ಣರಾಗಿದ್ದಾರೆ. ಅವರು ವಿಟ್ಲ ಮುಡ್ನೂರು ಗ್ರಾಮದ ನಾಟೆಕಲ್ಲು ಹರಿಶ್ಚಂದ್ರ ನಾಯಕ್ ಎನ್. ಮತ್ತು ಸರಸ್ವತಿ ಎನ್. ದಂಪತಿಯ ಪುತ್ರ

ಕೋಳಿ ಅಂಕಕ್ಕೆ ಪೊಲೀಸರ ದಾಳಿ: 5 ಮಂದಿ ಸೆರೆ

ಬದಿಯಡ್ಕ: ಪುತ್ತಿಗೆ ಮುಗು ಜೇವ ಎಂಬಲ್ಲಿನ ಕೋಳಿ ಅಂಕ ಕೇಂದ್ರಕ್ಕೆ ಬದಿಯಡ್ಕ ಪೊಲೀಸರು ದಾಳಿ ನಡೆಸಿ ಕೋಳಿ ಅಂಕದಲ್ಲಿ ನಿರತರಾಗಿದ್ದ ಕಡಂಬಾರು ನಿವಾಸಿ ಯತೀಶ್ ಬಿ. (36), ಮುಗು ನಿವಾಸಿಗಳಾದ ಬಾಬು ರೈ (70), ಸುಧಾಕರ ರೈ (48), ನಾರಾಯಣ ಕೆ. (42) ಮತ್ತು ಗಿರೀಶ್ ರೈ (40) ಎಂಬವರನ್ನು ಬಂಧಿಸಿದ್ದಾರೆ. 7 ಹುಂಜಗಳನ್ನು ವಶಕ್ಕೆ ತೆಗೆದುಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಾಡಾನೆಗಳ ಸೆರೆಗೆ ಸಾಥ್ ನೀಡುತ್ತಿದ್ದ 'ಝೂ ಅಭಿ' ಇನ್ನು ನೆನಪು ಮಾತ್ರ...



ಮಡಿಕೇರಿ: ಆನೆಸೆರೆ ಹಿಡಿಯುವ ಕಾರ್ಯಾಚರಣೆಗಳಲ್ಲಿ ಬಳಸಲಾಗುತ್ತಿದ್ದ ಕುಮ್ಕಿ ಆನೆ ಝೂ ಅಭಿ (21) ಭಾನುವಾರ ಸಂಜೆ ಮತ್ತಿಗೋಡು ಆನೆ ಶಿಬಿರದಲ್ಲಿ ಸಾವನ್ನಪ್ಪಿದೆ. ಈ ವಿಷಯವನ್ನು ಅರಣ್ಯ ಇಲಾಖೆ ಅಧಿಕಾರಿಗಳು ದೃಢಪಡಿಸಿದ್ದಾರೆ.

ಈ ಆನೆಯು ಕಾಡಾನೆಗಳನ್ನು ಸೆರೆಹಿಡಿಯುವ ಮತ್ತು ನಿರ್ವಹಿಸುವ ಕಾರ್ಯಾಚರಣೆಯ ಭಾಗವಾಗಿತ್ತು ಮತ್ತು ಹಲವಾರು ಕಾರ್ಯಾಚರಣೆಗಳಲ್ಲಿ ಅರಣ್ಯ ಇಲಾಖೆಗೆ ಸಹಾಯ ಮಾಡಿತ್ತು.

ಕಳೆದ ಆರು ತಿಂಗಳಿನಿಂದ ಝೂ ಅಭಿ ತೀವ್ರ ಕಾಲು ನೋವಿನಿಂದ ಬಳಲುತ್ತಿದ್ದು, ಪಶುವೈದ್ಯರ ಮೇಲ್ವಿಚಾರಣೆಯಲ್ಲಿ ಚಿಕಿತ್ಸೆ ಪಡೆಯುತ್ತಿತ್ತು. ನಿರಂತರ ಆರೈಕೆಯ ಹೊರತಾಗಿಯೂ, ಆನೆ ಭಾನುವಾರ ಸಂಜೆ ಶಿಬಿರದಲ್ಲಿ ಸಾವನ್ನಪ್ಪಿದೆ. ಪಶುವೈದ್ಯ ಡಾ. ರಮೇಶ್ ಅವರು ಮರಣೋತ್ತರ ಪರೀಕ್ಷೆ ನಡೆಸಿದ್ದು, ಸಾವಿಗೆ ನಿಖರವಾದ ಕಾರಣವನ್ನು ನಿರ್ಧರಿಸಲು ಅಧಿಕಾರಿಗಳು ಮುಂದಾಗಿದ್ದಾರೆ.

ಸೋಮವಾರ ಅರಣ್ಯ ಇಲಾಖೆ ಸಿಬ್ಬಂದಿ ಸಮ್ಮುಖದಲ್ಲಿ ಆನೆಗೆ ಅಂತ್ಯಕ್ರಿಯೆ ನೆರವೇರಿಸಲಾಗಿದ್ದು, ಆನೆ ನಿರ್ವಹಣಾ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕುಮ್ಕಿ ಆನೆಯ ಸಾವು ಶಿಬಿರದ ಸಿಬ್ಬಂದಿ ಮತ್ತು ಮಾವುತರನ್ನು ದುಃಖಿತರನ್ನಾಗಿ ಮಾಡಿದೆ. ಆನೆಯ ಸಾವಿನ ನಂತರ ವಿಭಾಗೀಯ ಅರಣ್ಯ ಅಧಿಕಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಮತ್ತು ಇತರ ಅಧಿಕಾರಿಗಳು ಸೇರಿದಂತೆ ಹಿರಿಯ ಅರಣ್ಯ ಅಧಿಕಾರಿಗಳು ಶಿಬಿರಕ್ಕೆ ಭೇಟಿ ಪರಿಶೀಲಿಸಿದ್ದಾರೆ. ಮರಣೋತ್ತರ ಪರೀಕ್ಷೆಯ ವರದಿಯ ನಂತರ ಹೆಚ್ಚಿನ ವಿವರಗಳು ತಿಳಿಯಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಂಗಳೂರು ವಿವಿಯ ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆಗಳ ರ‍್ಯಾಂಕ್ ಪಟ್ಟಿ ಪ್ರಕಟ

ಆಳ್ವಾಸ್‌ಗೆ 15 ರ‍್ಯಾಂಕ್

ಮೂಡುಬಿದಿರೆ: ಮಂಗಳೂರು ವಿಶ್ವವಿದ್ಯಾಲಯವು 2025ನೇ ಸಾಲಿನಲ್ಲಿ ನಡೆಸಿದ್ದ ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳ ರ‍್ಯಾಂಕ್ ಪಟ್ಟಿ ಪ್ರಕಟಗೊಳಿಸಿದ್ದು, ಆಳ್ವಾಸ್‌ನ ವಿದ್ಯಾರ್ಥಿಗಳು ಒಟ್ಟು 15 ರ‍್ಯಾಂಕ್‌ಗಳಿಸಿ ಶ್ರೇಷ್ಠ ಸಾಧನೆ ಮೆರೆದಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದ ರ‍್ಯಾಂಕ್ ಪಟ್ಟಿಯಲ್ಲಿ 2009ರಿಂದಲೂ ಮುಂಚೂಣಿಯಲ್ಲಿರುವ ಆಳ್ವಾಸ್ ಕಾಲೇಜು, ಇಲ್ಲಿಯವರೆಗೆ ಒಟ್ಟು 447 ರ‍್ಯಾಂಕ್‌ಗಳನ್ನು ಪಡೆದುಕೊಂಡಿದೆ.

ಸ್ನಾತಕೋತ್ತರ ರ‍್ಯಾಂಕ್

ಎಂಎ ಇಂಗ್ಲೀಷ್ ವಿಭಾಗದ ಪವಿತ್ರ ತೇಜ್, ಎಂಕಾಂ ಎಚ್‌ಆರ್‌ಡಿ ವಿಭಾಗದ ಹರ್ಷಿತಾ, ಆಹಾರ ವಿಜ್ಞಾನ ಹಾಗೂ ಪೋಷಣೆ ವಿಭಾಗದ ವಿಭಾಶ್ರೀ ಜಿಆರ್, ಸಾವಯವ ರಸಾಯನಶಾಸ್ತ್ರ ವಿಭಾಗದ ಪ್ರತೀಕ್ಷಾ, ರಸಾಯನಶಾಸ್ತ್ರ ವಿಭಾಗದ ಮೆಲಿಸಾ ವಿಡಿ, ಹಾಗೂ ಮನಶಾಸ್ತ್ರ ವಿಭಾಗದ ಸಾಮ್ನ ಜಾರ್ಜ ಪ್ರಥಮ ರ‍್ಯಾಂಕ್‌ನೊಂದಿಗೆ ಆರು ಪ್ರಥಮ ರ‍್ಯಾಂಕ್‌ಗಳು ಆಳ್ವಾಸ್ ಸ್ನಾತಕೋತ್ತರ ವಿದ್ಯಾರ್ಥಿಗಳು ಗಳಿಸಿದ್ದಾರೆ.

ಪದವಿ ರ‍್ಯಾಂಕ್‌ಗಳು

ಬಿಎ ವಿಭಾಗದ ನಂದಿನಿ ಶೆಣೈ ನಾಲ್ಕನೇ ರ‍್ಯಾಂಕ್ ಗಳಿಸಿದರೆ, ಬಿಕಾಂ ವಿಭಾಗದಲ್ಲಿ ಪ್ರಜ್ಞಾ ನಾಲ್ಕನೇ ರ‍್ಯಾಂಕ್ ಹಾಗೂ ಸುರಕ್ಷಾ ಜೈನ್ ಆರನೇ ರ‍್ಯಾಂಕ್ ಹಾಗೂ ಶ್ರದ್ಧಾ ಮೀರಾ 8ನೇ ರ‍್ಯಾಂಕ್ ಗಳಿಸಿದ್ದಾರೆ. ಬಿಬಿಎ ವಿಭಾಗದಲ್ಲಿ ರಿತುನಂದ ಆರ್ ಏಳನೇ ರ‍್ಯಾಂಕ್ ಪಡೆದು ಒಟ್ಟು ಪದವಿ ವಿಭಾಗದಲ್ಲಿ ಒಟ್ಟು 5 ರ‍್ಯಾಂಕ್‌ಗಳು ಆಳ್ವಾಸ್ ಕಾಲೇಜಿಗೆ ಲಭಿಸಿದೆ.



ಆಳ್ವಾಸ್ ಶಿಕ್ಷಣ ಮಹಾವಿದ್ಯಾಲಯದ (ಬಿಎಡ್) ಮಾನಸ ಪ್ರಥಮ ರ‍್ಯಾಂಕ್ ಗಳಿಸಿದರೆ, ಕೆ. ಶಿವಾನಿ ದ್ವಿತೀಯ ಹಾಗೂ ಪ್ರಧ್ವಿ ನಾಯಕ್ ಎಂಟನೇ ರ‍್ಯಾಂಕ್ ಗಳಿಸಿದ್ದಾರೆ. ಈ ವಿಭಾಗದಲ್ಲಿ ಒಟ್ಟು ಹತ್ತರ ಒಳಗೆ ಮೂರು ರ‍್ಯಾಂಕ್‌ಗಳು ಆಳ್ವಾಸ್‌ಗೆ ಲಭಿಸಿದೆ.

ದೈಹಿಕ ಶಿಕ್ಷಣ ಕಾಲೇಜಿನ ಕಾಲೇಜಿನ ಚೈತ್ರಾ ಪಿ. ಪ್ರಥಮ ರ‍್ಯಾಂಕ್‌ಗಳಿಸಿದ್ದಾರೆ.

ಈ ಮೂಲಕ ಆಳ್ವಾಸ್ ವಿದ್ಯಾರ್ಥಿಗಳು ಒಟ್ಟು 8 ಪ್ರಥಮ ರ‍್ಯಾಂಕ್, 1 ದ್ವಿತೀಯ, 2 ಚತುರ್ಥ, 1 ಆರನೇ ರ‍್ಯಾಂಕ್, 1 ಏಳನೇ ರ‍್ಯಾಂಕ್, 2 ಎಂಟನೇ ರ‍್ಯಾಂಕ್ ಗಳಿಸಿ ಒಟ್ಟು 15 ರ‍್ಯಾಂಕ್ ಗಳೊಂದಿಗೆ ಮಂಗಳೂರು ವಿವಿ ಕಾಲೇಜುಗಳಲ್ಲಿ ಅತೀ ಹೆಚ್ಚು ರ‍್ಯಾಂಕ್ ಗಳಿಸಿದ ಕಾಲೇಜುಗಳ ಪೈಕಿ ಅಗ್ರಸ್ಥಾನಿಯಾಗಿದೆ.

ರ‍್ಯಾಂಕ್ ವಿಜೇತ ವಿದ್ಯಾರ್ಥಿಗಳನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ, ಆಳ್ವಾಸ್ ಕಾಲೇಜಿನ ಪ್ರಾಂಶುಪಾಲ ಡಾ.ಕುರಿಯನ್ ಅಭಿನಂದಿಸಿದ್ದಾರೆ.

ರಥಬೀದಿ ಕಾಲೇಜಿನ ಸ್ನಾತಕೋತ್ತರ ವಿಭಾಗಕ್ಕೆ ಎರಡು ರ‍್ಯಾಂಕ್

ಮಂಗಳೂರು: 2024-25 ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ನಡೆಸಿದ ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಮಂಗಳೂರು ರಥಬೀದಿಯ ಡಾ. ಪಿ. ದಯಾನಂದ ಪೈ- ಪಿ. ಸತೀಶ್ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಗಳು ಎರಡು ರ‍್ಯಾಂಕ್‌ಗಳನ್ನು ಗಳಿಸಿದ್ದಾರೆ. ಅಮೃತ ಜೆ. ಸುವರ್ಣ ಎಂ.ಎಸ್.ಡಬ್ಲ್ಯೂ ಸ್ನಾತಕೋತ್ತರ ವಿಭಾಗದಲ್ಲಿ ದ್ವಿತೀಯ ರ‍್ಯಾಂಕ್ ಮತ್ತು ಅಪೂರ್ವ ಎಂ., ಎಂ.ಕಾಂ ಸ್ನಾತಕೋತ್ತರ ವಿಭಾಗದಲ್ಲಿ ಎಂಟನೇ ರ‍್ಯಾಂಕ್ ಪಡೆದಿದ್ದಾರೆ.





ಇವರಿಗೆ ಕಾಲೇಜಿನ ಪ್ರಾಂಶುಪಾಲರು, ಎಲ್ಲಾ ಬೋಧಕ/ಬೋಧಕೇತರರು, ಶಾಸಕ ಮತ್ತು ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಡಿ. ವೇದವ್ಯಾಸ ಕಾಮತ್, ಎಲ್ಲಾ ಸದಸ್ಯರು, ಕಾಲೇಜು ಪೋಷಕರಾದ ಡಾ. ಪಿ. ದಯಾನಂದ ಪೈ-ಪಿ. ಸತೀಶ್ ಪೈ ಸಹೋದರರು, ವಿದ್ಯಾರ್ಥಿಗಳು, ರಕ್ಷಕ-ಶಿಕ್ಷಕ ಸಂಘ ಹಾಗೂ ಹಿರಿಯ ವಿದ್ಯಾರ್ಥಿ ಸಂಘದ ವಿದ್ಯಾರ್ಥಿಗಳು ಮತ್ತು ಸದಸ್ಯರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಮಂಗಳೂರು ವಿವಿ ಕನ್ನಡ ಎಂ.ಎ: ಸಂಧ್ಯಾ ಎನ್ ಪ್ರಥಮ ರ‍್ಯಾಂಕ್

ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಸ್ನಾತಕೋತ್ತರ ಪದವಿಯಲ್ಲಿ ವಿವಿಯ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ವಿದ್ಯಾರ್ಥಿನಿ ಸಂಧ್ಯಾ ಎನ್. ಇವರು ಪ್ರಥಮ ರ‍್ಯಾಂಕ್ ಪಡೆದಿದ್ದಾರೆ.



ಬಂಟ್ವಾಳದ ಸರಪಾಡಿಯ ಮಣಿನಾಲ್ಕೂರಿ ನವರಾದ ಇವರು ನೀಲಯ್ಯ ನಾಯ್ಕ ಮತ್ತು ಬೇಬಿ ದಂಪತಿಯ ಪುತ್ರಿ. ಪ್ರತಿಭಾನ್ವಿತರಾದ ಇವರ ಕವಿತೆ, ಕಥೆ, ಲೇಖನಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಹಾಗೂ ಮಂಗಳೂರು ಆಕಾಶವಾಣಿಯಲ್ಲಿ ಪ್ರಕಟಗೊಂಡಿವೆ.

ಕೆ.ಎಸ್.ಎಸ್.ಗೆ 2 ರ‍್ಯಾಂಕ್





ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತದ ಕೆ.ಎಸ್.ಎಸ್. ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಮಂಗಳೂರು ವಿ.ವಿ. ನಡೆಸಿದ ಪದವಿ ಪರೀಕ್ಷೆಯ ಬಿ.ಎ. ಪದವಿಯಲ್ಲಿ ವಿನುತಾ ಐನೆಕಿದು 9ನೇ ರ‍್ಯಾಂಕ್, ಬಿಕಾಂ ಪದವಿ ಯಲ್ಲಿ ಮಯೂರಿ ಎಂ.ಜಿ. 9ನೇ ರ‍್ಯಾಂಕ್ ಪಡೆದಿದ್ದಾರೆ.

ಶ್ರೀ ಮಂಗಳಾದೇವಿ ಕರಸೇವಕರು ಬೋಳಾರ ಟ್ರಸ್ಟ್ ಸಾರಥ್ಯ

ಸಾಧಕಿಗೆ ನಗದು ಸಹಿತ ಪುರಸ್ಕಾರ



ಮಂಗಳೂರು: ಶ್ರೀ ಮಂಗಳಾದೇವಿ ಕರ ಸೇವಕರು ಬೋಳಾರ ಟ್ರಸ್ಟ್ ಮತ್ತು ಶ್ರೀ ಮಂಗಳಾದೇವಿ ದೇವಸ್ಥಾನದ ಆಡಳಿತ ಮಂಡಳಿಯ ಸಹಯೋಗದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಮಟ್ಟದ 'ನಲಿಕೆದ ಭಜನೆ' ಕುಣಿತ ಭಜನಾ ಸ್ಪರ್ಧೆಯು ಶ್ರೀ ಮಂಗಳಾದೇವಿ ದೇವಸ್ಥಾನದಲ್ಲಿ ನೆರವೇರಿತು.

ಈ ಸಂದರ್ಭ ಭಾರತೀಯ ರಾಷ್ಟ್ರೀಯ ಮಹಿಳಾ ಕಬಡ್ಡಿ ತಂಡದ ಭರವಸೆಯ ಆಟಗಾರ್ತಿ, ಢಾಕಾದಲ್ಲಿ ನಡೆದ ಮಹಿಳಾ ವಿಶ್ವಕಪ್ ಕಬಡ್ಡಿ ಪಂದ್ಯಾವಳಿಯಲ್ಲಿ ಭಾರತ ತಂಡ ಪ್ರತಿನಿಧಿಸಿದ್ದ ಜಿಲ್ಲೆಯ ಕ್ರೀಡಾಪಟು ಧನಲಕ್ಷ್ಮಿ ಪೂಜಾರಿ ಅವರಿಗೆ ಶ್ರೀ ಮಂಗಳಾದೇವಿ ಕರ ಸೇವಕರು ಬೋಳಾರ ಟ್ರಸ್ಟ್ ನ ಗೌರವಾಧ್ಯಕ್ಷ ಚೆಪ್ಪು ಚಿದಾನಂದ ನಾಯ್ಕ್ ದೋಹಾ ಕತಾರ್ ಮತ್ತು ಕತಾರ್ ತುಳು ಒಕ್ಕೂಟದ ಸಹಯೋಗದಲ್ಲಿ ನೀಡಲಾದ ಐದು ಲಕ್ಷ ರೂ. ನಗದು, ಪುರಸ್ಕಾರ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ಟ್ರಸ್ಟ್ ವತಿಯಿಂದ ಸಮಾಜದ ವಿವಿಧ ಕ್ಷೇತ್ರದ ಗಣ್ಯರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಪ್ರಮುಖರಾದ ತಾರಾನಾಥ ಶೆಟ್ಟಿ ಬೋಳಾರ, ರವಿ ರೈ ಕಳಸ, ನಟ ಶನೀಲ್ ಗೌತಮ್, ಶ್ರೀ ಮಂಗಳಾದೇವಿ ದೇವಳದ ಆನುವಂಶಿಕ ಮೊಕ್ತೇಸರರಾದ ಜಿ. ರಘುರಾಮ ಉಪಾಧ್ಯಾಯ, ಎಸ್. ಹರೀಶ್ ಐತಾಳ್, ಎಂ. ಅರುಣ್ ಐತಾಳ್, ಅಶೋಕ್ ಕುಮಾರ್ ಬಿ., ವೇಣುಗೋಪಾಲ ಪುತ್ರನ್, ಮಾಜಿ ಮೇಯರ್ ಪ್ರೇಮಾನಂದ ಶೆಟ್ಟಿ, ಟ್ರಸ್ಟ್‌ನ ಅಧ್ಯಕ್ಷ ದಯಾನಂದ ಬೋಳಾರ್, ಗೌರವಾಧ್ಯಕ್ಷ ಸೀತಾರಾಮ ಎ., ಸ್ಥಾಪಕಾಧ್ಯಕ್ಷ ಸಂತೋಷ್ ಶೆಟ್ಟಿ ಬೋಳಾರ, ಸದಸ್ಯರಾದ ಲೋಹಿತ್ ಶೆಟ್ಟಿ, ರಿತೇಶ್ ಯೆಯ್ಯಾಡಿ, ವಿಜೇಶ್ ಬೋಳಾರ, ಚಂದ್ರಶೇಖರ ಉಡುಪಿ ಮತ್ತಿತರರು ಉಪಸ್ಥಿತರಿದ್ದರು.

ಜಂಪ್ ರೋಪ್: ಜಾಲ್ಸೂರು ಪಯಸ್ವಿನಿ ಪ್ರೌಢ ಶಾಲೆ ಮಕ್ಕಳು ರಾಷ್ಟ್ರ ಮಟ್ಟಕ್ಕೆ ಆಯ್ಕೆ



ಸುಳ್ಯ: ಸಾರ್ವಜನಿಕ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ನಡೆಸಲ್ಪಟ್ಟ ರಾಜ್ಯ ಮಟ್ಟದ ಗುಂಪು ಆಟ ಸ್ಪರ್ಧೆಯಲ್ಲಿ ಜಾಲ್ಸೂರು ಪಯಸ್ವಿನಿ ಪ್ರೌಢ ಶಾಲಾ 24 ವಿದ್ಯಾರ್ಥಿಗಳು ಭಾಗವಹಿಸಿ, 4 ಮಂದಿ ವಿದ್ಯಾರ್ಥಿಗಳು ಪ್ರಥಮ, 8 ಮಂದಿ ವಿದ್ಯಾರ್ಥಿಗಳು ದ್ವಿತೀಯ, 4 ವಿದ್ಯಾರ್ಥಿನಿಯರು ತೃತೀಯ ಸ್ಥಾನವನ್ನು ಗಳಿಸಿದ್ದಾರೆ. ಈ ಪೈಕಿ ನಾಲ್ವರು ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಈ ಸಂದರ್ಭ ನಡೆದ ಅಭಿನಂದನಾ ಸಮಾರಂಭದಲ್ಲಿ ಶಾಲಾ ಸಂಚಾಲಕ ಸದಾನಂದ ಮಾವಜಿ, ಜತೆಕಾರ್ಯದರ್ಶಿ ಜಯರಾಮ ರೈ ಜಾಲ್ಸೂರು ಅಭಿನಂದಿಸಿ ಮಾತನಾಡಿದರು. ಪಯಸ್ವಿನಿ ಎಜ್ಯುಕೇಶನ್ ಸೊಸೈಟಿ ಉಪಾಧ್ಯಕ್ಷ ರಾಮಚಂದ್ರ ಕೆ.ಬಿ., ನಿರ್ದೇಶಕರಾದ ಬಾಲಚಂದ್ರ ದೇವರಗುಂಡ, ಸುಂದರ ಗೌಡ ಕಾಡುಸೊರಂಜ, ನಾರಾಯಣ ಬೊಮ್ಮೆಟ್ಟಿ, ಶಾಲಾ ಮುಖ್ಯ ಶಿಕ್ಷಕಿ ಜಯಲತಾ ಕೆ.ಆರ್., ಎಸ್‌ಡಿಎಂಸಿ ಅಧ್ಯಕ್ಷ ಚಂದ್ರಶೇಖರ ವೇದಿಕೆಯಲ್ಲಿದ್ದು, ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಪಂದ್ಯಾಟದ ತರಬೇತುದಾರ ದೈಹಿಕ ಶಿಕ್ಷಣ ಶಿಕ್ಷಕ ಶಿವಪ್ರಸಾದ ಕೆ. ಅವರನ್ನು ಎಜ್ಯುಕೇಶನ್ ಸೊಸೈಟಿ ಹಾಗೂ ಶಾಲಾ ವತಿಯಿಂದ ಸನ್ಮಾನಿಸಿ, ಅಭಿನಂದಿಸಲಾಯಿತು. ಶಿಕ್ಷಕ ಶಿವಪ್ರಕಾಶ ಕೆ. ಸ್ವಾಗತಿಸಿ, ಶಿಕ್ಷಕಿ ಮೀನ ಕುಮಾರಿ ವಂದಿಸಿದರು. ಶಿಕ್ಷಕಿ ಸವಿತ ಕುಮಾರಿ ನಿರ್ವಹಿಸಿದರು.

ಅಭಿನಂದನೆ

ಪಯಸ್ವಿನಿ ಎಜುಕೇಶನ್ ಸೊಸೈಟಿ ಆಶ್ರಯದಲ್ಲಿ ಶಾಲಾ ವತಿಯಿಂದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ ನಡೆಯಿತು. ಅಧ್ಯಕ್ಷತೆಯನ್ನು ಪಯಸ್ವಿನಿ ಎಜ್ಯುಕೇಶನ್ ಸೊಸೈಟಿ ಅಧ್ಯಕ್ಷ ಜಾಕೆ ಸದಾನಂದ ವಹಿಸಿ, ಅಭಿನಂದಿಸಿದರು.

ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಳದಲ್ಲಿ ಪ್ರಾಯಶ್ಚಿತ್ತ ಹೋಮ ಹವನ

ಸಾನಿಧ್ಯ ಅಭಿವೃದ್ಧಿ ಕಾರ್ಯಕ್ಕೆ ಮುನ್ನುಡಿ

ಮುಲ್ಕಿ: ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಕಳೆದ ಜಾತ್ರೆ ಸಂದರ್ಭ ನಡೆದ ರಥದ ಅವಘಡದ ಹಿನ್ನಲೆಯಲ್ಲಿ ದೇವಸ್ಥಾನದಲ್ಲಿ ನಡೆದ ಅಷ್ಟಮಂಗಳ ಪ್ರಶ್ನೆ ಚಿಂತನ ಪೂರ್ವಕವಾಗಿ, ಸರ್ವದುರಿತ ನಿವಾರಣೆ, ಮುಂದಿನ ಸಾನಿಧ್ಯ ಅಭಿವೃದ್ಧಿ ಕಾರ್ಯಗಳ ಮುನ್ನುಡಿಯಾಗಿ ಕ್ಷೇತ್ರದಲ್ಲಿ ವಿವಿಧ ಪರಿಹಾರ ಹಾಗೂ ಪ್ರಾಯಶ್ಚಿತ್ತ ಹೋಮ-ಹವನಗಳಿಗೆ ಕ್ಷೇತ್ರದ ತಂತ್ರಿಗಳಾದ ಶಿಬರೂರು ಗೋಪಾಲಕೃಷ್ಣ ತಂತ್ರಿ, ಪವಿತ್ರ ಪಾಣಿ ಅತ್ತೂರುಬೈಲು ವೆಂಕಟರಾಜ ಉಡುಪ, ಅರ್ಚಕರಾದ ಶ್ರೀಪತಿ ಉಪಾಧ್ಯಾಯ, ನರಸಿಂಹ ಭಟ್, ಹಾಗೂ ವಿದ್ವಾನ್ ಗುಂಡಿಬೈಲು ಸುಬ್ರಹ್ಮಣ್ಯ ಭಟ್ ಪ್ರಾರ್ಥನೆಯೊಂದಿಗೆ ದೇವಸ್ಥಾನದ ಆನುವಂಶಿಕ ಮೊಕ್ತೇಸರ ದುಗ್ಗಣ್ಣ ಸಾವಂತ ಅರಸರು, ಕಾರ್ಯ ನಿರ್ವಹಣಾಧಿಕಾರಿ ಶ್ವೇತಾ ಪಳ್ಳಿ ನೇತೃತ್ವದಲ್ಲಿ ಚಾಲನೆ ನೀಡಲಾಯಿತು.

ಈ ಸಂದರ್ಭ ವಿದ್ವಾನ್ ಪಂಜ ಭಾಸ್ಕರ ಭಟ್, ವೇ.ಮೂ. ವಾದಿರಾಜ ಉಪಾಧ್ಯಾಯ ಕೊಲಕಾಡಿ, ಕೃಷ್ಣರಾಜ ಎನ್. ಭಟ್, ಅಚ್ಯುತ ಭಟ್, ಪ್ರಸಾದ್ ಭಟ್, ಅಭಿವೃದ್ಧಿ ಸಮಿತಿಯ ಅತುಲ್ ಕುಡ್ವ, ಶರತ್ ನರ್ಸಪ್ಪ ಸಾಲ್ಯಾನ್, ಸುನಿಲ್ ಆಳ್ವ, ಪುರಂದರ ಶೆಟ್ಟಿಗಾರ್, ಸಂಜೀವ ದೇವಾಡಿಗ, ಉದಯ ಕುಮಾರ್ ಶೆಟ್ಟಿ ಅದಿಧನ್, ಶರತ್ ಕಾರ್ನಾಡ್, ನಾಗೇಶ್ ಬಪ್ಪನಾಡು, ಅಕೌಂಟೆಂಟ್ ಶಿವಶಂಕರ್ ಉಪಸ್ಥಿತರಿದ್ದರು. ಪುಣ್ಯಾಹ ವಾಚನ, ಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಸರ್ಪಸೂಕ್ತ ಹೋಮ, ಆಶ್ಲೇಷಾ ಬಲಿ, ವಟು ಆರಾಧನೆ, ಸಂಜೆ ದುರ್ಗಾ ನಮಸ್ಕಾರ, ದುರಿತಹರ ಮಂತ್ರ ಹೋಮ ಧಾರ್ಮಿಕ ಕಾರ್ಯಕ್ರಮ ನಡೆಯಿತು. ಮಾ. 17ರವರೆಗೆ ಕ್ಷೇತ್ರದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿವೆ.



35ನೇ ಸಂಸ್ಥಾಪನಾ ವರ್ಷಾಚರಣೆ ಸಂಭ್ರಮದಲ್ಲಿ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ

'ಗೋ-ಕುಟೀರ' ಸಮಗ್ರ ನೀಲನಕ್ಷೆ ಸಿದ್ಧ

ಕಾಸರಗೋಡು: ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ 35ನೇ ಸಂಸ್ಥಾಪನಾ ವರ್ಷಾಚರಣೆಯ ಸಂಭ್ರಮ ಪ್ರಯುಕ್ತ ಕಾಸರಗೋಡು ಕನ್ನಡ ಗ್ರಾಮ ದಲ್ಲಿ ನಿರ್ಮಾಣಗೊಳ್ಳುತ್ತಿರುವ ಕಾಸರ ಗೋಡು ಗೋ-ಕುಟೀರ ಕಟ್ಟಡದ ಸಮಗ್ರ ನೀಲನಕ್ಷೆಯನ್ನು ಖ್ಯಾತ ಕಲಾವಿದ, ರಂಗ ನಿರ್ದೇಶಕ ಕಿರಣ್ ಕಲಾಂಜಲಿ ಕೂಡ್ಲು ಕಾಸರಗೋಡು ರಚಿಸಿದ್ದಾರೆ.





ಪ್ರಸ್ತುತ ಮಂಗಳೂರಿನಲ್ಲಿ ತನ್ನ ಕಲಾ ರಂಗಭೂಮಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕೇರಳ - ಕರ್ನಾಟಕ ರಾಜ್ಯದಲ್ಲಿ ಕಲಾ, ರಂಗಭೂಮಿ ಕ್ಷೇತ್ರಗಳಲ್ಲಿ ಕಿರಣ್ ಕಲಾಂಜಲಿ ಕೂಡ್ಲು ಅವರು ತಮ್ಮ ಕಲಾ ಪ್ರಕಾರಗಳ ಮೂಲಕ ಗುರುತಿಸಿಕೊಂಡಿದ್ದಾರೆ.

25 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣ

ದೇಸಿ ಗೋವುಗಳನ್ನು ಉಳಿಸಿ ಬೆಳೆಸುವುದಕ್ಕಾಗಿ ಸುಮಾರು 25 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕಾಸರಗೋಡು ಗೋ- ಕುಟೀರವನ್ನು ಜಗಜ್ಜನನಿ ಗೋಮಾತೆಯ ಆಶೀರ್ವಾದವನ್ನು ಪಡೆಯುವ ಉದ್ದೇಶದಿಂದ ಒಂದು ಧಾರ್ಮಿಕ ಶ್ರದ್ಧಾ ಕೇಂದ್ರವನ್ನಾಗಿ ರೂಪುಗೊಳಿಸುವುದಕ್ಕಾಗಿ ದ್ವೈವಾರ್ಷಿಕ ಕಾರ್ಯ ಯೋಜನೆಯನ್ನು ಕೈಗೊಳ್ಳಲಾಗಿದೆ. ಪ್ರತಿಯೊಬ್ಬರೂ ಕುಟುಂಬ ಸಮೇತರಾಗಿ ಕಾಸರಗೋಡು ಕನ್ನಡ ಗ್ರಾಮಕ್ಕೆ ಆಗಮಿಸಿ ಕಾಸರಗೋಡು ಗೋ-ಕುಟೀರದಲ್ಲಿ ಗೋವುಗಳಿಗೆ ಗೋಗ್ರಾಸ ನೀಡಿ, ಗೋ ಆರತಿ ಬೆಳಗಿಸಿ, ಗೋ-ಸಂಕೀರ್ತನೆಯನ್ನು ಹಾಡಿ ಗೋ-ಕುಟೀರದಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿ ತಮ್ಮ ಇಷ್ಟಾರ್ಥವನ್ನು ಶ್ರದ್ಧಾ ಭಕ್ತಿಯಿಂದ ಪಡೆಯಲು ಅವಕಾಶ ಕಲ್ಪಿಸಲಾಗುವುದು.

ಕಾಸರಗೋಡು ಗೋ-ಕುಟೀರದ ಆವರಣದಲ್ಲಿ ನಿರ್ಮಾಣವಾಗಲಿರುವ 'ಕಾಸರಗೋಡು ಕೃಷಿ ಕುಟೀರ'ದಲ್ಲಿ ವಿವಿಧ ಸಂಘ ಸಂಸ್ಥೆಗಳು, ಬ್ಯಾಂಕ್ ಉದ್ಯಮ, ಕೈಗಾರಿಕಾ ಸಂಸ್ಥೆಗಳು, ದೇವಸ್ಥಾನ, ಮಠ, ಮಂದಿರ, ವಿವಿಧ ಟ್ರಸ್ಟ್ ಗಳ ನೆರವಿನ ಪ್ರಾಯೋಜಕತ್ವದಡಿಯಲ್ಲಿ ಸಾವಯವ ಕೃಷಿ, ಗ್ರಾಮೀಣ ಸ್ವ ಉದ್ಯೋಗ ಕೇಂದ್ರ, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ಮಹಿಳಾ ಉದ್ಯೋಗಿಗಳಿಗಾಗಿ ಹೊಲಿಗೆ, ವಸ್ತ್ರ-ವಿನ್ಯಾಸ, ಡಿಸೈನಿಂಗ್ ಕೇಂದ್ರ, ಕಂಪ್ಯೂಟರ್, ಡಿಜಿಟಲ್ ಮಾಧ್ಯಮ ಕೇಂದ್ರ, ಕಲಾ ಗ್ಯಾಲರಿ, ಜಾನಪದ ವಸ್ತು ಸಂಗ್ರಹಾಲಯ, ಗ್ರಂಥಾಲಯ, ಹಿರಿಯ ನಾಗರಿಕರಿಗಾಗಿ ಗ್ರಾಮೀಣ ವೈದ್ಯಕೀಯ ಕ್ಲಿನಿಕ್, ಸಾಹಿತ್ಯ ಕುಟೀರ, ಸಂಕೀರ್ತನಾ ಕುಟೀರ, ನಮ್ಮ ಮನೆ - ವಿಶ್ರಾಂತಿ ಗ್ರಹ (ರೆಸ್ಟ್ ಹೌಸ್)ವನ್ನು ನಿರ್ಮಿಸಲು ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಶಿವರಾಮ ಕಾಸರಗೋಡು ತಿಳಿಸಿದ್ದಾರೆ.

ಐಟಿಎಫ್ ಟೆನಿಸ್ ಟೂರ್ನಿ ಸಿಂಗಲ್ಸ್, ಡಬಲ್ಸ್ ಫೈನಲ್ ಗೆದ್ದ ಬಳಿಕ ಹೊಸ ದಿಗಂತದೊಂದಿಗೆ ವೈಷ್ಣವಿ ಅಡ್ಕರ್ ಮಾತು

ವೈಷ್ಣವಿ ಅಡ್ಕರ್‌ಗೆ ಜೋಡಿ ಕಿರೀಟದ ಖುಷಿ

ರಾಚಪ್ಪಾ ಜಂಬಗಿ

ಕಲಬುರಗಿ: ಬಿಸಿಲು ನಾಡು ಕಲಬುರಗಿಯಲ್ಲಿ ಆಯೋಜಿಸಿದ್ದ ಐಟಿಎಫ್ ಡಬ್ಲ್ಯೂ 35 ಮಹಿಳಾ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗಗಳಲ್ಲಿ ಚಾಂಪಿಯನ್ ಪಟ್ಟ ಗೆದ್ದು ಗಮನ ಸೆಳೆದ ಭಾರತದ ಉದಯೋನ್ಮುಖ ಆಟಗಾರ್ತಿ ವೈಷ್ಣವಿ ಅಡ್ಕರ್, ಅನುಭವಿ ಭಾರತೀಯ ಆಟಗಾರ್ತಿ ಅಂಕಿತಾ ವಿರುದ್ಧದ ಜಯವನ್ನು ಹೆಮ್ಮೆಯ ಕ್ಷಣವೆಂದು ಬಣ್ಣಿಸಿದರು.

ತಮ್ಮ ಗೆಲುವಿನ ಯಶಸ್ಸಿನ ಹಿಂದಿನ ಪರಿಶ್ರಮ, ಪಂದ್ಯಕ್ಕಾಗಿ ನಡೆಸಿದ ಸಿದ್ಧತೆ ಸೇರಿದಂತೆ ಹಲವು ಸಂಗತಿಗಳನ್ನು ಗೆಲುವಿನ ಬಳಿಕ ಹೊಸದಿಂಗದೊಂದಿಗೆ ಮಾತುಕತೆ ಮೂಲಕ ಹಂಚಿಕೊಂಡಿದ್ದಾರೆ.

★ ಇದು ನಿಮ್ಮ ಎರಡನೇ ಐಟಿಎಫ್ ಟೈಟಲ್. ಈ ಗೆಲುವಿನ ಅನುಭವ ನೀವು ಹೇಗೆ ವಿವರಿಸುತ್ತೀರಿ?

ಈ ಗೆಲುವು ನನಗೆ ತುಂಬಾ ಸಂತೋಷ ತಂದಿದೆ. ಕಳೆದ ವಾರವೇ ಫೈನಲ್‌ಗೆ ತಲುಪಿದ್ದರೂ ಆಗ ಜಯ ಸಾಧಿಸಲು ಸಾಧ್ಯವಾಗಿರಲಿಲ್ಲ. ಆದರೆ, ಆ ಅನುಭವದಿಂದ ಪಾಠ ಕಲಿತು, ನನ್ನ ಆಟದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡೆ. ಈ ಬಾರಿ ಕೋರ್ಟ್‌ನಲ್ಲಿ ಆತ್ಮವಿಶ್ವಾಸದಿಂದ ಆಟ ಆಡಲು ಸಾಧ್ಯವಾಯಿತು. ಜೊತೆಗೆ ಅಂಕಿತಾ ರೈನಾ ಅವರೊಂದಿಗೆ



ಡಬಲ್ಸ್‌ನಲ್ಲಿ ಆಡಿದ ಅನುಭವವೂ ಫೈನಲ್ ಪಂದ್ಯದಲ್ಲಿ ನನಗೆ ಸಹಾಯವಾಯಿತು ಎಂದು ಅನಿಸುತ್ತದೆ.

> **2009 ಬಳಿಕ ಸಾನಿಯಾ ಮಿರ್ಜಾ ನಂತರ ಡಬ್ಲ್ಯೂ100 ಅಥವಾ ಅದಕ್ಕಿಂತ ಮೇಲಿನ ಮಟ್ಟದ ಟೂರ್ನಿಯಲ್ಲಿ ಫೈನಲ್ ತಲುಪಿದ ಮೊದಲ ಭಾರತೀಯ ಮಹಿಳೆಯಾಗಿದ್ದು ನನಗೆ ಹೆಮ್ಮೆ. ಈ ಸಾಧನೆಯಿಂದ ರ್‍ಯಾಂಕಿಂಗ್ 690ರಿಂದ ಏರಿಕೆ ಕಂಡು 466ಕ್ಕೆ ತಲುಪಿದ್ದು ಮತ್ತೊಂದು ಮೈಲಿಗಲ್ಲು. ನನಗೆ ವೈಲ್ಡ್‌ಕಾರ್ಡ್ ಅವಕಾಶ ನೀಡಿದ ಕೆ.ಎಸ್.ಎಲ್.ಟಿ.ಎ.ಗೆ ತುಂಬಾ ಕೃತಜ್ಞೆ.**
>
> ■ ವೈಷ್ಣವಿ ಅಡ್ಕರ್, ಭಾರತದ ಟೆನಿಸ್ ಆಟಗಾರ್ತಿ

ದಿಗಂತ ಸಂದರ್ಶನ

★ ಅನುಭವಿ,ಹಿರಿಯ ಆಟಗಾರ್ತಿ ಅಂಕಿತಾಗೆ ಎದುರಿಸುವಾಗ ನಿಮ್ಮ ಪ್ಲಾನ್ ಏನಿತ್ತು?

ಅಂಕಿತಾ ರೈನಾ ಭಾರತೀಯ ಟೆನಿಸ್‌ನ ಪ್ರಮುಖ ಆಟಗಾರ್ತಿಯರಲ್ಲಿ ಒಬ್ಬರು. ಅವರ ಆಟ ನೋಡುತ್ತಲೇ ನಾನು ಬೆಳೆದಿದ್ದೇವೆ. ತುಂಬಾ ಹೋರಾಟ ಮನೋಭಾವದ ಆಟಗಾರ್ತಿ. ಕೊನೆಯ ಕ್ಷಣದವರೆಗೂ ಪಂದ್ಯ ಬಿಡುವುದಿಲ್ಲ. ಆದ್ದರಿಂದ ಪಂದ್ಯಕ್ಕೆ ಇಳಿಯುವ ಮೊದಲು ಫಲಿತಾಂಶದ ಬಗ್ಗೆ ಹೆಚ್ಚು ಯೋಚಿಸದೆ, ನನ್ನ ಆಟದ ಮೇಲೆ ಗಮನ ಕೇಂದ್ರೀಕರಿಸಬೇಕೆಂದು ತೀರ್ಮಾನಿಸಿದ್ದೆ. ಪ್ರತಿಯೊಂದು ಪಾಯಿಂಟ್‌ಗಾಗಿ ಹೋರಾಟ ನಡೆಸಿ, ಅವಕಾಶ ಸಿಕ್ಕಾಗ ಅದನ್ನು ಬಳಸಿಕೊಳ್ಳಲು ಪ್ರಯತ್ನಿಸಿದೆ.

★ ಮೊಣಕಾಲಿನ ಶಸ್ತ್ರಚಿಕಿತ್ಸೆಯ ನಂತರ ಕೋರ್ಟ್‌ಗೆ ಹೇಗೆ ಕಂಬ್ಯಾಕ್ ಸಾಧಿಸಿದ್ದೀರಿ?

ಸುಮಾರು ನಾಲ್ಕು ವರ್ಷಗಳ ಹಿಂದೆ ನನಗೆ ಮೊಣಕಾಲಿನ ಶಸ್ತ್ರಚಿಕಿತ್ಸೆ ಆಗಿತ್ತು. ಅದರ ನಂತರ ಸುಮಾರು ಎಂಟು ತಿಂಗಳು ಕೋರ್ಟ್‌ನಿಂದ ದೂರ ಉಳಿಯಬೇಕಾಯಿತು. ಅದು ನನ್ನ ಕರಿಯರ್‌ನಲ್ಲಿ ಸವಾಲಿನ ಸಮಯವಾಗಿತ್ತು. ಆದರೆ, ಮನಃ ಶ್ರಮಪಟ್ಟು ತರಬೇತಿ ಮುಂದುವರಿಸಿ, ಜೂನಿಯರ್ ಮಟ್ಟದಲ್ಲಿ ಮತ್ತೆ ಉತ್ತಮ ಪ್ರದರ್ಶನ ನೀಡುವ ಮೂಲಕ ಟೆನಿಸ್‌ಗೆ ಮರಳಿ ಬಂದೆ. ಈಗ ಶಾರೀರಿಕವಾಗಿ ಸಂಪೂರ್ಣವಾಗಿ ಫಿಟ್ ಆಗಿದ್ದೇನೆ.

★ ಒಂದೇ ಟೂರ್ನಿಯಲ್ಲಿ 2 ಟೈಟಲ್ ಗೆದ್ದಿರುವುದು ಎಂತಹ ಭಾವನೆ ನೀಡುತ್ತಿದೆ?

ಕಲಬುರಗಿಯಲ್ಲಿ ಈ ಸಮಯದಲ್ಲಿ ಬಿಸಿಲಿನ ತಾಪಮಾನ ಹೆಚ್ಚು ಇರುವುದರಿಂದ ಅದಕ್ಕೆ ಹೊಂದಿಕೊಳ್ಳುವುದು ಸ್ವಲ್ಪ ಕಷ್ಟವಾಗಿತ್ತು. ಒಂದೇ ದಿನದಲ್ಲಿ ಎರಡು ಪಂದ್ಯಗಳನ್ನು ಆಡಬೇಕಾಗಿದ್ದುದರಿಂದ ಅದು ಇನ್ನಷ್ಟು ಸವಾಲಾಗಿತ್ತು.ಆದರೂ ಕೋರ್ಟ್‌ನಲ್ಲಿ ಕೊನೆಯವರೆಗೂ ಗಮನ ಕೇಂದ್ರೀಕರಿಸಿ ಆಡಲು ಸಾಧ್ಯವಾಯಿತು. ಪ್ರತಿಯೊಂದು ಎದುರಾಳಿಯ ವಿರುದ್ಧವೂ ಪರಿಸ್ಥಿತಿಗೆ ತಕ್ಕಂತೆ ಗೇಮ್ ಪ್ಲಾನ್ ಬದಲಾಯಿಸುತ್ತಾ ಮುಂದೆ ಬಂದೆ. ಈ ಟೂರ್ನಿಯನ್ನು ಅತ್ಯುತ್ತಮವಾಗಿ ಆಯೋಜಿಸಿದ್ದು, ಆಟಗಾರರಿಗೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಚೆನ್ನಾಗಿ ಮಾಡಲಾಗಿತ್ತು.

★ ಮುಂದಿನ ಟೂರ್ನಿಗಳಿಗಾಗಿ ನಿಮ್ಮ ತಯಾರಿ ಮತ್ತು ಗುರಿ ಏನು?

ಮುಂದಿನ ದಿನಗಳಲ್ಲಿ ಹಲವಾರು ಪ್ರಮುಖ ಟೂರ್ನಿಗಳಿವೆ. ಅದರಲ್ಲೂ ಬಿಲ್ಲಿ ಜೀನ್ ಕಿಂಗ್ ಕಪ್ ಸೇರಿದಂತೆ ಹಲವು ಸ್ಪರ್ಧೆಗಳಿದ್ದು, ಅದಕ್ಕಾಗಿ ಈಗಿನಿಂದಲೇ ತಯಾರಿ ಆರಂಭವಾಗಿದೆ. ನಿರಂತರವಾಗಿ ಟೂರ್ನಿಗಳಲ್ಲಿ ಭಾಗವಹಿಸುವುದು ಮತ್ತು ನಿಯಮಿತ ತರಬೇತಿ ನಡೆಸುವುದು ನನ್ನ ಪ್ರಮುಖ ಗಮನ. ಮುಂದಿನ ದಿನಗಳಲ್ಲಿ ಭಾರತವನ್ನು ಪ್ರತಿನಿಧಿಸುವ ಉತ್ತಮ ಆಟಗಾರ್ತಿಯಾಗಿ ಹೊರಹೊಮ್ಮಿ, ಟೆನಿಸ್ ಕ್ಷೇತ್ರಕ್ಕೆ ನನ್ನಿಂದ ಸಾಧ್ಯವಾದಷ್ಟು ಕೊಡುಗೆ ನೀಡಲು ಪ್ರಯತ್ನಿಸುತ್ತೇನೆ.

ಕಿರುಸುದ್ದಿ

ಅರ್ಶದೀಪ್‌ಗೆ ಐಸಿಸಿ ದಂಡ

ಅಹಮದಾಬಾದ್ ಟಿ20 ವಿಶ್ವಕಪ್ ಫೈನಲ್ ಪಂದ್ಯದ ವೇಳೆ ಆಕ್ರಮಣಕಾರಿ ವರ್ತನೆಗೈದಿರುವ ಭಾರತದ ವೇಗಿ ಅರ್ಶದೀಪ್ ಸಿಂಗ್ ಅವರಿಗೆ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ(ಐಸಿಸಿ) ದಂಡ ವಿಧಿಸಿದೆ. ವಿಶ್ವಕಪ್ ಮುಡಿಗೇರಿಸಿಕೊಂಡ ಭಾರತ ತಂಡದ ಭಾಗವಾಗಿದ್ದ ಅರ್ಶದೀಪ್ ಪಂದ್ಯದ ವೇಳೆ ನ್ಯೂಜಿಲೆಂಡ್‌ನ ಡ್ಯಾರೆಲ್ ಮಿಚೆಲ್ ಮೇಲೆ ಆಕ್ರಮಣಕಾರಿಯಾಗಿ ಚೆಂಡೆಸೆದಿದ್ದರು. ಪರಿಣಾಮ ಫೈನಲ್ ಪಂದ್ಯದ ಶೇಕಡಾ 15 ರಷ್ಟು ದಂಡ ವಿಧಿಸಲಾಗಿದೆ. ಜೊತೆಗೆ ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿದೆ. ನ್ಯೂಜಿಲೆಂಡ್ ಇನ್ನಿಂಗ್ಸ್‌ನ 11 ನೇ ಓವರ್‌ನಲ್ಲಿ ಮಿಚೆಲ್, ಅರ್ಶದೀಪ್ ಸಿಂಗ್ ಅವರ ಓವರ್‌ನಲ್ಲಿ ಎರಡು ಸಿಕ್ಸರ್‌ಗಳನ್ನು ಬಾರಿಸಿದರು. ಎರಡು ಸಿಕ್ಸರ್‌ಗಳನ್ನು ಹೊಡೆಸಿಕೊಂಡ ನಂತರ ಅರ್ಶದೀಪ್ ಕೊಂಚ ತಾಳ್ಮೆ ಕಳೆದುಕೊಂಡವರಂತೆ ವರ್ತಿಸಿದರು. ಅರ್ಶದೀಪ್ ಅವರ ಐದನೇ ಎಸೆತದಲ್ಲಿ, ಡ್ಯಾರಿಲ್ ಮಿಚೆಲ್ ಶಾಟ್ ಆಡಲು ಪ್ರಯತ್ನಿಸಿದರು, ಆದರೆ ಚೆಂಡು ನೇರವಾಗಿ ಅರ್ಶದೀಪ್ ಕಡೆಗೆ ಹೋಯಿತು. ನಂತರ ಅರ್ಶದೀಪ್ ಚೆಂಡನ್ನು ಹಿಡಿದು ಡ್ಯಾರಿಲ್ ಮಿಚೆಲ್ ಕಡೆಗೆ ಎಸೆದರು.

ಭೂತಾನ್ ಫುಟ್ಬಾಲ್ ಹೈ ಪರ್ಫಾರ್ಮೆನ್ಸ್ ನಿರ್ದೇಶಕರಾಗಿ ಕೊಡಗಿನ ಜೀತ್

ಮಡಿಕೇರಿ: ಕೊಡಗು ಮೂಲದ ಕುಲ್ಲೇಟಿರ ಜೀತ್ ದೇವಯ್ಯ ಅವರನ್ನು ಭೂತಾನ್ ಫುಟ್ಬಾಲ್ ಫೆಡರೇಷನ್, ಹೈ ಪರ್ಫಾರ್ಮೆನ್ಸ್ ನಿರ್ದೇಶಕರನ್ನಾಗಿ ನೇಮಿಸಿದೆ. ದೇವಯ್ಯ ಅವರು ಗಣ್ಯ ಕ್ರೀಡಾ ಪ್ರದರ್ಶನದಲ್ಲಿ ಎರಡು ದಶಕಗಳಿಗೂ ಹೆಚ್ಚಿನ ಮತ್ತು ಕ್ರೀಡಾ ಆಡಳಿತದಲ್ಲಿ ಸುಮಾರು 29 ವರ್ಷಗಳ ಅನುಭವವನ್ನು ಹೊಂದಿದ್ದು, ಉನ್ನತ-ಕಾರ್ಯಕ್ಷಮತೆಯ ವ್ಯವಸ್ಥೆಗಳು, ಕ್ರೀಡಾಪಟುಗಳ ಅಭಿವೃದ್ಧಿ ಮತ್ತು ಕ್ರೀಡಾ ವಿಜ್ಞಾನದಲ್ಲಿ ವ್ಯಾಪಕ ಪರಿಣತಿಯನ್ನು ಹೊಂದಿದ್ದಾರೆ. ನಾನು ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಸ್ಪೆಷಲಿಸ್ಟ್ ಮತ್ತು ಈ ಹಿಂದೆ ಫುಟ್‌ಬಾಲ್, ಕ್ರಿಕೆಟ್ ಮತ್ತು ಹಾಕಿ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ಹಲವಾರು ವೃತ್ತಿಪರ ತಂಡಗಳು ಮತ್ತು ಸಂಸ್ಥೆಗಳೊಂದಿಗೆ ಕೆಲಸ ಮಾಡಿದ್ದೇನೆ.



ಡೆನ್ಮಾರ್ಕ್‌ನಲ್ಲಿ ಎಸ್ಬ್ಜೆರ್ಗ್ ಎಫ್‌ಸಿಯೊಂದಿಗೆ ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಕೋಚ್ ಆಗಿ ಕೆಲಸ ಮಾಡಿದ ಅಂತಾರಾಷ್ಟ್ರೀಯ ಅನುಭವವನ್ನು ಹೊಂದಿದ್ದೇನೆ. ನಾನು ಇಂಡಿಯನ್ ಪ್ರೀಮಿಯರ್ ಲೀಗ್ ಫ್ರಾಂಚೈಸಿಗಳಾದ ರಾಜಸ್ಥಾನ್ ರಾಯಲ್ಸ್ ಮತ್ತು ದೆಹಲಿ ಡೇರ್‌ಡೆವಿಲ್ಸ್ (ಈಗ ದೆಹಲಿ ಕ್ಯಾಪಿಟಲ್ಸ್) ನೊಂದಿಗೆ ಸಹ ಕೆಲಸ ಮಾಡಿದ್ದೇನೆ ಎಂದು ಹೇಳಿದರು.

ಫುಟ್ಬಾಲ್: ಸೋಲಿನೊಂದಿಗೆ ಭಾರತ ಅಭಿಯಾನ ಅಂತ್ಯ

ಹೊಸದಿಲ್ಲಿ: ಗುಂಪು ಹಂತದ ಕೊನೆಯ ಪಂದ್ಯದಲ್ಲಿ ತೈವಾನ್ ತಂಡದೊಂದಿಗೆ ಸೋತ ಭಾರತ ಮಹಿಳಾ ತಂಡವು ಫುಟ್‌ಬಾಲ್ ಏಷ್ಯನ್‌ಕಪ್ ಪಂದ್ಯಾವಳಿಯಲ್ಲಿ ಲೀಗ್ ಹಂತದಲ್ಲೇ ಹೊರಬಿದ್ದಿತು. ಮಂಗಳವಾರ ನಡೆದ ತಮ್ಮ ಕೊನೆಯ ಪಂದ್ಯದಲ್ಲಿ ಬ್ಲ್ಯು ಟೈಗರ್ಸ್ ತೈವಾನ್‌ನೊಂದಿಗೆ 1-3ರ ಸೋಲು ಕಂಡಿದೆ. ತೈವಾನ್ ಪರ ಯಸು 12ನೇ ನಿಮಿಷದಲ್ಲಿ, ಚೇನ್ 77ನೇ ನಿಮಿಷದಲ್ಲಿ ಗೋಲು ಗಳಿಸಿದರು. ಭಾರತ ಒಂದೇ ಗೋಲು ಗಳಿಸಿತು. ಈ ಸೋಲಿನೊಂದಿಗೆ ಭಾರತದ ವಿಶ್ವಕಪ್ ಅರ್ಹತೆ ಕನಸು ಭಗ್ನವಾಗಿದೆ. ವಿಶ್ವಕಪ್ ಪ್ರವೇಶಕ್ಕೆ ಈಗ ಅರ್ಹತಾ ಸುತ್ತು ಒಂದೇ ದಾರಿಯಾಗಿದೆ .

ಗುರುವಾರದಂದು ಮೊದಲ ಹಂತದ ವೇಳಾಪಟ್ಟಿ | ಮಾ.28 ರಿಂದ ಐಪಿಎಲ್ | ಪಂದ್ಯ ಸಂಖ್ಯೆ ಹೆಚ್ಚಳ ಸಾಧ್ಯತೆ

ಐಪಿಎಲ್‌ನಲ್ಲಿ ಈ ಬಾರಿ 84 ಪಂದ್ಯ?

ಮುಂಬೈ: ವಿಶ್ವ ಕ್ರಿಕೆಟ್‌ನ ಮದಗಜವಾಗಿ ಬೆಳೆದು ನಿಂತ ನಂತರ ಅತಿ ಶ್ರೀಮಂತ ಮತ್ತು ಅತಿ ದೊಡ್ಡ ಲೀಗ್ ಎಂಬ ಹೆಸರು ಪಡೆದ ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್) ಪಂದ್ಯಾವಳಿಯು ಈಗ ಇನ್ನಷ್ಟು ವಿಸ್ತಾರವಾಗಲಿದ್ದು, 19ನೇ ಆವೃತ್ತಿಯಲ್ಲಿ 84 ಪಂದ್ಯಗಳು ನಡೆಯುವ ಸಾಧ್ಯತೆ ಇದೆ.

ಸುಮಾರು 2 ತಿಂಗಳಿಗೂ ಹೆಚ್ಚು ಕಾಲ ನಡೆದು ಜನರನ್ನು ರಂಜಿಸುವ ಐಪಿಎಲ್ ಟೂರ್ನಿ ಈಗ ಇನ್ನಷ್ಟು ಹಿಗ್ಗಲಿದೆ. ಇದೇ ಮೊದಲ ಬಾರಿಗೆ ಪಂದ್ಯದ ಸಂಖ್ಯೆಯನ್ನು 84ಕ್ಕೇರಿಸಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮುಂದಾಗಿದೆ. ಎಲ್ಲಾ ಹತ್ತೂ ತಂಡಗಳಿಗೆ 8 ತವರು, 8 ಹೊರಪ್ರದೇಶ ಪಂದ್ಯಗಳು ಸಿಗಬೇಕೆಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

2008ರಲ್ಲಿ ಪಂದ್ಯಾವಳಿ ಆರಂಭವಾಗಿತ್ತು. ಮೊದಲಿಗೆ 8 ತಂಡಗಳಿದ್ದವು, ಕೊಚ್ಚಿ ಅಂತಹ ತಂಡಗಳು ಐಪಿಎಲ್‌ನಿಂದ ಹೊರನಡೆದವು. 2016-17ರಲ್ಲಿ ಎರಡು ತಂಡಗಳನ್ನು ನಿಷೇಧಿಸಲಾಗಿತ್ತು. ಆಗ ಎರಡು ಬೇರೆ ತಂಡಗಳನ್ನು ಸೇರಿಸಲಾಗಿತ್ತು. ಇಷ್ಟಾದರೂ ಬಿಸಿಸಿಐ ಹೆಚ್ಚು ಪಂದ್ಯಗಳನ್ನಾಡಿಸಲು ಮುಂದಾಗಿರಲಿಲ್ಲ. ಆದರೆ ಇದೇ ಮೊದಲ ಬಾರಿಗೆ 80ಕ್ಕೂ ಅಧಿಕ ಪಂದ್ಯಗಳನ್ನಾಡಿಸುವ ಉದ್ದೇಶ ಹೊಂದಿದೆ.

ಬರೋಬ್ಬರಿ 84 ಪಂದ್ಯಗಳು: ಕಳೆದ ಬಾರಿ ಅಂದರೆ 18ನೇ ಆವೃತ್ತಿಯ ಐಪಿಎಲ್‌ನಲ್ಲಿ 74 ಪಂದ್ಯಗಳನ್ನಾಡಿಸಲಾಗಿತ್ತು. ಒಂದು ತಂಡ 14ರಂತೆ ಲೀಗ್ ಪಂದ್ಯಗಳಲ್ಲಿ ಆಡುತ್ತಿತ್ತು. ಆದರೆ ಎಲ್ಲಾ 10 ತಂಡಗಳು ಎರಡು ಬಾರಿ ಎದುರಾಗುತ್ತಿರಲಿಲ್ಲ. ಎರಡು ತಂಡಗಳು ಒಂದೇ ಬಾರಿ ಎದುರಾಗಬೇಕಾದ ಅನಿವಾರ್ಯತೆ ಇತ್ತು. ಉದಾಹರಣೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಎಲ್ಲಾ 9 ಎದುರಾಳಿಗಳೊಂದಿಗೆ 2 ಪಂದ್ಯಗಳನ್ನಾಡುತ್ತಿರಲಿಲ್ಲ. 2 ತಂಡಗಳ ಎದುರಿಗೆ ಕೇವಲ ಒಂದು ಪಂದ್ಯ ಆಡುಬೇಕಾಗಿತ್ತು. ಈ ಬಗ್ಗೆ ಕಾಳಜಿ ವಹಿಸಿರುವ ಬಿಸಿಸಿಐ ಪಂದ್ಯಾವಳಿಯನ್ನೇ ವಿಸ್ತರಿಸುವ ಯೋಜನೆ ಹಾಕಿಕೊಂಡಿದೆ. 80 ಲೀಗ್ ಪಂದ್ಯಗಳು ಇರಲಿದ್ದು, ನಾಲ್ಕು ಪ್ಲೇಆಫ್ ಪಂದ್ಯಗಳು ನಡೆಯಲಿವೆ.



ಎಷ್ಟು ತಂಡಗಳಿದ್ದಾಗ ಎಷ್ಟು ಪಂದ್ಯಗಳು?

8 ತಂಡಗಳು	60 ಪಂದ್ಯಗಳು
9 ತಂಡಗಳು	76 ಪಂದ್ಯಗಳು
10 ತಂಡಗಳು	74 ಪಂದ್ಯಗಳು (ಸಾಮಾನ್ಯ ಮಾದರಿ)
10 ತಂಡಗಳು	84 ಪಂದ್ಯಗಳು (ಈ ಬಾರಿಯ ವಿಸ್ತಾರ)

ಕಳೆದ ಬಾರಿ ಇದ್ದದ್ದು 74 ಪಂದ್ಯ: ಐಪಿಎಲ್ ಆರಂಭಿಕ ಆವೃತ್ತಿಯಲ್ಲಿ 59 ಪಂದ್ಯಗಳನ್ನು ಮಾತ್ರ ಆಡಿಸಲಾಗಿತ್ತು. ನಂತರ ಎರಡು ಬಾರಿ ಬದಲಾವಣೆಯಾಗಿ ಹಲವು ಬಾರಿ 60 ಮತ್ತು 76 ಪಂದ್ಯಗಳನ್ನಾಡಿಸಿತ್ತು. ಐಪಿಎಲ್‌ನಲ್ಲಿ ಹೆಚ್ಚು ಬಾರಿ 60 ಪಂದ್ಯಗಳನ್ನೇ ಆಡಿಸಲಾಗಿದೆ. 2021ರಲ್ಲಿ 60 ಪಂದ್ಯಗಳನ್ನೇ ಆಡಿಸಲಾಗಿತ್ತು. 2023ರಲ್ಲಿ ಎರಡು ಹೊಸ ತಂಡಗಳು ಸೇರ್ಪಡೆಯಾದವು. ಹೀಗಾಗಿ ಪಂದ್ಯದ ಸಂಖ್ಯೆ 74ಕ್ಕೆ ವಿಸ್ತಾರವಾಗಿತ್ತು. 2022ರಿಂದ 18ನೇ ಆವೃತ್ತಿವರೆಗೂ 74 ಪಂದ್ಯಗಳನ್ನೇ ಆಡಿಸಲಾಗಿತ್ತು.

ಬದಲಾಗಿದ್ದು ಏನು? ಐಪಿಎಲ್‌ನಲ್ಲಿ ಮೊದಲಿಗೆ 8 ತಂಡಗಳು ಮಾತ್ರ ಇದ್ದವು. ಹೀಗಾಗಿ ಎಲ್ಲಾ ತಂಡಗಳು ಎಲ್ಲಾ ತಂಡಗಳನ್ನು ತಲಾ ಎರಡು ಬಾರಿ ಎದುರಿಸುತ್ತಿದ್ದವು. ಆದರೆ 10 ತಂಡಗಳಿಗೆ ಕೂಟ ಬದಲಾಯಿತು. ಆದಾಗ್ಯೂ ಪಂದ್ಯಗಳ ಸಂಖ್ಯೆ ಏರಿಸಲಾಗಿರಲಿಲ್ಲ. ಅಂದರೆ ಒಂದು ತಂಡ 14 ಮಾತ್ರ ಲೀಗ್ ಪಂದ್ಯಗಳನ್ನಾಡುತ್ತಿತ್ತು. ಇದನ್ನು ಈಗ 16ಕ್ಕೇರಿಸಲಾಗುತ್ತದೆ. ಅಂದರೆ ಪ್ರತಿಯೊಂದು ತಂಡವೂ 8 ತವರು ಮತ್ತು 8 ಹೊರಪ್ರದೇಶದ ಪಂದ್ಯಗಳನ್ನಾಡಲಿವೆ. ವಾಸ್ತವವಾಗಿ ಎಲ್ಲಾ ತಂಡಗಳು ಎರಡು ಬಾರಿ ಎದುರಾದರೆ ಒಂದು ತಂಡ 18 ಪಂದ್ಯಗಳನ್ನಾಡಬೇಕಾಗುತ್ತದೆ. ಆದರೆ ಈ ಬಾರಿ ಅಂತಹ ಯೋಜನೆಗಳನ್ನು ಹಾಕಿಕೊಂಡಿಲ್ಲ ಎಂದು ಹೇಳಲಾಗುತ್ತಿದೆ.

2 ಹಂತದಲ್ಲಿ ವೇಳಾಪಟ್ಟಿ: ದೇವಜೀತ್ ಸೈಕಿಯಾ

ಮಾರ್ಚ್ 28ರಿಂದ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ವೇಳಾಪಟ್ಟಿ ಗುರುವಾರದಂದು ಬಿಡುಗಡೆಯಾಗಲಿದೆ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ತಿಳಿಸಿದ್ದಾರೆ. ಭಾನುವಾರದಂದು ಐಪಿಎಲ್ ಶುರುವಾಗುವ ದಿನಾಂಕಗಳನ್ನು ಘೋಷಿಸಲಾಗಿದೆ. ಮೊದಲ ಪಂದ್ಯ ಮಾರ್ಚ್ 28ಕ್ಕೆ ನಡೆಯಲಿದೆ. ಫೈನಲ್ ಪಂದ್ಯ ಮೇ 31ರಂದು ನಡೆಯಲಿದೆ. ಈ ಬಗ್ಗೆ ಮಾತನಾಡಿರುವ ಸೈಕಿಯಾ, ಹಲವು ರಾಜ್ಯಗಳಲ್ಲಿ ಚುನಾವಣೆಗಳಿರುವುದರಿಂದ ವೇಳಾಪಟ್ಟಿ ತಡವಾಗಿದೆ. 5 ರಾಜ್ಯಗಳಲ್ಲಿ ಚುನಾವಣೆ ನಡೆಯಲಿದೆ. ಈ ಬೆನ್ನಲ್ಲೇ ನಾವು ವೇಳಾಪಟ್ಟಿಯನ್ನು ಎರಡು ಹಂತದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಿದ್ದೇವೆ. ಮೊದಲ ಹಂತದ ವೇಳಾಪಟ್ಟಿ ಗುರುವಾರದಂದು ಬಿಡುಗಡೆ ಮಾಡುತ್ತೇವೆ. ಎರಡನೇ ಹಂತದ ವೇಳಾಪಟ್ಟಿಯನ್ನು ಚುನಾವಣೆಯ ಆಧಾರದ ಮೇಲೆ ಬಿಡುಗಡೆ ಮಾಡುತ್ತೇವೆ ಎಂದಿದ್ದಾರೆ.

ವಿಶ್ವಕಪ್ ಅರ್ಹತಾ ಸುತ್ತು: ಭಾರತ ಪಂದ್ಯ ಡ್ರಾ

ಹೈದರಾಬಾದ್: ಎಫ್‌ಐಎಚ್ ಮಹಿಳಾ ವಿಶ್ವಕಪ್ ಅರ್ಹತಾ ಸ್ಪರ್ಧೆಯಲ್ಲಿ ಉರುಗ್ವೆಯನ್ನು ಸುಲಭವಾಗಿ ಸೋಲಿಸಿದ ನಂತರ ಭಾರತಕ್ಕೆ ಸ್ಕಾಟ್ಲೆಂಡ್ ವಿರುದ್ಧ ಕಠಿಣ ಸವಾಲು ಎದುರಾಯಿತು. ಎರಡೂ ತಂಡಗಳ ನಿರಂತರ ಪರಿಶ್ರಮ ಹಾಗೂ ಕರಾರುವಾಕ್ ಆಟದೊಂದಿಗೆ ಪಂದ್ಯ ಡ್ರಾದಲ್ಲಿ ಅಂತ್ಯವಾಗಿದೆ.

ಜಿ.ಎಂ.ಸಿ ಬಾಲಯೋಗಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ಆರಂಭದಲ್ಲಿ ಹಿನ್ನಡೆ ಅನುಭವಿಸಿದರೂ ನಂತರ ಕಂಬ್ಯಾಕ್ ಮಾಡಿತ್ತು. ಡಿಫೆನ್ಸ್ ಮೂಲಕ ಭಾರತ ಮುನ್ನಡೆ ಕೂಡ ಪಡೆಯಿತು. ಆದರೆ ಸ್ಕಾಟ್ಲೆಂಡ್ ಹೋರಾಟದಿಂದ ಮರಳಿ ಬಂದು ಪಂದ್ಯವನ್ನು 2-2 ಸಮಬಲದಲ್ಲಿ ಮುಗಿಸಿತು.



ಆರಂಭದಲ್ಲೇ ಗೋಲು!: ಆರನೇ ನಿಮಿಷದಲ್ಲಿ ಸ್ಕಾಟ್ಲೆಂಡ್ ಪೆನಾಲ್ಟಿ ಕಾರ್ನರ್ ಗಳಿಸಿ ಮುನ್ನಡೆ ಪಡೆದಿತು. ಜೆನ್ನಿಫರ್ ಈಡಿ ಅವರ ಡ್ರಾಗ್‌ಫ್ಲಿಕ್ ಅನ್ನು ಹೀದರ್ ಮೆಕ್‌ಇವನ್ ಡಿಫ್ಲೆಕ್ಷನ್ ಮೂಲಕ ಗೋಲಾಗಿ ಪರಿವರ್ತಿಸಿದರು. ಮೂರನೇ ಕ್ವಾರ್ಟರ್ ಆರಂಭವಾದ ಮೂರು ನಿಮಿಷಗಳಲ್ಲೇ ಭಾರತ ಸಮಬಲ ಸಾಧಿಸಿತು. ಪೆನಾಲ್ಟಿ ಕಾರ್ನರ್ ಅನ್ನು ನವ್ನೀತ್ ಕೌರ್-ಸುಶೀಲಾ ಚಾನು ಭಾರತಕ್ಕೆ ಮೊದಲ ಗೋಲು ತಂದುಕೊಟ್ಟರು. ಮೊದಲಾರ್ಧ ಮುಕ್ತಾಯಕ್ಕೂ ಮೊದಲು ಭಾರತ ಮುನ್ನಡೆ ಪಡೆದಿತು. ರುತುಜಾ ಪಿಸಾಲ್ ಗಳಿಸಿದ ಪೆನಾಲ್ಟಿ ಕಾರ್ನರ್ ಬಳಿಕ ಉಂಟಾದ ಗೊಂದಲದಲ್ಲಿ ಸುನೆಲಿತಾ ಟೊಪ್ಪೊ ಗೋಲು ಗಳಿಸಿದರು. ಆದರೆ ಮೂರನೇ ಕ್ವಾರ್ಟರ್‌ನಲ್ಲಿ ಫಿಯೋನಾ ಬರ್ನೆಟ್ ಗೋಲು ಬಾರಿಸಿ ಸ್ಕಾಟ್ಲೆಂಡ್ ಸಮಬಲ ಸಾಧಿಸಿತು. ನಂತರ ಎರಡೂ ತಂಡಗಳು ಅವಕಾಶಗಳನ್ನು ಸೃಷ್ಟಿಸಿದರೂ ಗೋಲು ಸಾಧ್ಯವಾಗದೆ ಪಂದ್ಯ 2-2 ಡ್ರಾ ಆಗಿ ಮುಕ್ತಾಯವಾಯಿತು.

24 ಕ್ರೀಡಾಪಟುಗಳಿಗೆ ನಿವೇಶನ ಭರವಸೆ

ಬೆಂಗಳೂರು: ಏಷ್ಯನ್ ಗೇಮ್ಸ್, ಒಲಿಂಪಿಕ್ಸ್ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ರಾಷ್ಟ್ರವನು ಪ್ರತಿನಿಧಿಸಿ ಪದಕ ಪಡೆದಿರುವ ರಾಜ್ಯದ ಹಲವು ಕ್ರೀಡಾ ಪಟುಗಳಿಗೆ



ನಿವೇಶನ ಹಂಚಿಕೆ ಮಾಡುವಂತೆ ರಾಜ್ಯ ಒಲಿಂಪಿಕ್ಸ್ ಸಂಸ್ಥೆಯ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಡಾ. ಕೆ. ಗೋವಿಂದರಾಜು ಅವರು ರಾಜ್ಯ ಗೃಹ ಮಂಡಳಿಗೆ ಮನವಿ ಸಲ್ಲಿಸಿದ್ದಾರೆ. ಮನವಿ ಸ್ವೀಕರಿಸಿರುವ ಸಚಿವ ಜಮೀರ್ ಅಹ್ಮದ್, ಎಲ್ಲರಿಗೂ ನಿವೇಶನ ನೀಡುವುದಾಗಿ ಭರವಸೆ ನೀಡಿದ್ದು, ತಕ್ಷಣದಿಂದಲೇ ಕ್ರಮ ಕೈಗೊಳ್ಳುವಂತೆ ಸೂಚಿಸುವುದಾಗಿ ಹೇಳಿದ್ದಾರೆ. ಒಟ್ಟು 24 ಕ್ರೀಡಾಪಟುಗಳಿಗೆ ನಿವೇಶನ ಸಿಕ್ಕಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ ಭರವಸೆ ನೀಡಲಾಗಿದೆ.

ವಿಶ್ವಕಪ್ ಗೆದ್ದ ಬೆನ್ನಲ್ಲೇ ಬಹುಮಾನ ಘೋಷಿಸಿದ ಬಿಸಿಸಿಐ

ಭಾರತ ತಂಡಕ್ಕೆ ₹131 ಕೋಟಿ!

ಮುಂಬೈ: ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತನ್ನದೇ ದಾಖಲೆ ಮುರಿದು, 2026ರ ಟಿ20 ವಿಶ್ವಕಪ್ ಗೆದ್ದ ಭಾರತೀಯ ತಂಡಕ್ಕೆ ಭರ್ಜರಿ 131 ಕೋಟಿ ರೂ. ನಗದು ಬಹುಮಾನ ಘೋಷಿಸಿದೆ.

2024ರಲ್ಲಿ ರೋಹಿತ್ ಶರ್ಮ ನಾಯಕತ್ವದಲ್ಲಿ ಬಾರ್ಬಡೋಸ್‌ನಲ್ಲಿ ಭಾರತ ವಿಶ್ವಕಪ್ ಗೆದ್ದಾಗ ಬಿಸಿಸಿಐ 125 ಕೋಟಿ ರೂ. ಬಹುಮಾನ ನೀಡಿತ್ತು. ಇದೀಗ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಜಯ ಸಾಧಿಸಿದ ಸೂರ್ಯಕುಮಾರ್ ಯಾದವ್ ನಾಯಕತ್ವದ ತಂಡಕ್ಕೆ ಬಹುಮಾನ ನೀಡುವುದರಲ್ಲಿ ಇತಿಹಾಸ ನಿರ್ಮಿಸಿದೆ.

ಈ ಜಯದೊಂದಿಗೆ ಭಾರತ ಟಿ20 ವಿಶ್ವಕಪ್ ಅನ್ನು ಸರಿಯಾಗಿ ಎರಡನೇ ಬಾರಿ ಉಳಿಸಿಕೊಂಡ ಮೊದಲ ತಂಡವಾಗಿದ್ದು, ಒಟ್ಟಾರೆ ಮೂರು ಬಾರಿ ಈ ಪ್ರಶಸ್ತಿ ಗೆದ್ದ ಮೊದಲ ತಂಡ ಎಂಬ ದಾಖಲೆ ಕೂಡ ನಿರ್ಮಿಸಿದೆ. ಬಿಸಿಸಿಐ ಪ್ರಕಟಣೆಯಲ್ಲಿ ಆಟಗಾರರು, ತರಬೇತಿ ಸಿಬ್ಬಂದಿ ಹಾಗೂ ಆಯ್ಕೆ ಸಮಿತಿಗೆ ಅಭಿನಂದನೆ ತಿಳಿಸಿ, ಈ ಐತಿಹಾಸಿಕ ಸಾಧನೆ ಭಾರತೀಯ ಕ್ರಿಕೆಟ್‌ಗೆ ಹೆಮ್ಮೆ ತರುತ್ತದೆ ಎಂದು ಹೇಳಿದೆ.

ಐಸಿಸಿಯಿಂದಲೂ ಭರ್ಜರಿ ಬಹುಮಾನ: ಇದರ ಜೊತೆಗೆ ಅಂತರಾಷ್ಟ್ರೀಯ ಕ್ರಿಕೆಟ್ ಮಂಡಳಿಯು ಕೂಡ ಭಾರತಕ್ಕೆ 3



ಮಿಲಿಯನ್ ಅಮೆರಿಕನ್ ಡಾಲರ್ (ಸುಮಾರು 27.48 ಕೋಟಿ ರೂಪಾಯಿ) ಬಹುಮಾನ ನೀಡಿದೆ. ಈ ಬಾರಿ ವಿಶ್ವಕಪ್ ಟೂರ್ನಿಯ ಒಟ್ಟು ಬಹುಮಾನ ಮೊತ್ತ 13.5 ಮಿಲಿಯನ್ ಡಾಲರ್ ಆಗಿದ್ದು, ಹಿಂದಿನ ಆವೃತ್ತಿಗಿಂತ ಸುಮಾರು 20 ಶೇಕಡಾ ಹೆಚ್ಚಳ ಕಂಡಿದೆ. ಗುಂಪು ಹಂತ ಮತ್ತು ಸೂಪರ್ ಎಂಟು ಹಂತಗಳಲ್ಲಿ ಪ್ರತಿ ಪಂದ್ಯ ಜಯಿಸಿದಾಗಲೂ ತಂಡಕ್ಕೆ ಸುಮಾರು 31,154 ಡಾಲರ್ (ಸುಮಾರು 28.6 ಲಕ್ಷ ರೂಪಾಯಿ) ಹೆಚ್ಚುವರಿ ಬಹುಮಾನ ನೀಡಲಾಗಿದೆ.

ಯಾರ್‍ಯಾರಿಗೆ ಸೇರಲಿದೆ ಬಹುಮಾನ? ವಿಶ್ವಕಪ್ ತಂಡದ ಭಾಗವಾಗಿರುವ ಪ್ರತಿಯೊಬ್ಬ ಆಟಗಾರರಿಗೂ ಸಮಾನ ಬಹುಮಾನ ಸೇರಲಿದೆ. ಇದಲ್ಲದೆ, ಪ್ರಧಾನ ಕೋಚ್, ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್ ಕೋಚ್ ಸೇರಿದಂತೆ ಎಲ್ಲಾ ತರಬೇತಿ ಸಿಬ್ಬಂದಿ ಮತ್ತು ತಂಡದ ವೈದಕೀಯ ಹಾಗೂ ಬೆಂಬಲ ಸಿಬ್ಬಂದಿಗೂ ಹಂಚಿಕೆಯಾಗಲಿದೆ.

ದಾಖಲೆಯ ಬಹುಮಾನ

ಇಲ್ಲಿಯವರೆಗೂ ಯಾವುದೇ ತಂಡ ಯಾವುದೇ ವಿಶ್ವಕಪ್ ಗೆದ್ದರೂ ಇಷ್ಟೊಂದು ಬಹುಮಾನ ಈವರೆಗೂ ಯಾವುದೇ ಸಂಸ್ಥೆ ನೀಡಿರಲಿಲ್ಲ. 2024ರಲ್ಲೇ ಭಾರತ ಅತಿ ಹೆಚ್ಚು ಮೊತ್ತದ ನಗದು ಬಹುಮಾನ ನೀಡಿದ ಸಂಸ್ಥೆ ಅನಿಸಿಕೊಂಡಿತ್ತು. ಈ ದಾಖಲೆಯನ್ನೇ ಮುರಿದಿರುವ ಬಿಸಿಸಿಐ, 133 ಕೋಟಿ ರೂ. ಘೋಷಿಸಿದೆ.

3 ವರ್ಷದಲ್ಲಿ ಬಿಸಿಸಿಐ ಕೊಟ್ಟಿದ್ದು 335 ಕೋಟಿ

ಬಿಸಿಸಿಐ ಮೂರು ವರ್ಷಗಳಲ್ಲಿ ಬರೋಬ್ಬರಿ 335 ಕೋಟಿ ರೂ. ಬಹುಮಾನ ನೀಡಿದೆ. 2024ರಲ್ಲಿ ಭಾರತ ಟಿ20 ವಿಶ್ವಕಪ್, 2025ರಲ್ಲಿ ಚಾಂಪಿಯನ್ಸ್ ಟ್ರೋಫಿ ಹಾಗೂ ಈ ಬಾರಿ ಮತ್ತೊಮ್ಮೆ ಟಿ20 ವಿಶ್ವಕಪ್ ಗೆದ್ದಿರುವ ಭಾರತಕ್ಕೆ ಭಾರೀ ಬಹುಮಾನ ನೀಡಲಾಗಿದೆ. ಅಲ್ಲದೆ ಕಳೆದ ಬಾರಿ ಏಷ್ಯಾಕಪ್ ಕೂಡ ಭಾರತ ಗೆದ್ದುಕೊಂಡಿದೆ. ಆಗಲೂ ಬಿಸಿಸಿಐ ಭರ್ಜರಿ ಬಹುಮಾನ ನೀಡಿತ್ತು.

ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟ್

ಕನ್ನಡಗರಿಗೆ 11 ಪದಕ



ಬೆಂಗಳೂರು: 7ನೇ ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರರು ಅತ್ಯುತ್ತಮ ಪ್ರದರ್ಶನ ನೀಡಿ ಒಟ್ಟು 11 ಪದಕಗಳನ್ನು ಗೆದ್ದಿದ್ದಾರೆ. ರಾಜ್ಯದ ತಂಡವು 2 ಚಿನ್ನ, 4 ಬೆಳ್ಳಿ ಹಾಗೂ 5 ಕಂಚಿನ ಪದಕಗಳನ್ನು ಗಳಿಸಿ ಗಮನಾರ್ಹ ಸಾಧನೆ ಮಾಡಿದೆ. ಚಾಂಪಿಯನ್‌ಶಿಪ್‌ನಲ್ಲಿ ಕನ್ನಡತಿ ಪಲ್ಲವಿ ಕೆ.ಎಂ ಅವರ ಪ್ರದರ್ಶನ ವಿಶೇಷವಾಗಿತ್ತು. ಅವರು ಮಹಿಳಾ ಸಿಂಗಲ್ಸ್ ವಿಭಾಗ ಮತ್ತು ಮಹಿಳಾ ಡಬಲ್ಸ್ ವಿಭಾಗಗಳಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದರು. ಜೊತೆಗೆ ಮಿಶ್ರ ಡಬಲ್ಸ್ ವಿಭಾಗದಲ್ಲಿ ಒಂದು ಬೆಳ್ಳಿ ಪದಕ ಪಡೆದು ಶ್ರೇಷ್ಠ ಸಾಧನೆ ಮಾಡಿದ್ದಾರೆ.

ಯಾರ್‍ಯಾರಿಗೆ ಯಾವ್ಯಾವ ಪದಕ?

ಅಮ್ಮು ಮೋಹನ್ ಕೂಡ ಉತ್ತಮ ಪ್ರದರ್ಶನ ನೀಡಿದರು. ಅವರು ಮಹಿಳಾ ಡಬಲ್ಸ್ ವಿಭಾಗದಲ್ಲಿ ಒಂದು ಬೆಳ್ಳಿ ಪದಕ ಮತ್ತು ಮಹಿಳಾ ಸಿಂಗಲ್ಸ್ ಹಾಗೂ ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದರು. ಶಾರ್ಟ್ ಹೈಟ್ ವಿಭಾಗದಲ್ಲಿ ಧನೇಶ್ವರಿ ಅವರು ಮಹಿಳಾ ಡಬಲ್ಸ್‌ನಲ್ಲಿ ಬೆಳ್ಳಿ ಪದಕ ಮತ್ತು ಮಹಿಳಾ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿದರು. ಇದೇ ವಿಭಾಗದಲ್ಲಿ ಜನನಿ ಆರ್ ಅವರು ಮಹಿಳಾ ಡಬಲ್ಸ್‌ನಲ್ಲಿ ಒಂದು ಬೆಳ್ಳಿ ಪದಕ ಪಡೆದರು. ಪುರುಷರ ವಿಭಾಗದಲ್ಲಿ ಸಿದ್ದಣ್ಣ ಸಾಹುಕಾರ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದರು. ಜಮ್ಮಾದ್ ಎಂ ಇ ಅವರು ಪುರುಷರ ಡಬಲ್ಸ್‌ನಲ್ಲಿ ಕಂಚಿನ ಪದಕ, ಹಾಗೂ ಮಂಜುನಾಥ್ ಸಿ ಅವರು ಪುರುಷರ ಡಬಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿದರು.

ರಾಷ್ಟ್ರೀಯ ಶೂಟಿಂಗ್: ಮನುಗೆ ಮೊದಲ ಸ್ಥಾನ

ಹೊಸದಿಲ್ಲಿ: ಒಲಿಂಪಿಯನ್ ಮನು ಭಾಕರ್ ರಾಷ್ಟ್ರೀಯ ಆಯ್ಕೆ ಪರೀಕ್ಷೆಗಳ ಟಿ3 (ಗುಂಪು ಎ) ಸ್ಪರ್ಧೆಯ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಫೈನಲ್‌ನಲ್ಲಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ. ಇಲ್ಲಿನ ಡಾ. ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ಮಂಗಳವಾರ ಸ್ಪರ್ಧೆ ಮುಕ್ತಾಯಗೊಂಡಿತು.

ಫೈನಲ್‌ಗೆ ಕೊನೆಯ ಅರ್ಹತೆಯಾಗಿ ಪ್ರವೇಶಿಸಿದ್ದ ಮನು ಭಾಕರ್ ಎರಡನೇ ಸರಣಿಯ ಅಂತ್ಯದಿಂದಲೇ ಮುನ್ನಡೆ ಕಾಯ್ದುಕೊಂಡು 246.1 ಅಂಕಗಳೊಂದಿಗೆ ಪ್ರಶಸ್ತಿ ಗೆದ್ದರು. ವಿಶ್ವಕಪ್ ಫೈನಲ್ ಬೆಳ್ಳಿ ಪದಕ ವಿಜೇತೆ ಸೈನ್ಯಮ್ 241.9 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದರು. ಏಷ್ಯನ್ ಚಾಂಪಿಯನ್‌ಶಿಪ್ ಚಿನ್ನ ಹಾಗೂ ವಿಶ್ವ ಚಾಂಪಿಯನ್‌ಶಿಪ್ ಕಂಚು ಪದಕ ವಿಜೇತೆ ಈಶಾ ಸಿಂಗ್ 220.6 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟರು.

ಏಷ್ಯನ್ ಗೇಮ್ಸ್ ಚಾಂಪಿಯನ್ ಪಾಲಕ್ ಗುಲಿಯಾ 200.2 ಅಂಕಗಳೊಂದಿಗೆ ನಾಲ್ಕನೇ



ಸ್ಥಾನ ಪಡೆದರು. ನಂತರ ಅಂಜಲಿ ಚೌಧರಿ 179.8, ಸುರ್ಬಿ ರಾವ್ 158.2 ಅಂಕಗಳೊಂದಿಗೆ ಕ್ರಮವಾಗಿ ಐದನೇ ಹಾಗೂ ಆರನೇ ಸ್ಥಾನ ಪಡೆದರು. ಪ್ರಾಂಜಲಿ ಪ್ರಶಾಂತ್ ಧುಮಾಲ್ 138.7 ಮತ್ತು ಮುಸ್ಕಾನ್ 117.0 ಅಂಕಗಳೊಂದಿಗೆ ಮೊದಲ ಎಂಟು ಸ್ಥಾನಗಳನ್ನು ಪೂರ್ಣಗೊಳಿಸಿದರು.

ಇತರ ಫಲಿತಾಂಶಗಳು

ಪುರುಷರ 50 ಮೀಟರ್ ರೈಫಲ್ ಪ್ರೋನ್

1. ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ 628.3
2. ನಿರಾಜ್ ಕುಮಾರ್ 622.6
3. ಗೋಲ್ಡಿ ಗುರ್ಜರ್ 622.2

ಮಹಿಳೆಯರ 50 ಮೀಟರ್ ರೈಫಲ್ ಪ್ರೋನ್

1. ಸಿಫ್ಟ್ ಕೌರ್ ಸಮ್ರಾ 628.3
2. ಆಕೃತಿ ದಹಿಯಾ 627.0
3. ಮನಿನಿ ಕೌಶಿಕ್ 626.6

ಅರ್ಹತಾ ಸುತ್ತಿನಲ್ಲಿ ಈಶಾ ಸಿಂಗ್ 58021 ಎಕ್ಸ್ ಅಂಕಗಳೊಂದಿಗೆ ಅಗ್ರಸ್ಥಾನ ಪಡೆದಿದ್ದರು. ಸುರ್ಬಿ ರಾವ್ 578-12 ಎಕ್ಸ್ ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರು. ಈ ಶೂಟರ್‌ಗಳು ಮಾರ್ಚ್ 11 ರಿಂದ ಮಾರ್ಚ್ 21ರವರೆಗೆ ನವದೆಹಲಿಯಲ್ಲಿ ನಡೆಯುವ ತರಬೇತಿ ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5920

ಎಡದಿಂದ ಬಲಕ್ಕೆ
1.ಈ ಸಲ ಬರುವೆನೆಂದ ಶಕ್ತಿವಂತ (3)
4.ಪೂರ್ಣವಾಗಿ ಬಲಿತ ಬಣ್ಣಗೆಟ್ಟ ಪತ್ರೆ (3)
5.ಆಗಸದಲ್ಲಿ ಮೂಡುವ ಬಣ್ಣದ ಕಮಾನು (5)
6.ಕರ್ನಾಟಕ-ತಮಿಳುನಾಡಿನ ಸಾಂಪ್ರದಾಯಿಕ ಸಿಹಿತಿಂಡಿ (4)
8.ಮನದ ನಡುವೆ ಅಡಗಿದ ವಂಶ (4)
10.ಜಪ-ದನ ಸೇರಿ ಮಾನವ ಜನಾಂಗವಾಯ್ತು (4)
12.ಹೊಳೆಯುವಿಕೆ ದ್ವಿರುಕ್ತಿಯಲ್ಲಿದೆ (4)
15.ಅಭ್ರಕವನ್ನು ಹೀಗೂ ಹೇಳುತ್ತೇವೆ (5)
16.ಸರ ಧರಿಸಿದರೂ ಉಂಟಾದ ಬೇಜಾರು (3)
17.ವನದ ನಡುವೆ ಸಿಕ್ಕ ಜಹಗೀರು (3)

ಮೇಲಿನಿಂದ ಕೆಳಕ್ಕೆ
2.ಸೂಟಿಯ ದಿನಗಳು ತಲೆಕೆಳಗಾಗಿವೆ (4)
3.ಅನ್ಯವಲ್ಲದ, ಅದ್ವಿತೀಯ (3)
4.ದಂತಕ್ಕೆ ಬಂದ ನೋವು (4)
6.ಅಗ್ರಜನೊಂದಿಗೆ ಇರುವ ತಮ್ಮ (3)
7.ಕಾಳು-ಕಡ್ಡಿಗಳು ತಲೆಕೆಳಗಾಗಿವೆ (3)
8.ಆ ಕೂಡಲೆ ಎಂಬರ್ಥದ ಶಬ್ದ (3)
9.ಭೂಮಿಯ ಒಡೆಯನಾಗಿ ರಾಜ (3)
11.ಇದು ಪುಟ್ಟ ಹುಡುಗಿಯ ಲಂಗ (4)
13.ಕರವನ್ನು ಹಿಡಿದವಗೆ ಕೇಳಿದ ಮಧುರ ಧ್ವನಿ (4)
14.ಕೂಷ್ಮಾಂಡ-ತರಕಾರಿ ಕಾಯಿಯಿದು (3)

5919 ಉತ್ತರ

ಎಡದಿಂದ ಬಲಕ್ಕೆ:
1.ಬಯಲುಸೀಮೆ
3.ಹಂಬಲ 4.ಹಗಲು
5.ವಾಣಿ 6.ತನು
7.ಭಾಜನ 8.ಆರಡಿ
10.ಜಟಿಲ 12.ಆದಾಯ
13.ಲಿಪಿ 14.ರಾಮ
15.ತಾಂಡವ 16.ಶಂಕಿಸು
17.ಗಿಡಮೂಲಿಕೆ

ಮೇಲಿನಿಂದ ಕೆಳಕ್ಕೆ
: 1.ಬಲವಾನ
2.ಮೆಲುನುಡಿ 7.ಭಾವಜ
9.ಆಶಯ 11.ಲಲಿತಾಂಗಿ
12.ಆಮಶಂಕೆ

ಕಿರುಸುದ್ದಿ

ಶಿಕ್ಷಕಿಯ ಪರ್ಸ್ ಅಪಹರಣ

ಉಪ್ಪಿನಂಗಡಿ: ಸಕಲೇಶಪುರಕ್ಕೆಂದು ಬಸ್ಸನ್ನೇರಿದ ಶಿಕ್ಷಕಿಯೋರ್ವರ ಬ್ಯಾಗಿನಿಂದ ನಗದು ತುಂಬಿದ್ದ ಪರ್ಸನ್ನು ಎಗರಿಸಿದ ಘಟನೆ ಸೋಮವಾರದಂದು ಉಪ್ಪಿನಂಗಡಿ ಬಸ್ ನಿಲ್ದಾಣದಲ್ಲಿ ನಡೆದಿದೆ. ಸಕಲೇಶಪುರದಲ್ಲಿ ಶಿಕ್ಷಕಿಯಾಗಿದ್ದು ಪುತ್ತೂರಿಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಪುತ್ತೂರಿಗೆ ಆಗಮಿಸಿದ್ದ ಪ್ರಸನ್ನ ಕುಮಾರಿ ಎಂಬವರು ಉಪ್ಪಿನಂಗಡಿಗೆ ಬಂದು ಸಕಲೇಶಪುರಕ್ಕೆ ಹೋಗುವ ಬಸ್ಸನ್ನೇರುವ ವೇಳೆ ಕೈ ಚಳಕ ತೋರಿದ ಕಿಸೆಗಳ್ಳರು ಅವರ ಬ್ಯಾಗಿನಲ್ಲಿದ್ದ 30 ಸಾವಿರ ನಗದು, ಇನ್ನಿತರ ದಾಖಲೆಗಳು ಇದ್ದ ಪರ್ಸನ್ನು ಎಗರಿಸಿದ್ದಾರೆ. ಘಟನೆಯ ಉಪ್ಪಿನಂಗಡಿ ಠಾಣಾ ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರು ಸಿಸಿ ಕ್ಯಾಮಾರದ ದಾಖಲೆಗಳನ್ನು ಪರಿಶೀಲಿಸಿದ್ದು, ಮಹತ್ವದ ಸುಳಿವನ್ನು ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸ್ಕೂಟರ್ - ಕಾರು ಅಪಘಾತ: ಚಿಕಿತ್ಸೆಯಲ್ಲಿದ್ದ ವ್ಯಕ್ತಿ ಮೃತ್ಯು

ಮುಳ್ಳೇರಿಯ: ಸ್ಕೂಟರ್‌ಗೆ ಕಾರು ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವ್ಯಕ್ತಿ ಮೃತಪಟ್ಟರು. ಪಡ್ರೆ ವಾಣೀನಗರ ಬಳಿ ಈಲಂತೋಡಿ ನಿವಾಸಿ ದಿ.ಚನಿಯ ನಾಯ್ಕರ ಪುತ್ರ ವಿಶ್ವನಾಥ ನಾಯ್ಕ (51) ಮೃತಪಟ್ಟವರು. ಪ್ರಸ್ತುತ ಬೆಳ್ಳೂರು ಕಲ್ಲಣೆ ಎಂಬಲ್ಲಿ ವಾಸಿಸುತ್ತಿದ್ದ ಅವರು ಇಲೆಕ್ಟ್ರೀಷ್ಯನ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಕಳೆದ ಬುಧವಾರ ಬೆಳಗ್ಗೆ ನಾಯನ್ಮಾರಮೂಲೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿತ್ತು. ವಿಶ್ವನಾಥ ಸಂಚರಿಸುತ್ತಿದ್ದ ಸ್ಕೂಟರ್‌ಗೆ ಪಾಲಕ್ಕಾಡ್ ನಿವಾಸಿಗಳು ಸಂಚರಿಸುತ್ತಿದ್ದ ಕಾರು ಡಿಕ್ಕಿ ಹೊಡೆದಿತ್ತು. ಇದರಿಂದ ಗಂಭೀರ ಗಾಯಗೊಂಡು ಚೆಂಗಳದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಸಾವು ಸಂಭವಿಸಿತು. ಮೃತರು ತಾಯಿ ಸೀತ, ಪತ್ನಿ ಕವಿತಾ, ಪುತ್ರ ಅಶ್ವಿತ್, ಪುತ್ರಿ ಅನ್ವಿತಾ ಅವರನ್ನು ಅಗಲಿದ್ದಾರೆ.

ಚಿನ್ನಾಭರಣ ಕಳವು ಪ್ರಕರಣ: ಆರೋಪಿ ಬಂಧನ

ಮಂಗಳೂರು: ಕಾವೂರು ಉಲ್ಲಾಸ ನಗರದ ಮನೆಯೊಂದರಿಂದ ಚಿನ್ನಾಭರಣ ಕಳವುಗೈದಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಸಜೀಪನಡು ದೇರಾಜೆ ಮನೆ ನಿವಾಸಿ ಅಶೋಕ್ (41) ಬಂಧಿತ ಆರೋಪಿ. ಕಳವು ಮಾಡಲಾದ ಎಲ್ಲ ಸೊತ್ತುಗಳನ್ನು ವಶ ಪಡಿಸಿಕೊಳ್ಳಲಾಗಿದ್ದು, ಆರೋಪಿಗೆ ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ. ಮಾ.7ರಂದು ಮಧ್ಯಾಹ್ನ 12 ಗಂಟೆ ವೇಳೆಗೆ ಕಾವೂರು ಉಲ್ಲಾಸ ನಗರದಲ್ಲಿ ಮನೆಯೊಂದಕ್ಕೆ ಯಾರೂ ಇಲ್ಲದ ವೇಳೆ ಬಾಗಿಲಿನ ಬೀಗ ಮುರಿದು ಕಳ್ಳ ಒಳಪ್ರವೇಶಿಸಿ ಸುಮಾರು 4,80,000 ರೂ. ಬೆಲೆಯ 39 ಗ್ರಾಂ ಚಿನ್ನಭಾರಣ, 182 ಗ್ರಾಂ ಬೆಳ್ಳಿಯ ಆಭರಣಗಳನ್ನು ಕಳ್ಳತನ ಮಾಡಿದ್ದ. ಈ ಬಗ್ಗೆ ಮನೆಯವರು ನೀಡಿದ ದೂರಿನಂತೆ ಕಾವೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿ ಹಾಗೂ ಸೊತ್ತು ಪತ್ತೆಗಾಗಿ ಕಾವೂರು ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬಂದಿಯ ತಂಡ ರಚಿಸಲಾಗಿತ್ತು. ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಯನ್ನು ಕಳವು ಮಾಡಲಾದ ಸೊತ್ತುಗಳ ಸಹಿತ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮಾದಕವಸ್ತು ಸೇವನೆ: ಆರೋಪಿ ಬಂಧನ

ಮಂಗಳೂರು: ಇಲ್ಲಿನ ಬಿಕರ್ನಕಟ್ಟೆ ಬಳಿ ಮಾದಕ ವಸ್ತುವನ್ನು ಸೇವನೆ ಮಾಡಿದ ಆರೋಪಿಯನ್ನು ಕದ್ರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕೇರಳ ಕೋಯಿಕ್ಕೋಡ್ ಜಿಲ್ಲೆಯ ಪೆರಂಬರ ಕೋರನ್ಕಂಡಿ ಮೀಥಲ್ ನಿವಾಸಿ ಮೊಹಮ್ಮದ್ ಶಾಮಿಲ್ (21) ಬಂಧಿತ ಆರೋಪಿ. ಪೊಲೀಸರು ಗಸ್ತಿನಲ್ಲಿರುವಾಗ, ಸೋಮವಾರ ರಾತ್ರಿ 10 ಗಂಟೆ ವೇಳೆಗೆ ಬಿಕರ್ನಕಟ್ಟೆ ಬಳಿ ಮಾದಕ ವಸ್ತು ಸೇವಿಸಿದಂತೆ ಕಂಡು ಬಂದ, ಆತನನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ವೈದ್ಯಕೀಯ ಪರೀಕ್ಷೆಗೆ ಒಳ ಪಡಿಸಿದಾಗ ಮಾದಕ ವಸ್ತು ಸೇವನೆ ದೃಢಪಟ್ಟಿದೆ. ಈತನ ವಿರುದ್ಧ ಎನ್ ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಕೆರೆಗೆ ಬಿದ್ದು ವೃದ್ಧೆ ಸಾವು

ಬಂಟ್ವಾಳ: ತಾಲೂಕಿನ ಕಾವಳಮೂಡೂರು ಗ್ರಾಮದ ಮುಡಾಲುಗುತ್ತುಎಂಬಲ್ಲಿ ವೃದ್ಧೆಯೋರ್ವರು ಆಕಸ್ಮಿಕವಾಗಿ ಕೆರೆಗೆ ಬಿದ್ದು ಮೃತಪಟ್ಟಿರುವ ಘಟನೆ ನಡೆದಿದೆ. ಮೃತರನ್ನು ಕಾವಳಮೂಡೂರು ಗ್ರಾಮದ ಕೊಳಕೆಗದ್ದೆ ನಿವಾಸಿ ಸುನಂದ (62) ಎಂದು ಗುರುತಿಸಲಾಗಿದೆ. ಇವರು ಮುಡಾಲುಗುತ್ತು ಎಂಬಲ್ಲಿರುವ ತಮ್ಮ ಕುಟುಂಬ ಮನೆಗೆಂದು ಹೋದವರು ವಾಪಸ್ ಬಾರದಿದ್ದಾಗ ಹುಡುಕಾಡಿದಾಗ ಮೂಡಾಲು ಎಂಬಲ್ಲಿನ ತೋಟದ ಕೆರೆಯಲ್ಲಿ ಮೃತದೇಹ ಪತ್ತೆಯಾಗಿದೆ. ಸುನಂದ ಅವರಿಗೆ ತಲೆಸುತ್ತು ಸಮಸ್ಯೆ ಇದ್ದು, ಆಗಾಗ ತಲೆ ಸುತ್ತಿ ಬೀಳುತ್ತಿದ್ದರು. ತೋಟದಲ್ಲಿ ನಡೆದುಕೊಂಡು ಬರುವಾಗ ಆಕಸ್ಮಿಕವಾಗಿ ತೋಟದಲ್ಲಿನ ಕೆರೆಯ ನೀರಿಗೆ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಮೃತ ಪಟ್ಟಿರಬೇಕೆಂದು ಶಂಕಿಸಲಾಗಿದ್ದು, ಪ್ರೇಮಚಂದ್ರ ಅವರ ದೂರಿನಂತೆ ಪುಂಜಾಲಕಟ್ಟೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಗ್ಯಾಸ್ ಬುಕ್ಕಿಂಗ್ ನಂಬರ್ ಸ್ತಬ್ಧ | ಏರಿಕೆಯಾದ ಸಿಲಿಂಡರ್, ಅಡಿಗೆ ತೈಲ ಬೆಲೆ | ಸಂಕಷ್ಟದಲ್ಲಿ ಜನತೆ

ತುತ್ತಿಗೂ ಕೊಳ್ಳಿಯಿಟ್ಟಿತು ಕೊಲ್ಲಿ ಯುದ್ಧ







ದಿಗಂತ ವಿಶೇಷ

ಮಂಗಳೂರು/ಉಡುಪಿ: ಅಡುಗೆ ಅನಿಲ ಬುಕ್ಕಿಂಗ್ ನಂಬರ್ ಒತ್ತಿದರೂ ಬುಕ್ ಆಗದ ಗ್ಯಾಸ್... ಹೊಟೇಲ್‌ಗಳಲ್ಲಿ ಮತ್ತೆ ತಿಂಡಿ ತಿನಿಸು ದರದಲ್ಲಿ ವ್ಯತ್ಯಯ. ಅಂಗಡಿಗೆ ಹೋದರೆ ಅಡುಗೆ ಎಣ್ಣೆ ಬೆಲೆ ಏರಿಕೆಯ ಬಿಸಿ...

ಇದು, ಕರಾವಳಿಯಾದ್ಯಂತ ಸದ್ಯ ಜನತೆ ಎದುರಿಸುತ್ತಿರುವ ಹೊಸ ಸಮಸ್ಯೆ. ಒಮ್ಮಿಂದೊಮ್ಮೆ ಏನಿದು ದರ ಏರಿಕೆ? ಯಾಕೆ ಹೀಗಾಯಿತು ಎಂದು ಜನತೆ ಬಗೆಬಗೆಯಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಹೋಟೆಲ್‌ಗಳಿಗೆ ಹೋದರೆ ತಿಂಡಿ ತಿನಿಸುಗಳ ದರದಲ್ಲೂ ಏರಿಕೆ. ಅಡುಗೆ ಅನಿಲ ದರದಲ್ಲೂ ಏರಿಕೆ ಇದು ಜನತೆಯನ್ನು ಕಂಗಾಲು ಮಾಡಿದೆ.

ಇದು ಕೊಲ್ಲಿ ರಾಷ್ಟ್ರಗಳ ಯುದ್ಧದ ಹೊಡೆತ

ಇಸ್ರೇಲ್ -ಇರಾನ್ ನಡುವೆ ಯುದ್ಧ ಆರಂಭವಾದಾಗ ಇದು ಯಾವುದೋ ದೇಶದಲ್ಲಿ ಯುದ್ಧವಾಗುತ್ತಿದೆ ಎಂದುಕೊಂಡವರೇ ಅಧಿಕ. ಆದರೆ ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿನ ಯುದ್ಧದ ಪರಿಣಾಮ ಇದೀಗ ಬಹುತೇಕ ರಾಷ್ಟ್ರಗಳಿಗೆ ತಟ್ಟಿದೆ. ಕರಾವಳಿಯಲ್ಲೂ ಮಹತ್ತರ ಪರಿಣಾಮವನ್ನು ಈ ಯುದ್ಧ ಉಂಟುಮಾಡಿದೆ.

> **ಪ್ರಸ್ತುತ ಎಲ್‌ಪಿಜಿ ಗ್ಯಾಸ್ ಕೊರತೆ ಪೂರೈಕೆಯಲ್ಲಿ ವ್ಯತ್ಯಯ ಇರುವುದು ನಿಜ. ಒಂದು ಸಿಲಿಂಡರ್ ಖರೀದಿ ಮಾಡಿ 25 ದಿನಗಳ ಅವಧಿಗೆ ಮತ್ತೊಂದು ಸಿಲಿಂಡರ್ ಬುಕ್ಕಿಂಗ್ ಮಾಡಬಾರದು ಎಂದು ಸೂಚಿಸಲಾಗುತ್ತಿದೆ.**
> ■ ಗ್ಯಾಸ್ ಏಜೆನ್ಸಿ ಸಿಬ್ಬಂದಿ, ಉಡುಪಿ

ಹೊಟೇಲ್ ಉದ್ಯಮಕ್ಕೆ ಭಾರೀ ಪೆಟ್ಟು

ಉಡುಪಿ ಮತ್ತು ದಕ್ಷಿಣ ಕನ್ನಡದ ಪ್ರಮುಖ ಆರ್ಥಿಕ ಮೂಲವಾಗಿರುವ ಹೊಟೇಲ್ ಉದ್ಯಮ ಈ ಬಿಕ್ಕಟ್ಟಿನಿಂದ ಕಂಗಾಲಾಗಿದೆ. ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆಯಲ್ಲೂ ವಿಳಂಬವಾಗುತ್ತಿರುವುದರಿಂದ, ಹೊಟೇಲ್ ಮಾಲೀಕರು ಅಡುಗೆ ತಯಾರಿಕೆಗೆ ಪರದಾಡುತ್ತಿದ್ದಾರೆ. ಇದು ಮುಂದುವರಿದಲ್ಲಿ ಹೊಟೇಲ್ ತಿಂಡಿ-ತಿನಿಸುಗಳ ಬೆಲೆ ಏರಿಕೆಯಾಗುವ ಭೀತಿ ಗ್ರಾಹಕರನ್ನು ಕಾಡುತ್ತಿದೆ.

ಬುಕ್ಕಿಂಗ್ ಸಮಸ್ಯೆ

ಗ್ಯಾಸ್ ಬುಕ್ಕಿಂಗ್ ಮಾಡಲು ನಂಬರ್ ಒತ್ತಿದರೆ ನಂಬರ್ ಡಯಲ್ ಆಗುತ್ತಿಲ್ಲ ಎಂಬ ದೂರುಗಳು ಎಲ್ಲೆಡೆಯಿಂದ ಕೇಳಿಬರುತ್ತಿವೆ. ಈಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್‌ಪಿಜಿ ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯವನ್ನು ಬಂಡವಾಳ ಮಾಡಿ ಕೊಂಡಿರುವ ಕೆಲವು ಏಜೆನ್ಸಿಗಳು ಜಿಲ್ಲೆಯಲ್ಲಿ 'ಕೃತಕ ಕೊರತೆ' ಸೃಷ್ಟಿಸಿರುವ ಆರೋಪವೂ ವ್ಯಕ್ತವಾಗಿದೆ. ಈ ಬಗ್ಗೆ ಸಾರ್ವಜನಿಕರಿಂದ ಏಜೆನ್ಸಿಗಳ ವಿರುದ್ಧ ಆಕ್ರೋಶ ವ್ಯಕ್ತವಾಗಲಾರಂಭಿಸಿದೆ. ಈ ಮೊದಲು ಸಿಲಿಂಡರ್ ಖಾಲಿಯಾಗುವ ಮುನ್ನವೇ ಬುಕ್ಕಿಂಗ್ ಮಾಡಲು ಅವಕಾಶವಿತ್ತು. ಆದರೆ, ಪ್ರಸ್ತುತ ಎಲ್.ಪಿ.ಜಿ ಏಜೆನ್ಸಿಗಳು 'ಗ್ಯಾಸ್ ಕೊರತೆ ಇದೆ' ಎಂಬ ನೆಪವೊಡ್ಡಿ, ಒಂದು ಬುಕ್ಕಿಂಗ್ ಆದ ಕನಿಷ್ಠ 25 ದಿನಗಳ ನಂತರವಷ್ಟೇ ಮುಂದಿನ ಬುಕ್ಕಿಂಗ್‌ಗೆ ಅವಕಾಶ ನೀಡುತ್ತಿವೆ. ಇದರಿಂದಾಗಿ ದೊಡ್ಡ ಕುಟುಂಬಗಳು ಹಾಗೂ ಅತಿಥಿಗಳು ಬಂದಾಗ ಅಡುಗೆಗೆ ಗ್ಯಾಸ್ ಇಲ್ಲದೆ ಪರದಾಡುವಂತಾಗಿದೆ. ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಈ ಸಮಸ್ಯೆ ಇನ್ನೂ ತೀವ್ರವಾಗಿದ್ದು, ಜನರು ಮತ್ತೆ ಕಟ್ಟಿಗೆ ಒಲೆಯತ್ತ ಮುಖ ಮಾಡುವ ಅನಿವಾರ್ಯತೆ ಎದುರಾಗಿದೆ.

ಕೇಂದ್ರದ ನಿಯಂತ್ರಣ ಎಷ್ಟು ಪರಿಣಾಮಕಾರಿ?

ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಕೇಂದ್ರ ಸರ್ಕಾರವು 1955ರ ಅಗತ್ಯ ವಸ್ತುಗಳ ಕಾಯ್ದೆಯಡಿ ಎಲ್.ಪಿ.ಜಿ ಪೂರೈಕೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ಕಾಳಸಂತೆ ಮತ್ತು ಅನಗತ್ಯ ದಾಸ್ತಾನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದ್ದರೂ, ಸ್ಥಳೀಯ ಮಟ್ಟದಲ್ಲಿ ಇದು ಎಷ್ಟು ಮಟ್ಟಿಗೆ ಜಾರಿಯಾಗಲಿದೆ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಜಿಲ್ಲಾಡಳಿತವು ತಕ್ಷಣ ಮಧ್ಯಪ್ರವೇಶಿಸಿ, ಏಜೆನ್ಸಿಗಳು ಸೃಷ್ಟಿಸುತ್ತಿರುವ ಕೃತಕ ಕೊರತೆಯ ಬಗ್ಗೆ ತನಿಖೆ ನಡೆಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕ್ಷುಲ್ಲಕ ಕಾರಣಕ್ಕೆ ಆರಂಭವಾದ ಗಲಾಟೆ ವೃದ್ಧೆಯ ಕೊಲೆಯಲ್ಲಿ ಪರ್ಯಾವಸಾನ

ಉಡುಪಿ: ಜಿಲ್ಲೆಯ ಕಾಪು ತಾಲೂಕಿನ ಮಣಿಪುರ ಗ್ರಾಮದ ಅರಬಿ ಕೆನರಾಡಿ ಎಂಬಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ನಡೆದ ಗಲಾಟೆಯು ವೃದ್ಧೆಯೊಬ್ಬರ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ಸೋಮವಾರ ರಾತ್ರಿ ನಡೆದಿದೆ. ಮಣಿಪುರ ನಿವಾಸಿ



ವನಜಾ ಪೂಜಾರ್ತಿ (60) ಕೊಲೆಯಾದ ದುರ್ದೈವಿ.

ಘಟನೆಯ ವಿವರ

ವನಜಾ ಪೂಜಾರ್ತಿ ಅವರು ತಮ್ಮ ಮನೆಯಲ್ಲಿದ್ದಾಗ, ನೆರೆಹೊರೆಯವರೊಂದಿಗೆ ಯಾವುದೋ ಒಂದು ಸಣ್ಣ ವಿಷಯಕ್ಕೆ ಸಂಬಂಧಿಸಿದಂತೆ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದೆ. ಈ ಜಗಳ ವಿಕೋಪಕ್ಕೆ ತಿರುಗಿದಾಗ,



ಆರೋಪಿಗಳು ಹರಿತವಾದ ಆಯುಧದಿಂದ ವನಜಾ ಅವರ ಮೇಲೆ ಏಕಾಏಕಿ ದಾಳಿ ನಡೆಸಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ತಕ್ಷಣ ಆಸ್ಪತ್ರೆಗೆ ಕರೆದೊಯ್ಯುವ ಪ್ರಯತ್ನ ಮಾಡಲಾಯಿತಾದರೂ, ಅವರು ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ಕಾಪು ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದೆ.

ತನಿಖೆ ಚುರುಕು

ವಿಷಯ ತಿಳಿಯುತ್ತಿದ್ದಂತೆಯೇ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಂ ಶಂಕರ್, ಹೆಚ್ಚುವರಿ ಎಸ್ಪಿ ಸುಧಾಕರ್ ನಾಯ್ಕ್ ಮತ್ತು ಕಾಪು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನಾ ಸ್ಥಳಕ್ಕೆ ಮಣಿಪಾಲ ಕೆಎಂಸಿಯ ಫೋರೆನ್ಸಿಕ್ ತಜ್ಞರು, ಶ್ವಾನ ದಳ ಮತ್ತು ಬೆರಳಚ್ಚು ತಜ್ಞರು ಆಗಮಿಸಿ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಪೊಲೀಸರು ಈಗಾಗಲೇ ಇಬ್ಬರು ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ವಿವಿ ಕಾಲೇಜಿನಲ್ಲಿ ರಾಜಕೀಯ ವ್ಯಕ್ತಿಗಳ ಅನಗತ್ಯ ಪ್ರವೇಶ ಆರೋಪ

ಕಾಲೇಜು ಮುಂಭಾಗ ಪ್ರತಿಭಟನೆ

ಮಂಗಳೂರು: ನಗರದ ಹಂಪನಕಟ್ಟೆಯಲ್ಲಿರುವ ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ರಾಜಕೀಯ ಕೇಂದ್ರಿತ ವ್ಯಕ್ತಿಗಳು ಪ್ರವೇಶಿಸಿ ಗೊಂದಲದ ವಾತಾ ವರಣ ಸೃಷ್ಟಿಸಿದ್ದಾರೆ ಎಂದು ಆರೋಪಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಸದಸ್ಯರು ಮಂಗಳವಾರ ಕಾಲೇಜು ಮುಂಭಾಗ ಪ್ರತಿಭಟನೆ ನಡೆಸಿದರು.



ರಾಜಕೀಯ ಪಕ್ಷ ಕೇಂದ್ರಿತ ಸುಮಾರು 15 ರಿಂದ 20 ಜನರ ಗುಂಪು, ಕಾಲೇಜಿನ ಆವರಣಕ್ಕೆ ನುಗ್ಗಿ ಕೆಲವು ತರಗತಿಗೆ ತೆರಳಿ ವಿದ್ಯಾರ್ಥಿಗಳ ಜೊತೆ ಸಂಭಾಷಣೆಯ ನೆಪದಲ್ಲಿ ಅನವಶ್ಯಕ ಗದ್ದಲವನ್ನ ಸೃಷ್ಟಿಸಿರುವುದು ವಿದ್ಯಾರ್ಥಿಗಳಲ್ಲಿ ಕಳವಳವನ್ನುಂಟು ಮಾಡಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಏಕಾಏಕಿ ಕಾಲೇಜಿಗೆ ಸಂಬಂಧಪಡದ, ಪಕ್ಷ ಸಂಘಟನೆಯಲ್ಲಿ ಗುರುತಿಸಿಕೊಂಡಿರುವವ್ಯಕ್ತಿಗಳಕ್ಯಾಂಪಸ್ ಪ್ರವೇಶವು ಅತ್ಯಂತ ಖಂಡನೀಯ ಮತ್ತು ಅನುಮಾನಸ್ಪದ ಸಂಗತಿಯಾಗಿದೆ. ಈ ರೀತಿಯ ಘಟನೆಗಳು ಕಾಲೇಜಿನಲ್ಲಿ ಶೈಕ್ಷಣಿಕ ವಾತಾವರಣಕ್ಕೆ ದಕ್ಕೆಯನ್ನುಂಟು ಮಾಡಿದ್ದೂ, ಈ ಘಟನೆಯ ಬಗ್ಗೆ ಸೂಕ್ತ ತನಿಖೆ ನಡೆಸಿ ಇದಕ್ಕೆ ಅನುಮತಿ ನೀಡಿರುವ ಪ್ರಾಧ್ಯಾಪಕರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

▸▸ **ರಾಜಕೀಯ ಪಕ್ಷ ಕೇಂದ್ರಿತ ಸುಮಾರು 15 ರಿಂದ 20 ಜನರ ಗುಂಪು, ಕಾಲೇಜಿನ ಆವರಣಕ್ಕೆ ನುಗ್ಗಿ ಗದ್ದಲ**

ಕಾಲೇಜಿನಲ್ಲಿ ಸಿಹಿ ಹಂಚಿದ ಎನ್‌ಎಸ್‌ಯುಐ



ಮಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯ ಬಜೆಟ್‌ನಲ್ಲಿ ವಿಶ್ವವಿದ್ಯಾನಿಲಯ-ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆ ಮರುಪ್ರಾರಂಭಿಸುವುದು ಹಾಗೂ ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್ ಘೋಷಿಸಿದ ಹಿನ್ನೆಲೆಯಲ್ಲಿ ಎನ್.ಎಸ್.ಯು.ಐ ವತಿಯಿಂದ ಸೋಮವಾರ ನಗರದ ಹಂಪನಕಟ್ಟೆ ವಿಶ್ವವಿದ್ಯಾನಿಲಯ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳಿಗೆ ಸಹಿತಿಂಡಿ ಹಂಚಿ ಸಂಭ್ರಮಿಸಲಾಯಿತು. ಎನ್‌ಎಸ್‌ಯುಐ ರಾಷ್ಟ್ರೀಯ ಸಂಯೋಜಕ, ವಿವಿ ಸಿಂಡಿಕೇಟ್ ಸದಸ್ಯ ಸವಾದ್ ಸುಳ್ಯ, ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಮೊಹಮ್ಮದ್ ಬಶೀರ್, ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಸುಹಾನ್ ಆಳ್ವ, ಮಂಗಳೂರು ವಿಶ್ವವಿದ್ಯಾನಿಲಯ ಅಧ್ಯಕ್ಷ ಸಫ್ವಾನ್ ಕುದ್ರೋಳಿ, ಜಿಲ್ಲಾ ಉಪಾಧ್ಯಕ್ಷ ಸುಖ್ವಿಂದರ್ ಸಿಂಗ್, ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ಅಧ್ಯಕ್ಷ ಕ್ರಿಸ್ಟನ್ ಮಿನೇಜಸ್, ಉಪಾಧ್ಯಕ್ಷ ಇಶಾನ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಪಿಲಿಕುಳದ ಗುತ್ತು ಮನೆ, ಕುಶಲಕರ್ಮಿ ಗ್ರಾಮದ ಗತ್ತಿಗೆ ಬೆರಗಾದ ವಿದೇಶಿಯರು!



ಮಂಗಳೂರು: ನವಮಂಗಳೂರು ಬಂದರಿಗೆ ಓಶೇನಿಯಾ ಐಷಾರಾಮಿ ಹಡಗಿನಲ್ಲಿ ಆಗಮಿಸಿದ್ದ ನೂರಾರು ವಿದೇಶಿ ಪ್ರವಾಸಿಗರು ಪಿಲಿಕುಳದ ಗುತ್ತುಮನೆ ಮತ್ತು ಕುಶಲಕರ್ಮಿ ಗ್ರಾಮಕ್ಕೆ ಭಾನುವಾರ ಭೇಟಿ ನೀಡಿದರು.

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಕುಶಲಕರ್ಮಿ ಗ್ರಾಮದಲ್ಲಿ ಮುಂದಿನ ತಲೆಮಾರಿಗೆ ಪಾರಂಪರಿಕವಾಗಿ ಉಳಿಸಿಕೊಂಡು ಬಂದಿರುವ ಕುಂಬಾರಿಕೆ, ಕುಟ್ಟಣದಅವಲಕ್ಕಿ, ಎಣ್ಣೆಗಾಣ, ಕಮ್ಮಾರಿಕೆ, ಬಡಗಿ, ಬೆತ್ತ ಬಿದಿರು ವಿಭಾಗಗಳಲ್ಲಿ ದೈನಂದಿನ ನಿರಂತರವಾಗಿ ನಡೆಯುವ ನೇರ ಪ್ರಾತ್ಯಕ್ಷಿಕೆಗಳನ್ನು ವೀಕ್ಷಿಸಿ ಆಶ್ಚರ್ಯ ಪಟ್ಟು ಗ್ರಾಮ್ಯಜೀವನದ ಮಾಹಿತಿಗಳನ್ನು ಪ್ರವಾಸಿಗರು ಪಡೆದುಕೊಂಡರು.

▸▸ **ಓಶೇನಿಯಾ ಐಷಾರಾಮಿ ಹಡಗಿನಲ್ಲಿ ಆಗಮಿಸಿದ್ದ ವಿದೇಶಿ ಪ್ರವಾಸಿಗರು**

▸▸ **ಪಿಲಿಕುಳದ ಗುತ್ತುಮನೆ, ಕುಶಲಕರ್ಮಿ ಗ್ರಾಮಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ ಪ್ರವಾಸಿಗರು**

▸▸ **ದೈನಂದಿನ ನಿರಂತರವಾಗಿ ನಡೆಯುವ ನೇರ ಪ್ರಾತ್ಯಕ್ಷಿಕೆ ವೀಕ್ಷಿಸಿ ಗ್ರಾಮ್ಯಜೀವನದ ಮಾಹಿತಿ ಪಡೆದ ಅತಿಥಿಗಳು**

150ಕ್ಕೂ ಅಧಿಕ ಮಂದಿ

ಪ್ರತೀ ವರ್ಷ ಪಿಲಿಕುಳಕ್ಕೆ ಪ್ರವಾಸವನ್ನು ಆಯೋಜಿಸುವ ಮಂಗಳೂರಿನ ಪ್ರವಾಸಿ ಸಂಸ್ಥೆ ಲಿಯಾ ಟ್ರಾವೆಲ್ಸ್ ವಿದೇಶಿ ಪ್ರವಾಸಿಗರನ್ನು ಕರೆತರುವ ಜವಾಬ್ದಾರಿ ವಹಿಸಿತ್ತು. ಒಟ್ಟು 150ಕ್ಕಿಂತಲೂ ಹೆಚ್ಚು ವಿದೇಶಿ ಪ್ರವಾಸಿಗರು ಪಿಲಿಕುಳಕ್ಕೆ ಭೇಟಿ ನೀಡಿದ್ದರು ಎಂದು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಧಾನಸಭಾ ಚುನಾವಣೆಗೆ ಪೂರ್ವ ಸಿದ್ಧತೆ | ಎಲ್ಲೆಡೆ ಭದ್ರತೆಗೆ ಒತ್ತು

ಕಾಸರಗೋಡಿಗೆ ಬಿಎಸ್‌ಎಫ್ ಆಗಮನ

ಕಾಸರಗೋಡು: ಕೇರಳ, ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಅಸ್ಸಾಂ ರಾಜ್ಯ ವಿಧಾನಸಭೆಗಳಿಗೆ ನಡೆಯಲಿರುವ ಚುನಾವಣಾ ದಿನಾಂಕವನ್ನು ಕೇಂದ್ರ ಚುನಾವಣಾ ಆಯೋಗ ಈ ವಾರವೇ ಘೋಷಿಸುವ ಸಾಧ್ಯತೆಯಿದೆ.

ಚುನಾವಣೆಗಾಗಿ ಕೈಗೊಳ್ಳಲಾಗಿರುವ ಪೂರ್ವಭಾವಿ ಸಿದ್ಧತೆಗಳ ಬಗ್ಗೆ ಅವಲೋಕನೆಗಾಗಿ ಕೇಂದ್ರ ಚುನಾವಣಾ ಆಯುಕ್ತರ ನೇತೃತ್ವದ ನಿಯೋಗ ಚುನಾವಣೆ ನಡೆಯಲಿರುವ ಎಲ್ಲಾ ರಾಜ್ಯಗಳಿಗೂ ಈಗಾಗಲೇ ಸಂದರ್ಶಿಸಿ ಅಗತ್ಯದ ಮಾಹಿತಿಗಳನ್ನು ಸಂಗ್ರಹಿಸಿದೆ. ಚುನಾವಣೆ ವೇಳೆ ಅಗತ್ಯದ ಭದ್ರತೆ ಒದಗಿಸಲು ಎಲ್ಲಾ ರಾಜ್ಯಗಳಿಗೂ ಅಗತ್ಯದಷ್ಟು ಕೇಂದ್ರ ಭದ್ರತಾ ಪಡೆಗಳನ್ನು ಕಳುಹಿಸಿಕೊಡು ವಂತೆಯೂ ಆಯೋಗ ಕೇಂದ್ರ ಸರಕಾರಕ್ಕೆ ನಿರ್ದೇಶ ನೀಡಿದೆ.

ಅದರಂತೆ ಗಡಿಭದ್ರತಾ ಪಡೆ (ಬಿಎಸ್‌ಎಫ್)ನ ರಾಜಸ್ಥಾನದ ಜೈಪುರ ಘಟಕದ ಎರಡು ತುಕಡಿ ಕಾಸರಗೋಡಿಗೆ ಈಗಾಗಲೇ ಆಗಮಿಸಿದೆ. ಅಸಿಸ್ಟೆಂಟ್ ಕಮಾಂಡರ್ ಎಸ್.ಎಚ್. ಮೋಹನ್ ಸಿಂಗ್ ಮೀಣಾ ಈ ತುಕಡಿಯ ಮುಖ್ಯಸ್ಥರಾಗಿದ್ದಾರೆ. ಕಾಸರಗೋಡಿಗೆ ಆಗಮಿಸಿದ ಬಿಎಸ್‌ಎಫ್ ತಂಡಕ್ಕೆ ಜಿಲ್ಲೆಯ ಹಲವು ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ಸ್ವಾಗತ ನೀಡಲಾಯಿತು.

ಎಲ್ಲೆಲ್ಲಿ ನಿಯೋಜನೆ?


ಜಿಲ್ಲೆಗೆ ಆಗಮಿಸಿರುವ ಬಿಎಸ್‌ಎಫ್‌ನ ಎರಡು ತುಕಡಿಗಳಲ್ಲಿ ಒಂದನ್ನು ಉಳಿಯತ್ತಡ್ಕದಲ್ಲಿ ಹಾಗೂ ಇನ್ನೊಂದು ತುಕಡಿಯನ್ನು ಹೊಸದುರ್ಗ ಪುಲ್ಲೂರಿನಲ್ಲಿ ಶಿಬಿರ ಸೌಕರ್ಯ ಏರ್ಪಡಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಕೇಂದ್ರ ಭದ್ರತಾ ತುಕಡಿಗಳು ಜಿಲ್ಲೆಗೆ ಬಂದು ಸೇರಲಿದೆ. ಚುನಾವಣಾ ದಿನಾಂಕ ಘೋಷಣೆಯಿಂದ ಆರಂಭಗೊಂಡು ಮತ ಎಣಿಕೆ ಪ್ರಕ್ರಿಯೆಗಳು ಪೂರ್ಣಗೊಳ್ಳುವ ತನಕ ಈ ಕೇಂದ್ರ ಪಡೆಗಳು ಜಿಲ್ಲೆಯಲ್ಲಿ ಉಳಿದುಕೊಳ್ಳಲಿವೆ.

ರಾಮಕುಂಜದಲ್ಲಿ ಬಾವಿ ತೋಡಲು ಸ್ಫೋಟಕ ಬಳಕೆ | ಸ್ಫೋಟದ ತೀವ್ರತೆಗೆ ಪರಿಸರದ ಮನೆಗಳಿಗೆ ಹಾನಿ

ಬಾಂಬ್ ನಿಷ್ಕ್ರಿಯ ದಳ ಭೇಟಿ, ಮದ್ದುಗುಂಡು ತೆರವು

ಕಡಬ: ರಾಮಕುಂಜ ಗ್ರಾಮದ ಕಂಪ ಎಂಬಲ್ಲಿ ಭಾನುವಾರ ಬಾವಿ ತೋಡುವಾಗ ಸ್ಫೋಟಕ ಬಳಕೆ ಮಾಡಿರುವುದರಿಂದ ಸಮೀಪದ ಮನೆಗಳಿಗೆ ಹಾನಿಯಾಗಿರುವ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಮಂಗಳವಾರ ಬಾಂಬ್ ನಿಷ್ಕ್ರಿಯದಳದ ಸಿಬ್ಬಂದಿಗಳು ಸ್ಥಳಕ್ಕೆ ತೆರಳಿ ಸ್ಫೋಟವಾಗದೆ ಬಾವಿಯೊಳಗೆ ಉಳಿದಿರುವ ಮದ್ದುಗುಂಡುಗಳನ್ನು ತೆರವು ಕಾರ್ಯ ಪ್ರಾರಂಭಿಸಿದ್ದಾರೆ.

ರಾಮಕುಂಜ ಗ್ರಾಮದ ಕಂಪ ಎಂಬಲ್ಲಿ ಮೈಸೂರು ನಿವಾಸಿ ಸೋಮಶೇಖರ ಎಂಬವರು ತಮ್ಮ ಸಂಬಂಧಿಕರಿಂದ 23 ಸೆಂಟ್ಸ್ ಜಾಗ ಖರೀದಿಸಿದ್ದು, ಅದರಲ್ಲಿ ಅಡಿಕೆ ಮರಗಳಿವೆ. ಈ ಜಾಗದಲ್ಲಿ ನೀರಿಗಾಗಿ ಬಾವಿ ತೋಡಿದ್ದು ಸುಮಾರು 15 ಅಡಿ ಆಳದಲ್ಲಿ ಕಲ್ಲು ಸಿಕ್ಕಿದ ಹಿನ್ನೆಲೆಯಲ್ಲಿ ಸ್ಫೋಟಕ ಬಳಸಿ ಬಾವಿ ತೋಡಲು ಮುಂದಾಗಿ ಭಾನುವಾರ ಸ್ಫೋಟಕ ಸಿಡಿಸಿದ್ದಾರೆ. ಇದರಿಂದ ಸಮೀಪದ ವಾಮನ ಮೂಲ್ಯ ಹಾಗೂ ಕೆ.ಟಿ. ಮೋಹನ ಎಂಬವರ ಮನೆಯ ಗೋಡೆಗಳು ಬಿರುಕು ಬಿಟ್ಟಿವೆ. ಈ ಬಗ್ಗೆ ಅವರು ಕಡಬ ಪೊಲೀಸರಿಗೆ ದೂರು ನೀಡಿದ್ದರು. ಅದೇ ದಿನ ಸ್ಥಳಕ್ಕೆ ಆಗಮಿಸಿದ ಕಡಬ ಎಸ್‌ಐ ಜಂಬೂರಾಜ್ ಮಹಾಜನ್ ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದರು.



ಕಾರ್ಯಾಚರಣೆಯಲ್ಲಿ ತೊಡಗಿರುವ ಬಾಂಬು ನಿಷ್ಕ್ರಿಯ ದಳದ ಸಿಬಂದಿಗಳು, ಪೊಲೀಸರು.

ಬಾವಿಯ ಬಳಿ ಭದ್ರತೆಗಾಗಿ ಪೊಲೀಸರ ನಿಯೋಜನೆ

ಈ ಮಧ್ಯೆ ಬಾವಿಯೊಳಗೆ ಸ್ಫೋಟವಾಗದೆ ಉಳಿದುಕೊಂಡಿದ್ದ ಮದ್ದು ಗುಂಡು ತೆರವುಗೊಳಿಸಲು ಮಂಗಳವಾರ ಬೆಳಿಗ್ಗೆ ಬಾಂಬ್ ನಿಷ್ಕ್ರಿಯ ದಳ ಸಿಬ್ಬಂದಿಗಳು ಆಗಮಿಸಿ ಕಾರ್ಯಾಚರಣೆ ಆರಂಭಿಸಿದ್ದಾರೆ. ಬಾವಿಯಲ್ಲಿ ನೀರು ಇರುವುದರಿಂದ ಕಂಪ್ರೆಸರ್ ಬಳಸಿ ಜೀವಂತವಾಗಿರುವ ಸ್ಫೋಟಕಗಳನ್ನು ತೆಗೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆಯನ್ನು ಬುಧವಾರಕ್ಕೆ ಮುಂದೂಡಲಾಗಿದ್ದು. ಬಾವಿಯ ಬಳಿ ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿಗಳು ಕಾರ್ಯಾಚರಣೆಗೆ ಸಾಥ್ ನೀಡಿದ್ದು. ಕಡಬ ಎಸ್ ಐ ಜಂಬೂರಾಜ್, ಎಫ್ ಎಸ್ ಎಲ್ ಟೀಮ್‌ನ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕೆರೆಗೆ ಬಿದ್ದ ಮಗ-ರಕ್ಷಿಸಲು ತೆರಳಿದ ತಂದೆ ಮಗನ ಜೊತೆ ಜಲಸಮಾಧಿ

ಮಡಿಕೇರಿ: ಆಕಸ್ಮಿಕವಾಗಿ ಕೆರೆಗೆ ಬಿದ್ದ ಮಗ ಹಾಗೂ ಆತನನ್ನು ರಕ್ಷಿಸಲು ಕೆರೆಗೆ ಇಳಿದ ತಂದೆ ಇಬ್ಬರೂ ನೀರಿನಲ್ಲಿ ಮುಳುಗಿ ಸಾವಿಗೀಡಾದ ಹೃದಯ ವಿದ್ರಾವಕ ಘಟನೆ ಪೊನ್ನಂಪೇಟೆ ತಾಲೂಕಿನ ಚಿಕ್ಕಮಂಡೂರು ಗ್ರಾಮದಲ್ಲಿ ನಡೆದಿದೆ.

ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಎರಡನೇ ತರಗತಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿ ಜೆ. ಕೆ. ಕೆಂಚ (8) ಹಾಗೂ ಆತನ ತಂದೆ ಜೇನುಕುರುಬರ ಶಿವಣ್ಣ (40) ಮೃತಪಟ್ಟವರು. ಚಿಕ್ಕಮುಂಡೂರು ಗ್ರಾಮದ ಜಾಲಿ ಪೂವಯ್ಯ ಎಂಬವರ ಲೈನ್ ಮನೆಯಲ್ಲಿ ಜೆ.ಕೆ.ಶಿವಣ್ಣ ತನ್ನ ಕುಟುಂಬದೊಂದಿಗೆ ನೆಲೆಸಿದ್ದು, ಭಾನುವಾರ ಶಾಲೆಗೆ ರಜೆ ಇದ್ದ ಹಿನ್ನಲೆಯಲ್ಲಿ ತನ್ನ ಕುಟುಂಬದವರೊಂದಿಗೆ ಕೆರೆಗೆ ತೆರಳಿದ್ದರು. ಕೆರೆಯ ಬಳಿ ಸ್ನಾನ ಮಾಡಿಕೊಂಡು ಆಟವಾಡಿಕೊಂಡಿದ್ದ, ಬಾಲಕ ಕೆಂಚ ಆಕಸ್ಮಿಕವಾಗಿ ಕೆರೆಗೆ ಬಿದ್ದಿದ್ದು, ಇದನ್ನು ಗಮನಿಸಿದ ತಂದೆ ಶಿವಣ್ಣ ಮಗನನ್ನು ರಕ್ಷಿಸುವ ಸಲುವಾಗಿ ನೀರಿಗೆ ಇಳಿದಿದ್ದಾರೆ. ಆದರೆ ಕೆರೆಯಲ್ಲಿ ಹೂಳು ಇದ್ದ ಕಾರಣ ದುರದೃಷ್ಟವಶಾತ್ ನೀರಿನಿಂದ ಹೊರಬರಲಾಗದೆ, ತಂದೆ ಮಗ ಇಬ್ಬರೂ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವುದಾಗಿ ಹೇಳಲಾಗಿದೆ.

ಭಾನುವಾರ ಸಂಜೆ ಶಿವಣ್ಣನ ಶವವನ್ನು ಕೆರೆಯಿಂದ ಹೊರಗೆ ತೆಗೆಯಲಾಗಿದ್ದು, ಸೋಮವಾರ ಬಾಲಕನ ಮೃತದೇಹವನ್ನು ಹೊರತೆಗೆಯಲಾಗಿದೆ.

ಕುಟುಂಬದವರ ರೋಧನ

ಕಣ್ಣೆದುರೇ ಗಂಡ ಹಾಗೂ ಮಗನನ್ನು ಕಳೆದುಕೊಂಡ ಶಿವಣ್ಣ ಅವರ ಪತ್ನಿ ಸುಮತಿ ತನ್ನ ಇನ್ನಿಬ್ಬರು ಪುಟ್ಟ ಮಕ್ಕಳೊಂದಿಗೆ ರೋಧಿಸುತಿದ್ದ ದೃಶ್ಯ ಹಾಗೂ ಮಗ ಮೊಮ್ಮಗನನ್ನು ಕಳೆದುಕೊಂಡ ಶಿವಣ್ಣ ಅವರ ತಾಯಿಯ ಆಕ್ರಂದನ ಮುಗಿಲುಮುಟ್ಟಿತ್ತು. ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಘಟನಾ ಸ್ಥಳಕ್ಕೆ ಕುಟ್ಟ ವೃತ್ತ ನಿರೀಕ್ಷಕ ಶಿವರುದ್ರಪ್ಪ ಹಾಗೂ ಶ್ರೀಮಂಗಲ ಠಾಣಾಧಿಕಾರಿ ರವೀಂದ್ರ ಅವರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 36° 23° | ಉಡುಪಿ 32° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 11, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 3
ಜೀವನದ ಉನ್ನತಿಗೆ ದೈವ ಬಲವೂ ಅಗತ್ಯ: ಕನ್ಯಾಡಿ ಶ್ರೀ



ಪುಟ 4
ಬೆಲೆ ಏರಿಕೆಯ ಸುಳಿಗೆ ಸಿಲುಕಿ ಹೈರಾಣಾದ ಕರಾವಳಿಯ ಗ್ರಾಹಕರು!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನ


ಉಜಿರೆ ಗ್ರಾಮ ಬೆಳ್ತಂಗಡಿ ತಾಲೂಕು

ಚರಿತ್ರೆಯ ಬೆಳಕಿನಲ್ಲಿ ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಾಲಯ

ಡಾ। ಶ್ರೀಧರ ಭಟ್
ಸಂಸ್ಕೃತ ಪ್ರಾಧ್ಯಾಪಕರು, ಎಸ್.ಡಿ.ಎಂ. ಕಾಲೇಜು ಉಜಿರೆ

ದಕ್ಷಿಣ ಕನ್ನಡ ಜಿಲ್ಲೆಯ ಗುಣಮಟ್ಟದ ವಿದ್ಯಾಕ್ಷೇತ್ರಗಳಲ್ಲಿ ಪ್ರಮುಖವಾದುದು ಉಜಿರೆ. ಬೀರೂರು ಮಂಗಳೂರು ಹೆದ್ದಾರಿಯಲ್ಲಿ ನಾಡಿನ ಧರ್ಮಕ್ಷೇತ್ರ ಧರ್ಮಸ್ಥಳದ ಹೆಬ್ಬಾಗಿಲು ಈ ಉಜಿರೆ. ಇಲ್ಲಿರುವ ಧರ್ಮಸ್ಥಳಕ್ಕೆ ಸ್ವಾಗತ ಕೋರುವ ಮಹಾದ್ವಾರವು ಉಜಿರೆ ಮತ್ತು ಧರ್ಮಸ್ಥಳಕ್ಕಿರುವ ಅವಿನಾಭಾವ ಸಂಬಂಧದ ದ್ಯೋತಕ. ಹಿಂದಿನ ಅನೇಕ ಶತಮಾನ ಗಳಿಂದಲೂ ಘಟ್ಟದ ಮೇಲಿಂದ ಬರುವ ಸಾಂಬಾರು ಪದಾರ್ಥಗಳು ಮತ್ತು ಜಾನುವಾರುಗಳ ವ್ಯಾಪಾರಕ್ಕಾಗಿ ಚಾರ್ಮಾಡಿ ಘಾಟಿಯಿಂದ ಕೆಳಗಿಳಿದು ಬರುವವರಿಗೆ ಹೆಬ್ಬಾಗಿಲು ಉಜಿರೆ. ಮೊದಲಿನಿಂದಲೂ ಶ್ರೀಮಂತ ವ್ಯಾಪಾರಿಗಳು ಇಲ್ಲಿ ನೆಲೆಸಿದ್ದರಿಂದ ಉಜಿರೆಯ ಪ್ರಾಚೀನ ಹೆಸರು ಉಚ್ಚಶ್ರೀ ಅಥವಾ ಉಚ್ಚಭೂತಿ "ಸ ಗ್ರಾಮಂ ಪರಮಭಿಯಾತ ಉಚ್ಚಭೂತಿಂ" ಎಂಬ ವಾಕ್ಯವು ನಾರಾಯಣ ಪಂಡಿತಾಚಾರ್ಯರ ಸುಮಧ್ವವಿಜಯದಲ್ಲಿ ಬಂದಿದೆ. (16ನೇ ಸರ್ಗದ 41 ಮತ್ತು 42ನೇ ಶ್ಲೋಕ) "ಉಚ್ಚಸ್ಯ ಉಜೇರ್ಯ ಇತ್ಯಪಭ್ರಷ್ಟ ಭಾಷಾ" ಎಂದು ಸುಮಧ್ವವಿಜಯದ ಭಾವ ಪ್ರಕಾಶಿಕಾ ವ್ಯಾಖ್ಯಾನದಲ್ಲಿ ವಿವರಣೆ ಇದೆ. "ತೌಲವ ಭಾಷಯಾ ಉಜೇರ್ಯ ಇತಿ ವಾಚಕಮ್" ಎಂದು ವಿಶ್ವಪತಿ ವ್ಯಾಖ್ಯಾನ ಹೇಳುತ್ತದೆ. ಆದ್ದರಿಂದ ಭೂತಿ ಎಂದರೆ ಸಂಪತ್ತು ಅರ್ಥಾತ್ ಶ್ರೀ. ಉಚ್ಚಶ್ರೀ ಎಂಬುದೇ ಉಜೇರ್ಯ ಆಗಿ ಈಗ ಉಜಿರೆ ಎಂದಾಗಿರಬೇಕೆಂಬುದು ಬಲ್ಲವರ ಆಶಯ.

ಉಜಿರೆಯ ಪೇಟೆಯಿಂದ ಅನತಿ ದೂರದಲ್ಲಿ, ಇಡೀ ಉಜಿರೆಯ ಹೃದಯದಂತಿರುವ ಶ್ರದ್ಧಾಕೇಂದ್ರವೇ ಶ್ರೀ ಜನಾರ್ದನ ಸ್ವಾಮಿ ದೇವಾಲಯ. ಈ ದೇವಮಂದಿರದ ಪ್ರಧಾನ ದೇವರು ಜನಾರ್ದನ ಸ್ವಾಮಿ. ದೇವಾಲಯದ ಪ್ರಾಂಗಣದಲ್ಲಿರುವ ಶಿಲಾಶಾಸನದಲ್ಲಿ ಈ ದೇವರನ್ನು ಉಜಿರೆಯ ಮಹಾವಿಷ್ಣು ಎಂದು ಕರೆದಿದ್ದಾರೆ. ಗಜಪೃಷ್ಠಾಕಾರದ ಗರ್ಭಗುಡಿಯ ಎಡಭಾಗದಲ್ಲಿ ಅಮ್ಮನವರು ಎಂದು ಕರೆಯುವ ದೈವಸ್ಥಾನವಿದೆ. ಗರ್ಭಗುಡಿಯ ಬಲಭಾಗದಲ್ಲಿ ಮಂಜುಳೇಶನೆಂಬ ಈಶ್ವರದೇವರ ಪ್ರತಿಷ್ಠಾಪನೆಯನ್ನು 2001 ರಲ್ಲಿ ಮಾಡಲಾಗಿದೆ. ಈ ಶಿವಮಂದಿರದ ಬಲಬದಿಯ ಮೂಲೆ ಯಲ್ಲಿ ಬಲಮುರಿ ಗಣಪತಿಯು ಪಥಮ ವಂದ್ಯನಾಗಿದ್ದಾನೆ. ದೇವಾಲಯದ ಈಶಾನ್ಯ ಮೂಲೆಯಲ್ಲಿ ನೆತ್ತರ್ ಮುಗುಳಿ ಎಂಬ ದೈವ ಸಾನ್ನಿಧ್ಯವಿದೆ. ದೇವಸ್ಥಾನದ ಹೊರಾವರಣದಲ್ಲಿ ಪ್ರಾರಂಭದಲ್ಲಿ ಮರದಿಂದ ನಿರ್ಮಿಸಿದ ಧ್ವಜಸ್ತಂಭವಿದ್ದು ಬ್ರಹ್ಮಕಲಶದ ನಂತರ ತಾಮ್ರದ ಧ್ವಜಸ್ತಂಭವನ್ನು



ನಿರ್ಮಿಸಲಾಗಿದೆ.

ಹೊರಾವರಣದ ಆಗ್ನೇಯ ಮೂಲೆಯಲ್ಲಿ ಮಧ್ವಾ ಚಾರ್ಯರು ಇಲ್ಲಿಗೆ ಬಂದ ನೆನಪಿನ ಮಧ್ವಮಂಟಪವಿದೆ. ಅದರ ಪಶ್ಚಿಮಕ್ಕೆ ವಸಂತಕಟ್ಟೆ, ಅದಕ್ಕೂ ಪಶ್ಚಿಮದ ಕಡೆಗೆ ಕೊಡಮಣಿತ್ತಾಯ ದೈವದ ಗುಡಿ ಹಾಗೂ ಪಶ್ಚಿಮ ನೈರುತ್ಯದಲ್ಲಿ ವನಶಾಸ್ತಾರ ಕಟ್ಟೆ ಇದೆ. ದೇವಾಲಯದ ಎದುರು ವಿಶಾಲವಾದ ರಥಬೀದಿ ಇದ್ದು ಅದರ ಕೊನೆಯಲ್ಲಿ ಅಶ್ವತ್ಥಕಟ್ಟೆ ಇದೆ. ಮಹಾರಥೋತ್ಸವದಂದು ಅಶ್ವತ್ಥಕಟ್ಟೆಯವರೆಗೆ ದೇವರ ಸವಾರಿ ಹೋಗಿ ಬರುತ್ತದೆ.

ದೇವಾಲಯದ ಹಿನ್ನೆಲೆ, ಇತಿಹಾಸ:

ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದ ಸ್ಥಾಪನೆ ಯಾವಾಗ ಮತ್ತು ಯಾರಿಂದ ಆಯಿತೆಂಬ ನಿಖರ ಮಾಹಿತಿ ಇಲ್ಲದಿದ್ದರೂ ಕನಿಷ್ಠ ಪಕ್ಷ

ಸುಮಾರು 1000 ವರ್ಷದ ಇತಿಹಾಸವನ್ನು ಊಹಿಸಬಹುದು. ದೇವಸ್ಥಾನದ ಕಂಚಿನ ಪ್ರಭಾವಳಿಯಲ್ಲಿ "ಶರ್ವರೀ ನಾಮ ಸಂವತ್ಸರದ ಆದಿತ್ಯವಾರದಂದು ಮಕರ ಸಂಕ್ರಮಣದ ಮೊದಲ ದಿನ ವಸುದೇವ ಕಡಂಬನು ಉಜಿರೆಯ ವಿಷ್ಣುವಿಗೆ ಸಮರ್ಪಿತವಸ್ತು" ಎಂಬ ಬರಹವು ಇದಕ್ಕೆ ಇಂಬು ನೀಡುತ್ತದೆ. ಇತಿಹಾಸ ತಜ್ಞರಾದ ದಿ। ಡಾ. ಪಿ. ಗುರುರಾಜ ಭಟ್ಟರು 'ಇದು ಮಧ್ವಾಚಾರ್ಯರಿಗಿಂತ ಪೂರ್ವದ ದೇವಾಲಯ' ಎಂದಿದ್ದಾರೆ. ಆಚಾರ್ಯ ಮಧ್ವರು ಈ ಕ್ಷೇತ್ರಕ್ಕೆ ಬಂದ ವಿಚಾರವು ನಾರಾಯಣ ಪಂಡಿತಾಚಾರ್ಯರ ಸುಮಧ್ವ ವಿಜಯ ಎಂಬ ಗ್ರಂಥದಲ್ಲಿ ಉಲ್ಲೇಖಿಸಲ್ಪಟ್ಟಿದೆ. (6ನೇ ಸರ್ಗ, 41 ಮತ್ತು 42ನೇ ಶ್ಲೋಕ) ಹೀಗೆ ಆನಂದತೀರ್ಥರು ಇಲ್ಲಿ ಬಂದಿದ್ದು, ಮತಪ್ರಚಾರ ಮಾಡಿದ್ದು ಮತ್ತು ಕರ್ಮನಿರ್ಣಯ ಎಂಬ ಗ್ರಂಥ ಬರೆದದ್ದು ಚಾರಿತ್ರಿಕ ಸತ್ಯ. ಉಜಿರೆಯಲ್ಲಿದ್ದ ಅನೇಕ ವಿದ್ವಾಂಸರ ಜೊತೆಗೆ ತತ್ತ್ವದ ಚರ್ಚೆಯನ್ನು ಮಾಡಿ ಕರ್ಮನಿರ್ಣಯವನ್ನು ಮಧ್ವಾಚಾರ್ಯರು ರಚಿಸಿದರು. ಮಧ್ವಾಚಾರ್ಯರು ಇಲ್ಲಿಗೆ ಬಂದಾಗಿನ ಘಟನೆಗಳ ಬಗ್ಗೆ ಅನೇಕ ಬಗೆಯ ಕಿಂವದಂತಿಗಳಿವೆ.

ಈ ದೇವಾಲಯದ ಅಷ್ಟಮಂಗಲ ಪ್ರಶ್ನೆಯಲ್ಲಿ (1994) ಶಿವಸಾನ್ನಿಧ್ಯವಿದ್ದ ಕುರುಹು ಗೋಚರವಾಗಿತ್ತು. ಇಲ್ಲಿ ಪ್ರಭಾವ ಶಾಲಿಯಾದ ಶಿವಮಂದಿರವಿತ್ತು. ಶೈವ ವೈಷ್ಣವರ ಕಲಹದಲ್ಲಿ ವೈಷ್ಣವರ ಕೈ ಮೇಲಾಗಿ ಶಿವಾಲಯವು ವೈಷ್ಣವಾಲಯವಾದ ಕುರುಹುಗಳನ್ನು ತಿಳಿಸಲಾಗಿತ್ತು. ಆದ್ದರಿಂದ 2001ರಲ್ಲಿ ನಡೆದ ಪುನಃ ಪ್ರತಿಷ್ಠೆ ಅಷ್ಟಬಂಧ ಬ್ರಹ್ಮಕಲಶೋತ್ಸವದ ಸಮಯದಲ್ಲಿ ಪ್ರತ್ಯೇಕವಾಗಿ ಶಿವನಿಗೊಂದು ಗುಡಿ ಮಾಡಿ ಪ್ರತಿಷ್ಠೆಯನ್ನು ಮಾಡಲಾಯಿತು. ಹೀಗೆ ಶೈವ, ವೈಷ್ಣವ ಮತ್ತು ಶಾಸ್ತಾರ ಈ ಮೂರೂ ಪರಂಪರೆಗೆ ಸ್ಥಾನ ದೊರಕಿದೆ. 1865ರಲ್ಲಿ ಈ ದೇವಾಲಯದ ಪುನಃ ನಿರ್ಮಾಣ ಮಾಡಿದ ಕೈ ಬರಹದ ಲೆಕ್ಕಪತ್ರವು ಪಡ್ವೆಟ್ನಾಯರ ಕಡತದಲ್ಲಿದೆ.

ತದನಂತರ 2001ರಲ್ಲಿ ಶಿಲಾಮಯವಾದ ಈಗಿನ ಸುಂದರ ದೇವಾಲಯದ ನಿರ್ಮಾಣವಾಗಿದ್ದು ನಮ್ಮ ಸಾಕ್ಷಿಯಾಗಿ ಇದೆ.

ದೇವತಾ ಸಾನ್ನಿಧ್ಯಗಳು

ಆಚಾರ್ಯತಪಸಾಮ್ನಾಯಜಪೇನ ನಿಯಮೇನ ಚ ॥ ಉತ್ಸವೇನಾನ್ನದಾನೇನ ಕ್ಷೇತ್ರವೃದ್ಧಿಸ್ತು ಪಂಚಧಾ ॥ ಎಂಬಂತೆ ಉಜಿರೆಯ ದೇವಸ್ಥಾನದ ಭಗವತ್ ಸಾನ್ನಿಧ್ಯವು ಪ್ರಭಾವಶಾಲಿಯಾಗಿದೆ. ಇಲ್ಲಿನ ಪ್ರಧಾನ ದೇವರು ವಿಷ್ಣು ಜನಾರ್ದನ ಸ್ವಾಮಿಯೆಂದು (ಭಕ್ತರ ದುಃಖವನ್ನು ದೂರ ಮಾಡುವವನು) ಎಲ್ಲರೂ ಕರೆಯುತ್ತಾರೆ. ಸುಮಾರು 3.5 ಅಡಿ ಎತ್ತರದ ಸಾಮಭಂಗಿಯ ಪ್ರಸನ್ನ ಮುಖ ಮುದ್ರೆಯ ಶಂಖ, ಚಕ್ರ, ಗದಾ, ಪದ್ಮಧಾರಿಯಾದ ಚತುರ್ಬಾಹು ಮೂರ್ತಿ. ಶೀರ್ಷದಲ್ಲಿ ಕಿರೀಟ, ಕಿವಿಗಳಲ್ಲಿ ಮಕರ ಕುಂಡಲಗಳು, ಎದೆಯಲ್ಲಿ ಪಟ್ಟಿ ಯಜ್ಞೋಪವೀತಗಳು ಮೂರ್ತಿಯನ್ನು ಕಂಡಾಗ ಗೋಚರವಾಗುತ್ತವೆ. ವಿವಾಹ ಭಾಗ್ಯ. ಆರೋಗ್ಯ ಪ್ರಾಪ್ತಿ, ಭೂ ವಿವಾದ ಪರಿಹಾರ, ಮಾನಸಿಕ ನೆಮ್ಮದಿ ಈ ದೇವರ ಆರಾಧನೆಯಿಂದ ಸಿದ್ಧಿಸುತ್ತದೆಂಬುದು ಭಜಕರ ಅನುಭವ, 2001ರಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಶಿವ ಸನ್ನಿಧಿಯಲ್ಲಿ ರುದ್ರಾಭಿಷೇಕ, ಶಿವರಾತ್ರಿ ಆಚರಣೆಗಳು ವಿಜೃಂಭಣೆಯಿಂದ ನಡೆಯುತ್ತವೆ. ಸುತ್ತು ಪೌಳಿಯಲ್ಲಿ ನೈರುತ್ಯ ಮೂಲೆಯಲ್ಲಿರುವ ಬಲಮುರಿ ಗಣಪತಿಯು ಕ್ಷಿಪ್ರ ಪ್ರಸಾದನಾಗಿದ್ದಾನೆ. ವಿನಾಯಕೀ, ಸಂಕಷ್ಟಹರ ಚತುರ್ಥಿ ಮತ್ತು ಗಣೇಶ ಚೌತಿಯು ವಿಜೃಂಭಣೆ ಯಿಂದ ನಡೆಯುತ್ತವೆ. ಗರ್ಭಗುಡಿಯ ಎಡಭಾಗದ ವಾಯುವ್ಯ ಕೋನದಲ್ಲಿರುವ ಅಮ್ಮನವರು ಎಂಬ ಸಾನ್ನಿಧ್ಯ ವೈಶಿಷ್ಟ್ಯ ಪೂರ್ಣವಾಗಿದೆ. ಇಲ್ಲಿ ದುರ್ಗಾಂಶದ ಭೂತಗಳ ಸಾನ್ನಿಧ್ಯವಿದ್ದು ದುರ್ಗಾರೂಪದ ಆರಾಧನೆ ನಡೆಯುತ್ತದೆ. ಪೊಸಲಾಯಿ, ಉಳ್ಳಾಲ್ತಿ ಮತ್ತು ಕುಮಾರಸ್ವಾಮಿ ಎಂಬ ಮೂರು ದೈವಗಳು ಕುದುರೆಯಲ್ಲಿ ಕುಳಿತ ವಿಗ್ರಹವಿದೆ. ಜಾತ್ರಾ ಸಮಯದಲ್ಲಿ ವಾರ್ಷಿಕವಾದ ನೃತ್ಯೋತ್ಸವವು, ಭೂತಾರಾಧನೆಯು ಈ ಸನ್ನಿಧಿಯಲ್ಲಿ ನಡೆಯುತ್ತದೆ. ಈ ಸಾನ್ನಿಧ್ಯವು ಮೂಲತಃ ದೇವಸ್ಥಾನದ ಆಡಳಿತವಿರುವ ಪಡ್ವೆಟ್ನಾಯರ ಆರಾಧನೆಯ ದೈವಗಳು.

ಇದರಂತೆಯೇ ನೆತ್ತರ್ ಮುಗುಳಿ ಎಂಬ ದೈವ ಸಾನ್ನಿಧ್ಯವೂ ಇದೆ. ದೇವಸ್ಥಾನದ ಹೊರಾಂಗಣದಲ್ಲಿ ಕೊಡಮಣಿತ್ತಾಯ, ವನಶಾಸ್ತಾರನ ಕಟ್ಟೆ ಇದ್ದು, ಇಲ್ಲಿ ಅಯ್ಯಪ್ಪನ ಆರಾಧನೆ ನಡೆಯುತ್ತದೆ. ಇಲ್ಲಿ ದೈವಗಳಿಗೆ ದೇವರ ಸ್ಥಾನವನ್ನು ಕಲ್ಪಿಸಲಾಗಿದೆ. ದೇವರಿಗೆ ಮಾಡುವ ಸೇವೆಗಳನ್ನು ದೈವಗಳಿಗೂ ಮಾಡಲಾಗುತ್ತದೆ. ಆದರೆ ಜಾತ್ರೆಯ ಸಂದರ್ಭದಲ್ಲಿ ಮೊದಲು ದೈವಗಳಿಗೆ ನಡಾವಳಿ ನಡೆದು ನಂತರ ದೇವರಿಗೆ ಉತ್ಸವ ನಡೆಯುತ್ತದೆ. ಬದಿಮೇಲು ಎಂಬ ಸ್ಥಾನದಲ್ಲಿ ಈ ನಡಾವಳಿಯ ಹೊರತಾಗಿ ಯಾವಾಗಲೂ ಮಧ್ಯಾಹ್ನದ ಹೊತ್ತು ಪೂಜೆ ನಡೆಯುತ್ತದೆ.

ಕೇರಳದ ಆಗಮಶಾಸ್ತ್ರದ ಪ್ರಕಾರ ಇಲ್ಲಿನ ದೈನಂದಿನ ಪೂಜಾ ವಿಧಾನಗಳು ನಡೆಯುತ್ತವೆ. ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ಕೇರಳದ ನೀಲೇಶ್ವರ ತಂತ್ರಿಗಳ ಮಾರ್ಗದರ್ಶನ ದಲ್ಲಿ ಪೂಜಾ ವಿಧಿ-ವಿಧಾನಗಳು ನಡೆಯುತ್ತವೆ. ವರ್ಷಾವಧಿ ಜಾತ್ರೆಯು 9 ದಿನಗಳ ಕಾಲ ನಡೆಯುತ್ತದೆ. ಮೊದಲ ದಿನ ಧ್ವಜಾರೋಹಣ, ದೈವಗಳಿಗೆ ನೇಮವು, 2ನೇ ದಿನ ದೈವಗಳಿಗೆ ನೇಮ, ಮೂರನೇ ದಿನ ದೈವಗಳಿಗೆ ನೇಮ ಹಾಗೂ ದೇವರಿಗೆ ಉತ್ಸವ, ನಾಲ್ಕನೇ ದಿನ ಉತ್ಸವ, ಕಟ್ಟೆಪೂಜೆ, ಐದನೇ ದಿನ ಉತ್ಸವ, ಅಶ್ವತ್ಥ ಕಟ್ಟೆ ಪೂಜೆ, ಆರನೇ ದಿನ ಉತ್ಸವ, ಕೆರೆಕಟ್ಟೆ ಉತ್ಸವ, ಏಳನೇ ದಿನ ಉತ್ಸವ, ಚಂದ್ರಮಂಡಲ, ರಥೋತ್ಸವ, ಎಂಟನೇ ದಿನ ದರ್ಶನಬಲಿ, ಮಧ್ಯಾಹ್ನ ಸಾರ್ವಜನಿಕ ಅನ್ನಸಂತರ್ಪಣೆ, ರಾತ್ರಿ ಮಹಾರಥೋತ್ಸವ ನಡೆದು ಮರುದಿನ ಬೆಳಗಿನವರೆಗೆ ಭೂತಬಲಿಗಳು ನಡೆಯುತ್ತವೆ. ಒಂಭತ್ತನೆಯ ದಿನ ಕವಾಟೋದ್ಘಾಟನೆ ಕೊಡಮಣಿತ್ತಾಯರಿಗೆ ನೇಮ ಮತ್ತು ಅವಭೃತೋತ್ಸವ ನಡೆದು ನಿಡ್ಗಲ್ ನದಿಯ ತನಕ ದೇವರನ್ನು ಕೊಂಡುಹೋಗಿ, ತಿರುಗಿ ಬಂದು ಧ್ವಜ ಅವರೋಹಣ ನಡೆಯುತ್ತದೆ. ಹತ್ತನೇ ದಿನ ಕಲಶಾಭಿಷೇಕ ಮತ್ತು ಸಂಪ್ರೋಕ್ಷಣೆ ನಡೆಯುತ್ತದೆ. ಕುಂಭ ಮಾಸದ 20ನೆಯ ದಿನವನ್ನು ಪ್ರತಿಷ್ಠಾ ದಿನವೆಂದು ಆಚರಿಸಲಾಗುತ್ತದೆ. ಅರ್ಚಕ ಶ್ರೀ ಶ್ರೀನಿವಾಸ ಹೊಳ್ಳರು ಕಳೆದ 6 ದಶಕಗಳಿಂದ ಸ್ವಾಮಿ ಪೂಜಾ ಕಾರ್ಯವನ್ನು ನಿಷ್ಠೆಯಿಂದ ಮಾಡಿಕೊಂಡು ಬರುತ್ತಿದ್ದಾರೆ.

ದೇವಸ್ಥಾನಕ್ಕೆ ಸಂಬಂಧಪಟ್ಟ, ಆದರೆ ದೇವಸ್ಥಾನದಿಂದ ಹೊರಗೆ ಇನ್ನೆರಡು ಸಾನ್ನಿಧ್ಯಗಳಿವೆ. ಜನಾರ್ದನ ಸ್ವಾಮಿ ದೇವಾಲಯದ ಪೂರ್ವ ಆಗ್ನೇಯದಲ್ಲಿರುವ ಮಹಮ್ಮಾಯಿ ಗುಡಿ ಮತ್ತು ಸುಮಾರು ಅರ್ಧ ಕಿ.ಮೀ. ದೂರದಲ್ಲಿರುವ ಮೂಲ ನಾಗ ಸಾನ್ನಿಧ್ಯ. ಸಂತಾನ, ಸಂಪತ್ತು, ಆರೋಗ್ಯ ಪ್ರಾಪ್ತಿಗಾಗಿ ನಾಗಾರಾಧನೆಯಾದರೆ, ಸಾಕುಪ್ರಾಣಿಗಳ ಆರೋಗ್ಯ

ವಾದ-ವಿವಾದ ಪರಿಹಾರ, ಆಧಿ-ವ್ಯಾಧಿ ಪರಿಹಾರಕ್ಕೆ ಮಾರಿಯಮ್ಮನ ಸೇವೆ ಮಾಡುತ್ತಾರೆ. 2011ರಲ್ಲಿ ಮಹಮ್ಮಾಯಿ ಗುಡಿಯ ಪುನರ್ನವೀಕರಣ ಮತ್ತು ದಾರುಮಯ ಪ್ರತಿಮೆಯ ಪ್ರತಿಷ್ಠಾಪನೆಯು ಪಡ್ವೆಟ್ನಾಯರ ಉಪಸ್ಥಿತಿಯಲ್ಲಿ ನಡೆದಿದೆ. ದೇವಸ್ಥಾನದ ಈಶಾನ್ಯದಲ್ಲಿ ಸುಮಾರು 700 ಮೀ. ದೂರದಲ್ಲಿ ಬದಿಗುಡ್ಡೆ ಇದೆ. ಇದರ ಮೇಲೆ ಬದಿನಡೆಯಲ್ಲಿ ನೃತ್ಯೋತ್ಸವ ಮತ್ತು ನೇಮಗಳು ನಡೆಯುತ್ತವೆ.



ದಿನಾಂಕ: 3-3-2026ರಿಂದ 11-3-2026 ರವರೆಗೆ

ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನ

ಉಜಿರೆ ಗ್ರಾಮ ಬೆಳ್ತಂಗಡಿ ತಾಲೂಕು






ದಿನಾಂಕ: 3-3-2026ರಿಂದ 11-3-2026 ರವರೆಗೆ

ಇಂದು

ಸಹಸ್ರಪರಿಕಲಶಾಭಿಷೇಕ
ಕುಂಭೇಶ ಕಲಶಾಭಿಷೇಕ
ಬ್ರಹ್ಮಕಲಶಾಭಿಷೇಕ

ನೂತನ ಬ್ರಹ್ಮರಥದಲ್ಲಿ ಉಭಯ ದೇವರ ಬ್ರಹ್ಮರಥೋತ್ಸವ



ಸಂಘದ ಮೂಲಕ ಜನಸೇವೆಗೆ ಪ್ರೇರಣೆಯಾದ ಕ್ಷೇತ್ರ



ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಂಭ್ರಮದಲ್ಲಿ ನಾವಿದ್ದೇವೆ. ದೇವಸ್ಥಾನ ಉಜಿರೆಯ ಅಸ್ಮಿತೆ ಇದ್ದಂತೆ. ನಮ್ಮಂಥ ಅನೇಕರಲ್ಲಿ ಜೀವನೋತ್ಸಾಹ ತುಂಬಿದ ಶ್ರದ್ಧಾಕೇಂದ್ರವಿದು. ಆರ್.ಎಸ್.ಎಸ್. ಶತ ಸಂಭ್ರಮದಲ್ಲಿರುವ ಈ ಸಂದರ್ಭದಲ್ಲಿ ಜನಾರ್ದನ ಸ್ವಾಮಿ ಪರಿವಾರ ದೇವರ ಮೂರನೇ ಬ್ರಹ್ಮಕಲಶೋತ್ಸವ ಇದೇ ವರ್ಷದಂದು ನಡೆಯುತ್ತಿರುವುದು ನನ್ನಂತಹ ಅನೇಕ ಸ್ವಯಂಸೇವಕರಿಗೆ ಇದು ಅವಿಸ್ಮರಣೀಯ ವರ್ಷವೇ ಆಗಿದೆ.

ಆರ್.ಎಸ್.ಎಸ್ 100ರ ಸಂಭ್ರಮದಲ್ಲಿ ನಾವು ಮೊದಲಿಗೆ ನೆನೆಸಬೇಕಾದ್ದೇ ದಿ। ವಿಜಯರಾಘವ ಪಡ್ವೆಟ್ನಾಯ (ವಿಜಯ ಅವರನ್ನು. ನಮ್ಮ ತಾಲೂಕಿನ ಆರ್.ಎಸ್.ಎಸ್. ಚಟುವಟಿಕೆಗಳು ಆರಂಭವಾದದ್ದೇ ಉಜಿರೆಯಲ್ಲಿ, ಇಲ್ಲಿನ ಜನಾರ್ದನ ದೇವಸ್ಥಾನದ ವಠಾರವೇ ಸಂಘದ ಪ್ರಮುಖ ಸ್ಥಾನವಾಗಿತ್ತು. ದೇವಸ್ಥಾನದ ಆವರಣದಲ್ಲೇ ಎಷ್ಟೋ ಸಂಘ ಬೈಠಕ್‌ಗಳು ನಡೆದಿದ್ದು, ನಾಡಿಗೆ ಹತ್ತಾರು ಸ್ವಯಂಸೇವಕರನ್ನು ನೀಡಿದ ಹೆಗ್ಗಳಿಕೆ ಈ ದೇವಸ್ಥಾನಕ್ಕೆ ಸಲ್ಲುತ್ತದೆ.

ದೇಗುಲದ ರಥದ ಶೆಡ್ಡಿನ ಬದಿಯಲ್ಲಿ ಸಂಘದ ಕಾರ್ಯಾಲಯವಿತ್ತು. ಅಲ್ಲಿ ಶೇಷಗಿರಿ ಶೆಣೈಯವರ ಕೊಠಡಿಯಿತ್ತು. ಅಂದು ಸಂಘದ ಪ್ರಮುಖರಾಗಿ ಹಿರಿಯ ಕಾರ್ಯಕರ್ತ ದಿ.ಸುಬ್ರಾಯ ಶೆಣೈಯವರು ಇದ್ದರು. 52 ವರ್ಷಗಳ ಹಿಂದೆ ದೇವಸ್ಥಾನದಲ್ಲಿ ಸಂಘದ ಶಾಖೆಯ ಭಗವಾಧ್ವಜ ಹಾಕಬೇಕೋ? ಬೇಡವೋ ಎಂಬ ವಾದ-ಪ್ರತಿವಾದ ಜೋರಾಗಿತ್ತು. ಹೀಗಿದ್ದರೂ, ಅಂದು ಸಂಘದ ಕಾರ್ಯಚಟುವಟಿಕೆಗಳಿಗೆ ಪೂರ್ಣ ಬೆಂಬಲ-ಸಹಕಾರ ನೀಡಿದವರೇ ವಿಜಯಣ್ಣನವರು.

ಜನಸೇವೆಯೇ ಜನಾರ್ದನ ಸೇವೆ ಎಂಬ ವೇದವಾಕ್ಯಕ್ಕೆ ಪ್ರೇರಣೆಯೇ ಜನಾರ್ದನ ಸ್ವಾಮಿ. ಸಮಾಜಕ್ಕೆ ಜನಸೇವೆಗೆ ಸ್ವಯಂ ಸೇವಕರನ್ನು ನೀಡಿದ ಕ್ಷೇತ್ರ ಇದಾಗಿತ್ತು. ಆ ಕಾಲದಲ್ಲಿ ಶೇಷಗಿರಿ ಶೆಣೈ ಅವರು ಸೈಕಲ್‌ನಲ್ಲಿ ತಿರುಗಾಡಿ ಸಂಘದ ಶಾಖೆಯನ್ನು ನಡೆಸುತ್ತಿದ್ದರು. 1983ರಲ್ಲಿ ವಿಶ್ವಹಿಂದೂ ಪರಿಷತ್‌ನ ದ್ವಿತೀಯ ಪ್ರಾಂತೀಯ ಸಮ್ಮೇಳನ ಸಂದರ್ಭ 4 ತಿಂಗಳುಗಳ ಕಾಲ ಪ್ರಾಂತೀಯ ಬೈಠಕ್ ನಡೆದ ಸ್ಥಳ ಇದಾಗಿತ್ತು. ಅಖಿಲ ಭಾರತ ರಾಷ್ಟ್ರೀಯ ನಾಯಕರು ಭೇಟಿ ನೀಡಿದ ಸ್ಥಳವಿದು. 1983ರಲ್ಲಿ ಅಟಲ್ ಬಿಹಾರಿ ವಾಜಪೇಯಿ, ಅಂದಿನ ಸರಸಂಘಚಾಲಕ ಬಾಳಾ ಸಾಹೇಬ್ ದೇವರಸ್, ಸಹ ಸರಕಾರ್ಯವಾಹರಾಗಿದ್ದ ಹೊ.ವೆ. ಶೇಷಾದ್ರಿ, ಸಂಘದ ಸೇವಾ ಪ್ರಮುಖ್ ಅಜಿತ್ ಕುಮಾರ್ ಮತ್ತು ಈಗಿನ ಸಂಘದ ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ (ಆಗ ಅವರು ಎ.ಬಿ.ಎ.ಪಿ. ಜಿಲ್ಲಾ ಜವಾಬ್ದಾರಿಯಲ್ಲಿದ್ದರು) ಇಲ್ಲಿಗೆ ಬಂದಿದ್ದರು.



ವೆಂಕಟರಮಣ ಭಟ್ ಇಳಂತಿಲ ಅವರು 1968ರಲ್ಲಿ ತಾಲೂಕಿನಲ್ಲಿ ಸಂಘದ ಮೊದಲ ಪ್ರಚಾರಕರಾಗಿದ್ದರು. ನಂತರ ನಿರ್ಮಲ್ ಕುಮಾರ್, ದಾ.ಮ. ರವೀಂದ್ರ, ಸೀತಾರಾಮ ಕೆದಿಲ್ಲಾಯ, ದಿನೇಶ್ ಕಾಮತ್ ಕೂಡ ತಾಲೂಕಿನಲ್ಲಿ ಸೇವೆ ಮಾಡಿದ್ದಾರೆ. ಇವರೆಲ್ಲರೂ ಮೊದಲಿಗೆ ಉಜಿರೆ ಜನಾರ್ದನ ದೇವಸ್ಥಾನದ ಆವರಣದಲ್ಲಿ ನಡೆಸಲಾಗುತ್ತಿದ್ದ ಬೈಠಕ್‌ನಲ್ಲಿ ಭಾಗವಹಿಸಿ ತಾಲೂಕು ಪ್ರವಾಸ ಮಾಡುತ್ತಿದ್ದರು.

ಆಗಿನ ಸಂಘದ ಹಿರಿಯರು, ಪ್ರಾಂತಮಟ್ಟದ ಅಧಿಕಾರಿಗಳು ಭೇಟಿ ನೀಡಿದ ಸ್ಥಳವಿದು. ಹಾಗಾಗಿ ಸ್ವಯಂಸೇವಕರಿಗೆ ಧಾರ್ಮಿಕ ನೆಲೆಯಾಗಿರುವ ಜತೆಗೆ ಜನಸೇವೆ ಮಾಡಲು ಪ್ರೇರೇಪಣೆಯಾದ ಶಕ್ತಿಕೇಂದ್ರವೂ ಈ ದೇವಸ್ಥಾನ ಎನ್ನುವುದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ.

ಇಲ್ಲಿ ತಾಲೂಕು ಪ್ರಚಾರಕರಾಗಿ ಕೆಲಸ ಮಾಡಿದ ಜಗದೀಶ ಕಾರಂತ್, ಬೈಂದೂರಿನ ಈಗಿನ ಶಾಸಕ ಗುರುರಾಜ ಗಂಟಿಹೊಳೆ, ಅರವಿಂದ ಬಿಜೂರು, ಗೋವಿಂದ್ ಭಟ್ ಮುಳ್ಳೇರಿಯ, ವಿಶ್ವನಾಥ ಭಿಡೆ, ಗುರುರಾಜ್, ಗ್ರಾಮವಿಕಾಸದ ಅಖಿಲ ಭಾರತೀಯ ಪ್ರಮುಖರು ಮೂಲಚಂದ್ರ, ಗಣೇಶ್ ಕುಂದಾಪುರ, ಶ್ರೀಧರ ಕುಂದಾಪುರ ಸಮಾಜದಲ್ಲಿ ತಮ್ಮದೇ ನೆಲೆಯಲ್ಲಿ ಸೇವೆ ಮಾಡುತ್ತಿದ್ದಾರೆ. ವಕೀಲರಾಗಿದ್ದ ನೇಮಿರಾಜ ಶೆಟ್ಟಿ, ರಾಮಚಂದ್ರ ಭಟ್, ಸೋಮನಾಥ ನಾಯಕ್, ವೀರಸಿಂಹ ನಾಯಕ್, ರಂಜನ್ ರಾವ್ ಯಡ್ತೂರು, ಧನಕೀರ್ತಿ ಅರಿಗ, ಗೋಪಾಲ ಕಾಮತ್, ದರ್ಣಪ್ಪ ಟೈಲರ್, ಬಳ್ಳಮಂಜ ಸುಬ್ರಹ್ಮಣ್ಯ ಭಟ್, ಮತ್ತಿತರ ಸ್ವಯಂಸೇವಕರು ದೇವಸ್ಥಾನದಲ್ಲಿ ನಡೆಯುತ್ತಿದ್ದ ಸಂಘಸ್ಥಾನದಲ್ಲಿ ಬೆಳೆದವರು.

ಬರಹ : ಕೆ. ಪದ್ಮನಾಭ ಶೆಟ್ಟಿಗಾರ್
ಶ್ರೀರಾಮ ಕೃಪಾ, ಉಜಿರೆ



ಬೆಳಗ್ಗೆ ಗಂಟೆ 5ರಿಂದ
ಗಣಪತಿ ಹೋಮ, ಕವಾಟೋದ್ಘಾಟನೆ, ಅಭಿಷೇಕ, ಪ್ರಾಯಶ್ಚಿತ್ತ ಹೋಮ , ಕಲಶಾಭಿಷೇಕ, ತತ್ವಕಲಶಾಭಿಷೇಕ, ಮಹಾಬಲಿ ಪೀಠ ಪ್ರತಿಷ್ಠೆ, ಸಹಸ್ರಪರಿಕಲಶಾಭಿಷೇಕ, ಕುಂಭೇಶ ಕಲಶಾಭಿಷೇಕ, ಬ್ರಹ್ಮಕಲಶಾಭಿಷೇಕ, ಅವಸ್ರತು ಪ್ರೋಕ್ಷಣ, ಮಹಾಪೂಜೆ, ಪ್ರಸಾದ ವಿತರಣೆ

ಸಂಜೆ ಗಂಟೆ 6 ರಿಂದ
ರಾತ್ರಿ ಪೂಜೆ, ಶ್ರೀ ಭೂತಬಲಿ, ಶ್ರೀ ಜನಾರ್ದನ, ಶ್ರೀ ಮಂಜುಳೇಶ ದೇವರ ಉತ್ಸವ, ನೂತನ ಬ್ರಹ್ಮರಥದಲ್ಲಿ ಉಭಯ ದೇವರ ಬ್ರಹ್ಮರಥೋತ್ಸವ, ಮಂತ್ರಾಕ್ಷತೆ



ಇಂದು ಬ್ರಹ್ಮಕಲಶಾಭಿಷೇಕವನ್ನು ಸ್ವೀಕರಿಸುತ್ತಿರುವ ಉಜಿರೆ ಶ್ರೀ ಜನಾರ್ದನ ಸ್ವಾಮಿಗೆ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುವ

ಸುತ್ತ ಮುತ್ತ

ಇಂದು ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಳದಲ್ಲಿ ಬ್ರಹ್ಮಕಲಶ

ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದಲ್ಲಿ ಮಾ.11ರಂದು ಬ್ರಹ್ಮಕಲಶ ಕಾರ್ಯಕ್ರಮ ಜರಗಲಿದೆ. ಬೆಳಗ್ಗೆ 5ರಿಂದ ಗಣಪತಿ ಹೋಮ, ಕವಾಟೋದ್ಘಾಟನೆ,ಅಭಿಷೇಕ, ಪ್ರಾಯಶ್ಚಿತ ಹೋಮ, ಮಹಾಬಲಿ ಪೀಠ ಪ್ರತಿಷ್ಠೆ ಸಹಸ್ರ ಪರಿಕಲಶಾಭಿಷೇಕ, ಹರಿವಾಯುಸ್ತುತಿ, ಪುರಶ್ಚರಣ ಹೋಮ, ಕಲಶಾಭಿಷೇಕ ಮೊದಲಾದ ಕಾರ್ಯಕ್ರಮ, ಸಂಜೆ 6 ರಿಂದ ಶ್ರೀ ಭೂತಬಲಿ, ಶ್ರೀ ಜನಾರ್ದನ, ಶ್ರೀ ಮಂಜುಳೇಶ ದೇವರ ಉತ್ಸವ, ನೂತನ ಬ್ರಹ್ಮ ರಥದಲ್ಲಿ ಉಭಯ ದೇವರ ಬ್ರಹ್ಮರಥೋತ್ಸವ ನಡೆಯಲಿವೆ. ಸಂಜೆ 4.30 ರಿಂದ ನಡೆಯುವ ಸಭಾ ಕಾರ್ಯಕ್ರಮ ದಲ್ಲಿ ಶ್ರೀ ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾ ಪ್ರಸನ್ನ ತೀರ್ಥ ಸ್ವಾಮೀಜಿ ಹಾಗೂ ಉಡುಪಿ ಸೋದೆ ಮಠದ ಶ್ರೀ ವಿಶ್ವವಲ್ಲಭ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡುವರು. ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರ ಉಪಸ್ಥಿತಿಯಲ್ಲಿ ಜರಗುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಕೆ. ಪ್ರತಾಪ ಸಿಂಹ ನಾಯಕ್ ವಹಿಸಲಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಡಿ.ಹರ್ಷೇಂದ್ರ ಕುಮಾರ್, ಬ್ರಹ್ಮಕಲಶ ಸಮಿತಿ ಕಾರ್ಯಾಧ್ಯಕ್ಷ ಶಶಿಧರ ಶೆಟ್ಟಿ ಬರೋಡ ಭಾಗವಹಿಸಲಿದ್ದು, ಶ್ರೀ ಕ್ಷೇತ್ರ ಕಟೀಲಿನ ಹರಿನಾರಾಯಣ ಆಸ್ರಣ್ಣ ಧಾರ್ಮಿಕ ಉಪನ್ಯಾಸ ನೀಡುವರು. ಕಂದಾಯ ಸಚಿವ ಕೃಷ್ಣ ಭೈರೇಗೌಡ, ಸಂಸದ ಕ್ಯಾ. ಬ್ರಿಜೇಶ್ ಚೌಟ, ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ, ಮಾಜಿ ಉಪ ಮುಖ್ಯಮಂತ್ರಿ ಡಾ. ಸಿ. ಎನ್. ಅಶ್ವತ್ಥ ನಾರಾಯಣ, ಶಾಸಕ ಹರೀಶ್ ಪೂಂಜ, ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್ ಸೇರಿ ದಂತೆ ಅನೇಕ ಗಣ್ಯರು ಉಪಸ್ಥಿತರಿರಲಿದ್ದಾರೆ. ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿ, ದೈವಜ್ಞ ಶ್ರೀಧರ ಗೋರೆ, ಬ್ರಹ್ಮವಾಹಕ ವೆಂಕಟರಮಣ ಹೆಬ್ಬಾರ್, ಬ್ರಹ್ಮಕಲಶ ಸಮಿತಿ ಬೆಂಗಳೂರು, ವೇದಮೂರ್ತಿ ಬಾಲಕೃಷ್ಣ ಹೊಳ್ಳ ಪ್ರವೀಣ್ ಕುಮಾರ್ ಇಂದ್ರ, ಜಿ. ಪ್ರಭಾತ್ ಭಟ್, ಕೆ.ಮೋಹನ್ ಕುಮಾರ್, ಅಮ್ಮು ಪೂಜಾರಿ ಇವರಿಗೆ ಗೌರವಾರ್ಪಣೆ ನಡೆಯಲಿದೆ.

ಇಂದು 'ಹಂಸಧ್ವನಿ' ಸುನಾದ ವಿವೇಕ ಸ್ಮೃತಿ ಶಾಸ್ತ್ರೀಯ ಸಂಗೀತ

ಪುತ್ತೂರು: ನಗರದ ವಿವೇಕಾನಂದ ಸ್ವಾಯತ್ತ ಕಾಲೇಜಿನ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜ್, ವಿವೇಕಾನಂದ ಸಂಶೋಧನಾ ಕೇಂದ್ರ, ಭಾರತೀಯ ಸಂಸ್ಕೃತಿ ಮತ್ತು ಲಲಿತ ಕಲೆಗಳ ಅಧ್ಯಯನ ಕೇಂದ್ರ ಹಾಗೂ ಲಲಿತ ಕಲಾ ಸಂಘಗಳ ಮತ್ತು ಸುನಾದ ಸಂಗೀತ ಕಲಾ ಶಾಲೆ ಆಶ್ರಯದಲ್ಲಿ ಕಾಲೇಜಿನ ಸ್ವಾಭಿಮಾನದಲ್ಲಿ ಮಾ.11ರಂದು 'ಹಂಸಧ್ವನಿ' ಸುನಾದ ವಿವೇಕ ಸ್ಮೃತಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಶ್ರೀಕೃಷ್ಣ ಗಣರಾಜ್ ಭಟ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 10ರಿಂದ ಆರಂಭವಾಗಲಿರುವ ಈ ಕಾರ್ಯಕ್ರಮವನ್ನು ಸುನಾದ ಕಲಾಶಾಲೆಯ ನಿರ್ದೇಶಕ ವಿದ್ವಾನ್ ಎ. ಈಶ್ವರ ಭಟ್ ಉದ್ಘಾಟಿಸಿ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಬಳಿಕ ಸಂಗೀತ ಮತ್ತು ಜೀವನ ಮೌಲ್ಯ ವಿಚಾರದ ಕುರಿತು ವಿದ್ವಾನ್ ಟಿ.ಎಸ್. ಪಟ್ಟಾಭಿರಾಮ್ ಪಂಡಿತ್, ಸಂಗೀತ, ಭಾವ ವಿಷಯದ ಕುರಿತು ವಿದ್ವಾನ್ ವಿಠಲ ರಾಮಮೂರ್ತಿ ಉಪನ್ಯಾಸ ನೀಡಲಿದ್ದಾರೆ. 3ನೇ ಅವಧಿಯಲ್ಲಿ ಪ್ರದರ್ಶನ ಭಾವ ರಾಗ ತಾಳ ನಾಟ್ಯಂ ಕಾರ್ಯಕ್ರಮ ನಡೆಯಲಿದೆ. ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಶ್ರೀಪತಿ ಕಲ್ಲೂರಾಯ ಮತ್ತು ಸಂಚಾಲಕ ಮುರಳೀಕೃಷ್ಣ ಕೆ.ಎನ್. ಭಾಗವಹಿಸಲಿದ್ದಾರೆ. ಅಪರಾಹ್ನ 2 ರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ನಡೆಯಲಿದೆ. ಹಾಡುಗಾರಿಕೆಯಲ್ಲಿ ವಿದ್ವಾನ್ ಟಿ.ಎಸ್. ಪಟ್ಟಾಭಿರಾಮ್ ಪಂಡಿತ್, ಪಿಟೀಲಿನಲ್ಲಿ ವಿದ್ವಾನ್ ವಿಠಲ ರಾಮ ಮೂರ್ತಿ, ಮೃದಂಗದಲ್ಲಿ ವಿದ್ವಾನ್ ಕಾಂಚನ ಈಶ್ವರ ಭಟ್ ಹಾಗೂ ಮೋರ್ಸಿಂಗ್ ನಲ್ಲಿ ಬಾಲಕೃಷ್ಣ ಹೊಸಮನೆ ಭಾಗವಹಿಸಲಿದ್ದಾರೆ ಎಂದರು.

ಸುನಾದ ಸಂಸ್ಥೆಯ ನಿರ್ದೇಶಕ ಕಾಂಚನ ಈಶ್ವರ ಭಟ್, ವಿವೇಕಾನಂದ ಸಂಶೋಧನಾ ಕೇಂದ್ರದ ನಿರ್ದೇಶಕಿ ಡಾ. ವಿಜಯಸರಸ್ವತಿ, ಭಾರತೀಯ ಸಂಸ್ಕೃತಿ ಮತ್ತು ಲಲಿತ ಕಲೆಗಳ ಅಧ್ಯಯನ ಕೇಂದ್ರದ ಸಂಯೋಜಕಿ ಡಾ. ವಿದ್ಯಾ ಎಸ್. ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಭವ್ಯಾ ಪಿ.ಆರ್. ನಿಡ್ಪಳ್ಳಿ ಗೋಷ್ಠಿಯಲ್ಲಿದ್ದರು.

ಮಾ.13ರಂದು ಸಭೆ

ಮಂಗಳೂರು: ಇ-ಆಟೋ/ಆಟೋ ಪರವಾನಿಗೆ ಹಾಗೂ ಆಟೋರಿಕ್ಷಾ ಸಂಘದವರು ಸಲ್ಲಿಸಿರುವ ಅಹವಾಲು/ಬೇಡಿಕೆಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಮಾ.13 ರಂದು ಬೆಳಗ್ಗೆ 11 ಗಂಟೆಗೆ ಸಭೆಯನ್ನು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ ನಗರದ ಎಲ್ಲಾ ಆಟೋರಿಕ್ಷಾ ಸಂಘದ ವರು, ಇ-ಆಟೋರಿಕ್ಷಾ ಪ್ರವರ್ತಕರು ಸಭೆಗೆ ಹಾಜರಾಗಬೇಕು ಎಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವ | ಧಾರ್ಮಿಕ ಸಭಾ ಕಾರ್ಯಕ್ರಮ

ಜೀವನದ ಉನ್ನತಿಗೆ ದೈವ ಬಲವೂ ಅಗತ್ಯ: ಕನ್ಯಾಡಿ ಶ್ರೀ



ಬೆಳ್ತಂಗಡಿ: ಬದುಕಿಗೆ ಸಂಪಾದನೆಯೊಂದಿಗೆ ದೈವ ಬಲವು ಬೇಕು ಎಂದು ಕನ್ಯಾಡಿ ಶ್ರೀರಾಮ ಮಹಾ ಕ್ಷೇತ್ರ ಸಂಸ್ಥಾನದ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಹೇಳಿದರು

ಅವರು ಸೋಮವಾರ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿ, ನಮ್ಮೊಳಗಿನ ಅದ್ಭುತ ಶಕ್ತಿ ಹೊರಹೊಮ್ಮಲು ಧ್ಯಾನ ಅತಿ ಅಗತ್ಯ. ಆಧ್ಯಾತ್ಮದಲ್ಲಿ ನಿರಂತರ ಸಾಧನೆ ಸತ್ಸಂಗಗಳ ಮೂಲಕ ಒಳ್ಳೆಯ ವ್ಯಕ್ತಿತ್ವ ಮೂಡುತ್ತದೆ. ಪರಸ್ಪರ ಅನ್ಯೋನ್ಯತೆಯಿಂದ ಬದುಕುವ ಜತೆ ಎಲ್ಲರನ್ನು ಸಮಚಿತ್ತದಿಂದ ಕಾಣಬೇಕು, ಬದುಕಿಗೆ ಸಂಪಾದನೆಯೊಂದಿಗೆ ದೈವ ಬಲವು ಬೇಕು. ಆತ್ಮ ಮತ್ತು ಪರಮಾತ್ಮನನ್ನು ಒಗ್ಗೂಡಿಸುವುದು ಯೋಗ. ಪರಮಾನಂದ ಪಡೆಯಲು ಭಗವಂತನ ಸೇವೆ ಅಗತ್ಯ. ಜ್ಞಾನ, ತಪಸ್ಸು,ಅನುಷ್ಠಾನಗಳು ಯಾಂತ್ರಿಕವಾಗಿರದೆ ಆಂತರಿಕವಾಗಿರಬೇಕು ಎಂದು ಹೇಳಿದರು

ಶ್ರೀಧಾಮ ಮಾಣಿಲದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಆಶೀರ್ವಚನ ನೀಡಿ, ಜೀವನ ಎಂಬ ರಥದಲ್ಲಿ ಪುಣ್ಯ ಸಂಚಯದ ಪ್ರಾಪ್ತಿಯಾಗಬೇಕು. ತಿಳಿದೋ, ತಿಳಿಯದೆಯೋ ನಮ್ಮಿಂದ ನಡೆಯುವ ಪಾಪಗಳನ್ನು ದೂರ ಮಾಡಲು ದೇವರನ್ನು ಆರಾಧಿಸುವುದು ಅಗತ್ಯ. ಹಿತ,ಮಿತವಾದ ಮಾತಿನೊಂದಿಗೆ ಪ್ರೀತಿಯ ಜೀವನ ನಡೆಸಬೇಕು.ನಮ್ಮ ಮಂದಿರಗಳ ಪಾವಿತ್ರ್ಯತೆಯನ್ನು ಉಳಿಸುವ ಜವಾಬ್ದಾರಿ ನಮ್ಮದು.ಅಮಾಯಕರ ಬಲಿದಾನ, ವಿಕೃತ ಭಾವನೆ, ಹಿಂಸಾ ಪ್ರವೃತ್ತಿಗಳನ್ನು ದೂರೀಕರಿಸಬೇಕು ಎಂದರು.

ಸೋನಿಯಾ ಯಶೋವರ್ಮ ಮಾತನಾಡಿ, ಅರಿಷಡ್ವರ್ಗಗಳಿಂದ ದೂರವಾಗಿ ಒಗ್ಗಟ್ಟಾಗಿ ಜೀವನ ನಡೆಸಲು ಬ್ರಹ್ಮಕಲಶೋತ್ಸವ, ಧರ್ಮಸಭೆಗಳು ಪೂರಕ ವಾತಾವರಣ ನಿರ್ಮಿಸುತ್ತವೆ. ಉತ್ತಮ ಭಾವನೆಗಳೊಂದಿಗೆ ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ನಮ್ಮ ಕರ್ತವ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಶಶಿಧರ ಶೆಟ್ಟಿ ಬರೋಡ ಮಾತನಾಡಿ, ಕಾರ್ಯಕ್ರಮಗಳ ಯಶಸ್ಸಿಗೆ ಕಾರ್ಯಕರ್ತರ ಶಕ್ತಿಯೇ ಜೀವಾಳ. ಒಗ್ಗಟ್ಟಿನ ಆಚರಣೆಗಳು ಧರ್ಮವನ್ನು ರಕ್ಷಿಸುತ್ತವೆ ಎಂದರು.

ಮೂಡಬಿದಿರೆ ಎಕ್ಸಲೆಂಟ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಯುವರಾಜ ಜೈನ್, ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯ, ಬ್ರಹ್ಮಕಲಶ ಸಮಿತಿಯ ಅಧ್ಯಕ್ಷ ಕೆ. ಪ್ರತಾಪ ಸಿಂಹ ನಾಯಕ್, ಉಜಿರೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಉಷಾ ಕಿರಣ್ ಕಾರಂತ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಂ. ಪಿ. ಶ್ರೀನಾಥ್, ಕನ್ನಾಡಿ ಸೇವಾ ಭಾರತಿ ಅಧ್ಯಕ್ಷೆ ಸ್ವರ್ಣ ಗೌರಿ, ಬೆಳ್ತಂಗಡಿ ಕೂಟ ಮಹಾಜಗತ್ತು ಅಧ್ಯಕ್ಷ ವಾಸುದೇವ ಸೋಮಯಾಜಿ, ಬೆಳ್ತಂಗಡಿ ಲಯನ್ಸ್ ಕ್ಲಬ್ ಅಧ್ಯಕ್ಷ ಮುರಳಿ ಬಲಿಪ, ಬೆಳ್ತಂಗಡಿ ತಾಲೂಕು ಚಿತ್ಪಾವನ ಬ್ರಾಹ್ಮಣ ಸಂಘದ ಅಧ್ಯಕ್ಷ ತ್ರಿವಿಕ್ರಮ ಹೆಬ್ಬಾರ್, ಉಜಿರೆ ವಲಯ ಹವ್ಯಕ ಅಧ್ಯಕ್ಷ ವಿದ್ಯಾಕುಮಾರ್ ಕಾಂಚೋಡು, ಬೆಳ್ತಂಗಡಿ ರೋಟರಿ ಕ್ಲಬ್ ಅಧ್ಯಕ್ಷ ಪ್ರಶಾಂತ್ ಪ್ರಭು ಇದ್ದರು. ಬ್ರಹ್ಮಕಲಶೋತ್ಸವ ಸಮಿತಿಯ ಗೌರವ ಸಲಹೆಗಾರ ಅನಂತ ಭಟ್ ಮಚ್ಚಿಮಲೆ ಸ್ವಾಗತಿಸಿ, ಶಿಕ್ಷಕ ರಾಮಕೃಷ್ಣ ಭಟ್ ಬಳಂಜ ನಿರೂಪಿಸಿದರು.

> ಜೀವನದಲ್ಲಿ ಉತ್ತಮ ಸಾಧನೆಗೈಯಲು ನಮ್ಮ ಪರಿಶ್ರಮದೊಂದಿಗೆ ದೈವ ಬಲವೂ ಅಗತ್ಯ. ದೈವ ಬಲವಿಲ್ಲದಿದ್ದರೆ ಜೀವನದಲ್ಲಿ ಗುರಿ ತಲುಪುವುದು ಅಸಾಧ್ಯ.
> ● ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ಕನ್ಯಾಡಿ ಶ್ರೀರಾಮ ಮಹಾ ಕ್ಷೇತ್ರ ಸಂಸ್ಥಾನ

ನವೀಕರಣಗೊಂಡ ಬಿ.ಸಿ.ರೋಡಿನ 'ರಂಗೋಲಿ' ಸೂಟ್ಸ್-ರೆಸ್ಟೋ ಬಾರ್ ಉದ್ಘಾಟನೆ

ಉದ್ಯಮದ ಜತೆ ಸಾಮಾಜಿಕ ಕಳಕಳಿ ಅಗತ್ಯ: ಡಾ. ಆಳ್ವ



ಬಂಟ್ವಾಳ: ಬಿ.ಸಿ.ರೋಡಿನ ಪ್ರತಿಷ್ಠಿತ ಹೋಟೆಲ್ ರಂಗೋಲಿ ಸೂಟ್ಸ್ ಮತ್ತು ರೆಸ್ಟೋ ಬಾರ್ 25ನೇ ವರ್ಷಕ್ಕೆ ಪಾದಾರ್ಪಣೆಗೈಯುತ್ತಿರುವ ಈ ಪ್ರಯುಕ್ತ ನೂತನ ಹವಾ ನಿಯಂತ್ರಿತ ವಸತಿಗೃಹ ಹಾಗೂ ನವೀಕರಣ ಗೊಂಡ ಹವಾ ನಿಯಂತ್ರಿತ ಸಭಾಭವನ ಮತ್ತು ರಂಗೋಲಿ ಸೂಟ್ಸ್ ಮತ್ತು ರೆಸ್ಟೋಬಾರ್ ಉದ್ಘಾಟನೆಯನ್ನು ಮಂಗಳವಾರ ಮೂಡಬಿದ್ರೆ ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ಅವರು ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ರಂಗೋಲಿಯ ಆಡಳಿತ ಪಾಲುದಾರ ಸದಾನಂದ ಶೆಟ್ಟಿ ಮತ್ತು ಚಂದ್ರಹಾಸ ಶೆಟ್ಟಿ ಅವರದ್ದು ಆದರ್ಶ ಕುಟುಂಬ. ಅವರ ಕಾರ್ಯ ಚಟುವಟಿಕೆ, ಗುಣ ನಡತೆಯನ್ನು ಅತ್ಯಂತ ಸಮೀಪದಿಂದ ಬಲ್ಲವನಾಗಿದ್ದೇನೆ. ಅವರು ಸಂಬಂಧಕ್ಕೆ ವಿಶೇಷವಾದ ಒತ್ತು ನೀಡುವುದರ ಜತೆಗೆ ಅದನ್ನು ಜೀವನಪರ್ಯಂತ ಉಳಿಸುವ ಮನೋಭಾವ ಉಳ್ಳವರು ಎಂದು ಹೇಳಿದರು.

ಹೊಟೇಲ್ ಉದ್ಯಮ ಜೊತೆಗೆ ಸಾಮಾಜಿಕ ಕಳಕಳಿ ಅಗತ್ಯ. ಇದು ಅವರಲ್ಲಿದೆ. ಅಲ್ಲದೇ ಧಾರ್ಮಿಕ ಪ್ರಜ್ಞಾವಂತರಲ್ಲದೇ ಧರ್ಮ ನಿಷ್ಠರಾಗಿರುವ ಅವರು, ಸಮಾಜದ ಪ್ರತಿಯೋರ್ವರೊಂದಿಗೂ ಬೆರೆಯುವ ಪರಿಕಲ್ಪನೆ ಹೊಂದಿದ್ದು ಹೊಟೇಲ್ ಉದ್ಯಮದಲ್ಲಿ 25ನೇ ವರ್ಷ ಪಾದಾರ್ಪಣೆ ಸಂದರ್ಭ ಆರಂಭಿಕ ಹಂತದಿಂದಲೂ ತಮ್ಮ ಜೊತೆಗಿದ್ದ ಸಿಬ್ಬಂದಿಗಳನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಔಚಿತ್ಯ ಪೂರ್ಣ ಎಂದರು.

ಮುಖ್ಯ ಅತಿಥಿಯಾಗಿದ್ದ ಮಾಜಿ ಸಚಿವ ಬಿ. ರಮಾನಾಥ ರೈ ಮಾತನಾಡಿ, ವರ್ತಮಾನ ಕಾಲಕ್ಕನುಗುಣವಾಗಿ ಹೋಟೆಲ್ ಅನ್ನು ಪರಿವರ್ತಿಸಿರುವುದು ಅಭಿನಂದನೀಯ. ಆಡಳಿತಪಾಲುದಾರರ ಪೂಜ್ಯರಾದ ದಿ. ದಾಸಪ್ಪ ಶೆಟ್ಟಿ ಅವರ ಸಜ್ಜನಿಕೆ, ವ್ಯಕ್ತಿತ್ವ ಮತ್ತು ಒಳ್ಳೆಯ ಗುಣ, ನಡವಳಿಕೆ, ಆರ್ಶೀವಾದ ಇವರನ್ನು ಉದ್ಯಮದಲ್ಲಿ ಎತ್ತರಕ್ಕೆ ಬೆಳೆಯವಲ್ಲಿ ಸಹಕಾರಿಯಾಗಿದೆ. ಜನರ ಪ್ರೀತಿ, ವಿಶ್ವಾಸ,ನಂಬಿಕೆಯನ್ನುಗಳಿಸುವಲ್ಲಿಯು ಯಶಸ್ವಿಯಾಗಿದ್ದಾರೆ ಎಂದರು.

ಬಂಟವಾಳ ಬಂಟರ ಸಂಘದ ಅಧ್ಯಕ್ಷ ಜಗನ್ನಾಥ ಚೌಟ ಬದಿಗುತ್ತು,ಬಂಟ್ವಾಳ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ ಅವರು ಅತಿಥಿಗಳಾಗಿ ಭಾಗವಹಿಸಿ ಶುಭಹಾರೈಸಿದರು.

ಸಿಬ್ಬಂದಿಗಳಿಗೆ ಗೌರವ

ಈ ಸಂದರ್ಭ ಆರಂಭಿಕ ಹಂತದಿಂದಲೂ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಬಾಲಕೃಷ್ಣ ಶೆಟ್ಟಿ ಸಂತೋಷ್ ಶೆಟ್ಟಿ ಹರೀಶ್ ಕುಲಾಲ್,ಆನಂದ ಪೂಜಾರಿ, ಪ್ರಕಾಶ್ ಪೂಜಾರಿ ಅವರ ಸೇವೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ಅದೇ ರೀತಿ ಎಲ್ಲಾ ನೌಕರರಿಗೆ ಶಾಲು ಹಾಕಿ ಸ್ಮರಣಿಕೆಯನ್ನಿತ್ತು ಗೌರವಿಸಲಾಯಿತು.

ಆಡಳಿತ ಪಾಲುದಾರ ಸದಾನಂದ ಡಿ. ಶೆಟ್ಟಿ ಉಪಸ್ಥಿತರಿದ್ದರು. ಹೋಟೆಲಿನ ಪಾಲುದಾರರಾದ ಚಂದ್ರಹಾಸ ಡಿ. ಶೆಟ್ಟಿ ಪ್ರಸ್ತಾವನೆಗೈದು, ಸಹಕಾರ ನೀಡಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ಮಾಣಿ ಗ್ರಾ.ಪಂ.ಮಾಜಿ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ ಕೋಡಾಜೆ ನಿರೂಪಿಸಿದರು. ಹೊಟೇಲ್ ಮೇಲ್ವಿಚಾರಕ ಸಾಕ್ಷತ್ ಶೆಟ್ಟಿ ರಂಗೋಲಿ ವಂದಿಸಿದರು.

25ನೇ ವರ್ಷಕ್ಕೆ ಪಾದಾರ್ಪಣೆ

25ನೇ ವರ್ಷಕ್ಕೆ ಪಾದಾರ್ಪಣೆ ಹಿನ್ನಲೆಯಲ್ಲಿ ಹವಾ ನಿಯಂತ್ರಿತವಾದ ವಸತಿಗೃಹ, ಸೂಟ್ ರೂಂ ಅನ್ನು ನಿರ್ಮಿಸಲಾಗಿದ್ದಲ್ಲದೇ ಸಭಾಭವನ ನವೀಕರಣಗೊಳಿಸಿ ಹವಾ ನಿಯಂತ್ರಿತವನ್ನಾಗಿ ಪರಿವರ್ತಿಸಲಾಗಿದೆ. ಹವಾನಿಯಂತ್ರಿತ ಲಾಂಜ್, ಕೊಠಡಿಗಳ ರೆಸ್ಟೋಬಾರ್ ಕೂಡ ಹೊಂದಿದೆ. ಗ್ರಾಹಕರ ಅನುಕೂಲದ ದೃಷ್ಟಿಯಿಂದ ಕೆಲ ಬದಲಾವಣೆ ಮಾಡಲಾಗಿದೆ.

ಒಟ್ಟು 6 ವಿಭಾಗಗಳಲ್ಲಿ ಸ್ಪರ್ಧೆ | ರಂಜನ್ ಜಿ.ಗೌಡ ಮಾಹಿತಿ

ಮಾ.15: ಬಂಗಾಡಿ- ಕೊಲ್ಲಿ ಕಂಬಳ

ಬೆಳ್ತಂಗಡಿ: ಪ್ರಕೃತಿಯ ಮಡಿಲಲ್ಲಿ ಕುದುರೆಮುಖ ಬೆಟ್ಟಗಳ ನಡುವೆ ನೇತ್ರಾವತಿ ನದಿ ಕಿನಾರೆಯಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ ವೀರೇಂದ್ರ ಹೆಗ್ಗಡೆಯವರ ಶುಭಾಶೀರ್ವಾದ ಗಳೊಂದಿಗೆ ಮಾ.15ರಂದು 28ನೇ ವರ್ಷದ ಬಂಗಾಡಿ- ಕೊಲ್ಲಿ 28ನೇ ವರ್ಷದ ಹೊನಲು ಬೆಳಕಿನ ಕಂಬಳ ನಡೆಯಲಿದೆ ಎಂದು ಸಮಿತಿ ಅಧ್ಯಕ್ಷ ರಂಜನ್ ಜಿ.ಗೌಡ ಹೇಳಿದರು.

ಉಜಿರೆಯ ಖಾಸಗಿ ಹೋಟೆಲ್ ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸೂರ್ಯ-ಚಂದ್ರ ಜೋಡುಕೆರೆ ಕಂಬಳ ಸಮಿತಿ,ರಾಜ್ಯ ಕಂಬಳ ಅಸೋಸಿಯೇಷನ್, ಯುವಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಭಾಗಿತ್ವದೊಂದಿಗೆ ನಡೆಯುವ ಕಂಬಳದ ಉದ್ಘಾಟನೆಯನ್ನು ಬೆಳಗ್ಗೆ 8.30ಕ್ಕೆ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡ್ವೆಟ್ನಾಯ ನೆರವೇರಿಸುವರು.

ಕೊಲ್ಲಿ ಶ್ರೀ ದುರ್ಗಾದೇವಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ದಾಸಪ್ಪ ಗೌಡ ಅಧ್ಯಕ್ಷತೆ ವಹಿಸುವರು. ಎಸ್‌ಕೆಡಿಆರ್‌ಡಿ ಪಿಯ ಕಾರ್ಯನಿರ್ವಹಣಾ ನಿರ್ದೇಶಕ ಅನಿಲ್ ಕುಮಾರ್ ಎಸ್. ಎಸ್., ಅಳದಂಗಡಿ ಶ್ರೀ ಸತ್ಯ ದೇವತೆ- ಕಲ್ಲುರ್ಟಿ ದೈವಸ್ಥಾನದ ಆಡಳಿತದಾರ ಶಿವಪ್ರಸಾದ್ ಅಜಿಲ, ತಹಸೀಲ್ದಾರ್ ಪೃಥ್ವಿ ಸಾನಿಕಂ, ಡಿವೈಎಸ್ಪಿ ರೋಹಿಣಿ ಸಿ.ಕೆ., ಪಶುವೈದ್ಯಾಧಿಕಾರಿ ಡಾ. ರವಿಕುಮಾರ್ ಮೊದಲಾದವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಏಳೂವರೆ ಪವನ್ ಚಿನ್ನ

ಸಂಜೆ 6.30ಕ್ಕೆ ನಡೆಯುವ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಸಚಿವ ಕೆ. ಗಂಗಾಧರ ಗೌಡ ವಹಿಸಲಿದ್ದಾರೆ ವಿಧಾನ ಸಭಾಧ್ಯಕ್ಷ ಯು ಟಿ.ಖಾದರ್, ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ಹರೀಶ್ ಪೂಂಜ, ಮಾಜಿ ಸಚಿವ ರಮಾನಾಥ ರೈ, ಪುತ್ತೂರು ಶಾಸಕ ಅಶೋಕ್ ಕುಮಾರ್, ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್, ಎಂಎಲ್ ಸಿಗಳಾದ ಪ್ರತಾಪ ಸಿಂಹ ನಾಯಕ್, ಕಿಶೋರ್ ಕುಮಾರ್ ಬೊಟ್ಯಾಡಿ, ಐವನ್ ಡಿಸೋಜಾ, ಉದ್ಯಮಿ ಶಶಿಧರ ಶೆಟ್ಟಿ ಬರೋಡ, ಶ್ರೀ ಆರಿಕೋಡಿ ಕ್ಷೇತ್ರದ ಧರ್ಮದರ್ಶಿ ಹರೀಶ್ ಆರಿಕೋಡಿ,, ಬದುಕು ಕಟ್ಟೋಣ ಬನ್ನಿ ತಂಡದ ಮುಖ್ಯಸ್ಥ ಕೆ.ಮೋಹನ್ ಕುಮಾರ್ ಎಕ್ಸೆಲ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಮಂತ ಕುಮಾರ್ ಜೈನ್, ಧಾರ್ಮಿಕ ಮುಖಂಡ ಕಿರಣ್ ಚಂದ್ರ ಪುಷ್ಪಗಿರಿ ಸೇರಿದಂತೆ ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಒಟ್ಟು 6 ವಿಭಾಗಗಳಲ್ಲಿ ನಡೆಯುವ ಕಂಬಳದಲ್ಲಿ ಏಳೂವರೆ ಪವನ್ ಚಿನ್ನವನ್ನು ಬಹುಮಾನವಾಗಿ ನೀಡಲಾಗುತ್ತದೆ.

ಪತ್ರಿಕಾಗೋಷ್ಠಿಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ, ಉದ್ಯಮಿ ಪುಷ್ಪರಾಜ್ ಶೆಟ್ಟಿ ಪ್ರಧಾನ ಕಾರ್ಯದರ್ಶಿಗಳಾದ ಕಿಶೋರ್ ವಳಂಬ್ರ, ಪ್ರಶಾಂತ್ ಪೂಜಾರಿ ಕೊಕ್ಕರ್ಣೆ, ಜತೆ ಕಾರ್ಯದರ್ಶಿ ಭರತ್ ಬಂಗಾಡಿ,ಮಧುಕರ ಸುವರ್ಣ ಹಾಗೂ ದಿನೇಶ್ ಗೌಡ ಉಪಸ್ಥಿತರಿದ್ದರು.

ದೇವತಾರಾಧನೆಯಲ್ಲಿ ಎಲ್ಲರೂ ಪಾಲ್ಗೊಳ್ಳುವಂತಾಗಲಿ: ಮಹೇಶ್ ಭಟ್



ಕಿನ್ನಿಗೋಳಿ: ಯುವ ಜನಾಂಗದಲ್ಲಿ ಧಾರ್ಮಿಕ ಭಾವನೆ ಇನ್ನಷ್ಟು ಹೆಚ್ಚಾಗಬೇಕು. ಭಯ ಭಕ್ತಿಯ ಮೂಲಕವಾಗಿ ಭ್ರಾಂತಿಯಿಂದ ಹೊರಬಂದು ಅಂತರ್ ಮುಖಿಗಳಾಗಿ ದೇವರನ್ನು ಭಜಿಸೋಣ ಎಂದು ಹಿರಿಯ ಆಚರಣೆಗಳನ್ನು ಉಳಿಸಿ ಬೆಳೆಸುವುದು ಅತೀ ಅಗತ್ಯವಿದೆ ಧಾರ್ಮಿಕ ಚಿಂತಕ ಮಹೇಶ್ ಭಟ್ ಅಲಂಗಾರು ಹೇಳಿದರು.

ಅವರು ಕೊಡೆತ್ತೂರು ಅರಸು ಕುಂಜರಾಯ ದೈವಸ್ಥಾನದಲ್ಲಿ ವರ್ಷಾವಧಿ ನೇಮದ ಸಂದರ್ಭ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿ, ಎಲ್ಲರನ್ನು ಒಂದು ಮಾಡುವ ದೈವಾರಾಧನೆಯಲ್ಲಿ ದೇವತಾರಾಧನೆಯಲ್ಲಿ ಎಲ್ಲರನ್ನೂ ಒಳಗೊಳ್ಳುವ ಉತ್ಸವದ ಭಾಗವಾಗಿ ಒಳಗೊಳ್ಳುವುದು ಇವತ್ತಿನ ಅವಶ್ಯಕತೆ. ವೈದಿಕ ದ್ರಾವಿಡ ಸಮನ್ವಯತೆ ಹಿಂದು ಧರ್ಮದ ಸಂಘಟನೆಗೆ ಅಗತ್ಯ ವಾಗಿದೆ. ಆರಾಧನೆಯ ಒಳಗುಟ್ಟುಗಳು ಎಲ್ಲರಿಗೂ ತಿಳಿಯುವಂತಾಗಬೇಕು ಎಂದರು.

ಮಾಜಿ ಸಚಿವ ನಾಗರಾಜ ಶೆಟ್ಟಿ ಮಾತನಾಡಿದರು. ಪ್ರಶಸ್ತಿ ವಿಜೇತ ಡಾ. ಶಶಿಕುಮಾರ್ ಕಟೀಲು, ವೈದ್ಯ ಡಾ. ಯೋಗೀಶ್ ಯಾಧವ್, ರಾಷ್ಟ್ರಮಟ್ಟದ ಪಟು ರಕ್ಷಿತಾ ಉಲ್ಲಂಜೆ ಅವರನ್ನು ಸನ್ಮಾನಿಸಲಾಯಿತು. ಕೊಡೆತ್ತೂರು ದೇವಸ್ಯ ಮಠದ ವೇದವ್ಯಾಸ ಉಡುಪ, ಅರುಣ್ ಶೆಟ್ಟಿ ಕೊಡೆತ್ತೂರು ದೇವಸ್ಯ, ಮಿನಾಕ್ಷಿ ಆಳ್ವ ಮಿಜಾರು ಗುತ್ತು , ಮುಂಬೈ ಸಮಿತಿಯ ಅಧ್ಯಕ್ಷ ದಿವಾಕರ ಶೆಟ್ಟಿ ಕೆ. ಐಬೆಟ್ಟು, ಮಾಜಿ ಮೇಯರ್ ಕವಿತಾ ಸನಿಲ್, ಬಿಜೆಪಿ ನಾಯಕ ಅವಿನಾಶ್ ಸುವರ್ಣ, ಬೀದರ್ ಉದ್ಯಮಿ ಬಾಲಕೃಷ್ಣ ಶೆಟ್ಟಿ, ಸಾಹಿತಿ ದೇಜು ಶೆಟ್ಟಿ ಪೆಜತ್ತಿಮಾರ್ , ಉದ್ಯಮಿ ಪೃಥ್ವಿರಾಜ ಆಚಾರ್ಯ ಕಿನ್ನಿಗೋಳಿ, ಸಮಿತಿಯ ಕಾರ್ಯದರ್ಶಿ ಲೋಕೇಶ್ ಶೆಟ್ಟಿಬರ್ಕೆ, ವಿಶ್ವಬ್ರಾಹ್ಮಣ ಸಂಘದ ಅಧ್ಯಕ್ಷ ಜಗದೀಶ ಆಚಾರ್ಯ, ಮುಂಬೈ ಸಮಿತಿಯ ಶರತ್ ಇದ್ದರು. ದೇವೀ ಪ್ರಸಾದ ಶೆಟ್ಟಿ ಸ್ವಾಗತಿಸಿ, ವರ್ಷಾ ಶೆಟ್ಟಿ, ಮೇಘಾ ಶೆಟ್ಟಿ ಪ್ರವೀಣ್ ಕೋಟ್ಯಾನ್ ವಾಚಿಸಿದರು. ಪ್ರಕಾಶ್ ಆಚಾರ್, ಕಲ್ಪೇಶ್ ಶೆಟ್ಟಿ ನಿರೂಪಿಸಿದರು.

ಪುತ್ತೂರಿನಲ್ಲಿ ಶ್ರೀ ಸತ್ಯಸಾಯಿ ಪ್ರೇಮ ಪ್ರವಾಹಿನಿ ದಿವ್ಯ ರಥಯಾತ್ರೆಗೆ ಸ್ವಾಗತ

ಪುತ್ತೂರು: ಶ್ರೀ ಸತ್ಯಸಾಯಿ ಬಾಬಾ ಅವರ ಜನ್ಮಶತಮಾನೋತ್ಸವ ವರ್ಷದ ಪ್ರಯುಕ್ತ ದೇಶದಾದ್ಯಂತ ಸಂಚರಿಸುತ್ತಿರುವ ಶ್ರೀ ಸತ್ಯಸಾಯಿ ಪ್ರೇಮ ಪ್ರವಾಹಿನಿ ದಿವ್ಯರಥ ಯಾತ್ರೆಯು ಪುತ್ತೂರು ಪ್ರವೇಶ ಮಾಡಿತು.

ಸುಳ್ಯದಿಂದ ಬಂದು ಪುತ್ತೂರು ತಾಲೂಕು ಪ್ರವೇಶ ಮಾಡಿದ ರಥಯಾತ್ರೆಯನ್ನು ಕೌಡಿಚ್ಚಾರ್‌ನಲ್ಲಿ ಸ್ವಾಗತಿಸಲಾಯಿತು.

ಅಲ್ಲಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಜಾಥಾದ ಮೂಲಕ ಆಗಮಿಸಿದ ಯಾತ್ರೆಯು ಪುತ್ತೂರು ನಗರದ ಮುಖ್ಯ ರಸ್ತೆಯಲ್ಲಿ ಕ್ರಮಿಸಿ ಕೋರ್ಟ್ ರಸ್ತೆಯಲ್ಲಿರುವ ಶ್ರೀ ಸತ್ಯಸಾಯಿ ಮಂದಿರದಲ್ಲಿ ಸಮಾವೇಶಗೊಂಡಿತು. ಮಂದಿರದ ಹಿರಿಯರಾದ ಪದ್ಮನಾಭ ನಾಯಕ್ ಅವರು ರಥದಲ್ಲಿದ್ದ ಪಾದುಕೆಗೆ ಪುಷ್ಪಾರ್ಚನೆ ಮಾಡಿದರು. ದಯಾನಂದ್ ಕೆ.ಎಸ್. ಆರತಿ ಬೆಳಗಿದರು.

ಆಂಧ್ರಪ್ರದೇಶದ ಪುಟ್ಟಪರ್ತಿಯಿಂದ ಕಳೆದ ವರ್ಷದ ಏ.25ರಂದು ರಥಯಾತ್ರೆ ಆರಂಭಗೊಂಡಿದೆ. ಇದಕ್ಕಾಗಿ ಒಟ್ಟು 5 ರಥಗಳನ್ನು ಸಜ್ಜುಗೊಳಿಸಿ ವಿವಿಧ ದಿಕ್ಕುಗಳಿಗೆ ಕಳಿಸಲಾಗಿದೆ. ಪ್ರತೀ ರಥವೂ ತಲಾ 500 ಗ್ರಾಮಗಳನ್ನು ದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿ 2026ರ ಸೆ.23ರಂದು ಪುಟ್ಟಪರ್ತಿಯಲ್ಲಿ ಸೇರಲಿದೆ. ರಥದಲ್ಲಿ ಶ್ರೀ ಸತ್ಯಸಾಯಿ ಬಾಬಾ ಅವರ ಸಾನಿಧ್ಯ ಮತ್ತು ಪಾದುಕೆಗಳನ್ನು ಇರಿಸಲಾಗಿದೆ. ಲವ್ ಆಲ್, ಸರ್ವ್ ಆಲ್, ಹೆಲ್ಪ್ ಎವರ್, ಹರ್ಟ್ ನೆವರ್ ಎಂಬ ಶ್ರೀ ಸತ್ಯಸಾಯಿ ಬಾಬಾ ಅವರ ಸಂದೇಶವನ್ನು ಅವರ ಜನ್ಮಶತಮಾನೋತ್ಸವ ವರ್ಷದಲ್ಲಿ ದೇಶದಲ್ಲೆಡೆ ಸಾರುವ ಉದ್ದೇಶದಿಂದ ಈ ರಥಯಾತ್ರೆ ನಡೆಯುತ್ತಿದೆ ಎಂದು ಈ ಸಂದರ್ಭದಲ್ಲಿ ನಡೆದ ಸಭೆಯಲ್ಲಿ ತಿಳಿಸಲಾಯಿತು.

ಶ್ರೀ ಸತ್ಯಸಾಯಿ ಎಜುಕೇರ್ ರಾಜ್ಯ ಸಂಯೋಜಕ ಜಗನ್ನಾಥ ನಾಡಿಗೇರ್ ದಿಕ್ಸೂಚಿ ಭಾಷಣ ಮಾಡಿದರು. ಸವಣೂರು ವಿದ್ಯಾರಶ್ಮಿ ವಿದ್ಯಾಸಂಸ್ಥೆಗಳ ಸಂಚಾಲಕ ಸವಣೂರು ಕೆ. ಸೀತಾರಾಮ ರೈ ಶುಭ ಕೋರಿದರು. ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳ ರಾಜ್ಯಾಧ್ಯಕ್ಷ ಎಂ. ಪದ್ಮನಾಭ ಪೈ ಅಧ್ಯಕ್ಷತೆ ವಹಿಸಿದ್ದರು. ಸೇವಾ ಸಂಸ್ಥೆಗಳ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಎಂ. ಪ್ರಸನ್ನ ಭಟ್ ಮಾತನಾಡಿದರು. ರಾಜ್ಯ ಮಹಿಳಾ ಸೇವಾ ಸಂಯೋಜಕಿ ಪ್ರಿಯಾ ಪಿ. ಪೈ, ಪ್ರಮುಖರಾದ ಡಾ. ಸತ್ಯಸುಂದರ ರಾವ್, ಚಿತ್ರಾ ರೈ, ಶ್ರೀ ಸತ್ಯಸಾಯಿ ಜನ್ಮಶತಾಬ್ದಿ ಆಚರಣಾ ಸಮಿತಿ ಅಧ್ಯಕ್ಷ ರಘುನಾಥ ರೈ, ಡಾ. ಶಶಿಧರ ಕಜೆ, ನಾರಾಯಣ ರೈ ಸಂಪ್ಯದಮೂಲೆ ಮತ್ತಿತರರು ಇದ್ದರು. ಸಾಯಿರೂಪ, ಸಾಯೀಶ್ವರಿ, ಸಾಯಿ ಮಾತಾ ವೇದಮಂತ್ರ ಪಠಿಸಿದರು. ದಯಾನಂದ ಕೆ.ಎಸ್. ವಂದಿಸಿದರು. ಕಾವ್ಯ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.



ಶಕ್ತಿ ರೆಸಿಡೆನ್ಶಿಯಲ್ ಶಾಲೆಯ ಪ್ರಾಂಶುಪಾಲೆ ಬಬಿತಾ ಸುರಜ್‌ಗೆ ಸಾಮಾಜಿಕ ಮುಖಂಡರು ಮತ್ತು ಸಾಧಕರಿಗಾಗಿ 'ದಿ ಇಂಡಿಯನ್ ಫೋರಮ್'ನಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಂದು 'ವಿಮೆನ್ ಲೀಡರ್‌ಶಿಪ್ ಎಕ್ಸಲೆನ್ಸ್ ಅವಾರ್ಡ್' ಅನ್ನು ನೀಡಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಅವರ ಅತ್ಯುತ್ತಮ ಸಾಧನೆಗಳು ಗುರುತಿಸಿ ಈ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸಂಸ್ಥೆಯ ಸಂಸ್ಥಾಪಕ ಡಾ. ಕೆ.ಸಿ. ನ್ಯಾಕ್, ಕಾರ್ಯದರ್ಶಿ ಸಂಜಿತ್ ನ್ಯಾಕ್, ಪ್ರಧಾನ ಸಲಹೆಗಾರ ರಮೇಶ್ ಕೆ. ಮತ್ತು ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳು ಅಭಿನಂದಿಸಿದರು.




ಮುಲ್ಕಿಯ ಶಿಮಂತೂರು ತಕಳಪಾದೆ ದೈವಸ್ಥಾನದಲ್ಲಿ ಶಿಮಂತೂರು ಮತ್ತು ಏಳತ್ತೂರು ಗ್ರಾಮಸ್ಥರ ರಾಜನ್ ದೈವ ಶ್ರೀ ಮಹಿಷಂದಾಯ ಮತ್ತು ಶ್ರೀ ಧರ್ಮ ಜಾರಂದಾಯ ಹಾಗೂ ಬಂಟ ದೈವಗಳ ಸಿರಿಸಿಂಗಾರದ ನೇಮ ಸೋಮವಾರ ರಾತ್ರಿ ನಡೆಯಿತು.

ಮಾ.15ರಿಂದ 20ರವರೆಗೆ ಆದ್ಯಪಾಡಿ ಶ್ರೀ ಕ್ಷೇತ್ರದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವದ ಸಂಭ್ರಮ

ಮಂಗಳೂರು: ಆದ್ಯಪಾಡಿ ದೈವಂಗಳಗುಡ್ಡೆ ಶ್ರೀ ನೀಲಕಂಠ ಉಮಾಮಹೇಶ್ವರ ದೇವಸ್ಥಾನದಲ್ಲಿ ಮಾ.15ರಿಂದ 20ರವರೆಗೆ ಅಷ್ಟಬಂಧ ಬ್ರಹ್ಮಕಲಶೋತ್ಸವ ವಿವಿಧ ಧಾರ್ಮಿಕ, ವೈದಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ಮಾ.18ಕ್ಕೆ ರುದ್ರಯಾಗ, 19ರಂದು ಸಹಸ್ರ ನಾಳಿಕೇರ ಮಹಾಗಣಪತಿ ಹೋಮ, 20ರಂದು ಬ್ರಹ್ಮಕಲಶಾಭಿಷೇಕ ನಡೆಯಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಅಜಿತ್ ಕುಮಾರ್ ರೈ ಮಾಲಾಡಿ ಹಾಗೂ ಆಡಳಿತ ಮೊಕ್ತೇಸರ ಎ. ಮಂಜುನಾಥ ಭಂಡಾರಿ ಶೆಡ್ಡೆ ತಿಳಿಸಿದರು.

ಮಾ.15ರಂದು ಬೆಳಗ್ಗೆ 8.30ಕ್ಕೆ ದೇವತಾ ಪ್ರಾರ್ಥನೆ, ವೈದಿಕ ಕಾರ್ಯಕ್ರಮ, ಬೆಳಗ್ಗೆ 11ಕ್ಕೆ ತೋರಣ ಮುಹೂರ್ತ, ಉಗ್ರಾಣ ಮುಹೂರ್ತ, ಧಾರ್ಮಿಕ ಸಭೆ, ಸಂಜೆ 6ಕ್ಕೆ ವೈದಿಕ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 3ಕ್ಕೆ ಹೊರೆಕಾಣಿಕೆ ಸಮರ್ಪಣಾ ಮೆರವಣಿಗೆ ಕೈಕಂಬ ಧೂಮಾವತಿ ದ್ವಾರದಿಂದ



ಮತ್ತು ಪೊರ್ಕೋಡಿ ಶ್ರೀ ಸೋಮನಾಥೇಶ್ವರ ದ್ವಾರದಿಂದ ಹೊರಟು ದೇವಸ್ಥಾನ ತಲುಪಲಿದೆ. ಸಂಜೆ 6ರಿಂದ ಕಟೀಲು ಮೇಳದಿಂದ ಶ್ರೀ ದೇವಿ ಮಹಾತ್ಮೆ ಯಕ್ಷಗಾನ ಪ್ರದರ್ಶನಗೊಳ್ಳಲಿದೆ ಎಂದು ಮಂಗಳವಾರ ದೇವಸ್ಥಾನದಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಮಾ.16ಕ್ಕೆ ಬೆಳಗ್ಗೆ 8ರಿಂದ ಹಾಗೂ ಸಂಜೆ 6ರಿಂದ ವೈದಿಕ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಸೂರ್ಯೋದಯದಿಂದ ಸೂರ್ಯಾಸ್ತಮಾನದವರೆಗೆ ಭಜನೋತ್ಸವ ನಡೆಯಲಿದೆ. ಮಾ.17ಕ್ಕೆ ಬೆಳಗ್ಗೆ 8 ಹಾಗೂ ಸಂಜೆ 6ರಿಂದ ವೈದಿಕ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಸಂಜೆ 6ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಅಂಗವಾಗಿ ನೃತ್ಯರೂಪಕ ಪ್ರದರ್ಶನಗೊಳ್ಳಲಿದೆ ಎಂದರು. ಮಾ.18ರಂದು ಬೆಳಗ್ಗೆ 8ಕ್ಕೆ ರುದ್ರಯಾಗ ಪ್ರಾರಂಭ, ಗಣಪತಿ ದೇವರಿಗೆ ಕಲಶಾಭಿಷೇಕ, 11.30ಕ್ಕೆ ರುದ್ರಯಾಗ ಪೂರ್ಣಾಹುತಿ, ಮಹಾಪೂಜೆ, ಸಂಜೆ 4ಕ್ಕೆ ಧಾರ್ಮಿಕ ಸಭೆ, 6ರಿಂದ ವೈದಿಕ ಕಾರ್ಯಕ್ರಮ, ತುಳು ನಾಟಕ ನಡೆಯಲಿದೆ. ಮಾ.19ಕ್ಕೆ ಬೆಳಗ್ಗೆ 6ರಿಂದ ಅಷ್ಟೋತ್ತರ ಸಹಸ್ರ ನಾಳಿಕೇರ ಗಣಪತಿ ಹವನ ಪ್ರಾರಂಭ, 11.30ಕ್ಕೆ ಪೂರ್ಣಾಹುತಿ, ಮಹಾಪೂಜೆ, ಸಂಜೆ ಧಾರ್ಮಿಕ ಸಭೆ, 6ಕ್ಕೆ ವೈದಿಕ ಕಾರ್ಯಕ್ರಮ, ಭಕ್ತಿಗಾನ ಸುಧೆ ನಡೆಯಲಿದೆ ಎಂದು ವಿವರಿಸಿದರು.

ಆರು ದಿನಗಳ ಕಾಲ ನಡೆಯುವ ಈ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ಬರುವ ಎಲ್ಲ ಭಕ್ತರಿಗೆ ಬೆಳಗ್ಗೆ ಮತ್ತು ಸಂಜೆ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ಭೋಜನ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ ಎಂದರು.

ಕಾರ್ಯಾಧ್ಯಕ್ಷ ಹರೀಶ್ ಶೆಟ್ಟಿ ಐತಮೊಗರು ದೊಡ್ಡಮನೆ ಬೈಲುಮೂಡುಕರೆ, ಸ್ವಾಗತ ಸಮಿತಿ ಗೌರವಾಧ್ಯಕ್ಷ ಭುಜಂಗ ಶೆಟ್ಟಿ ಜೆಪ್ಪುಗುಡ್ಡೆ ಗುತ್ತು, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಕೃಷ್ಣಮೂರ್ತಿ ಅಡ್ಯಾರ್ ಕಟ್ಟೆ, ದಿವಾಕರ ಸಾಮಾನಿ ಚೇಳಾರು ಗುತ್ತು, ಸತೀಶ್ ಆಳ್ವ ಬೈಲುಮೂಡುಕರೆ, ಕೋಶಾಧಿಕಾರಿ ಸಂತೋಷ್ ಶೆಟ್ಟಿ ಶೆಡ್ಡೆ ಹೊಸಲಕ್ಕೆ, ಕಾರ್ಯದರ್ಶಿ ಜಯರಾಮ ಕೊಟ್ಟಾರಿ ಶೆಡ್ಡೆ, ಹೊರೆಕಾಣಿಕೆ ಸಮಿತಿಯ ಅಧ್ಯಕ್ಷ ರಮಾನಾಥ ಅತ್ತಾರ್ ಐತಮೊಗರು ಗುತ್ತು, ಡಾ. ಆಶಾಜ್ಯೋತಿ ರೈ, ದೇವದಾಸ್ ನಾಯಕ್, ಆದ್ಯಪಾಡಿ ಗುತ್ತು ರಾಜೀವ್ ಆಳ್ವ, ಬಾಲಕೃಷ್ಣ ರೈ ಕೊಳಂಬೆಗುತ್ತು, ಅಶ್ವಿನ್ ಬಳ್ಳಾಲ್ ಉಪಸ್ಥಿತರಿದ್ದರು.

ಮಾ.20ಕ್ಕೆ ಬ್ರಹ್ಮಕಲಶಾಭಿಷೇಕ

ಮಾ.20ರಂದು ಬೆಳಗ್ಗೆ 8ಕ್ಕೆ ಶ್ರೀ ದೇವರಿಗೆ ಪರಿಕಲಶಾಭಿಷೇಕ ಪ್ರಾರಂಭ, 9.30ರಿಂದ 11ರ ಸಮಯ ವೃಷಭ ಲಗ್ನ ಸುಮುಹೂರ್ತದಲ್ಲಿ ಬ್ರಹ್ಮಕಲಶಾಭಿಷೇಕ, ಪ್ರಸನ್ನ ಪೂಜೆ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಪಲ್ಲಪೂಜೆ, ಮಹಾಅನ್ನಸಂತರ್ಪಣೆ, ಸಂಜೆ 4ರಿಂದ ಧಾರ್ಮಿಕ ಸಭೆ, ಸಂಜೆ 6ರಿಂದ ಶಿವದೂತೆ ಗುಳಿಗೆ ತುಳು ನಾಟಕ, ಸಂಜೆ 7.30ರಿಂದ ರಂಗಪೂಜೆ, ದೈವಗಳಿಗೆ ಪರ್ವಸೇವೆ ನಡೆಯಲಿದೆ.

2 ಕೋ.ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳು

ಸಾವಿರಾರು ವರ್ಷಗಳ ಇತಿಹಾಸ ಇರುವ ಈ ದೇವಾಲಯ ಜೈನರ ಆಡಳಿತದಲ್ಲಿತ್ತು. ಅವರಿಗೆ ನಿರ್ವಹಿಸಲು ಕಷ್ಟವಾದಾಗ ಅನ್ಯಮತೀಯರಿಗೆ ಮಾರಲು ಮುಂದಾದ ಸಂದರ್ಭ ಪ್ರಸ್ತುತ ಆಡಳಿತ ನಡೆಸುತ್ತಿರುವ ಮನೆತನದವರು ಅದನ್ನು ಖರೀದಿಸಿ ಶ್ರದ್ಧೆಯ ಕೇಂದ್ರವಾಗಿ ಅಭಿವೃದ್ಧಿಪಡಿಸಿದ್ದಾರೆ. ಈಗಿನ ಆಡಳಿತ ಮೊಕ್ತೇಸರರ ನೇತೃತ್ವದಲ್ಲಿ ನಾಲ್ಕನೇ ಬಾರಿ ಬ್ರಹ್ಮಕಲಶೋತ್ಸವ ನಡೆಯುತ್ತಿದ್ದು 2 ಕೋ. ರೂ.ವೆಚ್ಚದಲ್ಲಿ ವಿವಿಧ ಕಾಮಗಾರಿ ನಡೆಸಲಾಗಿದೆ ಎಂದು ಬ್ರಹ್ಮಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ, ಮಾಜಿ ಸಚಿವ ಬಿ. ನಾಗರಾಜ ಶೆಟ್ಟಿ ತಿಳಿಸಿದರು.

ಸುತ್ತಮುತ್ತ

ಶ್ರೀ ಶಾರದಾ ಕಾಲೇಜಿನ ಸಂಚಾಲಕರಾಗಿ ಅನುಪಮಾ ಎಸ್. ಶೆಟ್ಟಿ

ಕುಂದಾಪುರ: ತಾಲೂಕಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಬಸ್ರೂರು ಶ್ರೀ ಶಾರದಾ ಪ್ರಥಮ ದರ್ಜೆ ಕಾಲೇಜಿನ ಆಡಳಿತ ಮಂಡಳಿಯ ನೂತನ ಸಂಚಾಲಕರನ್ನಾಗಿ ಅನುಪಮಾ ಎಸ್. ಶೆಟ್ಟಿ ಅವರನ್ನು ಆಯ್ಕೆ ಮಾಡಲಾಗಿದೆ. ಹಿಂದಿನ ಆಡಳಿತ ಮಂಡಳಿಯ ಸಂಚಾಲಕರಾಗಿದ್ದ ಬಸ್ರೂರು



ಅಪ್ಪಣ್ಣ ಹೆಗ್ಡೆ ಅವರ ನಿಧನದಿಂದ ತೆರವಾದ ಸ್ಥಾನಕ್ಕೆ ನೂತನ ಸಂಚಾಲಕರನ್ನಾಗಿ ಅನುಪಮಾ ಎಸ್. ಶೆಟ್ಟಿ ಅವರನ್ನು ಆಯ್ಕೆ ಮಾಡಲಾಗಿದೆ. ಅನುಪಮಾ ಎಸ್. ಶೆಟ್ಟಿ ಅವರು ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾಗಿ ಕಾಲೇಜಿನ ಅಭಿವೃದ್ಧಿಗೆ ಗಣನೀಯ ಸೇವೆ ಸಲ್ಲಿಸಿದ್ದರು. ಪ್ರತಿಷ್ಠಿತ ಬಾಂಡ್ಯಾ ಎಜುಕೇಶನಲ್ ಟ್ರಸ್ಟ್‌ನ ಅಧೀನದಲ್ಲಿ ವಕ್ವಾಡಿಯ ಗುರುಕುಲ ಸಮೂಹ ಶಿಕ್ಷಣ ಸಂಸ್ಥೆಗಳ ಜಂಟಿ ಕಾರ್ಯನಿರ್ವಾಹಕ ಟ್ರಸ್ಟಿ ಇವರು, ಬಾಂಡ್ಯ ಎಜುಕೇಶನಲ್ ಟ್ರಸ್ಟ್ ದತ್ತು ಸ್ವೀಕಾರ ಮಾಡಿರುವ ಕೊಡ್ಲಾಡಿ-ಬಾಂಡ್ಯ ಸರ್ಕಾರಿ ಪ್ರಾಥಮಿಕ ಶಾಲೆಯ ಅಭಿವೃದ್ಧಿಯಲ್ಲಿಯೂ ಸಾಕಷ್ಟು ಕೊಡುಗೆ ನೀಡಿದ್ದಾರೆ.

ಮಲೆಕುಡಿಯರಿಗೆ ವಸತಿ ಸೌಲಭ್ಯ: ಅರ್ಜಿ ಆಹ್ವಾನ

ಉಡುಪಿ: ಪ್ರಸಕ್ತ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ 198 ರಂತೆ ಅರಣ್ಯ ದಂಚಿನ ಹಾಡಿಗಳಲ್ಲಿ ವಾಸ ಮಾಡುತ್ತಿರುವ ಮಲೆಕುಡಿಯ ಸಮುದಾಯದವರಿಗೆ 'ಮುಖ್ಯಮಂತ್ರಿಗಳ ಆದಿವಾಸಿ ಗೃಹ ಭಾಗ್ಯ ಯೋಜನೆ'ಯಡಿ ಮನೆಗಳನ್ನು ನಿರ್ಮಾಣ ಮಾಡಲು ಜಿಲ್ಲೆಯ ವಸತಿ ರಹಿತ ಮಲೆಕುಡಿಯ ಸಮುದಾಯದವರಿಂದ ವಸತಿ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.
ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯತ್ ಅಥವಾ ಐ.ಟಿ.ಡಿ.ಪಿ ಕಚೇರಿ ರಜತಾದ್ರಿ, ಮಣಿಪಾಲ ದೂ.ಸಂಖ್ಯೆ: 0820-2574814 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಸಾಲಿಗ್ರಾಮ: ಉದ್ಯಮ ಪರವಾನಿಗೆ ನವೀಕರಣಕ್ಕೆ ಅರ್ಜಿ ಆಹ್ವಾನ

ಉಡುಪಿ: ಸಾಲಿಗ್ರಾಮ ಪಟ್ಟಣ ಪಂಚಾಯತ್‌ನ ಎಲ್ಲಾ ಉದ್ಯಮದಾರರ 2026-27 ನೇ ಸಾಲಿನ ಉದ್ಯಮ ಪರವಾನಿಗೆ ನವೀಕರಣ ಅವಧಿಯು ಏಪ್ರಿಲ್ 2026 ರಿಂದ ಪ್ರಾರಂಭವಾಗಲಿದ್ದು, ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಉದ್ಯಮ ನಡೆಸುತ್ತಿರುವ ಉದ್ಯಮದಾರರು ಉದ್ದಿಮೆ ಪರವಾನಿಗೆ ನವೀಕರಣಕ್ಕೆ ಸಂಬಂಧಿಸಿದಂತೆ ನಿಗದಿತ ದಾಖಲೆ ಸಹಿತ ಆನ್‌ಲೈನ್ ಮೂಲಕ ಅಥವಾ ಪಟ್ಟಣ ಪಂಚಾಯತ್‌ಗೆ ಅರ್ಜಿ ನಮೂನೆ ಹಾಗೂ ದಾಖಲೆ ಸಹಿತ ಶುಲ್ಕ ಪಾವತಿಸಿ ಉದ್ಯಮ ಪರವಾನಿಗೆ ನವೀಕರಿಸಿಕೊಳ್ಳಬಹುದಾಗಿದೆ.
ನಿಗದಿತ ಅವಧಿಯಲ್ಲಿ ಉದ್ಯಮ ಪರವಾನಿಗೆ ನವೀಕರಿಸದಿದ್ದಲ್ಲಿ ಅಧಿಸೂಚನೆಯಂತೆ ದಂಡ ಸಹಿತ ಬಾಕಿ ಶುಲ್ಕವನ್ನು ಪಾವತಿಸಬೇಕು. ಈಗಾಗಲೇ ಉದ್ಯಮ ಸ್ಥಗಿತಗೊಳಿಸಿದ್ದಲ್ಲಿ ಮಾರ್ಚ್ ಅಂತ್ಯದೊಳಗೆ ಪಟ್ಟಣ ಪಂಚಾಯತ್‌ಗೆ ಲಿಖಿತವಾಗಿ ಅರ್ಜಿ ಸಲ್ಲಿಸಿ, ದಂಡ ಸಹಿತ ಬಾಕಿ ಶುಲ್ಕ ಪಾವತಿಸಿ ಉದ್ಯಮ ಪರವಾನಿಗೆಯನ್ನು ರದ್ದುಪಡಿಸಿಕೊಳ್ಳಬೇಕು. ತಪ್ಪಿದ್ದಲ್ಲಿ ಉದ್ಯಮದಾರರನ್ನು ಪ್ರತಿವರ್ಷ ಬಾಕಿದಾರರೆಂದು ಪರಿಗಣಿಸಿ ಕಾನೂನು ರೀತ್ಯಾ ದಂಡಸಹಿತ ಬಾಕಿ ಶುಲ್ಕ ವಸೂಲಿ ಮಾಡಲು ಕ್ರಮವಹಿಸಲಾಗುವುದು.
ಉದ್ಯಮ ಪರವಾನಿಗೆ ಪಡೆಯದೇ ಅನಧಿಕೃತವಾಗಿ ಉದ್ಯಮ ನಡೆಸುತ್ತಿದ್ದಲ್ಲಿ ತಕ್ಷಣವೇ ನಿಗದಿತ ದಾಖಲೆ ಸಹಿತ ಆನ್‌ಲೈನ್ ತಂತ್ರಾಂಶದ ಮೂಲಕ ಅಥವಾ ಪಟ್ಟಣ ಪಂಚಾಯತ್ ಕಚೇರಿಗೆ ಆನ್‌ಲೈನ್ ಮೂಲಕ ಅಥವಾ ಲಿಖಿತವಾಗಿ ಅರ್ಜಿ ಸಲ್ಲಿಸಿ ದಾಖಲೆ ನೀಡಿ ಉದ್ಯಮ ಪರವಾನಿಗೆಯನ್ನು ಪಡೆದುಕೊಳ್ಳಬೇಕು. ಬೀದಿ ಬದಿ ವ್ಯಾಪಾರಸ್ಥರು, ಗೂಡಂಗಡಿದಾರರು ಹಾಗೂ ರಾಷ್ಟ್ರೀಯ ಹೆದ್ದಾರಿ ಬದಿ ವ್ಯಾಪಾರಸ್ಥರು ಉದ್ಯಮ ಪರವಾನಿಗೆ ಪಡೆಯದೇ ಉದ್ಯಮ ನಡೆಸುತ್ತಿದ್ದಲ್ಲಿ ಪಟ್ಟಣ ಪಂಚಾಯತ್ ಕಚೇರಿಗೆ ಘನತ್ಯಾಜ್ಯ ಹಾಗೂ ಉದ್ಯಮ ಶುಲ್ಕವನ್ನು ಪಾವತಿಸಬೇಕು. ತಂಬಾಕು ಉತ್ಪನ್ನಗಳ ಮಾರಾಟಗಾರರು ನಿಗದಿತ ಶುಲ್ಕ ಪಾವತಿಸಿಕೊಂಡು ಕಡ್ಡಾಯವಾಗಿ ಆನ್‌ಲೈನ್ ತಂತ್ರಾಂಶದ ಮೂಲಕ ತಂಬಾಕು, ಗುಟ್ಕಾ ಪರವಾನಿಗೆ ಪಡೆಯುವಂತೆ ಸಾಲಿಗ್ರಾಮ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಬಿಸಿಲ ಧಗೆಗೆ ಬಾಡಿದ ತರಕಾರಿ, ಇಳುವರಿ ಭಾರೀ ಕುಸಿತ | ಮಾರುಕಟ್ಟೆ ಬೇಡಿಕೆಗೆ ತಕ್ಕಂತೆ ಪೂರೈಕೆಯಾಗುತ್ತಿಲ್ಲ

ಬೆಲೆ ಏರಿಕೆಯ ಸುಳಿಗೆ ಸಿಲುಕಿ ಹೈರಾಣಾದ ಕರಾವಳಿ ಗ್ರಾಹಕ





ಉಡುಪಿ: ಕರಾವಳಿಯಲ್ಲಿ ದಿನದಿಂದ ದಿನಕ್ಕೆ ಸೂರ್ಯನ ಪ್ರಖರತೆ ಹೆಚ್ಚುತ್ತಿದ್ದು, ಇದರ ನೇರ ಪರಿಣಾಮ ಈಗ ಮಾರುಕಟ್ಟೆಯ ಮೇಲೆ ಬೀರತೊಡಗಿದೆ. ಈ ಬಾರಿಯ ಬೇಸಿಗೆಯು ಕರಾವಳಿ ಜನರ ಪಾಲಿಗೆ ಕೇವಲ ದೈಹಿಕ ತಾಪವನ್ನಷ್ಟೇ ಅಲ್ಲದೆ, ಆರ್ಥಿಕ ತಾಪವನ್ನೂ ತಂದೊಡ್ಡಿದೆ.
ಪ್ರಸಕ್ತ ವರ್ಷ ಫೆಬ್ರವರಿ ಅಂತ್ಯದಿಂದಲೇ ಬಿಸಿಲಿನ ತೀವ್ರತೆ ಹೆಚ್ಚಾದ ಪರಿಣಾಮ ಸ್ಥಳೀಯವಾಗಿ ಬೆಳೆಯಲಾಗುತ್ತಿದ್ದ ತರಕಾರಿಗಳ ಇಳುವರಿಯಲ್ಲಿ ಭಾರೀ ಕುಸಿತ ಕಂಡುಬಂದಿದೆ. ಮಾರುಕಟ್ಟೆಗೆ ಹೊರ ಜಿಲ್ಲೆಗಳಿಂದ ಬರುವ ತರಕಾರಿಗಳ ಪ್ರಮಾಣವೂ ಗಣನೀಯವಾಗಿ ಕಡಿಮೆಯಾಗಿರುವುದು ಬೆಲೆ ಏರಿಕೆಗೆ ಮುಖ್ಯ ಕಾರಣವಾಗಿದೆ. ಬೇಡಿಕೆಗೆ ತಕ್ಕಂತೆ ಪೂರೈಕೆ ಇಲ್ಲದಿರುವುದು ಮಾರುಕಟ್ಟೆಯ ಸಮತೋಲನವನ್ನು ತಪ್ಪಿಸಿದೆ.

ತರಕಾರಿ ದರದಲ್ಲಿ 'ಶತಕ'ದ ಸದ್ದು
ದೈನಂದಿನ ಅಡುಗೆಗೆ ಅತ್ಯಗತ್ಯವಾದ ಬೀನ್ಸ್ ಈಗಾಗಲೇ ಪ್ರತಿ ಕೆಜಿಗೆ 100 ರೂ.ಗಳ ಗಡಿ ದಾಟಿದೆ. ಬಿಳಿ ಬೆಂಡೆಕಾಯಿ ದರ 120ರಿಂದ 130 ರೂ.ಗಳವರೆಗೆ ತಲುಪಿದ್ದು, ಸಾಮಾನ್ಯ ಜನರ ಕೈಗೆ ಸಿಗದಂತಾಗಿದೆ.

20 ರಿಂದ 30 ರೂ. ಹೆಚ್ಚಳ
ಕಳೆದ ವಾರಕ್ಕೆ ಹೋಲಿಸಿದರೆ ಬಹುತೇಕ ಎಲ್ಲಾ ತರಕಾರಿಗಳ ಬೆಲೆ ಸರಾಸರಿ 20 ರಿಂದ 30 ರೂ.ಗಳಷ್ಟು ಹೆಚ್ಚಳವಾಗಿದೆ. ಅತೀ ಹೆಚ್ಚು ಬೇಡಿಕೆಯಿರುವ ಮಟ್ಟುಗುಳ್ಳ ಮತ್ತು ಮಂಗಳೂರು ಸೌತೆ ಕೂಡ ದುಬಾರಿಯಾಗಿದ್ದು, ಗ್ರಾಹಕರು ತರಕಾರಿ ಖರೀದಿಸಲು ಹಿಂಜರಿಯುವಂತಾಗಿದೆ.

ರೈತ, ಗ್ರಾಹಕರಿಬ್ಬರಿಗೂ ಇಕ್ಕಟ್ಟು
ಈ ಬಾರಿ ಕರಾವಳಿ ಭಾಗದಲ್ಲಿ ತರಕಾರಿ ಹಾಗೂ ಕಲ್ಲಂಗಡಿ ಕೃಷಿಗೆ ಶಿಲೀಂಧ್ರ ರೋಗ ಬಾಧೆ ಕಾಣಿಸಿಕೊಂಡಿರುವುದು ರೈತರನ್ನು ಸಂಕಷ್ಟಕ್ಕೆ ತಳ್ಳಿದೆ. ಇಳುವರಿ ಕಡಿಮೆ ಇರುವುದರಿಂದ ರೈತರಿಗೆ ಹೆಚ್ಚಿನ ಲಾಭ ಸಿಗುತ್ತಿಲ್ಲ, ಇತ್ತ ಅಧಿಕ ಬೆಲೆಯಿಂದಾಗಿ ಗ್ರಾಹಕರ ಜೇಬಿಗೆ ಕತ್ತರಿ ಬೀಳುತ್ತಿದೆ. ಮಾರುಕಟ್ಟೆಯ ಈ ಅಸ್ಥಿರತೆ ಇನ್ನೂ ಕೆಲವು ವಾರಗಳ ಕಾಲ ಮುಂದುವರಿಯಲಿದೆ

ಹಣ್ಣುಗಳ ಬೆಲೆ ಗಗನಕ್ಕೆ
ಬಿಸಿಲಿನ ಧಗೆಯಿಂದ ತತ್ತರಿಸಿರುವ ಜನರು ತಂಪು ಪಾನೀಯ ಹಾಗೂ ಹಣ್ಣುಗಳ ಮೊರೆ ಹೋಗುತ್ತಿದ್ದಾರೆ. ಆದರೆ, ರಂಜಾನ್ ಉಪವಾಸದ ಕಾಲ ಆರಂಭವಾಗಿರುವುದರಿಂದ ಹಣ್ಣುಗಳಿಗೆ ಎಲ್ಲಿಲ್ಲದ ಬೇಡಿಕೆ ಕುದುರಿದೆ. ದಾಳಿಂಬೆ ದರ ಕೆಜಿಗೆ 230 ರೂ.ಗಳವರೆಗೆ ಏರಿಕೆಯಾಗಿದ್ದರೆ, ಸೇಬು ಮತ್ತು ಕಿತ್ತಳೆ ದರವೂ ಇಷ್ಟೇ ಪ್ರಮಾಣದಲ್ಲಿ ಏರಿದೆ. ಕಲ್ಲಂಗಡಿ ಹಣ್ಣಿನ ಬೆಲೆಯಲ್ಲೂ ಕೆಜಿಗೆ 10 ರೂ. ಏರಿಕೆಯಾಗಿದ್ದು, ಒಂದು ಕೆಜಿ ಕಲ್ಲಂಗಡಿ ಈಗ 35 ರಿಂದ 40 ರೂ.ಗಳಿಗೆ ಮಾರಾಟವಾಗುತ್ತಿದೆ.

ವ್ಯಾಪಾರಿಗಳಿಗೆ ನಷ್ಟದ ಭೀತಿ
ಬಿಸಿಲಿನ ಪ್ರಖರತೆಯಿಂದಾಗಿ ಹಸಿ ತರಕಾರಿಗಳು ಮಧ್ಯಾಹ್ನದ ಹೊತ್ತಿಗೆ ಬಾಡಿ ಹೋಗುತ್ತಿವೆ. ಇದರಿಂದ ನಮಗೆ ನಷ್ಟದ ಭೀತಿ ಹೆಚ್ಚಿದೆ. ಮಾರುಕಟ್ಟೆಗೆ ಬರುತ್ತಿರುವ ತರಕಾಇ ಪ್ರಮಾಣ ಕಡಿಮೆಯಾಗಿರುವುದರಿಂದ ನಾವು ಕೂಡ ಅನಿವಾರ್ಯವಾಗಿ ಹೆಚ್ಚಿನ ದರಕ್ಕೆ ಮಾರಾಟ ಮಾಡಬೇಕಾಗಿದೆ. ಬಿಸಿಲು ಹೀಗೆಯೇ ಮುಂದುವರಿದರೆ ಮುಂದಿನ ದಿನಗಳಲ್ಲಿ ಬೆಲೆಗಳು ಇನ್ನೂ ಏರಿಕೆಯಾಗುವ ಸಾಧ್ಯತೆಯಿದೆ.
● ಸುರೇಶ, ತರಕಾರಿ ವ್ಯಾಪಾರಿ, ಕಾಪು

ಕಾರ್ಕಳದಲ್ಲಿ ಪೊಲೀಸ್ ಅಧಿಕಾರಿ ದಿ. ನಾಸಿರ್ ಹುಸೇನ್‌ಗೆ ನುಡಿನಮನ

ಕರ್ತವ್ಯ ನಿಷ್ಠೆ, ಮಾನವೀಯ ಮೌಲ್ಯ ಹೊಂದಿದ್ದರು

ಕಾರ್ಕಳ: 19 ವರ್ಷ ಭಾರತೀಯ ಸೇನೆ ಹಾಗೂ 16 ವರ್ಷ ಸಬ್ ಇನ್ಸ್‌ಪೆಕ್ಟರ್ ಆಗಿ ಕಾರ್ಕಳ ಸೇರಿದಂತೆ ಉಡುಪಿ ಜಿಲ್ಲೆಯ ಹಲವಾರು ಕಡೆಗಳಲ್ಲಿ ಸೇವೆ ಸಲ್ಲಿಸಿ ಇತ್ತೀಚೆಗೆ ಉಡುಪಿ ಪೊಲೀಸ್ ಮ್ಯಾರಥಾನ್ ಸಂದರ್ಭದಲ್ಲಿ ಕುಸಿದು ಬಿದ್ದು ಹೃದಯಾಘಾತದಿಂದ ನಿಧನ ಹೊಂದಿದ ನಾಸಿರ್ ಹುಸೇನ್ ಅವರಿಗೆ ನುಡಿ-ನಮನ ಕಾರ್ಯಕ್ರಮವು ಕಾರ್ಕಳ ಕಿಸಾನ್ ಸಭಾ ಟ್ರಸ್ಟಿನ ಸಭಾಂಗಣದಲ್ಲಿ ನಡೆಯಿತು.
ರೋಟರಿ ಕ್ಲಬ್, ಜೇಸಿಸ್ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ಕ್ಷೇತ್ರಾಧ್ಯಕ್ಷ ನವೀನ್ ನಾಯಕ್ ಮಾತನಾಡಿ, ಕೋವಿಡ್ ಸಂಕಷ್ಟ ಕಾಲದಲ್ಲಿ ನಾಸಿರ್ ಹುಸೇನ್ ಅವರ ಸೇವೆ ಕರ್ತವ್ಯ ನಿಷ್ಠೆ, ಕಾರ್ಯತತ್ಪರತೆ ಸಾರ್ವಜನಿಕವಾಗಿ ಪ್ರಶಂಸನೀಯ. ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಕಾಪಾಡುವಲ್ಲಿ ಶ್ರಮಿಸಿದ ಅವರು ಆದರ್ಶಪ್ರಾಯರು ಎಂದರು.
ಕಾಂಗ್ರೆಸ್ ಮುಖಂಡ, ಉದಯ ಕೃಷ್ಣಯ್ಯ ಶೆಟ್ಟಿ ಚಾರಿಟೇಬಲ್ ಟ್ರಸ್ಟಿನ ಅಧ್ಯಕ್ಷ ಮುನಿಯಲು ಉದಯ ಕುಮಾರ್ ಶೆಟ್ಟಿ ಮಾತನಾಡಿ, ನಾಸೀರ್ ಹುಸೇನ್ ಅವರ ಅಕಾಲಿಕ ಮರಣ ಸಮಾಜಕ್ಕೆ ತುಂಬಲಾರದ ನಷ್ಟ ಎಂದರು.
ಕಾರ್ಕಳ ವೃತ್ತ ನಿರೀಕ್ಷಕ ಮಂಜಪ್ಪ ಡಿ.ಆರ್, ಮಾತನಾಡಿ, ಪೊಲೀಸ್



ಅಧಿಕಾರಿಯಾಗಿ ಜಾತಿ, ಮತ ಧರ್ಮ ಮೀರಿ ಕಾನೂನಿನೊಂದಿಗೆ ಮಾನವೀಯತೆಯಲ್ಲೇ ಕಾರ್ಯ ನಿರ್ವಹಿಸಿದ್ದರು ಎಂದರು.
ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆ ಉಪನಿರೀಕ್ಷಕ ಪ್ರಸನ್ನ ಎಂ.ಎಸ್. ಮಾತನಾಡಿ, ಚಿಕ್ಕಮಗಳೂರಿನ ದತ್ತ ಜಯಂತಿ ವೇಳೆ 10 ಸಾವಿರ ಮಂದಿ ಪೊಲೀಸರಿಗೆ ವಸತಿ ವ್ಯವಸ್ಥೆ ಕಲ್ಪಿಸಿದ ಪರಿ ಕರ್ತವ್ಯಪರತೆಗೆ ಸಾಕ್ಷಿ ಎಂಬಂತಿತ್ತು ಎಂದರು.
ಕಾರ್ಕಳ ಜೇಸಿಐ ಅಧ್ಯಕ್ಷ ಅವಿನಾಶ್ ಶೆಟ್ಟಿ ರೋಟರಿ ಅಧ್ಯಕ್ಷ ನವೀನ್‌ಚಂದ್ರ ಶೆಟ್ಟಿ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಮೊಹಮ್ಮದ್ ಶರೀಫ್, ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ಉಪಾಧ್ಯಕ್ಷ ಉದಯ ಎಸ್. ಕೋಟ್ಯಾನ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಅಜಿತ್ ಹೆಗ್ಡೆ ಮಾಳ, ಜಮೀಯ್ಯತುಲ್ ಫಲಹ್ ದಕ್ಷಿಣ ಕನ್ನಡ ಉಡುಪಿ ಜಿಲ್ಲಾಧ್ಯಕ್ಷ, ಪುರಸಭಾ ಮಾಜಿ ಸದಸ್ಯ ಅಶ್ಫಕ್ ಅಹ್ಮದ್, ಕಾರ್ಕಳ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಶೇಖ್ ಶಬ್ಬೀರ್, ಉದ್ಯಮಿ ಶೋಧನ್ ಹೆಗ್ಡೆ, ಉದಯ ಕುಮಾರ್ ಹೆರ್ಮುಂಡೆ ನಾಸಿರ್ ಹುಸೇನ್ ಮಾತನಾಡಿದರು. ಜಲ್ವಾ ಎ. ನೂರ್‌ನ ಮೌಲನ ಸಯ್ಯದ್ ರಝು ದುವಾ ನೆರವೇರಿಸಿದರು. ಕಸಾಪ ಕಾರ್ಕಳ ಅಧ್ಯಕ್ಷ ಕೊಂಡಳ್ಳಿ ಪ್ರಭಾಕರ್ ಶೆಟ್ಟಿ ನಿರೂಪಿಸಿದರು. ಈ ಸಂದರ್ಭದಲ್ಲಿ ಉಡುಪಿ ಮುಸ್ಲಿಮ್ ಒಕ್ಕೂಟ ಕಾರ್ಕಳ ತಾಲೂಕು ಅಧ್ಯಕ್ಷ ಮೊಹಮ್ಮದ್ ಗೌಸ್, ರೋಟರಿ ಕ್ಲಬ್ ಅಧ್ಯಕ್ಷ ನವೀನ್ ಶೆಟ್ಟಿ, ಕರ್ನಾಟಕ ಮುಸ್ಲಿಮ್ ಜಮಾತ್ ಕಾರ್ಕಳ ಅಧ್ಯಕ್ಷ ನಾಸಿರ್ ಶೇಕ್, ಅಮ್ಮನ ನೆರವು ಚಾರಿಟೇಬಲ್ ಟ್ರಸ್ಟಿನ ಅಧ್ಯಕ್ಷ ಅವಿನಾಶ್ ಶೆಟ್ಟಿ, ಸೇವಾದಳ ಅಧ್ಯಕ್ಷ ಶೇಕ್ ಅಬ್ದುಲ್ಲಾ ಪುಲ್ಕೇರಿ, ಕುಕ್ಕುಂದೂರು ಗ್ರಾ.ಪಂ. ಸದಸ್ಯ ಅರುಣ್ ಕುಮಾರ್ ಶೆಟ್ಟಿ, ಕಾರ್ಕಳ ಕಾಂಗ್ರೆಸ್ ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಶೇಕ್ ಶಬ್ಬೀರ್ ಮಿಯ್ಯಾರು, ಜೆಸಿಐ ಝೋನ್ 15ರ ಕಾರ್ಯದರ್ಶಿ ಸಮದ್ ಖಾನ್ ಮಹಿಳಾ ಕಾಂಗ್ರೆಸ್‌ನ ಕೆ. ಅನಿತಾ ಡಿಸೋಜಾ ಬೆಲ್ಮಣ್, ಕಾರ್ಕಳ ಗ್ರಾಮಾಂತರ ಪಿಎಸ್‌ಐ ಪ್ರಸನ್ನ ಕುಮಾರ್, ಕಾರ್ಕಳ ನಗರ ಪಿಎಸ್‌ಐ ಮುರಳೀಧರ, ಪಿಎಸ್‌ಐಗಳಾದ ಶಿವಕುಮಾರ್ ಎಸ್ ಆರ್, ಮಹೇಶ್ ಟಿ.ಎಂ., ಶಕ್ತಿವೇಲು, ಅನಿಲ್ ಚಂದ್ರಶೇಖರ, ನೂರಾರು ಪೊಲೀಸ್ ಸಿಬ್ಬಂದಿ ಇದ್ದರು.

ಬಿಜೆಪಿಯಿಂದ ವಿಶ್ವ ಮಹಿಳಾ ದಿನಾಚರಣೆ | ಯಶ್‌ಪಾಲ್ ಶ್ಲಾಘನೆ

ಜಿಲ್ಲೆಯ ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಅಪಾರ

ಉಡುಪಿ: ಜಿಲ್ಲೆಯ ಅಭಿವೃದ್ಧಿಯಲ್ಲಿ ಮಹಿಳೆಯರ ಕೊಡುಗೆ ಅಪಾರವಾಗಿದ್ದು, ಉಡುಪಿ ಜಿಲ್ಲೆಯ ಲಿಂಗಾನುಪಾತ ಪ್ರಮಾಣದಲ್ಲಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನಿಯಾಗಿದ್ದು, ಜಿಲ್ಲೆಯ ಆಡಳಿತ ವ್ಯವಸ್ಥೆಯಲ್ಲಿ ಹಲವಾರು ಮಂದಿ ಮಹಿಳಾ ಉಸ್ತುವಾರಿ ಸಚಿವರು, ಮಹಿಳಾ ಜಿಲ್ಲಾಧಿಕಾರಿ, ಸಂಸದರೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಮೂಲಕ ಜಿಲ್ಲೆಯ ಪ್ರಗತಿ ಅಪಾರ ಕೊಡುಗೆ ನೀಡಿದ್ದಾರೆ ಎಂದು ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಹೇಳಿದರು.
ಉಡುಪಿ ನಗರ ಬಿಜೆಪಿ ಹಾಗೂ ಮಹಿಳಾ ಮೋರ್ಚಾದ ವತಿಯಿಂದ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.
ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಮಹಿಳಾ ಮೋರ್ಚಾ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕ ಮಹಿಳೆಯರು ಹಾಗೂ ಸಮಾಜ ಸೇವಕರನ್ನು ಗುರುತಿಸುವ ಮೂಲಕ ಅರ್ಥಪೂರ್ಣವಾಗಿ ಮಹಿಳಾ ದಿನಾಚರಣೆ ಆಚರಿಸುತ್ತಿರುವುದು ಅಭಿನಂದನಾರ್ಹ ಎಂದರು.
ಅಧ್ಯಕ್ಷತೆ ವಹಿಸಿದ್ದ ಮಹಿಳಾ ಮೋರ್ಚಾದ ಅಧ್ಯಕ್ಷೆ ನೀತಾಪ್ರಭು ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತಿಸಿದರು.
ಸಂತೆಕಟ್ಟೆ ವಾತ್ಸಲ್ಯ ಕ್ಲಿನಿಕ್ ನ ಡಾ. ರಾಜಲಕ್ಷ್ಮಿ ಮಹಿಳೆಯರಿಗಾಗಿ ವಿಶೇಷ ಉಪಯುಕ್ತ ಆರೋಗ್ಯ ಮಾಹಿತಿ ನೀಡಿದರು. ಮಹಿಳೆಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಸಮಾರಂಭದಲ್ಲಿ ಉಡುಪಿ ಬಿಜೆಪಿ ಜಿಲ್ಲಾಧ್ಯಕ್ಷರಾದ ಕುತ್ಯಾರು ನವೀನ್ ಶೆಟ್ಟಿ, ಪಕ್ಷದ ಮುಖಂಡರಾದ ಕಿದಿಯೂರು ಉದಯ ಕುಮಾರ್ ಶೆಟ್ಟಿ, ಉಡುಪಿ ನಗರ ಮಂಡಲದ ಅಧ್ಯಕ್ಷರಾದ ದಿನೇಶ್ ಅಮಿನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರೇಷ್ಮಾ ಉದಯ್ ಶೆಟ್ಟಿ, ರಾಜ್ಯ ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಶಿಲ್ಪಾ ಸುವರ್ಣ, ಜಿಲ್ಲಾ ಮಹಿಳಾ ಮೋರ್ಚಾದ ಅಧ್ಯಕ್ಷರಾದ ಸಂಧ್ಯಾ ರಮೇಶ್, ನಗರ ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಶಾಂತಿ ಮನೋಜ್ ಇದ್ದರು.



ಸಾಧಕರಿಗೆ ಸನ್ಮಾನ
ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರಾದ ಶಕುಂತಲಾ ಶೆಟ್ಟಿ (ಹೈನುಗಾರಿಕೆ), ವಿಮಲ (ಸಂಜೀವಿನಿ ಗ್ರೂಪ್), ಅನುಷಾ - (ವಕೀಲರು), ಸುಶೀಲಾ ಸಾಲಿಯಾನ್ (ಮಹಿಳಾ ಹೋಮ್ ಗಾರ್ಡ್), ಗೀತಾ ಕೃಷ್ಣರಾಜ್ (ಆಟೋ ಚಾಲಕಿ), ಲಲಿತ (ಪೌರ ಕಾರ್ಮಿಕರು) ಹಾಗೂ ಸಮಾಜ ಸೇವಕರಾದ ನಿತ್ಯಾನಂದ ಒಳಕಾಡು, ವಿಶು ಶೆಟ್ಟಿ ಅಂಬಲಪಾಡಿ, ಸತೀಶ್ ಸಾಲ್ಯಾನ್ ಮಣಿಪಾಲ ಹಾಗೂ ಪರ್ಕಳದ ಮನೆ ಊಟ ಹೋಟೆಲ್‌ನ ಹಿರಿಯ ದಂಪತಿಗಳಾದ ಗೋಪಾಲಕೃಷ್ಣ ಮತ್ತು ವಸಂತಿ ದಂಪತಿಗಳನ್ನು ವಿಶೇಷವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು.

ಎರ್ಮಾಳು ಶ್ರೀನಿಧಿ ಮಹಿಳಾ ಮಂಡಳಿಯಿಂದ ಮಹಿಳಾ ದಿನಾಚರಣೆ



ಪಡುಬಿದ್ರಿ: ಭಾರತೀಯ ಸಂಸ್ಕೃತಿಯ ರೂವಾರಿಯಾಗಿರುವ ಭಾರತೀಯ ಮಹಿಳೆಯರಿಗೆ ಪ್ರಾಪಂಚಿಕವಾಗಿ ವಿಶೇಷವಾದ ಗೌರವ - ಸ್ಥಾನಮಾನ ಇದೆ. ಆ ನಿಟ್ಟಿನಲ್ಲಿ ಸದ್ಗುಣ ಸಂಪನ್ನಳಾಗಿ ಸ್ಥಾನಮಾನಕ್ಕೆ ತಕ್ಕ ಗೌರವಯುತ ಜೀವನ ನಡೆಸುವ ಮೂಲಕ ಸಮಾಜಕ್ಕೆ ಭೂಷಣ ಪ್ರಾಯಳಾಗಿ ಸಮಾಜದ ಸ್ವಾಸ್ಥ್ಯಕ್ಕೆ ಮೆಟ್ಟಿಲಾಗಿರಬೇಕು ಎಂದು ಉಡುಪಿ ಜಿ.ಪಂ. ಮಾಜಿ ಉಪಾಧ್ಯಕ್ಷೆ ಶೀಲಾ ಕೆ. ಶೆಟ್ಟಿ ಎರ್ಮಾಳು ಹೇಳಿದರು.
ಅವರು ಮಂಗಳವಾರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎರ್ಮಾಳು ಶ್ರೀನಿಧಿ ಮಹಿಳಾ ಮಂಡಳಿ ರಿ. ಆಯೋಜಿಸಿದ ವಿಶ್ವ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅತಿಥಿಯಾಗಿದ್ದ ಡಾ. ಚೈತ್ರ ಗುರುಪ್ರಸಾದ್ ಶೆಟ್ಟಿ ಪಡುಬಿದ್ರಿ ಮಾತನಾಡಿ, ಶರೀರ-ಭಾವನೆ-ಮನಸ್ಸು ಇದ್ದಲ್ಲಿ ಮಾತ್ರ ಅದು ನಿಜವಾದ ಆರೋಗ್ಯವಾಗಿದೆ ಎಂದು ಹೇಳಿದರು.

ಸನ್ಮಾನ, ಬಹುಮಾನ ವಿತರಣೆ
ಮಹಿಳಾ ರಿಕ್ಷಾ ಚಾಲಕಿ ಶಶಿಕಲಾ ನಂಬಿಯಾರ್ ಪಡುಬಿದ್ರಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸದಸ್ಯೆಯರಿಗೆ ಏರ್ಪಡಿಸಲಾದ ಕ್ರೀಡಾಕೂಟದ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಅಧ್ಯಕ್ಷತೆಯನ್ನು ವಹಿಸಿದ್ದ ಎರ್ಮಾಳು ಶ್ರೀನಿಧಿ ಮಹಿಳಾ ಮಂಡಳಿಯ ಅಧ್ಯಕ್ಷೆ ರೇಖಾ ಶೆಟ್ಟಿ ಸ್ವಾಗತಿಸಿದರು. ವೇದಿಕೆಯಲ್ಲಿ ಕೋಶಾಧಿಕಾರಿ ವಿಮಲ ಕೆ. ಸಾಲ್ಯಾನ್ ಉಪಸ್ಥಿತರಿದ್ದರು. ರಶ್ಮಿತಾ ಪ್ರಾರ್ಥಿಸಿದರು. ಉಪಾಧ್ಯಕ್ಷೆ ವಾಣಿಶ್ರೀ ಗಣೇಶ್ ಸನ್ಮಾನ ಪತ್ರ ವಾಚಿಸಿದರು. ಕಾರ್ಯದರ್ಶಿ ಅಮಣಿ ಕುಂದರ್ ವಂದಿಸಿದರು. ಮಾಜಿ ಅಧ್ಯಕ್ಷೆ ಜ್ಯೋತಿ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ಆನಂದತೀರ್ಥದಲ್ಲಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ - ಮಾತಾಪಿತೃ ವಂದನಾ



ಶಿರ್ವ:- ಉಡುಪಿ ಶ್ರೀಪೇಜಾವರ ಮಠದ ಆಡಳಿತಕ್ಕೆ ಒಳಪಟ್ಟ ಪಾಜಕ ಆನಂದತೀರ್ಥ ವಿದ್ಯಾಲಯದಲ್ಲಿ ಹತ್ತನೇತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಮಾತಾಪಿತೃ ವಂದನಾಕಾರ್ಯಕ್ರಮ ನಡೆಯಿತು. ವಿಶೇಷ ಆಹ್ವಾನಿತರಾಗಿ ಆಗಮಿಸಿದ ಇನ್ನಾ ಎಂ.ವಿ ಶಾಸ್ತ್ರೀ ಪ್ರೌಢಶಾಲಾ ಮುಖ್ಯ ಶಿಕ್ಷಕ, ಬರಹಗಾರ, ವಾಗ್ಮಿ, ಜೇಸಿಐ ಅಂತರರಾಷ್ಟ್ರೀಯ ಮಟ್ಟದ ತರಬೇತುದಾರ ಡಾ. ರಾಜೇಂದ್ರ ಭಟ್ ಮಾತನಾಡಿ, ವಿದ್ಯಾರ್ಥಿಜೀವನದಲ್ಲಿ ಹತ್ತನೇತರಗತಿ ಎಂಬುದು ಅತ್ಯಂತ ಮಹತ್ತರವಾದ ಮೆಟ್ಟಿಲು,ಅದನ್ನು ಯಶಸ್ವಿಯಾಗಿ ಹತ್ತಿ ಮುಂದಿನ ಮೆಟ್ಟಿಲಿಗೆ ಕಾಲಿಡುವ ಎಲ್ಲಾ ವಿದ್ಯಾರ್ಥಿಗಳು ತನ್ನ ಮುಂದಿನ ಜೀವನದ ಗುರಿಯನ್ನು ನಿಗದಿ ಮಾಡಿಕೊಳ್ಳುವ ಮಹತ್ತರವಾದ 'ಘಟ್ಟ ಇದಾಗಿದೆ. ಇಲ್ಲಿ ನಿರ್ದಿಷ್ಟ ಗುರಿಯೆಡೆಗೆ ದೃಷ್ಟಿ ಇಟ್ಟರೆ ಅದನ್ನು ತಲುಪುವವರೆಗೆ ವಿರಮಿಸದೆ ಸಾಧಿಸಿ, ಜೀವನದಲ್ಲಿ ಯಶಸ್ಸು ತನ್ನದಾಗಿಸಿಕೊಳ್ಳಬೇಕು ಎಂದರು.
ತಂದೆತಾಯಿಯರನ್ನು ಪೂಜಿಸಿದರೆ ಸಾವಿರ ದೇವರನ್ನು ಪೂಜಿಸಿದ ಫಲ ದೊರೆಯುತ್ತದೆ. ಸ್ವಾಮೀ ವಿವೇಕಾನಂದ, ಛತ್ರಪತಿ ಶಿವಾಜಿ ಮಹಾರಾಜರನ್ನು ಇಂದಿಗೂ ಮಹಾಪುರುಷರೆಂದು ಕರೆಯಲು ಕಾರಣ ಅವರ ಸಾಧನೆ ಒಂದು ಕಡೆಯಾದರೆ, ಅವರು ತಂದೆತಾಯಿಯನ್ನು ಗೌರವಿಸುತ್ತಿದ್ದ ರೀತಿ ಅವರನ್ನು ಆರಾಧಿಸುತ್ತಿದ್ದ ರೀತಿ ಅತ್ಯಂತ ಪ್ರಮುಖವಾದುದು ಎಂದರು. ಯಾರು ಗುರುಗಳಿಗೆ, ಹಿರಿಯರಿಗೆ, ತಂದೆ ತಾಯಿಗಳನ್ನು ಹೆಚ್ಚಾಗಿ ಪ್ರೀತಿ ಮಾಡುತ್ತಾರೋ ಅಂತಹ ವಿದ್ಯಾರ್ಥಿ ಒಬ್ಬೊಬ್ಬ ಶಿವಾಜಿ, ವಿವೇಕಾನಂದ ಆಗುತ್ತಾರೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯಲ್ಲಿ ಮಹಿಳಾ ದಿನಾಚರಣೆ



ಕುಂದಾಪುರ: ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ 'ಪ್ರತಿಭೆ ನಿಮ್ಮದು, ವೇದಿಕೆ ನಮ್ಮದು ವಿನೂತನ' ಕಾರ್ಯಕ್ರಮ ಸರಣಿಯಡಿ ಸತತ 117ನೇ ತಿಂಗಳ ಕಾರ್ಯಕ್ರಮದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉಪ್ಪಿನಕುದ್ರು ಗೊಂಬೆಯಾಟ ಅಕಾಡೆಮಿಯ ಗೊಂಬೆ ಮನೆಯಲ್ಲಿ ಭಾನುವಾರ ನಡೆಯಿತು.
ರೇವತಿ ಉಮೇಶ್ ಸುವರ್ಣ, ಶ್ರೀಕಲಾ ವಿ. ಪ್ರಭು, ವಸಂತಿ ಆರ್. ಪಂಡಿತ್, ಸುಜಾತಾ ಕೆ. ಐತಾಳ್, ಪ್ರೆಸಿಲ್ಲಾ ಮೆನೇಜಸ್, ಜಯಶ್ರೀ ಪೈ, ಕಲ್ಪನಾ ಸುರೇಶ್ ಹಾಗೂ ಅಕಾಡೆಮಿ ಅಧ್ಯಕ್ಷ ಭಾಸ್ಕರ್ ಕೊಗ್ಗ ಕಾಮತ್ ಉಪಸ್ಥಿತರಿದ್ದರು. ಯಶೋದಾ ಮತ್ತು ತಂಡದವರು ಪ್ರಾರ್ಥಿಸಿದರು. ಶೈಲಜಾ ಸ್ವಾಗತಿಸಿದರು. ಆಶಾ ಕಾರ್ಯಕರ್ತೆ ಜ್ಯೋತಿ ಪೂಜಾರಿ ಮತ್ತು ಇನ್ಫೋಸಿಸ್ ಉದ್ಯೋಗಿ ಪ್ರತೀಕ್ಷಾ ಕಾಮತ್ ಕಾರ್ಯಕ್ರಮ ನಿರೂಪಿಸಿದರು. ಅಂಗನವಾಡಿ ಶಿಕ್ಷಕಿ ಸಂಗೀತಾ ವಂದಿಸಿದರು.

ಆರೋಗ್ಯ ಸಹಾಯಕಿಗೆ ಸನ್ಮಾನ
ಈ ಸಂದರ್ಭ ಉಪ್ಪಿನಕುದ್ರು ಗ್ರಾಮದಲ್ಲಿ ಸುಮಾರು 25 ವರ್ಷಗಳ ಕಾಲ ಆರೋಗ್ಯ ಸಹಾಯಕಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿರುವ ಕುಸುಮಾ ಟಿ. ಅವರನ್ನು ಅಕಾಡೆಮಿಯ ವತಿಯಿಂದ ಸಮ್ಮಾನಿಸಲಾಯಿತು.

ಬ್ರಹ್ಮಾವರ ಪತ್ರಕರ್ತರ ಸಂಘದಿಂದ ನುಡಿನಮನ

ದಿ. ಶೇಷಗಿರಿ ಭಟ್‌ಗೆ ಶ್ರದ್ಧಾಂಜಲಿ

ಬ್ರಹ್ಮಾವರ: ಹಿರಿಯ ಪತ್ರಕರ್ತರಾದ ಹಾಗೂ ಪ್ರಜಾವಾಣಿ ವರದಿಗಾರರಾಗಿದ್ದ ಶೇಷಗಿರಿ ಭಟ್ ಅವರ ಅಗಲಿಕೆಯನ್ನು ಸ್ಮರಿಸಿ ಬ್ರಹ್ಮಾವರ ತಾಲೂಕು ಪತ್ರಕರ್ತರ ಸಂಘದ ವತಿಯಿಂದ ನುಡಿನಮನ ಹಾಗೂ ಶ್ರದ್ಧಾಂಜಲಿ ಮಂಗಳವಾರ ಸಾಸ್ತಾನದ ಕೋಸ್ಟಲ್ ಪ್ಯಾರಡೈಸ್ ಮಿನಿ ಸಭಾಂಗಣದಲ್ಲಿ ನಡೆಯಿತು.



ಸಭೆಯಲ್ಲಿ ಶೇಷಗಿರಿ ಭಟ್ ಅವರ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಮಾಡಿದ ಸೇವೆಯನ್ನು ಸ್ಮರಿಸಿ ನುಡಿನಮನ ಸಲ್ಲಿಸಲಾಯಿತು.
ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಸುಪ್ರಸಾದ್ ಶೆಟ್ಟಿ, ಬ್ರಹ್ಮಾವರ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಬಿರ್ತಿ ರಾಜೇಶ್ ಶೆಟ್ಟಿ, ನಿರ್ದೇಶಕ ಕಮಲಾಕ್ಷ ಹೆಬ್ಬಾರ್, ತಾಲೂಕು ಪಂಚಾಯತ್ ಸದಸ್ಯ ಮಾಜಿ ಸುಧೀರ್ ಕುಮಾರ್ ಶೆಟ್ಟಿ, ಉಪನ್ಯಾಸಕಿ ಸವಿತಾ ಎರ್ಮಾಳ್, ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಹಾಗೂ ಪದಾಧಿಕಾರಿಗಳು, ಬ್ರಹ್ಮಾವರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರಾಮಚಂದ್ರ ಐತಾಳ್ ಹಾಗೂ ಪದಾಧಿಕಾರಿಗಳು, ಪ್ರಾಂಶುಪಾಲರಾದ ರವೀಂದ್ರ ಉಪಾಧ್ಯ, ಜಗದೀಶ್ ನಾವುಡ, ಐವನ್ ಸುವಾರಿಸ್ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಜಿ ಕುರ್ಯ, ರಾಜ್ಯ ಸಮಿತಿ ಸದಸ್ಯ ಆಸ್ಟ್ರೋಮೊಹನ್, ಬ್ರಹ್ಮಾವರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ರಾಜೇಶ ಗಾಣಿಗ, ಪ್ರಭಾಕರ್ ಆಚಾರ್ಯ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಾಗೂರಿನಲ್ಲಿ ಮಹಿಳಾ ದಿನಾಚರಣೆ, ಪಂಚ ಗ್ಯಾರೆಂಟಿ ಅರಿವು ಕಾರ್ಯಕ್ರಮದಲ್ಲಿ ಡಾ.ಸೋನಿ ಶ್ಲಾಘನೆ

ಪಂಚ ಗ್ಯಾರಂಟಿ ಯೋಜನೆ ಮಹಿಳೆಯರ ಸ್ವಾವಲಂಬನೆಗೆ ಸಹಕಾರಿ

ಬೈಂದೂರು: ಗ್ರಾಮೀಣ ಭಾಗದ ಮಹಿಳೆಯರ ಜೀವನದಲ್ಲಿ ಪಂಚ ಗ್ಯಾರೆಂಟಿ ಯೋಜನೆ ಆರ್ಥಿಕವಾಗಿ, ಶೈಕ್ಷಣಿಕವಾಗಿ ಸಾಮಾಜಿಕವಾಗಿ, ಧಾರ್ಮಿಕವಾಗಿ ಜೀವನ ನಿರ್ವಹಣೆಯನ್ನು ಉತ್ತಮಗೊಳಿಸಿದ್ದು, ಸ್ವಾವಲಂಬನೆ ಮತ್ತು ಸದೃಢ ಜೀವನ ನಡೆಸಲು ಸಹಕಾರಿ ಎಂದು ಆಯುರ್ವೇದ ತಜ್ಞೆ ಡಾ. ಸೋನಿ ಡಿ.ಕೊಸ್ತ ಹೇಳಿದರು.
ನಾಗೂರಿನಲ್ಲಿ ಬೈಂದೂರು ತಾಲೂಕು ಗ್ಯಾರೆಂಟಿ ಅನುಷ್ಠಾನ ಸಮಿತಿ ನೇತೃತ್ವದಲ್ಲಿ ಕಿರೀಮಂಜೇಶ್ವರ ಗ್ರಾಮೀಣ ಕಾಂಗ್ರೆಸ್ ಆಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಪಂಚ ಗ್ಯಾರೆಂಟಿ ಯೋಜನೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.



ಮಹಿಳೆಯರು ಕುಟುಂಬದ ಆರೈಕೆಯೊಂದಿಗೆ ತಮ್ಮ ಆರೋಗ್ಯ ಸುಧಾರಣೆಯತ್ತ ಕಾಳಜಿ ವಹಿಸಿಕೊಳ್ಳುವುದು ಅತೀ ಮುಖ್ಯ. ಆದುದರಿಂದ ತಾವೆಲ್ಲರೂ ಆಗಾಗ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ತೆರಳಿ ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ಮತ್ತು ಸರ್ಕಾರದಿಂದ ಸಿಗುವ ಪೌಷ್ಟಿಕಾಂಶ ಭರಿತ ಆಹಾರದ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.
ತಾಲೂಕು ಗ್ಯಾರೆಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಉಪ್ಪುಂದ ಮೋಹನ ಪೂಜಾರಿ, ಗ್ಯಾರೆಂಟಿ ಯೋಜನೆ ಅನುಷ್ಠಾನ ಮತ್ತು ಐದು ಗ್ಯಾರೆಂಟಿ ಯೋಜನೆಯಿಂದ ತಾಲೂಕಿನ ಕಿರೀಮಂಜೇಶ್ವರ ಗ್ರಾಮದ ಮಹಿಳೆಯರು ಪಡೆದುಕೊಂಡ ಒಟ್ಟು ಮೊತ್ತದ ಬಗ್ಗೆ ವಿವರಿಸಿದರು. ಕೆಪಿಸಿಸಿ ಸದಸ್ಯ ಎಸ್. ಪ್ರಕಾಶಚಂದ್ರ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರವಿಂದ ಪೂಜಾರಿ, ಕಾರ್ಯದರ್ಶಿ ಜಗದೀಶ ದೇವಾಡಿಗ, ಮಂಜುನಾಥ ಪೂಜಾರಿ, ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೂರ್ಯಕಾಂತಿ, ಜಿಲ್ಲಾ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಾಂತಿ ಪಿರೇರಾ, ಜಿಲ್ಲಾ ಆರ್‌ಜಿಪಿಆರ್‌ಎಸ್ ಅಧ್ಯಕ್ಷ ಆನಂದ ಪೂಜಾರಿ, ಕೊಡೇರಿ -ಕಿರೀಮಂಜೇಶ್ವರ ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷ ಈಶ್ವರ ದೇವಾಡಿಗ, ರಾಜೇಶ್ ದೇವಾಡಿಗ ಇದ್ದರು.

ಸುತ್ತಮುತ್ತ

ಪುದುಕೋಳಿಯಲ್ಲಿ ಇಂದು ಯಕ್ಷಗಾನ ಬಯಲಾಟ

ಬದಿಯಡ್ಕ: ಹಿರಿಯ ಸಹಕಾರಿ ಪುದುಕೋಳಿ ಸುಬ್ರಹ್ಮಣ್ಯ ಭಟ್ ಅವರ ಸಹಸ್ರಚಂದ್ರ ದರ್ಶನ ಶಾಂತಿ ವಿವಿಧ ಕಾರ್ಯಕ್ರಮಗಳೊಂದಿಗೆ ಮಾ.11ರಂದು ಪುದುಕೋಳಿಯಲ್ಲಿ ನಡೆಯಲಿದೆ. ಬೆಳಿಗ್ಗೆ 6 ರಿಂದ ಶ್ರೀ ಮಹಾಗಣಪತಿ ಹವನ, ಮಾರ್ಕಾಂಡೇಯ ಹವನ, ಪೂರ್ಣ ಗ್ರಹಶಾಂತಿ, ಮಹಾ ಮೃತ್ಯುಂಜಯ ಹವನ, ಶಿವಪೂಜೆ ಮೊದಲಾದ ವೈದಿಕ ಕಾರ್ಯಕ್ರಮ ಜರಗಲಿದೆ. 10 ಗಂಟೆಗೆ ಶಾಂತ ಕುಂಟಿನಿ ಸಾರಥ್ಯದಲ್ಲಿ ಸತ್ಯಶಾಂತ ಪ್ರತಿಷ್ಠಾನ ಅರ್ಪಿಸುವ ಗಾನನೃತ್ಯ ವೈಭವ, ಮಧ್ಯಾಹ್ನ 12ರಿಂದ ಮಹಾ ಮಂಗಳಾರತಿ, ಭೋಜನ ಪ್ರಸಾದ, ಅಪರಾಹ್ನ 2ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 4ಕ್ಕೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಹಾಗೂ ಕೊಂಡೆವೂರು ಮಠಾಧೀಶ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿಯವರ ಆಗಮನ, ಸಭಾ ಕಾರ್ಯಕ್ರಮ ನಡೆಯಲಿದೆ. 6.30 ರಿಂದ ಹನುಮಗಿರಿ ಮೇಳದವರಿಂದ ಶ್ರೀರಾಮ ಚರಿತಾಮೃತಂ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ.

ಇಂದು ಕೊಡ್ಲಮೊಗರು ದೈವಸ್ಥಾನದಲ್ಲಿ ನೇಮ

ಮಂಜೇಶ್ವರ: ಕೊಡ್ಲಮೊಗರು ಶ್ರೀ ವಾರಾಹೀ ದೈವಸ್ಥಾನ ಪಿಲಿಕುಂಡ ಕೂಟೇಲು ಶ್ರೀ ದೈವಗಳ ನೇಮ ಮಾ.11ರಂದು ವಿವಿಧ ಕಾರ್ಯಕ್ರಮ ಗಳೊಂದಿಗೆ ಜರಗಲಿದೆ. ಬೆಳಿಗ್ಗೆ 10ಕ್ಕೆ ಶ್ರೀ ಮಲರಾಯ ದೈವದ ನೇಮ, ಮಧ್ಯಾಹ್ನ ಸಾರ್ವಜನಿಕ ಅನ್ನಸಂತರ್ಪಣೆ, ರಾತ್ರಿ 7ಕ್ಕೆ ಬಾಲಗೋಕುಲ ಮಕ್ಕಳಿಂದ ನೃತ್ಯ ಕಾರ್ಯಕ್ರಮ, ರಾತ್ರಿ 10ಕ್ಕೆ ಶ್ರೀ ಪಿಲಿಚಾಮುಂಡಿ ದೈವದ ಒಲಸರಿ ನೇಮ ನಡೆಯಲಿದೆ. ಮಾ.14ರಂದು ಸಂಜೆ 7 ಕ್ಕೆ ವರ್ಷಾವಧಿ ಸತ್ಯಗಣಪತಿ ದೇವರ ಪೂಜೆ ಜರಗಲಿದೆ.

ಮಾ.12,13: ಅರಿಯಾಳ ತರವಾಡು ನೇಮ

ಉಪ್ಪಳ: ಶ್ರೀ ಮಲರಾಯ ಬಂಟ ಧೂಮಾವತಿ ದೈವಸ್ಥಾನ ಅರಿಯಾಳ ತರವಾಡು ಕಯ್ಯಾರು, ಜೋಡುಕಲ್ಲು ಇದರ ವಾರ್ಷಿಕ ನೇಮ ಮಾ.12 ಮತ್ತು 13ರಂದು ಜರಗಲಿದೆ. ತಂತ್ರವರ್ಯರಾದ ಬಂಬ್ರಾಣ ಶಂಕರನಾರಾಯಣ ಕಡಮಣ್ಣಾಯರ ನೇತೃತ್ವ ವಿವಿಧ ವೈದಿಕ ಕಾರ್ಯಕ್ರಮ ನಡೆಯಲಿದೆ. ಮಾ.12ರಂದು ನಾಗತಂಬಿಲ, ಗಣಪತಿಹೋಮ, ನವಕಲಶಾಭಿಷೇಕ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆದು ರಾತ್ರಿ 8 ಗಂಟೆಗೆ ಭಂಡಾರ ಏರುವುದು, ಮಲರಾಯ, ಬಂಟ ದೈವಗಳಿಗೆ ನೇಮ, ರಾತ್ರಿ 9 ಗಂಟೆಗೆ ಮನೋರಂಜನಾ ಕಾರ್ಯಕ್ರಮದಂಗವಾಗಿ ಜೈ ಭಜರಂಗಬಲಿ ತುಳು ಸಾಮಾಜಿಕ ನೀತಿ ಬೋಧಕ ನಾಟಕ ಪ್ರದರ್ಶನಗೊಳ್ಳಲಿದೆ.
ಮಾ.13ರಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಧೂಮಾವತಿ, ಪೊಟ್ಟೋಳ್ ದೈವಗಳ ನೇಮ, ಮಧ್ಯಾಹ್ನ ಅನ್ನಸಂತರ್ಪಣೆ, ನಂತರ ರಾತ್ರಿ ಶ್ರೀ ಕಲ್ಲುರ್ಟಿ, ಪಂಜುರ್ಲಿ ದೈವಗಳ ತಂಬಿಲನಡೆಯಲಿದೆ.

ಚಾಲಕರ ನೇಮಕಾತಿ: ಅರ್ಜಿ ಆಹ್ವಾನ

ಕಾಸರಗೋಡು: ಜಿಲ್ಲಾ ಪಂಚಾಯತ್‌ನಲ್ಲಿ ಚಾಲಕ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಹತೆ 7ನೇ ತರಗತಿ ಅಥವಾ ತತ್ಸಮಾನವಾಗಿದೆ. ಚಾಲನಾ ಪರವಾನಗಿ. ಎಲ್‌ಎಂವಿ, ಮಧ್ಯಮ, ಭಾರೀ ವಾಹನ ಪರವಾನಗಿ ಆವಶ್ಯಕವಾಗಿದೆ. ಆಸಕ್ತ ಅಭ್ಯರ್ಥಿಗಳು ವಯಸ್ಸು ಮತ್ತು ಶೈಕ್ಷಣಿಕ ಅರ್ಹತೆ ಸಾಬೀತುಪಡಿಸುವ ಪ್ರಮಾಣಪತ್ರಗಳ ಪ್ರತಿಗಳೊಂದಿಗೆ ಮಾ.13ರೊಳಗೆ ಕಾರ್ಯದರ್ಶಿ, ಕಾಸರಗೋಡು ಜಿ.ಪಂ.ವಿದ್ಯಾನಗರ – 671123 ಎಂಬ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ ದೂ. 04994 256277 ಕರೆ ಮಾಡಬಹುದು.

ಲೋಕಾಯುಕ್ತ ಶಿಬಿರ

ಕಾಸರಗೋಡು: ಕೇರಳ ಲೋಕಾಯುಕ್ತ ಶಿಬಿರವು ಮಾ.24ರಂದು ಕಣ್ಣೂರಿನಲ್ಲಿ, ಮಾ.25 , ಮಾ.26 ರಂದು ಕೋಝಿಕೋಡ್‌ನಲ್ಲಿ ನಡೆಯಲಿದೆ. ಎರಡೂ ಜಿಲ್ಲೆಗಳ ಪಿಡಬ್ಲ್ಯೂಡಿ ವಿಶ್ರಾಂತಿ ಮಂದಿರದ ಸಮ್ಮೇಳನ ಸಭಾಂಗಣದಲ್ಲಿ ಬೆಳಿಗ್ಗೆ 10.30ಕ್ಕೆ ಶಿಬಿರ ಆರಂಭಗೊಳ್ಳಲಿದೆ.

ಮಾ.12,17: ಕೆ-ಟೆಟ್ ಪ್ರಮಾಣ ಪತ್ರ ವಿತರಣೆ

ಕಾಸರಗೋಡು: ಕಾಸರಗೋಡು ಶೈಕ್ಷಣಿಕ ಜಿಲ್ಲೆಯ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪರಿಶೀಲನೆ ಪೂರ್ಣಗೊಳಿಸಿದ ಅಭ್ಯರ್ಥಿಗಳ ಕೆ-ಟೆಟ್ ಪ್ರಮಾಣಪತ್ರಗಳನ್ನು ಮಾ.12 , 17ರಂದು ಜಿಲ್ಲಾ ಶಿಕ್ಷಣ ಕಚೇರಿಯಲ್ಲಿ ವಿತರಿಸಲಾಗುವುದು. ಅಭ್ಯರ್ಥಿಗಳು ಹಾಲ್ ಟಿಕೆಟ್‌ನೊಂದಿಗೆ ಖುದ್ದಾಗಿ ಬಂದು ಪ್ರಮಾಣಪತ್ರ ಪಡೆಯಬೇಕೆಂದು ಜಿಲ್ಲಾ ಶಿಕ್ಷಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಸರಕಾರಿ ವೈದ್ಯಕೀಯ ಕಾಲೇಜಿಗೆ ಜಿಲ್ಲಾಧಿಕಾರಿ ಭೇಟಿ | ಅಧಿಕಾರಿಗಳೊಂದಿಗೆ ಸಂವಾದ

ಕಾಲೇಜಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ರೂಪರೇಷೆ

ಕಾಸರಗೋಡು: ಉಕ್ಕಿನಡ್ಕದಲ್ಲಿರುವ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜು –ಅದರ ಅಂಗಸಂಸ್ಥೆಗಳಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಕಲ್ಪಿಸಿ ಸಂಪೂರ್ಣ ಸಜ್ಜುಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಹೇಳಿದ್ದಾರೆ.
ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಅವರು ಮೊದಲ ಬಾರಿಗೆ ಉಕ್ಕಿನಡ್ಕದಲ್ಲಿರುವ ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿಗೆ ಮಂಗಳವಾರ ಭೇಟಿ ನೀಡಿ ಎಂಬಿಬಿಎಸ್ , ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯೊಂದಿಗೆ ಮುಕ್ತ ಸಂವಾದ ನಡೆಸಿ ಮಾತನಾಡಿದರು.

ಶೀಘ್ರ ಅಭಿವೃದ್ಧಿ ಯೋಜನೆ ಪ್ರಾರಂಭ

ಸರಕಾರಿ ವೈದ್ಯಕೀಯ ಕಾಲೇಜಿನ ಅಭಿವೃದ್ಧಿ ಸಕ್ರಿಯಗೊಳಿಸಲು ಜಿಲ್ಲಾಡಳಿತವು ಅಗತ್ಯದ ಕ್ರಮಗಳನ್ನು ಕೈಗೊಳ್ಳಲಿದೆ. ಜಿಲ್ಲಾಧಿಕಾರಿಗಳು ತಿಂಗಳಿಗೊಮ್ಮೆ ವೈದ್ಯಕೀಯ ಕಾಲೇಜಿಗೆ ವೈಯಕ್ತಿಕವಾಗಿ ಭೇಟಿ ನೀಡಿ ಕಾರ್ಯವಿಧಾನಗಳ ಪರಿಶೀಲಿಸುತ್ತಾರೆ, ಎಲ್ಲಾ ಅಭಿವೃದ್ಧಿ ಯೋಜನೆ ಶೀಘ್ರದಲ್ಲೇ ಪ್ರಾರಂಭಿಸಲಾಗುವುದು ಎಂದು ವಿದ್ಯಾರ್ಥಿಗಳಿಗೆ ಮತ್ತು ಕಾಲೇಜು ಅಧಿಕಾರಿಗಳಿಗೆ ಅವರು ಭರವಸೆ ನೀಡಿದರು.



ಹಾಸ್ಟೆಲ್ ತೆರೆಯಲು ಮೊದಲ ಆದ್ಯತೆ

ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳ ಹಾಸ್ಟೆಲ್ ಮತ್ತು ಶಿಕ್ಷಕ ಸಿಬ್ಬಂದಿ ಹಾಸ್ಟೆಲ್ ತೆರೆಯಲು ಮೊದಲ ಆದ್ಯತೆ ನೀಡಲಾಗುವುದು. ಆಸ್ಪತ್ರೆ ಬ್ಲಾಕ್ ನಿರ್ಮಾಣ ಪ್ರಕ್ರಿಯೆ ತ್ವರಿತಗೊಳಿಸಲಾಗುವುದು. ಕಾಲೇಜಿನ ಆಂತರಿಕ ರಸ್ತೆಯ ನಿರ್ಮಾಣ ಶೀಘ್ರ ನಡೆಯಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು. ಆಸ್ಪತ್ರೆ ಕ್ಯಾಂಟೀನ್ ಪೂರ್ಣ ರೂಪದಲ್ಲಿ ಕಾರ್ಯನಿರ್ವಹಿಸಲು ಯೋಜನೆ ರೂಪಿಸಲಾಗಿದೆ ಎಂದರು.
ಪಾಲಕ್ಕಾಡು ಸರಕಾರಿ ವೈದ್ಯಕೀಯ ಕಾಲೇಜಿನ ವಿಶೇಷ ಅಧಿಕಾರಿಯಾಗಿ, ಇಡುಕ್ಕಿ ಸರಕಾರಿ ವೈದ್ಯಕೀಯ ಕಾಲೇಜಿಗೆ ರಾಷ್ಟ್ರೀಯ ವೈದ್ಯಕೀಯ ಮಂಡಳಿಯ ಅನುಮೋದನೆ ನೇತೃತ್ವ ವಹಿಸಿದ್ದ ಜಿಲ್ಲಾ ಅಭಿವೃದ್ಧಿ ಆಯುಕ್ತರಾಗಿ ಮತ್ತು ತ್ರಿಶೂರು ಸರಕಾರಿ ವೈದ್ಯಕೀಯ ಕಾಲೇಜಿನ ನಿರ್ವಹಣಾ ಸಮಿತಿಯ ಮುಂದಾಳುತ್ವ ವಹಿಸಿದ್ದ ಜಿಲ್ಲಾಧಿಕಾರಿಯವರು ಕಾಸರಗೋಡು ಸರಕಾರಿ ವೈದ್ಯಕೀಯ ಕಾಲೇಜಿನ ಸಮಗ್ರ ಅಭಿವೃದ್ಧಿಗೆ ರೂಪರೇಷೆ ಸಿದ್ಧಪಡಿಸುವ ಗುರಿ ಹೊಂದಿದ್ದಾರೆ.

> **ಕಾಲೇಜಿನ ಸಮಗ್ರ ಪ್ರಗತಿಗೆ ಅನುದಾನದ ವ್ಯವಸ್ಥೆ**
> ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್ , ಕೆಐಐಎಫ್‌ಬಿಯಿಂದ ಒದಗಿಸುವ ಅನುದಾನ ಬಳಸಿಕೊಂಡು ವೈದ್ಯಕೀಯ ಕಾಲೇಜಿನ ಅಭಿವೃದ್ಧಿ ಸಾಧಿಸಲಾಗುವುದು. ವೈದ್ಯಕೀಯ ಕಾಲೇಜಿನ ಮತ್ತಷ್ಟು ಅಭಿವೃದ್ಧಿಗೆ ಹೆಚ್ಚಿನ ಬೆಂಬಲ ನೀಡಲಾಗುವುದು.
> ● ಅರ್ಜುನ್ ಪಾಂಡ್ಯನ್ , ಡೀಸಿ

ಲ್ಯಾಬ್ ಸೌಲಭ್ಯ ಸಿದ್ಧಪಡಿಸಲು ಸೂಚನೆ

ವೈದ್ಯಕೀಯ ಕಾಲೇಜಿನ ಎಲ್ಲಾ ಬ್ಲಾಕ್ ಕಟ್ಟಡಗಳಿಗೆ ಖುದ್ದಾಗಿ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಅರ್ಧಕ್ಕೆ ನಿಂತಿರುವ ಹಾಸ್ಟೆಲ್ ಮತ್ತು ಆಸ್ಪತ್ರೆ ಬ್ಲಾಕ್‌ಗಳಿಗೂ ಸಂದರ್ಶನವಿತ್ತು ಮೌಲ್ಯಮಾಪನ ನಡೆಸಿದರು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಲ್ಯಾಬ್ ಸೌಲಭ್ಯಗಳನ್ನು ತಕ್ಷಣವೇ ಸಿದ್ಧಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನ ವಿಶೇಷ ಅಧಿಕಾರಿ ವಿ.ಚಂದ್ರನ್ ಅಲ್ಲದೆ ಕಿಟ್ಕೋ ಯೋಜನಾ ವ್ಯವಸ್ಥಾಪಕರು, ಲೋಕೋಪಯೋಗಿ ನಿರ್ಮಾಣ ವಿಭಾಗ, ಬಂದರು ಇಂಜಿನಿಯರಿಂಗ್, ಜಲ ಪ್ರಾಧಿಕಾರ, ಕೆಎಸ್‌ಇಬಿ ಕಾರ್ಯನಿರ್ವಾಹಕ ಇಂಜಿನಿಯರ್‌ಗಳೊಂದಿಗೆ ಜಿಲ್ಲಾಧಿಕಾರಿ ಮಾತುಕತೆ ನಡೆಸಿದರು.
ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ.ಅರುಣ್ ಕುಮಾರ್, ಉಪ ಪ್ರಾಂಶುಪಾಲೆ ಡಾ.ಟಿ.ಜಿ.ಸಿಂಧು, ಸೂಪರಿಂಟೆಂಡೆಂಟ್ ಡಾ.ಆರ್.ಪ್ರವೀಣ್, ನರ್ಸಿಂಗ್ ಕಾಲೇಜು ಅಸೋಸಿಯೇಟ್ ಪ್ರೊಫೆಸರ್ ತಸೀಮ್ ಸಬಿತ್, ಉಪ ನರ್ಸಿಂಗ್ ಸೂಪರಿಂಟೆಂಡೆಂಟ್ ಕೆ.ಎಸ್.ಜಯಕುಮಾರಿ, ಕಾರ್ಯದರ್ಶಿ ಕೆ.ಕೌಶಿಕ್, ಪಿಟಿಎ ಕಾರ್ಯದರ್ಶಿ ಡಾ.ಶಾಲಿನಿ ಕೃಷ್ಣನ್, ಸರ್ಜನ್ ಅನ್ಸಾದ್ ಅವರನ್ನೊಳಗೊಂಡ ತಂಡದೊಂದಿಗೆ ಕಾಸರಗೋಡು ವೈದ್ಯಕೀಯ ಕಾಲೇಜಿನ ಸ್ಥಿತಿಗತಿಗಳ ಕುರಿತು ಜಿಲ್ಲಾಧಿಕಾರಿ ಚರ್ಚಿಸಿದರು.
ಈ ಸಂದರ್ಭ ವಿದ್ಯಾರ್ಥಿಗಳು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್‌ರಿಗೆ ಧನ್ಯವಾದ ಸಲ್ಲಿಸಿದರು.

ಬಿಇಎಂ ಹೈಯರ್ ಸೆಕೆಂಡರಿ ಶಾಲೆಯ ಪಾಕಶಾಲೆಗೆ ಶಾಸಕರಿಂದ ಶಿಲಾನ್ಯಾಸ



ಕಾಸರಗೋಡು: ನಗರ ಮಧ್ಯದ ಬಿಇಎಂ ಎಚ್‌ಎಸ್‌ಎಸ್ ಶಾಲೆಗೆ ಕಾಸರಗೋಡು ವಿಧಾನಸಭಾ ಕ್ಷೇತ್ರದ ಶಾಸಕ ಎನ್.ಎ. ನೆಲ್ಲಿಕುನ್ನು ಅವರ ಆಸ್ತಿ ಅಭಿವೃದ್ಧಿ ನಿಧಿಯಿಂದ 10 ಲಕ್ಷ ರೂ. ಅನುದಾನದಲ್ಲಿ ನೂತನ ಪಾಕಶಾಲೆಯ ಶಿಲಾನ್ಯಾಸ ಕಾರ್ಯಕ್ರಮ ನೆರವೇರಿಸಲಾಯಿತು.
ಶಾಲಾ ಶಿಕ್ಷಕಿಯರು ಪ್ರಾರ್ಥನೆ ಹಾಡಿದರು. ಕಾಸರಗೋಡು ನಗರಸಭಾ ಅಧ್ಯಕ್ಷೆ ಶಾಹಿದಾ ಸಲೀಂ ಅಧ್ಯಕ್ಷತೆ ವಹಿಸಿದ್ದರು. ಶಾಲಾ ವ್ಯವಸ್ಥಾಪಕ ರೆವರೆಂಡ್ ಸುನೀಲ್ ಪುದಿಯಾಟಿಲ್, ವಾರ್ಡ್ ಕೌನ್ಸಿಲರ್ ಕೆ.ಎನ್. ರಾಮಕೃಷ್ಣಹೊಳ್ಳ, ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಹರೀಶ್ ಕೆ.ಆರ್., ಉಪಾಧ್ಯಕ್ಷ ಕೆ.ಕಿಶೋರ್ ಕುಮಾರ್, ಶಾಲಾ ಮಾತೃ ಸಂಘದ ಅಧ್ಯಕ್ಷೆ ಉಷಾ ಕಿರಣ್ ಶುಭಹಾರೈಸಿದರು.
ಶಾಲಾ ಎಸ್‌ಎಂಸಿ ಅಧ್ಯಕ್ಷ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ ಶಾಲೆ ಅಭಿವೃದ್ಧಿಗಾಗಿ ತಮ್ಮ ದೃಷ್ಟಿಕೋನ ಮಂಡಿಸಿದರು. ಬಿಇಎಂ ಎಚ್‌ಎಸ್‌ಎಸ್‌ನ ಪ್ರಾಂಶುಪಾಲ ರಾಜೇಶ್ ಚಂದ್ರ ಕೆ.ಪಿ. ಸ್ವಾಗತಿಸಿ, ಶಾಲಾ ಮುಖ್ಯೋಪಾಧ್ಯಾಯ ಗಣೇಶ್ ವಂದಿಸಿ, ಸ್ಕೂಲ್ ಸ್ಟಾಫ್ ಸೆಕ್ರೆಟರಿ ಯಶವಂತ ವೈ. ನಿರೂಪಿಸಿದರು.

> **ಬಿಇಎಂ ಶಾಲೆಯ ಸಮಗ್ರ ಅಭಿವೃದ್ಧಿ**
> ಕಾಸರಗೋಡು ನಗರದ ಹೃದಯ ಭಾಗದಲ್ಲಿರುವ ಬಿಇಎಂ ಹೈಯರ್ ಸೆಕೆಂಡರಿ ಶಾಲೆ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಲಾಗಿದೆ. ಅಡುಗೆ ಕೊಠಡಿ ಕಟ್ಟಡದ ಶಿಲಾನ್ಯಾಸದೊಂದಿಗೆ ವಿವಿಧ ಅಭಿವೃದ್ಧಿ ಚಟುವಟಿಕೆ ನಡೆಯಲಿದ್ದು, ಜನರ ಸಹಕಾರ ಅಗತ್ಯವಾಗಿದೆ.
> ● ಎನ್.ಎ. ನೆಲ್ಲಿಕುನ್ನು, ಶಾಸಕರು

ಇಂದಿನಿಂದ ಅಡೂರು ಶ್ರೀ ಕ್ಷೇತ್ರದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವ ಸಂಭ್ರಮ

ಕಾಸರಗೋಡು: ಅಡೂರು ಮಹಾತೋಭಾರ ಶ್ರೀ ಮಹಾಲಿಂಗೇಶ್ವರ ಮಹಾವಿಷ್ಣು ವಿನಾಯಕ ಕ್ಷೇತ್ರ ವಾರ್ಷಿಕ ಜಾತ್ರೆ ಮಾ.11 ರಿಂದ 20ರವರೆಗೆ ಬ್ರಹಶ್ರೀ ವಾಸುದೇವ ತಂತ್ರಿ ಕುಂಟಾರು ನೇತೃತ್ವದಲ್ಲಿ ಜರಗಲಿದೆ. ಮಾ.11ರಂದು ಬೆಳಿಗ್ಗೆ 10ಕ್ಕೆ ಹೊರೆಕಾಣಿಕೆ ಸಮರ್ಪಣೆ, 11ಕ್ಕೆ ಧ್ವಜಾರೋಹಣ, ಮಾ.13 ರಂದು ಸಂಜೆ 6.50ಕ್ಕೆ ಗಣಪತಿ ಪ್ರಾರ್ಥನೆ, ಉಗ್ರಾಣ ತುಂಬಿಸುವುದು, ಮಾ.14ರಂದು ಬೆಳಿಗ್ಗೆ 7ಕ್ಕೆ ಪೂಜೆ, 9ರಿಂದ ರುದ್ರ ಪಾರಾಯಣ, ಮಧ್ಯಾಹ್ನ ಪೂಜೆ, ಪಲ್ಲ ಪೂಜೆ, ಸಂಜೆ ಭಜನೆ, ರಾತ್ರಿ 7ರಿಂದ ಕೂಕೊಟ್ಟಿಕಳಿ, 7.20ರಿಂದ ನೃತ್ಯ ಸಂಧ್ಯಾ, 8ರಿಂದ ಉತ್ಸವ ಬಲಿ, ಶ್ರೀ ಭೂತಬಲಿ ನಡೆಯಲಿದೆ.
ಮಾ.15ರಂದು ಬೆಳಿಗ್ಗೆ 6ರಿಂದ ದರ್ಶನ ಬಲಿ, 9ರಿಂದ ರುದ್ರಪಾರಾಯಣ, 11ರಿಂದ ತುಲಾಭಾರ ಸೇವೆ, ಮಧ್ಯಾಹ್ನ ಪೂಜೆ, ಸಂಜೆ 4ರಿಂದ ಭಜನೆ, ರಾತ್ರಿ 7 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ 8 ರಿಂದ ಉತ್ಸವ ಬಲಿ, ತುಲಾಭಾರ, ಶ್ರೀ ಭೂತಬಲಿ ನಡೆಯಲಿದೆ.
ಮಾ.16ರಂದು ಬೆಳಿಗ್ಗೆ 6 ರಿಂದ ದರ್ಶನ ಬಲಿ, 9ರಿಂದ ರುದ್ರಪಾರಾಯಣ, ಶ್ರೀ ಕಿನ್ನಿಮಾಣಿ ಪೂಮಾಣಿ ದೈವ ಚಾವಡಿಯಲ್ಲಿ ಗಣಪತಿ ಹೋಮ, ಕೀರುವಾಳು ಏರಿಸುವುದು, 11ರಿಂದ ತುಲಾಭಾರ, ರಾತ್ರಿ7ರಿಂದ 'ಊರುದ ಮಾರಿ' ತುಳು ನಾಟಕ, 8ರಿಂದ ನಡು ದೀಪೋತ್ಸವ ಬಲಿ, ಶ್ರೀ ಕಿನ್ನಿಮಾಣಿ ಪೂಮಾಣಿ ದೈವಗಳ ದರ್ಶನ ಸೇವೆ, ತುಲಾಭಾರ, 9ರಿಂದ ಸ್ಯಾಕ್ಸೋಫೋನ್ ವಾದನ ನಡೆಯಲಿದೆ.
ಮಾ.17ರಂದು ಬೆಳಿಗ್ಗೆ 6ರಿಂದ ಮಹಾ ದರ್ಶನ ಬಲಿ, ಬಟ್ಟಲು ಕಾಣಿಕೆ, 9ರಿಂದ ರುದ್ರ ಪಾರಾಯಣ, 11ರಿಂದ ತುಲಾಭಾರ ಸೇವೆ, 11ರಿಂದ ಯಕ್ಷಗಾನ ತಾಳಮದ್ದಳೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಸಂಜೆ 4ರಿಂದ ಭಜನೆ, ರಾತ್ರಿ 7ರಿಂದ ಶಿವಶಕ್ತಿ ಸಾರ-ನೃತ್ಯಗಾನ ವೈಭವ, 8ರಿಂದ ಶಯನೋತ್ಸವ ಬಲಿ, ಶ್ರೀ ಕಿನ್ನಿಮಾಣಿ ಪೂಮಾಣಿ ದೈವಗಳ ದರ್ಶನ ಸೇವೆ, ಬೆಡಿ ಮಹೋತ್ಸವ, ಶಯನೋತ್ಸವ, 8.30ರಿಂದ ಫ್ಯೂಶನ್ ಡ್ಯಾನ್ಸ್ 10.30ರಿಂದ ಅಭಿಷೇಕ ಮಂಡೆಕೋಲುರಿಂದ ನೃತ್ಯಶಿಲ್ಪಂ ನಡೆಯಲಿದೆ.
ಮಾ.18ರಂದು ಬೆಳಿಗ್ಗೆ 8ಕ್ಕೆ ಕವಾಟೋದ್ಘಾಟನೆ, 11ರಿಂದ ತುಲಾಭಾರ ಸೇವೆ, ಸಂಜೆ 4ರಿಂದ ಭಜನೆ, ರಾತ್ರಿ 7ರಿಂದ ಸಾಹಿತ್ಯ-ಗಾನ-ನೃತ್ಯ ವೈಭವ, 8ರಿಂದ ಅವಭೃತೋತ್ಸವ ಬಲಿ, ಶ್ರೀ ಕಿನ್ನಿಮಾಣಿ ಪೂಮಾಣಿ ದೈವಗಳ ದರ್ಶನ ಸೇವೆ, ಶ್ರೀ ದೆಯ್ಯಗೆ ನೇಮ, ರಾತ್ರಿ 10ರಿಂದ ಯಕ್ಷಗಾನ, ದರ್ಶನ ಬಲಿ, ಬಟ್ಟಲು ಕಾಣಿಕೆ, ಧ್ವಜಾವರೋಹಣ ನಡೆಯಲಿದೆ.
ಮಾ.19ರಂದು ಬೆಳಿಗ್ಗೆ 7ಕ್ಕೆ ಬೀರತಂಬಿಲ, ಶ್ರೀ ಕಿನ್ನಿಮಾಣಿ ಪೂಮಾಣಿ ದೈವಗಳ ನೇಮ, ಸಂಜೆ 5ಕ್ಕೆ ಅತ್ತನಾಡಿ, ಚೀನಪ್ಪಾಡಿ ತರವಾಡಿನಿಂದ ಭಂಡಾರ ತರುವುದು. ಮಾ.20ರಂದು ಬೆಳಿಗ್ಗೆ 7ರಿಂದ ಶ್ರೀ ಚಾಮುಂಡಿ ದೈವದ ನರ್ತನ, 10 ರಿಂದ ಶ್ರೀ ರಕ್ತೇಶ್ವರಿ ದೈವ ನರ್ತನ, ಸಂಜೆ 5ರಿಂದ ಶ್ರೀ ವಿಷ್ಣುಮೂರ್ತಿ ದೈವದ ನರ್ತನ ಸೇವೆ ನಡೆಯಲಿದೆ.

ಭರದಿಂದ ಸಾಗುತ್ತಿದೆ 'ಉರ್ಮಿ' ಸೇತುವೆ ನಿರ್ಮಾಣ ಕಾಮಗಾರಿ



ಉಪ್ಪಳ: ಪೈವಳಿಕೆ ಪಂ.ವ್ಯಾಪ್ತಿಯ ಉರ್ಮಿ ಎಂಬಲ್ಲಿ ಕಳೆದ ಮಳೆಗಾಲದಲ್ಲಿ ಕುಸಿದು ಬಿದ್ದ ಸಂಕದ ಕಾಮಗಾರಿ ಭರದಿಂದ ನಡೆಯುತ್ತಿದ್ದು, ಶೀಘ್ರ ಕಾಮಗಾರಿ ಪೂರ್ತಿಗೊಳಿಸಬೇಕೆಂದು ಊರವರು ಒತ್ತಾಯಿಸಿದ್ದಾರೆ.
ಇರಿಗೇಸನ್ ಇಲಾಖೆಯಿಂದ ಸುಮಾರು ಒಂದೂ ಕಾಲು ಕೋ.ರೂ. ವೆಚ್ಚದಲ್ಲಿ ಅಣೆಕಟ್ಟು ಹಾಗೂ ಸಂಕ ನಿರ್ಮಾಣ ಕಾಮಗಾರಿ ಕಳೆದ ಎರಡೂ ತಿಂಗಳಿಂದ ಭರದಿಂದ ನಡೆಯುತ್ತಿದೆ.

ತಾತ್ಕಾಲಿಕ ರಸ್ತೆ ನಿರ್ಮಾಣ

ಸಂಕ ಕುಸಿತದಿಂದ ಬದಲಿ ವಾಹನಗಳ ಸಂಚಾರಕ್ಕೆ ಊರವರು ಮುತುವರ್ಜಿ ವಹಿಸಿ ತೋಡಿಗೆ ಕಲ್ಲು ಸಹಿತ ಇತರ ಸಾಮಗ್ರಿಗಳನ್ನು ಹಾಕಿ ತಾತ್ಕಾಲಿಕ ರಸ್ತೆ ನಿರ್ಮಿಸಿದ್ದರು. ಈ ರಸ್ತೆಯು ಲಾಲ್ ಬಾಗ್ ಕೊಮ್ಮಂಗಳ ಸಹಿತ ವಿವಿಧ ಪ್ರದೇಶವನ್ನು ಸಂಗಮಿಸುತ್ತಿದ್ದು, ದಿನನಿತ್ಯ ನೂರಾರು ವಾಹನ ಸಂಚಾರ ನಡೆಸುತ್ತಿವೆ. ತೋಡಿನಲ್ಲಿ ಭಾರೀ ಆಳದಲ್ಲಿ ನೀರು ತುಂಬಿಕೊಂಡಿರುವ ಹಿನ್ನೆಲೆ ಈ ಹಿಂದೆಯೇ ನಡೆಯಬೇಕಾದ ಕಾಮಗಾರಿ ವಿಳಂಬಗೊಳ್ಳಲು ಕಾರಣವೆನ್ನಲಾಗಿದೆ.

ಶೀಘ್ರ ಪೂರ್ಣಕ್ಕೆ ಆಗ್ರಹ

ಈ ಪ್ರದೇಶದ ಜನರು ಅನುಭವಿಸುವ ಯಾತ್ರಾ ತೊಂದರೆಗೆ ಪರಿಹಾರವಾಗಿ ಶೀಘ್ರದಲ್ಲೇ ಕಾಮಗಾರಿ ಪೂರ್ತಿಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಊರವರು ಒತ್ತಾಯಿಸಿದ್ದಾರೆ.

ಮೀಯಪದವು ಶ್ರೀ ವಿದ್ಯಾವರ್ಧಕ ಶಾಲೆಯಲ್ಲಿ ನೇತ್ರ ತಪಾಸಣಾ ಶಿಬಿರ



ಮಂಜೇಶ್ವರ: ಮೀಯಪದವು ಶ್ರೀ ವಿದ್ಯಾವರ್ಧಕ ಎಯುಪಿ ಶಾಲೆಯಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರ ಜರಗಿತು. ಶಿಬಿರದಲ್ಲಿ ಪಾಲ್ಗೊಂಡವರಿಗೆ ಉಚಿತ ಕನ್ನಡಕ ವಿತರಿಸಲಾಯಿತು. ಶ್ರೀ ವಿದ್ಯಾವರ್ಧಕ ಹೈಯರ್ ಸೆಕೆಂಡರಿ ಶಾಲೆ ಸಂಚಾಲಕ ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಮಾಸ್ಟರ್ಸ್ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್‌ನ ಗೌರವಾಧ್ಯಕ್ಷ ಕೆ.ವಿ.ರಾಧಾಕೃಷ್ಣ ಭಟ್ ಫಲಾನುಭವಿಗಳಿಗೆ ಕನ್ನಡಕ ವಿತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
ಎಸ್‌ವಿವಿಎಚ್‌ಎಸ್ ಶಾಲೆಯ ಪಿಟಿಎ ಅಧ್ಯಕ್ಷ ಇಬ್ರಾಹಿಂ ಹೊನ್ನಕಟ್ಟೆ, ಮಾಸ್ಟರ್ಸ್ ಕ್ಲಬ್‌ನ ಸದಸ್ಯ ರವಿಶಂಕರ್ ರಾವ್, ರಘುವೀರ್ ರಾವ್ , ಸುರೇಶ್ ಮೀಯಪದವು ಉಪಸ್ಥಿತರಿದ್ದರು.
ಮೀಯಪದವು ಶ್ರೀ ವಿದ್ಯಾವರ್ಧಕ ಉನ್ನತ ಪ್ರೌಢ ಶಾಲೆ, ವಿದ್ಯಾವರ್ಧಕ ಪ್ರೌಢ ಪ್ರಾಥಮಿಕ ಶಾಲೆ, ಮಾಸ್ಟರ್ಸ್ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್, ವಿಕಾಸ ಮೀಯಪದವು ಇದರ ನೇತೃತ್ವ ಜಗದ್ಗುರು ಶ್ರೀ ನಿತ್ಯಾನಂದ ಮಹಾಪೀಠ ಚಾರಿಟೇಬಲ್ ಟ್ರಸ್ಟ್ ಕೊಂಡೆವೂರು, ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಂಗಳೂರು, ಡಾ.ದಯಾನಂದ ಪೈ, ಸತೀಶ್ ಪೈ ಚಾರಿಟೇಬಲ್ ಟ್ರಸ್ಟ್ ವನ್ ಸೈಟ್ ಎಸ್ಸಿಲೋರ್ ಲಕ್ಸೋಟಿಕ ಫೌಂಡೇಶನ್ ಬೆಂಗಳೂರು ಇವುಗಳ ಸಹಯೋಗದಲ್ಲಿ ಕಾರ್ಯ ಕ್ರಮ ಆಯೋಜಿಸಲಾಗಿತ್ತು.

ಬೆಂಗಳೂರಿನಲ್ಲಿ ಯಶಸ್ವಿ ಪ್ರದರ್ಶನಗೊಂಡ ಗಡಿನಾಡ ಕನ್ನಡಿಗರ 'ದಲಿಯನ ಡೋಲು'



ಕಾಸರಗೋಡು: ಕಾಸರಗೋಡು ಗಡಿನಾಡ ಕನ್ನಡಿಗರ ಧ್ವನಿ ದಲಿಯನ ಡೋಲ್‌ನ ಮೂಲಕ ಬೆಂಗಳೂರಿನಲ್ಲಿ ಮಾರ್ಧನಿ ಬೆಂಗಳೂರು, ಸೂರ್ಯ ಕಲಾವಿದರು ಬೆಂಗಳೂರು ಆಯೋಜಿಸಿದ ರಂಗಸಂಭ್ರಮ 2026 ರಂಗಭೂಮಿಯ ಪ್ರಸಿದ್ಧ ವೇದಿಕೆ ರವೀಂದ್ರ ಕಲಾಕ್ಷೇತ್ರದಲ್ಲಿ ಜರಗಿತು.
ಉದಯ ಸಾರಂಗ ರಚಿಸಿ ನಿರ್ದೇಶಿಸಿದ ಸ್ವರ್ಗ ಭೂಮಿಕಾ ಸಂಡೇ ಥಿಯೇಟರ್ ಪ್ರದರ್ಶಿಸಿದ ದಲಿಯನ ಡೋಲು ನಾಟಕ ಯಶಸ್ವಿಯಾಗಿ ಪ್ರದರ್ಶನಗೊಂಡು ಪ್ರೇಕ್ಷಕರ ಪ್ರಶಂಸೆಗೆ ಪಾತ್ರವಾಯಿತು. ಗ್ರಾಮೀಣ ರಂಗಭೂಮಿಯನ್ನು ಪೋಷಿಸುತ್ತಿರುವ ಈ ತಂಡದಲ್ಲಿ ವಿವಿಧ ವಲಯ ಪ್ರತಿಭಾನ್ವಿತರು ಒಟ್ಟು ಸೇರಿರುವುದು ಸಂಡೇ ಥಿಯೇಟರ್‌ನ ವಿಶೇಷತೆ.
ಜಾನಪದ ಸೊಗಡಿನ ಸಂಸ್ಕಾರದ ಸೆಳೆ ಜಾಗತೀಕರಣದ ಮಾಯಾಲೋಕದಲ್ಲಿ ಹೋರಾಡುವ ಕಥಾಹಂದರ ಹೊಂದಿದ ಈ ನಾಟಕ ನೋಡುಗರಿಗೆ ಆಪ್ತವಾಗುವಂತೆ ಮಾಡಿದೆ. ಪ್ರತೀ ದೃಶ್ಯಗಳು ಕೌತುಕ ಸೃಷ್ಟಿಸುವುದೇ ಇದರ ಪ್ರಧಾನ ಭೂಮಿಕೆ. ಈ ನಾಟಕದಲ್ಲಿ ದಲಿಯ ಕಥಾ ಪಾತ್ರದಲ್ಲಿ ಪ್ರಸ್ತುತ ಪಂ. ಸದಸ್ಯರಾಗಿರುವ ರಾಮಚಂದ್ರ ಮೊಳಕ್ಕಾಲ್, ಮಾಯಾವಿಯಾಗಿ ಯುವ ಉದ್ಯಮಿ ರಾಜೇಶ್ ಸ್ವರ್ಗ, ಊರಿನ ಜಮೀನ್ದಾರಿಯಾಗಿ ಉಪನ್ಯಾಸಕಿ ಯಾಗಿರುವ ಕವಯತ್ರಿ ನವ್ಯಶ್ರೀ ಸ್ವರ್ಗ, ಮಂಜನಾಗಿ ಬ್ಯಾಡ್ಮಿಂಟನ್ ಕೋಚ್ ಆಗಿರುವ ಕೃಷ್ಣ ಮೋಹನ ಪೊಸೊಳ್ಯ, ಊರಿನ ಜನಗಳಾಗಿ ರಂಗ ಕರ್ಮಿ ಅಶೋಕ್ ಕೊಡ್ಲಮೊಗರು, ಗುಣಾಜೆ ಅಂಗನವಾಡಿ ಅಧ್ಯಾಪಿಕೆ ಸುಮತಿ, ವೈಷವಿ ಪೊಸೊಳ್ಯ, ಪೂರ್ಣಿಮ ಪಾತ್ರಗಳಿಗೆ ಜೀವ ನೀಡಿದರು.
ಸಂಗೀತ ಮಾ. ಕಾರ್ತಿಕ್ ಪೆರಿಕ್ಕಾನ, ವೈಷವ್, ಮೋಕ್ಷಿತ್ ಮಾಡಿದರು. ರಂಗಪರಿಕರ ಪ್ರಸಾಧನ ಕಿರಣ್ ಕಲಾಂಜಲಿ ಮಾಡಿದರು. ನಾಟಕ ತಂಡದ ಸಂಯೋಜಕರಾಗಿ ಕವಿ ಶ್ರೀನಿವಾಸ ಪೆರಿಕ್ಕಾನನ ಕಾರ್ಯ ನಿರ್ವಹಿಸಿದರು. ಶಂಕರ ಸ್ವಾಮಿ ಕೃಪಾ ಸಹಕರಿಸಿದರು.

ವಿಶ್ವ ಗ್ಲುಕೋಮಾ ಸಪ್ತಾಹದ ಆಚರಣೆ: ಕಾಸರಗೋಡು ಜಿಲ್ಲಾ ಮಟ್ಟದ ಉದ್ಘಾಟನೆ




ಕಾಸರಗೋಡು: ವಿಶ್ವ ಗ್ಲುಕೋಮಾ ಸಪ್ತಾಹ ಆಚರಣೆ ಕಾಸರಗೋಡು ಜಿಲ್ಲಾ ಮಟ್ಟದ ಉದ್ಘಾಟನೆಯನ್ನು ಕಾಞಂಗಾಡಿನ ರಾಷ್ಟ್ರೀಯ ಆರೋಗ್ಯ ಮಿಷನ್ ಸಮ್ಮೇಳನ ಸಭಾಂಗಣದಲ್ಲಿ ಉಪ ಜಿಲ್ಲಾ ವೈದ್ಯಾಧಿಕಾರಿ ಡಾ. ಅಜಯ್ ರಾಜನ್ ಸೋಮವಾರ ನೆರವೇರಿಸಿದರು. ಜಿಲ್ಲಾ ನೇತ್ರ ವಿಭಾಗ ಸಂಯೋಜಕಿ ಕವಿತಾ ಅಧ್ಯಕ್ಷತೆ ವಹಿಸಿದ್ದರು.
ರಾಷ್ಟ್ರೀಯ ಆರೋಗ್ಯ ಮಿಷನ್ ಜೂನಿಯರ್ ಸಲಹೆಗಾರ ಕಮಲ್ ಕೆ. ಜೋಸ್ , ಜಿಲ್ಲಾ ಆರ್‌ಬಿಎಸ್‌ಕೆ ಸಂಯೋಜಕಿ ನಿಜಿತಾ ಕೆ. ಮಾತನಾಡಿದರು. ಜಿಲ್ಲಾ ಶಿಕ್ಷಣ – ಮಾಧ್ಯಮ ಅಧಿಕಾರಿ ಅಬ್ದುಲ್ ಲತೀಫ್ ಮಡತ್ತಿಲ್ ಸ್ವಾಗತಿಸಿ, ಉಪ ಜಿಲ್ಲಾ ಶಿಕ್ಷಣ–ಮಾಧ್ಯಮ ಅಧಿಕಾರಿ ಪಿ.ಪಿ.ಹಸೀಬ್ ವಂದಿಸಿದರು.

ಜಾಗೃತಿ ವಿಚಾರ ಸಂಕಿರಣ

ನಂತರ ಜಿಲ್ಲೆಯ ಜೆಪಿಎಚ್‌ಎನ್, ಎಂಎಲ್‌ಎಸ್‌ಪಿ, ಆರ್‌ಬಿಎಸ್‌ಕೆ ಕಾರ್ಯಕರ್ತರಿಗೆ ಆಯೋಜಿಸಲಾದ ಜಾಗೃತಿ ವಿಚಾರ ಸಂಕಿರಣದಲ್ಲಿ ಕಾಞಂಗಾಡಿನ ಜಿಲ್ಲಾಸ್ಪತ್ರೆ ಜೂನಿಯರ್ ಕನ್ಸಲ್ಟೆಂಟ್ ನೇತ್ರತಜ್ಞೆ ಡಾ. ಅಪರ್ಣ ಎಸ್., ನೀಲೇಶ್ವರ ತಾ.ಆಸ್ಪತ್ರೆ ನೇತ್ರತಜ್ಞ ಅಜೀಶ್ ಕುಮಾರ್ ಕೆ. ತರಗತಿ ನಡೆಸಿಕೊಟ್ಟರು. ಜಿಲ್ಲಾ ವೈದ್ಯಕೀಯ ಕಚೇರಿ (ಆರೋಗ್ಯ), ರಾಷ್ಟ್ರೀಯ ಆರೋಗ್ಯ ಮಿಷನ್ ಮತ್ತು ಜಿಲ್ಲಾ ಅಂಧತ್ವ –ದೃಷ್ಟಿಹೀನತೆ ನಿಯಂತ್ರಣ ಸಮಿತಿ ಕಾಸರಗೋಡು ಇವುಗಳ ಜಂಟಿ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಆರೋಗ್ಯ ಕೇಂದ್ರದಲ್ಲಿ ಜಾಗೃತಿ

ಗ್ಲುಕೋಮಾ ದಿನಾಚರಣೆಯ ಅಂಗವಾಗಿ ಜಿಲ್ಲೆಯ ವಿವಿಧ ಸರಕಾರಿ ಆರೋಗ್ಯ ಕೇಂದ್ರಗಳಲ್ಲಿ ಒಂದು ವಾರ ಗ್ಲುಕೋಮಾ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುವುದೆಂದು ಜಿಲ್ಲಾ ವೈದ್ಯಾಧಿಕಾರಿ (ಆರೋಗ್ಯ) ಡಾ.ಎ.ವಿ. ರಾಮದಾಸ್ ಘೋಷಿಸಿದ್ದಾರೆ.
ಈ ವರ್ಷ ಮಾ.12ರಂದು ವಿಶ್ವ ಗ್ಲುಕೋಮಾ ದಿನವನ್ನು ಹಮ್ಮಿಕೊಳ್ಳಲಾಗುತ್ತಿದೆ.



ಕುಂಬಳೆ ಕಿದೂರು ತಂಜರಕಟ್ಟೆ ಬಂದ್ಯಾನ್ ಕುಲಾಲ ತರವಾಡು ಮನೆಯಲ್ಲಿ ಏಪ್ರಿಲ್ 28 ಮತ್ತು 29ರಂದು ನಡೆಯುವ ನೂತನ ಗೃಹ ಪ್ರವೇಶ ದೈವಗಳ ಪೀಠ ಪ್ರತಿಷ್ಠೆ, ದೈವಗಳ ಕೋಲದ ಆಮಂತ್ರಣ ಪತ್ರಿಕೆಯನ್ನು ಕುಟುಂಬದ ಹಿರಿಯರು ಬಿಡುಗಡೆಗೊಳಿಸಿದರು. ಕುಟುಂಬ ಸದಸ್ಯರು, ಊರಿನ ಹಿರಿಯರು, ಕಿದೂರು ಸಂಘ ಸಂಸ್ಥೆಗಳ ಪದಾಧಿಕಾರಿಗಳಿದ್ದರು.

ಚೆಂಗಳ ಪಂಚಾಯತ್ ಮಟ್ಟದ ವಿರಾಟ್ ಹಿಂದೂ ಸಂಗಮ | ಎಡನೀರು ಶ್ರೀ ಆಶೀರ್ವಚನ

ಜಾತಿ, ರಾಜಕೀಯ ಬದಿಗಿಟ್ಟು ಸಮಾಜದ ಒಗ್ಗಟ್ಟಿಗೆ ಶ್ರಮಿಸೋಣ

ಕಾಸರಗೋಡು: ಎಡನೀರು ಶ್ರೀ ಮಠದ ಪವಿತ್ರ ಪರಿಸರದಲ್ಲಿ ವಿರಾಟ್ ಹಿಂದೂ ಸಂಗಮ ಕಾರ್ಯಕ್ರಮ ಭಾನುವಾರ ನಡೆಯಿತು. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ದಿವ್ಯ ಸಾನ್ನಿಧ್ಯದಲ್ಲಿ ಈ ಕಾರ್ಯಕ್ರಮ ಜರಗಿತು.
ಜಾತಿ, ಪಂಗಡ, ರಾಜಕೀಯ ಬದಿಗಿಟ್ಟು ಹಿಂದು ಸಮಾಜದ ಒಗಟ್ಟಿಗೆ ಎಲ್ಲರೂ ಸಮಯ , ಶ್ರಮ ಸಮರ್ಪಿಸಿದರೆ ಹಿಂದು ಸಮಾಜ ಮತ್ತೊಮ್ಮೆ ಅರಳಿ ಬೆಳೆಯುತ್ತದೆ ಎಂದು ಸ್ವಾಮೀಜಿ ಹೇಳಿದರು.
ಕಾರ್ಯಕ್ರಮದ ಪ್ರಯುಕ್ತ ಮಧ್ಯಾಹ್ನ ಚೆಂಗಳ ಪಂಚಾಯತ್‌ನ ವಿವಿಧ ಬಾಲಗೋಕುಲಗಳ ಮಕ್ಕಳಿಂದ ಕುಣಿತ ಭಜನೆ ನೆರವೇರಿತು. ಬಳಿಕ ಮಹಿಳಾ ತಂಡಗಳಿಂದ ಕೈಕೊಟ್ಟುಕಳಿ ಮತ್ತು ತಿರುವಾದಿರಕಳಿ ನೃತ್ಯ ಪ್ರದರ್ಶನಗಳು ನಡೆದವು.



ಸಂಜೆ ಜರಗಿದ ಸಭಾ ಕಾರ್ಯಕ್ರಮದಲ್ಲಿ ಎಡನೀರು ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಆಶೀರ್ವಚನ ನೀಡಿದರು. ವಿಶ್ವ ಹಿಂದು ಪರಿಷತ್‌ನ ಉತ್ತರಸಂಭಾಗ್ ಸಂಘಟನಾ ಕಾರ್ಯದರ್ಶಿ ಜಿಜೇಶ್ ಪಟ್ಟೇರಿ ದಿಕ್ಸೂಚಿ ಭಾಷಣ ಮಾಡಿದರು. ವಿರಾಟ್ ಹಿಂದು ಸಂಗಮದ ಚೆಂಗಳ ಪಂಚಾಯತ್ ಸಮಿತಿ ಅಧ್ಯಕ್ಷ ಶಿವಶಂಕರ ನೆಕ್ರಾಜೆ, ಸಾಮಾಜಿಕ ಕಾರ್ಯಕರ್ತ ಹಾಗೂ ಎಡನೀರು ಮಠದ ವ್ಯವಸ್ಥಾಪಕರಾದ ರಕ್ಷಾಧಿಕಾರಿ ರಾಜೇಂದ್ರ ಕಲ್ಲೂರಾಯ, ಕೆ.ಮಾಧವ ಹೇರಳ ಸೇರಿದಂತೆ ಹಲವಾರು ಮಂದಿ ಉಪಸ್ಥಿತರಿದ್ದರು.

> **ಎಳವೆಯಲ್ಲೇ ಮಕ್ಕಳನ್ನು ಸಂಸ್ಕಾರವಂತರನ್ನಾಗಿಸಿ**
> ಮಕ್ಕಳ ಎಳೆಯ ಮನಸ್ಸಿನಲ್ಲಿ ರಾಷ್ಟ್ರೀಯ, ಧಾರ್ಮಿಕ, ಸಾಂಸ್ಕೃತಿಕ, ಪೌರಾಣಿಕ , ಕೌಟುಂಬಿಕ ಮೌಲ್ಯಗಳ ಬಗ್ಗೆ ಸಂಸ್ಕಾರಯುತ ಚಿಂತನೆಗಳ ಬಿತ್ತಿದರೆ ನಮ್ಮ ಮುಂದಿನ ಪೀಳಿಗೆ ಸದೃಢ ಭಾರತ ನಿರ್ಮಾಣಕ್ಕೆ ದಾರಿ ಮಾಡಿಕೊಡುತ್ತದೆ.
> ● ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ, ಎಡನೀರು ಮಠ

ಈ ಸಂದರ್ಭ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ನಂತರ ಗುರುವಾಯೂರಿನ ಶ್ರೀ ಬ್ರಹ್ಮಂ ಭಜನ್ಸ್ ತಂಡದಿಂದ ಭಜನಾ ಕಾರ್ಯಕ್ರಮ ನಡೆಯಿತು.

ಕಾರಡ್ಕ ಪಂ.ಮಟ್ಟದ ಹಿಂದೂ ಏಕತಾ ಸಮಾವೇಶ

ಮುಳ್ಳೇರಿಯ: ಹಿಂದು ಏಕತಾ ಸಮಾವೇಶ ನಮ್ಮ ಶಕ್ತಿಯ ವಿರಾಟ್ ರೂಪ ಎಂದು ಹಿಂದೂ ಐಕ್ಯವೇದಿಕೆ ರಾಜ್ಯ ಉಪಾಧ್ಯಕ್ಷ ಶಶಿ ಕಮ್ಮಟ್ಟೇರಿ ಹೇಳಿದ್ದಾರೆ.
ಮುಳ್ಳೇರಿಯ ವಿ.ಆರ್.ಎಸ್ ಮೈದಾನದಲ್ಲಿ ನಡೆದ ಕಾರಡ್ಕ ಪಂ. ಮಟ್ಟದ ಹಿಂದೂ ಏಕತಾ ಸಮಾವೇಶದಲ್ಲಿ ಮುಖ್ಯ ಭಾಷಣ ಅವರು ಮಾತನಾಡಿದರು. ಭಾರತಾಂಭೆಯನ್ನು ವಂದಿಸಲು,ಪುಷ್ಪಾರ್ಚನೆ ಮಾಡುವ ಜನರು ನಮ್ಮ ನಡುವೆ ಇದ್ದಾರೆ. ಹಿಂದು ಎಂದರೆ ವರ್ಗೀಯ ಎಂದು ತಿಳಿಯುವವರೂ ಇದ್ದಾರೆ ಎಂದರು.
ಸ್ವಾಗತ ಸಮಿತಿ ಅಧ್ಯಕ್ಷ ಎಂ.ಕೆ. ರಾಘವನ್ ಅಧ್ಯಕ್ಷತೆ ವಹಿಸಿದ್ದರು.



ರಕ್ಷಾಧಿಕಾರಿ ಬ್ರಹ್ಮಶ್ರೀ ರವೀಶ ತಂತ್ರಿ ಅನುಗ್ರಹ ಭಾಷಣ ಮಾಡಿದರು. ಗೌರವಾಧ್ಯಕ್ಷ ರಾಧಾಕೃಷ್ಣ ಭಟ್ ಚೆನ್ನಂಗೋಡು ಉಪಸ್ಥಿತರಿದ್ದರು. ಶರಣ್ಯ ಕಾನಕ್ಕೋಡು, ಶರಣ್ಯ ಎಚ್. ಎನ್. ಕಾನಕ್ಕೋಡು ಪ್ರಾರ್ಥಿಸಿದರು. ಸ್ವಾಗತ ಸಮಿತಿ ಕಾರ್ಯದರ್ಶಿ ರಾಮಚಂದ್ರ ಗೌರಿಯಡ್ಕ ಸ್ವಾಗತಿಸಿ, ಮಹಿಳಾ ಸಂಯೋಜಕಿ ಸ್ವಪ್ನಾ ಜಿ. ವಂದಿಸಿದರು. ಚಂದ್ರನ್ ಕಾರಡ್ಕ ಮತ್ತು ಪ್ರಜಿತ್ ಬೀರಂಗೋಳು ಕಾರ್ಯಕ್ರಮ ನಿರೂಪಿಸಿದರು.

ಕುಣಿತ ಭಜನೆ

ಮುಳ್ಳೇರಿಯ ಪೇಟೆಯಿಂದ ವೈಭವದ ಮೆರವಣಿಗೆ ನಡೆಯಿತು. ಮೆಘಾ ಕುಣಿತ ಭಜನೆ ಏರ್ಪಡಿಸಲಾಗಿತ್ತು, ಕೊನೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಸುತ್ತ ಮುತ್ತ

ಕಡಬ ತಾಲೂಕು ಬಿಲ್ಲವ ಸಂಘದ ಅಧ್ಯಕ್ಷರಾಗಿ ಸತೀಶ್ ಕೆ. ಐತ್ತೂರು

ಕಡಬ: ನೂತನವಾಗಿ ರೂಪುಗೊಂಡ ಕಡಬ ತಾಲೂಕು ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಬಿಲ್ಲವ ಸಂಘದ ಸ್ಥಾಪಕಾಧ್ಯಕ್ಷರಾಗಿ ಐತ್ತೂರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ಕೆ. ಐತ್ತೂರು ಆಯ್ಕೆಯಾಗಿದ್ದಾರೆ.



ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಬಿಲ್ಲವ ಸಂಘದ ಪುತ್ತೂರು ತಾಲೂಕು ಘಟಕದ ಕಾರ್ಯದರ್ಶಿ ಬಿ.ಟಿ. ಮಹೇಶ್ ಚಂದ್ರ ಸಾಲ್ಯಾನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ನಡೆದಿದೆ. ಉಪಾಧ್ಯಕ್ಷರಾಗಿ ಅಜಿತ್ ಪಾಲೇರಿ, ರವಿ ಮಾಯಿಲ್ಗ ಹಾಗೂ ಗೀತಾ ಉಂಡಿಲ ಆಯ್ಕೆಯಾಗಿದರೆ ಕಾರ್ಯದರ್ಶಿಯಾಗಿ ಮಿಥುನ್ ಸುಂದರ್ ಪಲ್ಲತ್ತಡ್ಕ, ಜೊತೆ ಕಾರ್ಯದರ್ಶಿಗಳಾಗಿ ಲಕ್ಷ್ಮೀಶ್ ಬಂಗೇರ ಪೆಲತ್ತೊಡಿ, ಅಶ್ವಥ್ ಸಾಂತ್ಯ ಮತ್ತು ಕೃಷ್ಣಪ್ಪ ಅಮ್ಮೈ, ಕೋಶಾಧಿಕಾರಿಯಾಗಿ ಸಂತೋಷ್ ಕುಮಾರ್ ಮರಕ್ಕಡ ನೇಮಕಗೊಂಡರು. ಸಮಿತಿ ಸದಸ್ಯರಾಗಿ ದಿನೇಶ್ ಕೇಪುಲು, ಉಮೇಶ್ ಪೂಜಾರಿ ಬಳ್ಪ, ವಸಂತ ಪೂಜಾರಿ ಬದಿಬಾಗಿಲು, ಅಭಿಲಾಷ್ ಪಿ.ಕೆ. ಕಲ್ಲುಗುಡ್ಡೆ, ಸಂತೋಷ್ ಗುಂಡ್ಯ, ಉಮೇಶ್ ಕಾರ್ಲಾಡಿ, ಬಾಲಕೃಷ್ಣ ಬಾಣಜಾಲು, ಡಾ. ರವಿ ಕಕ್ಕೆಪದವು ಹಾಗೂ ಬಾಲಕೃಷ್ಣ ನೂಜಾಡಿ, ಗೌರವ ಸಲಹೆಗಾರರಾಗಿ ಜಿನ್ನಪ್ಪ ಸಾಲ್ಯಾನ್ ಕಡಬ, ವಿಜಯ ಕುಮಾರ್ ಸೊರಕೆ, ಸಲಹೆಗಾರರಾಗಿ ನಾರಾಯಣ ಪೂಜಾರಿ ಪಾಲಪ್ಪೆ, ಆನಂದ ಟೈಲರ್, ಉಷಾ ಅಂಚನ್, ಅಶೋಕ್ ಕ್ಯೊಲ, ಲಿಂಗಪ್ಪ ಪೂಜಾರಿ ಕೇಪುಲು, ಶಶಿಧರನ್ ಕಟ್ಟತ್ತಡ್ಕ, ಕುಮಾರಿ ವಾಸುದೇವನ್, ಸಂತೋಷ್ ಮಾತ್ರಾಡಿ ಹಾಗೂ ಡಾ. ಸದಾನಂದ ಕುಂದರ್ ನೆಲ್ಯಾಡಿ ಆಯ್ಕೆಯಾಗಿದ್ದಾರೆ.

ಕಾರ್ನಾಡು: ಆಶ್ಲೇಷ ಪೂಜೆ

ಮುಲ್ಕಿ: ಕೋಲ್ನಾಡು ಶ್ರೀ ನಾಗದೇವರ ಮತ್ತು ಕೊರಗಜ್ಜ ಪರಿವಾರ ದೈವಗಳ ಜೀರ್ಣೋದ್ಧಾರ ಸಮಿತಿ ಮತ್ತು ಕಾರ್ನಾಡು ಸಣ್ಣ ಕೈಗಾರಿಕೆಗಳ ಸಂಘದ ಆಶ್ರಯದಲ್ಲಿ ಕಾರ್ನಾಡು ಸಣ್ಣ ಕೈಗಾರಿಕೆಗಳ ವಲಯದಲ್ಲಿ ಆರಾಧಿಸಲ್ಪಡುತ್ತಿರುವ ಸ್ವಾಮಿ ಕೊರಗಜ್ಜ ದೈವದ ನೇಮದ ಪೂರ್ವಭಾವಿಯಾಗಿ ಸೋಮವಾರ ನಡೆಯಿತು. ಅರ್ಚಕರಾದ ಲಕ್ಷ್ಮೀಶ ಉಪಾಧ್ಯಾಯ ನೇತೃತ್ವದಲ್ಲಿ ಶ್ರೀ ನಾಗದೇವರಿಗೆ ನವಕ ಪ್ರಧಾನ ಹೋಮ, ಅಶ್ಲೇಷ ಪೂಜೆ, ಪಂಚಾಮೃತ ಅಭಿಷೇಕ ಮತ್ತು ತಂಬಿಲ ಸೇವೆ, ಮಹಾಪೂಜೆ ಪ್ರಸಾದ ವಿತರಣೆ ನಡೆಯಿತು. ಈ ಸಂದರ್ಭ ಕ್ಷೇತ್ರದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಶೇಖರ್ ಸಾಲ್ಯಾನ್, ಸದಸ್ಯರಾದ ಚೇತನ್ ಶೆಟ್ಟಿ ಪ್ರಶಾಂತ್ ಕಾಂಚನ್, ಚೇತನ್ ಕೋಟ್ಯಾನ್ ಕಾರ್ಕಳ, ಗುತ್ತಿನಾರ್ ದಿನೇಶ್ ಹೆಗ್ಡೆ ಮಾನಂಪಾಡಿ, ಮುಲ್ಕಿ ವಿಜಯ ರೈತ ಸೊಸೈಟಿ ಅಧ್ಯಕ್ಷ ರಂಗನಾಥ ಶೆಟ್ಟಿ ಶ್ರೀ ಕೊರಗಜ್ಜ ಕ್ಷೇತ್ರದ ಅರ್ಚಕ ಉಮೇಶ್, ಸಚಿನ್ ಹೆಗ್ಡೆ, ಸಂತೋಷ್ ಕುಮಾರ್ ಶೆಟ್ಟಿ ಅಜಿತ್ ಕುಮಾರ್ ಶೆಟ್ಟಿ, ನವೀನ್ ಭಂಡಾರಿ ಮತ್ತಿತರರು ಉಪಸ್ಥಿತರಿದ್ದರು. ಸಂಜೆ ಕೊರಗಜ್ಜ ದೈವದ ನೇಮ ಮೋತ್ಸವ ನಡೆಯಿತು

ಕೊಡವ ಯುವಕನಿಗೆ ಹಲ್ಲೆ: ಕರವಂಡ ಲವ ನಾಣಯ್ಯ ಖಂಡನೆ

ನಾಪೋಕ್ಲು: ಇತ್ತೀಚೆಗೆ ನಾಪೋಕ್ಲು ಪಟ್ಟಣದಲ್ಲಿ ಅಮಾಯಕ ಕೊಡವ ಯುವಕ ಅಪ್ಪಚ್ಚಿರ ಗೌತಮ್ ಕಾರ್ಯಪ್ಪ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವುದನ್ನು ಬಲ್ಲತ್ ನಾಡ್ ಕೊಡವ ಫಾರ್ಮರ್ಸ್ ಕ್ಲಬ್ ಬಲ್ಲಮಾವಟ್ಟಿ ಖಂಡಿಸಿದೆ.



ಬಲ್ಲತ್ ನಾಡ್ ಕೊಡವ ಫಾರ್ಮರ್ಸ್ ಕ್ಲಬ್ ಬಲ್ಲಮಾವಟ್ಟಿ ಪರವಾಗಿ ಕ್ಲಬ್ ಅಧ್ಯಕ್ಷ ಕರವಂಡ ಲವ ನಾಣಯ್ಯ ಈ ಬಗ್ಗೆ ಹೇಳಿಕೆ ನೀಡಿ ದುಷ್ಕರ್ಮಿಗಳು ನಡೆಸಿದ ಕೋಮು ಹಲ್ಲೆಯನ್ನು ಬಲ್ಲತ್ತನಾಡು ಕೊಡವ ಫಾರ್ಮರ್ಸ್ ಕ್ಲಬ್ ವ್ಯಾಪ್ತಿಗೆ ಒಳಪಡುವ ಬಲ್ಲಮಾವಟಿ, ದೊಡ್ಡಪುಳಿಕೋಟು, ಪೇರೂರು ಗ್ರಾಮಗಳ ಸಮಸ್ತ ಸದಸ್ಯರು ತೀವ್ರವಾಗಿ ಖಂಡಿಸುತ್ತದೆ ಎಂದಿದ್ದಾರೆ. ಇಂತಹ ದುಷ್ಕೃತ್ಯಗಳು ಮುಂದೆ ನಡೆಯದಂತೆ ಪೊಲೀಸ್ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿಸಿಕೊಂಡಿದ್ದಾರೆ. ಇಂತಹ ಹೀನ ಕೃತ್ಯವನ್ನು ಕೊಡವ ಜನಾಂಗ ಇನ್ನು ಮುಂದೆ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದರು.

ಮಾ.14: 'ಫಿಲೋ ಮಿಲನ' ಕಾರ್ಯಕ್ರಮ

ಪುತ್ತೂರು: ನಗರದ ಸಂತ ಫಿಲೋಮಿನಾ ಪದವಿ ಪೂರ್ವ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿಗಳ ಸಮಾಗಮ 'ಫಿಲೋ ಮಿಲನ-2026' ಕಾರ್ಯಕ್ರಮ ಮಾ.14ರಂದು ಕಾಲೇಜಿನ ಪ್ರಾಂಗಣದಲ್ಲಿ ನಡೆಯಲಿದೆ. ಕಾಲೇಜಿನ ಸಂಚಾಲಕ ಫಾ. ಲಾರೆನ್ಸ್ ಮಸ್ಕರೇನಸ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪುತ್ತೂರು ವಕೀಲರ ಸಂಘದ ಅಧ್ಯಕ್ಷ ನ್ಯಾಯವಾದಿ ಜಗನ್ನಾಥ್ ರೈ ಜಿ. ಹಾಗೂ ಪುತ್ತೂರು ಪಡೀಲ್‌ನ ಪ್ರಶಾಂತ್ ಎಂಟರ್ ಪ್ರೈಸಸ್ ಪಾಲುದಾರ ಪ್ರಶಾಂತ್ ಶೆಣೈ, ಗೌರವ ಅತಿಥಿಗಳಾಗಿ ಚರ್ಚ್ ಪಾಲನಾ ಸಮಿತಿಯ ಉಪಾಧ್ಯಕ್ಷ ರೋಶನ್ ಲಸ್ರಾದೋ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮಾ.14: ನಡಿಬೆಟ್ಟು ದೈವಸ್ಥಾನದಲಿ ನೇಮ

ಮುಲ್ಕಿ: ಸಮೀಪದ ಮೊಯ್ಲೊಟ್ಟುವಿನ ನಡಿಬೆಟ್ಟು ಶ್ರೀ ಧೂಮಾವತಿ ದೈವಸ್ಥಾನದಲ್ಲಿ ವರ್ಷಾವಧಿ ನೇಮವು ಮಾ.14ರಂದು ನಡೆಯಲಿದೆ. ಮಾ.13ಕ್ಕೆ ರಾತ್ರಿ ಭಂಡಾರ ಇಳಿದು ಅನ್ನ ಸಂತರ್ಪಣೆ, ಮಾ.14ಕ್ಕೆ ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಲಿದೆ. ರಾತ್ರಿ ಶ್ರೀ ಧೂಮಾವತಿ ದೈವದ ನೇಮ ಹಾಗೂ ಮಾ.15ಕ್ಕೆ ಮಧ್ಯಾಹ್ನ ಪಿರಿಯುದ ಬಲಿ ಜರಗಲಿದೆಯೆಂದು ಪ್ರಕಟಣೆ ತಿಳಿಸಿದೆ.

ಸಂಪೂರ್ಣ ಶಿಲಾಮಯದಿಂದ ನವೀಕರಣಗೊಂಡ ಆಲಂಕಾರು ಗ್ರಾಮದ ಪುರಾತನ ದೇವಸ್ಥಾನ


ಬ್ರಹ್ಮಕಲಶೋತ್ಸವದ ಸಂಭ್ರಮದಲ್ಲಿದೆ ಶರವೂರು ಶ್ರೀಕ್ಷೇತ್ರ

■ ಸಾಕ್ಷಿ ಆಲಂಕಾರು

ಆಲಂಕಾರು: ಕಡಬ ತಾಲೂಕು ಆಲಂಕಾರು ಗ್ರಾಮದ ಅತೀ ಪುರಾತನವಾದ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯವು ಸಂಪೂರ್ಣ ಶಿಲಾಮಯವಾಗಿ ನವೀಕರಣಗೊಂಡು ಪುನಃ ಪ್ರತಿಷ್ಠಾಬಂಧ ಬ್ರಹ್ಮಕಲಶೋತ್ಸವದ ಸಂಭ್ರಮದಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕು ಆಲಂಕಾರು ಗ್ರಾಮದ ಕೇಂದ್ರದ ದಕ್ಷಿಣಕ್ಕಿರುವ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯ ಆಲಂಕಾರು.

ಕುಂತೂರು, ಪೆರಾಬೆ, ಹಳೆನೇರಂಕಿ, ಬಲ್ಯ ಗ್ರಾಮಗಳನ್ನು ಒಳಗೊಂಡ ಈ ಸೀಮೆಯ ದೇವಾಲಯ. ಕುಮಾರಧಾರ ನದಿಯ ತಟದಿಂದ ಎರಡು ಕಿ.ಮೀ ಅಂತರದಲ್ಲಿ ಸುತ್ತಲು ವನಗಳಿಂದ ಆವೃತ್ತವಾದ ಈ ದೇವಾಲಯದಲ್ಲಿ ಭಕ್ತರ ಅಭೀಷ್ಟವನ್ನು ಈಡೇರಿಸುವ ಶೂಲಿನಿಯಾಗಿ ನೆಲೆಯಾಗಿ ನಿಂತಿರುವ ದೇವಿಯಾಗಿದೆ. ಪಾಂಡವರ ವನವಾಸದ ಅಂತ್ಯದಲ್ಲಿ ಈ ಸ್ಥಳಕ್ಕೆ ಬಂದಿದ್ದರು. ಆ ಸಮಯದಲ್ಲಿ ಪಾಂಡವರ ಪುರೋಹಿತರಾದ ದೌಮ್ಯ ಮಹರ್ಷಿಗಳಿಗೆ ಇಲ್ಲಿನ ಸರೋವರದಲ್ಲಿ ದೇವಿಯ ಸಾಕ್ಷಾತ್ಕಾರವಾಗಿ ದೇವಿಯನ್ನು ಸರೋವರದಲ್ಲಿ ಪ್ರತಿಷ್ಠಾಪಿಸಿ ಆರಾಧನೆ ಮಾಡಿದರ ಪರಿಣಾಮ ಈ ಸ್ಥಳಕ್ಕೆ ಶರವೂರು ಎಂಬ ಹೆಸರು ಬಂದಿದೆ ಎಂಬ ನಂಬಿಕೆ. ಇನ್ನೊಂದು ಮೂಲದ ಪ್ರಕಾರ ಸದಾ ನೀರಿನ ಬುಗ್ಗೆ ಇರುವ ಪ್ರದೇಶದಲ್ಲಿ ದೇವಿಯ ಪ್ರತಿಷ್ಠೆಯಾಗಿರುವುದರಿಂದ ಈ ಸ್ಥಳಕ್ಕೆ ಸುರಃಪುರ, ಸರೋವರ-ಶರವೂರು ಎಂಬ ಹೆಸರು ಬಂದಿದೆ ಎನ್ನಲಾಗಿದೆ.

ದ.ಕ. ಜಿಲ್ಲೆಯಲ್ಲೆ ವಿರಳ ಹಾಗೂ ವಿಶಿಷ್ಟವಾದ ದ್ವಿಬಾಹುಯುಕ್ತ ಶೂಲಿ, ಪ್ರಧಾನ ಆಯುಧವಾಗಿ ಬಲಗೈಯಲ್ಲಿ ಶೂಲವನ್ನು, ಎಡ ಕೈಯಲ್ಲಿ ಪದ್ಮವನ್ನು, ಶಿರೋಭೂಷಣವನ್ನು ಧರಿಸಿರುವ ದೇವಿಯ ಕ್ಷೇತ್ರವಾಗಿದೆ. ಶಿಲ್ಪಕಲೆ ದೃಷ್ಟಿಯಿಂದಲೂ ಜೀವಂತಿಕೆಯಿಂದ ಕೂಡಿದ್ದು ಕ್ಷಣಕ್ಷಣಕ್ಕೂ ಭ್ರಮೆ ಹುಟ್ಟಿಸುವ ಮುಖಚರ್ಯೆ ಇಲ್ಲಿನ ಶಿಲಾ ಮೂರ್ತಿಯ ವೈಶಿಷ್ಟ್ಯ ಪುರಾಣ ದೇವತಾಖ್ಯಾನದ ಮೇಲೆ ವಿಶ್ಲೇಷಿಸಿದ್ದರೆ, ಈ ಮೂರ್ತಿ ಸಪ್ತ ಮಾತೃಕೆಯರಲ್ಲಿ ಒಬ್ಬಳಾದ ಕೌಮಾರಿಯ ಅಧಿಕಾಂಶವನ್ನು ವ್ಯಕ್ತಪಡಿಸುವ ಶೂಲಿನಿ ಎನ್ನಬೇಕಾಗುತ್ತದೆ, ಕ್ರಿ.ಶ. 12ನೇ ಶತಮಾನದಲ್ಲಿ ಶರವೂರು ದೇವಾಲಯದ ಕೌಮಾರಿ ಸ್ವರೂಪಿ ಶೂಲಿನಿಯು ಪ್ರತಿಷ್ಠೆಯಾಗಿದೆ ಎನ್ನಬಹುದಾಗಿದೆ. ಈ ವಿಚಾರವನ್ನು ಸಮರ್ಥಿಸಲು ಸಿಗುವ ಕೆಲವೊಂದು ನಿದರ್ಶನಗಳಿವೆ. ಸುಳ್ಯ ತಾಲೂಕು ಬೆಳ್ಳಾರೆ ಸಮೀಪ ಇರುವ ಪೆರುವಾಜೆ ಶ್ರೀ ಜಲದುರ್ಗಾದೇವಿ ಹಾಗೂ ಎಡಮಂಗಲ ಸಮೀಪ ಇರುವ ಕೇರ್ಪಟ ಶ್ರೀ ವನದುರ್ಗಾದೇವಿ ಮತ್ತು ಶರವೂರು ಶೂಲಿನಿ ಅಕ್ಕತಂಗಿಯರು ಎಂಬ ಪ್ರತೀತಿ ಇತಿಹಾಸಗಳಿಂದ ತಿಳಿದು ಬರುತ್ತದೆ. ಶರವೂರು ದೇವಿಯ ಜಾತ್ರೆ ಹಾಗೂ ಪೆರುವಾಜೆ ಮತ್ತು ಕೇರ್ಪಡ ದೇವಿಯ ಜಾತ್ರೆಯು ಏಕಕಾಲದಲ್ಲಿ ಮೀನ ಸಂಕ್ರಮಣದಂದು ಆರಂಭವಾಗುತ್ತಿತ್ತು. ಹಾಗೂ ಶಾಂತಿಮೊಗರು ಕುಮಾರಧಾರ ನದಿಯಲ್ಲಿ ಅವಭೃತ ದಿನ ಒಟ್ಟು ಸೇರುತ್ತಿದ್ದರು ಎಂಬ ಅಂಬೋಣವಾಗಿದೆ.



ಕಾರಣಿಕ ಕ್ಷೇತ್ರ

ಶರವೂರು ಕ್ಷೇತ್ರವು ಭಾರಿ ಕಾರಣಿಕದ ಕ್ಷೇತ್ರವಾಗಿದೆ. ಶೂಲ ಮತ್ತು ಪದ್ಮವನ್ನು ಧರಿಸಿದ ಎರಡು ಕೈಗಳ ದುರ್ಗೆ ಇರುವುದು ಈ ಕ್ಷೇತ್ರದ ವಿಶೇಷತೆಯಾಗಿದೆ. ಒಂದು ಕೈಯಲ್ಲಿ ಶೂಲವನ್ನು ಹಿಡಿದುಕೊಂಡು ದುಷ್ಟರಿಗೆ ತಾನು ಶೂಲದಲ್ಲಿ ಉತ್ತರಿಸುವೆ ಸಜ್ಜನರನ್ನು ಪದ್ಮದಂತೆ ಕೋಮಲತೆಯಿಂದ ಸಲಹುವೆ ಎಂಬುವುದನ್ನು ಸೂಚಿಸುತ್ತದೆ. ನಾನು ನನ್ನದು ನನ್ನಿಂದಾದು ಎಂದು ಅಹಂಕಾರದಿಂದ ಮೆರೆದಾಡಿದವರನ್ನು ಸುದ್ದಿಯಿಲ್ಲದೆ ಸದ್ದಡಗಿಸಿದ ಹಲವು ನಿದರ್ಶನಗಳು ದೇವಿಯ ಸೀಮೆಯಲ್ಲಿ ಘಟಿಸಿವೆ.

ಸಂತಾನ ಭಾಗ್ಯ

ಕ್ಷೇತ್ರದಲ್ಲಿ ಬಂದು ನೀರಿಗಾಗಿ ಗಂಗಾ ದೇವಿ ರಂಗ ಪೂಜೆ ಅಥವಾ ತಂಬಿಲ ಸೇವೆಯನ್ನು ನೀಡುವುದಾಗಿ ಪ್ರಾರ್ಥಿಸಿದರೆ ನೀರು ಪ್ರಾಪ್ತಿಯಾಗುವುದು. ಕಂಕಣ ಭಾಗ್ಯಕ್ಕಾಗಿ ದೇವಿಗೆ ಸೇವೆಯನ್ನು ನೀಡುವುದಾಗಿ ಹರಿಕೆ ಮಾಡಿದಲ್ಲಿ ಕಂಕಣ ಭಾಗ್ಯ ಕೂಡಿ ಬರುವುದು. ಸಂತಾನ ಪ್ರಾಪ್ತಿಗೆ ತೊಟ್ಟಿಲ ಮಗು (ಬೆಳ್ಳಿಯ ತೊಟ್ಟಿಲು ಚಿನ್ನದ ಮಗು) ಸೇವೆಯನ್ನು ನೀಡುವುದಾಗಿ ಪ್ರಾರ್ಥಿಸಿದರೆ ವರುಷ ಕಳೆಯುವುದರೊಳಗೆ ತಾಯಿ ಸಂತಾನ ಭಾಗ್ಯ ಕರುಣಿಸುವುದು ಕ್ಷೇತ್ರದ ವಿಶೇಷತೆಯಾಗಿದೆ.

ಕ್ಷೇತ್ರದ ಸಾನಿಧ್ಯಗಳು, ಸೇವೆಗಳು

ಕ್ಷೇತ್ರದಲ್ಲಿ ದುರ್ಗಾಪರಮೇಶ್ವರೀ ದೇವಿ ಮೂಲ ಆರಾಧನಾ ದೇವಿಯಾಗಿದ್ದು ಇದರೊಂದಿಗೆ ಮಹಾಗಣಪತಿ, ಲಕ್ಷ್ಮೀನಾರಾಯಣ, ಚಾಮುಂಡಿ, ಗಂಗಾದೇವಿ, ನಾಗಸಾನಿಧ್ಯ, ಭದ್ರಕಾಳಿ, ಗುಳಿಗ, ಅರಸು ಉಳ್ಳಾಯ, ರಕ್ತೇಶ್ವರೀ, ಧೂಮಾವತಿ, ಧೂಮಾವತಿ ಬಂಟ, ಕೊಡಮಣಿತ್ತಾಯ, ಮಹಿಷಂತಾಯ ಮುಂತಾದ ಸಾನಿಧ್ಯಗಳಿದ್ದು ಮಕರ ಸಂಕ್ರಾತಿಗೆ ದೊಡ್ಡ ರಂಗಪೂಜೆ, ಸತ್ಯನಾರಾಯಣ ಪೂಜೆ, ಮೀನ ಸಂಕ್ರಮಣದಂದು (ಮಾ.14) ವಾರ್ಷಿಕ ಜಾತ್ರೋತ್ಸವದ ಧ್ವಜಾರೋಹಣ, ಮಾ.21 ದರ್ಶನ ಬಲಿ, 22ಕ್ಕೆ ಮಹಾರಥೋತ್ಸವ ಮಾ.24ಕ್ಕೆ ಭದ್ರಕಾಳಿ ಅಮ್ಮನ ಪೂಜೆ, ವಿಷು ಹಾಗೂ ಪತ್ತನಾಜೆ ದಿನದಂದು ವಸಂತ ಪೂಜೆ, ನವರಾತ್ರಿ ಪೂಜೆಗಳು ಹಾಗೂ ದೀಪಾವಳಿಯ ದಿನದಂದು ರಂಗ ಪೂಜೆ ಮತ್ತು ಸಂಕ್ರಾತಿ ವಿಶೇಷ ಪೂಜಾ ಸೇವೆಗಳು ಕ್ಷೇತ್ರದಲ್ಲಿ ನಡೆಯುತ್ತದೆ. ಅಷ್ಟಮಂಗಲ ಪ್ರಶ್ನೆಯಲ್ಲಿ ಶರವೂರು ದೇವಿಯ ಕ್ಷೇತ್ರವನ್ನು ನವೀಕರಣಗೊಂಡು ಪುನರ್ ಪ್ರತಿಷ್ಠಾಬಂಧ ಬ್ರಹ್ಮಕಲಶೋತ್ಸವ ನಡೆಸಬೇಕೆಂದು ತಿಳಿದು ಬಂದ ಹಿನ್ನೆಲೆಯಲ್ಲಿ ಈ ಮಹತ್ವದ ಕಾರ್ಯಕ್ಕೆ ಇಳಿದಿದ್ದೇವೆ. ಇದರೊಂದಿಗೆ ಗಂಗಾ ದೇವಿ, ಮೊಗೇರ ದೈವ, ಕೊರಗಜ್ಜನ ಕಟ್ಟೆ ಸೇರಿದಂತೆ ಅತಿಥಿ ಗೃಹ ರಾಜಗೋಪುರ, ಸ್ವಾಗತ ಗೋಪುರ ನಿರ್ಮಾಣದ ಜೊತೆಗೆ ಇನ್ನಿತರ ಮೂಲಭೂತ ಸೌಕರ್ಯಗಳ ಕಾಮಗಾರಿಗಳು ನಡೆಯುತ್ತಿವೆ. ಕೇವಲ 2 ವರ್ಷಗಳ ಅಂತರದಲ್ಲಿ ಸುಮಾರು ರೂ.10 ಕೋಟಿ ವೆಚ್ಚದಲ್ಲಿ ಸಂಪೂರ್ಣ ಶಿಲಾಮಯ ದೇವಾಲಯವಾಗಿ ನಿರ್ಮಾಣವಾಗಿದೆ. ಅಲ್ಲದೆ, ದ.ಕ. ಜಿಲ್ಲೆಯಲ್ಲೇ 2ನೇ ಏಕಶಿಲಾ ಧ್ವಜಸ್ತಂಭದ ದೇವಾಲಯ ಇದಾಗಿದ್ದು?, ಇದೀಗ ಬ್ರಹ್ಮಕಲಶೋತ್ಸವಕ್ಕೆ ಸಿದ್ಧವಾಗಿ ನಿಂತಿದೆ ಎಂದು ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಾ. ಹೇಮಂತ್ ರೈ ಮನವಳಿಕೆಗುತ್ತು ತಿಳಿಸಿದ್ದಾರೆ.

ಶರವೂರು ದೇವಾಲಯದಲ್ಲಿ ಇದೀಗ ಇರುವ ದೇವಿಯ ಮೂರ್ತಿಯು ಒಂದು ಸಾವಿರ ವರ್ಷಗಳ ಹಳೆಯದಾದ ಮೂರ್ತಿಯಾಗಿದೆ ಎಂದು ತಜ್ಞರ ಅಭಿಪ್ರಾಯವಾಗಿದೆ. 2007ರಲ್ಲಿ ಬ್ರಹ್ಮಕಲಶೋತ್ಸವ ನಡೆದಿತ್ತು. 19 ವರ್ಷಗಳ ಬಳಿಕ ಇದೀಗ ಸಂಪೂರ್ಣ ಶಿಲಾಮಯ ದೇವಾಲಯದ ಬ್ರಹ್ಮಕಲಶೋತ್ಸವ ನಡೆಯುತ್ತಿದೆ. ಸುಮಾರು 400 ವರ್ಷಗಳ ಹಿಂದೆ ನಿರ್ಮಾಣವಾದ ಗರ್ಭಗುಡಿಯನ್ನು ಸೀಮೆಯ ಭಕ್ತರ ಆಶಯದಂತೆ ಮತ್ತು ಸಂಪೂರ್ಣ ಸಹಕಾರದೊಂದಿಗೆ ನವೀಕರಿಸಿ ಗರ್ಭಗುಡಿಯನ್ನು ನಿರ್ಮಿಸಲಾಗಿದೆ. ದೇವಾಲಯದ ಕಾಮಗಾರಿಗಳು ಅಂತಿಮ ಹಂತದಲಿದ್ದು, ಮಾ.25ರಿಂದ ಬ್ರಹ್ಮಕಲಶೋತ್ಸವ ಆರಂಭಗೊಂಡು ಏ.2ರವರಗೆ ನಡೆಯಲಿದೆ. ಏ.3ರಿಂದ ಏ.13ರವರೆಗೆ ಕ್ಷೇತ್ರದ ವಾರ್ಷಿಕ ಜಾತ್ರಾ ಮಹೋತ್ಸವ ನಡೆಯಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಎಂ. ಗೋಪಾಲಕೃಷ್ಣ ಪಡ್ಡಿಲ್ಲಾಯ ಹೇಳಿದ್ದಾರೆ.

ಕಲ್ಕೂರ ಪ್ರತಿಷ್ಠಾನದಿಂದ ಮೋಹನ ಕಲ್ಲೂರಾಯ, ನಾಗೇಶ್‌ಗೆ ಸನ್ಮಾನ

ಮಂಗಳೂರು: ಕರ್ನಾಟಕ ಸಂಗೀತ ಅಕಾಡೆಮಿಯಿಂದ ನೀಡಲಾಗುವ 2025-26ನೇ ಸಾಲಿನ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿಗೆ ಆಯ್ಕೆಯಾಗಿರುವ ಹಿರಿಯ ಗಮಕಿ ಮಧೂರು ಮೋಹನ ಕಲ್ಲೂರಾಯ ಹಾಗೂ ಅದೇ ವಿಭಾಗದ ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿರುವ ಹೆಸರಾಂತ ನಾದಸ್ವರ ವಾದಕ ನಾಗೇಶ್ ಎ.ಬಪ್ಪನಾಡು ಅವರಿಂದಾಗಿ ತುಳುನಾಡಿನ ಶ್ರೇಷ್ಠ ಕಲೆಗಳಿಗೆ ಗೌರವ ಸಂದಾಯವಾದಂತಾಗಿದೆ ಎಂದು ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಹಾಗೂ ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಎಸ್.ಪ್ರದೀಪ ಕುಮಾರ ಕಲ್ಕೂರ ಹೇಳಿದರು.

ಕರ್ನಾಟಕ ಕಲಾಶ್ರೀ ಪ್ರಶಸ್ತಿಗೆ ಆಯ್ಕೆಯಾಗಿರುವ ಮಧೂರು ಮೋಹನ ಕಲ್ಲೂರಾಯ ಹಾಗೂ ನಾದಸ್ವರ ವಾದಕ ನಾಗೇಶ್ ಎ.ಬಪ್ಪನಾಡು ಅವರನ್ನು ಕಲ್ಕೂರ ಪ್ರತಿಷ್ಠಾನದಿಂದ ಪ್ರತಿಷ್ಠಾನದ ಕಚೇರಿಯಲ್ಲಿ ಮಂಗಳವಾರ ಅಭಿನಂದಿಸಿ ಗೌರವಿಸಲಾಯಿತು.



ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ರಾಜ್ಯಾಧ್ಯಕ್ಷ ಡಾ. ಹರಿಕೃಷ್ಣ ಪುನರೂರು ಮಾತನಾಡಿ, ಈ ಇಬ್ಬರೂ ಕಲಾವಿದರು ತಮ್ಮ ಕಲಾ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆ ಇತರ ಕಲಾವಿದರಿಗೂ ಪ್ರೇರಣೆ ನೀಡುವಂತಾಗಲೆಂದು ಹಾರೈಸಿದರು. ಪ್ರಮುಖರಾದ ಪೊಳಲಿ ನಿತ್ಯಾನಂದ ಕಾರಂತ, ಪ್ರೊ.ಜಿ.ಕೆ. ಭಟ್ ಸೇರಾಜೆ, ನಿತ್ಯಾನಂದ ರಾವ್ ಸುರತ್ಕಲ್, ತಮ್ಮ ಲಕ್ಷ್ಮಣ್, ಎ.ಆರ್. ಸುಬ್ಬಯ್ಯಕಟ್ಟೆ ಜನಾರ್ದನ ಹಂದೆ, ಬಾಲಕೃಷ್ಣ ಐತಾಳ್, ಪೂರ್ಣಿಮಾ ರಾವ್ ಪೇಜಾವರ, ಗೀತಾ ಸರಳಾಯ, ಶಶಿಪ್ರಭಾ ಐತಾಳ್, ಸುಮಾ ಪ್ರಸಾದ್ ಸಹಿತ ಅನೇಕರು ಉಪಸ್ಥಿತರಿದ್ದರು. ಡಾ.ಮಂಜುಳಾ ಶೆಟ್ಟಿ ನಿರೂಪಿಸಿದರು. ರವಿ ಅಲೆವೂರಾಯ ವಂದಿಸಿದರು.

ನರೇಗಾ ಯೋಜನೆಯಲ್ಲಿ ಹಣ ಲೂಟಿ: ಆರೋಪ

ಉಪ್ಪುಂದ: ಕಂಬದಕೋಣೆ ಗ್ರಾಮ ಪಂಚಾಯತ್‌ನಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆಯಾಗುತ್ತಿದ್ದು, ಬಡವರ ಹಿತ ಕಾಯಬೇಕಾದವರೇ ಲೂಟಿಕೋರರಾಗಿ ಮಾರ್ಪಟ್ಟಿದ್ದಾರೆ. ಸಂಘಟನೆಯು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದ ದಾಖಲೆಗಳು ಪಂಚಾಯತ್ ಆಡಳಿತದ ಭ್ರಷ್ಟ ಮುಖವನ್ನು ಬಯಲು ಮಾಡಿದೆ ಎಂದು ಕಂಬದಕೋಣೆ ಸಮಾಜಕೀಯ ಸೇನೆ ಪ್ರಮುಖ ವೇದನಾಥ ಶೆಟ್ಟಿ ಹೇರಂಜಾಲು ಹೇಳಿದರು.

ಅವರು ಬೈಂದೂರು ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನರೇಗಾ ಯೋಜನೆಯಲ್ಲಿ ಸ್ವತಃ ಪಂಚಾಯತ್ ಅಧ್ಯಕ್ಷರೇ ಬಡವರ ಹೆಸರಿನಲ್ಲಿ ಕೂಲಿ ಹಣವನ್ನು ಕಾನೂನು ಬಾಹಿರವಾಗಿ ಪಡೆಯುತಿದ್ದಾರೆ. ಬಡವರ ಹೊಟ್ಟೆ ಮೇಲೆ ಹೊಡೆದು ತಮ್ಮ ಖಾತೆಗೆ ಹಣ ಸೇರುತ್ತಿರುವುದು ಅಕ್ಷಮ್ಯ ಅಪರಾಧವಾಗಿದೆ ಎಂದರು.

ತುರ್ತು ಕಾಮಗಾರಿ ಎಂಬ ಹಣೆಪಟ್ಟಿ ಹಚ್ಚಿ ಟೆಂಡರ್ ಪ್ರಕ್ರಿಯೆಯನ್ನು ಗಾಳಿಗೆ ತೂರಿ ಜನರ ಹಕ್ಕಿನ ಹಣದ ಕಿಕ್‌ಬ್ಯಾಕ್ ಪಡೆಯಲಾಗಿದೆ. ಕೇವಲ ಕಾಗದದ ಮೇಲೆ ಬಿಲ್ ಸೃಷ್ಟಿಸಿ ಹಣವನ್ನು ಲೂಟಿ ಮಾಡಲಾಗಿದೆ. ಇದು ನೇರವಾಗಿ ಸಾರ್ವಜನಿಕ ಹಣದ ಸುಲಿಗೆಯಾಗಿದೆ. ಮಾರಕವಾಗಿರುವ ಅವೈಜ್ಞಾನಿಕ ಗುಡೇಮಹಾಲಿಂಗೇಶ್ವರ ಏತ ನೀರಾವರಿ ಯೋಜನೆಯ ವಿರುದ್ಧ ನಾವು ಸುದೀರ್ಘ ಹೋರಾಟ ಮಾಡಿದ್ದೇವೆ. ಆದರೆ ನಮ್ಮ ನೋವಿಗೆ ಯಾರೂ ಸ್ಪಂದಿಸುತ್ತಿಲ್ಲ ಎಂದರು. ರೈತರ ಒಕ್ಕೂಟದ ಅಧ್ಯಕ್ಷೆ ಜಯಂತಿ ಐತಾಳ್, ಸಮಾಜಕೀಯ ಸೇನೆಯ ಕೃಷ್ಣ ಪೂಜಾರಿ ಹಿತ್ಲುಮನೆ, ರಾಘವೇಂದ್ರ, ಮಣಿರಾಜ ಪೂಜಾರಿ ಹೇರಂಜಾಲು, ಶ್ರೀಕಾಂತ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಭಟ್ನಗರ-ಚೆಂಬುಗುಡ್ಡೆ ರುದ್ರಭೂಮಿ ರಸ್ತೆ ಮರು ಡಾಮರೀಕರಣಕ್ಕೆ ಶಿಲಾನ್ಯಾಸ



ಉಳ್ಳಾಲ: ಮುಖ್ಯಮಂತ್ರಿಯ ಅಮೃತ ನಗರೋತ್ಥಾನ-4 ಯೋಜನೆಯಡಿ ಉಳ್ಳಾಲ ನಗರಸಭಾ ವ್ಯಾಪ್ತಿಯ ಭಟ್ನಗರ-ಚೆಂಬುಗುಡ್ಡೆ ಹಿಂದೂ ರುದ್ರಭೂಮಿ ಸಂಪರ್ಕ ರಸ್ತೆಯ ಮರು ಡಾಮರೀಕರಣ ಕಾಮಗಾರಿಗೆ ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಶಿಲಾನ್ಯಾಸ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು ರಾಷ್ಟ್ರೀಯ ಹೆದ್ದಾರಿ 66ರ ಭಟ್ನಗರದಿಂದ ಚೆಂಬುಗುಡ್ಡೆ ಮುಖ್ಯರಸ್ತೆಗೆ ಸಂಪರ್ಕ ಹೊಂದಿರುವ ಈ ರಸ್ತೆಗೆ ನಾಲ್ಕು ವರ್ಷಗಳ ಹಿಂದೆಯಷ್ಟೇ ಡಾಮರು ಹಾಕಲಾಗಿತ್ತು. ಅತಿಯಾದ ವಾಹನ ಸಂಚಾರದ ಹಿನ್ನೆಲೆಯಲ್ಲಿ ರಸ್ತೆ ಹಾಳಾಗಿದ್ದು, ಈಗ ಈ ರಸ್ತೆಗೆ ಮರು ಡಾಮಾರೀಕರಣ ನಡೆಸಲಾಗುತ್ತಿದೆಯೆಂದರು. ಉಳ್ಳಾಲ ನಗರಸಭಾ ವ್ಯಾಪ್ತಿಯ ಬಹುತೇಕ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದರು.

ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರಾದ ಸುರೇಶ್ ಭಟ್ನಗರ, ಏಕಲವ್ಯ ಪ್ರಶಸ್ತಿ ಪುರಸ್ಕೃತ ದೇಹಧಾರ್ಢ್ಯ ಪಟು ಭಾಸ್ಕರ ತೊಕ್ಕೊಟ್ಟು, ಉಳ್ಳಾಲ ಬ್ಲಾಕ್ ಕಾಂಗ್ರೆಸ್‌ನ ಕಾರ್ಯದರ್ಶಿ ಮನ್ಸೂರ್ ಮಂಚಿಲ, ನಗರಸಭೆಯ ಮಾಜಿ ಅಧ್ಯಕ್ಷ ಶಶಿಕಲಾ, ಮಾಜಿ ಸದಸ್ಯರಾದ ದಿನೇಶ್ ರೈ, ವೀಣಾ ಡಿಸೋಜ, ದಮಯಂತಿ, ಚಂದ್ರ ತೊಕ್ಕೊಟ್ಟು, ತಾ.ಪಂ. ಮಾಜಿ ಸದಸ್ಯೆ ಸುರೇಖಾ ಚಂದ್ರಹಾಸ, ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರಾದ ವಿವೇಕಾನಂದ ಸನಿಲ್, ಉಳ್ಳಾಲ ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಅಮಿತಾ ಅಶ್ವಿನ್, ಕಾಂಗ್ರೆಸ್ ಜಿಲ್ಲಾ ವಕ್ತಾರ ದಿನೇಶ್ ಕುಂಪಲ,ಮುಖಂಡರಾದ ದೇವಕಿ ಉಳ್ಳಾಲ್, ಸ್ಥಳೀಯರಾದ ಸಂತೋಷ್ ಚೆಂಬುಗುಡ್ಡೆ,ಆನಂದ ಭಟ್ನಗರ ಇದ್ದರು.

ಮಹಿಳಾ ಸಭಾದಲ್ಲಿ ಮಹಿಳಾ ದಿನಾಚರಣೆ



ಮಂಗಳೂರು: ಪ್ರತಿಯೊಬ್ಬ ಮಹಿಳೆಯರೂ ಸ್ವಾವಲಂಬಿಗಳಾಗುವುದರೊಂದಿಗೆ ಆತ್ಮ ವಿಶ್ವಾಸದಿಂದ ಮುನ್ನಡೆಯಬೇಕು ಎಂದು ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಶಾರಿಕಾ ರೈ ಹೇಳಿದರು.

ಮಂಗಳೂರಿನ ಮಹಿಳಾ ಸಭಾದಲ್ಲಿ ನಡೆದ ವಿಶ್ವ ಮಹಿಳಾ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಧ್ಯಕ್ಷೆ ವಿಜಯಲಕ್ಷ್ಮಿ ಭಟ್ ಉಳುವಾನ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ರೇಣು ಗಜೇಂದ್ರ, ಜೊತೆ ಕಾರ್ಯದರ್ಶಿ ರೂಪಕಲಾ ಆಳ್ವ, ಪ್ರಮುಖರಾದ ರಾಜಿ ಭಟ್, ಶೋಭಾ ಎಂತಟ್ ಇದ್ದರು.

ಧರ್ಮಸ್ಥಳ ಯೋಜನೆಯಿಂದ ಮಹಿಳಾ ದಿನಾಚರಣೆ



ಕೋಟ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಪಾಂಡೇಶ್ವರ ವಲಯದ ಸಾಸ್ತಾನ ಕಾರ್ಯಕ್ಷೇತ್ರದ ವಿಕಾಸ ಜ್ಞಾನವಿಕಾಸ ಕೇಂದ್ರದಲ್ಲಿ ಮಹಿಳಾ ದಿನಾಚರಣೆಯನ್ನು ಕೃಷಿ ವಿಜ್ಞಾನ ಕೇಂದ್ರ ಸಹಯೋಗದೊಂದಿಗೆ ಸಾಸ್ತಾನದ ವಿದ್ಯೋದಯ ಶಾಲೆಯಲ್ಲಿ ಆಚರಿಸಲಾಯಿತು. ಆಶಾ ಕಾರ್ಯಕರ್ತರನ್ನು, ಸ್ವಉದ್ಯೋಗಿ 10 ಮಂದಿ ಸದಸ್ಯರನ್ನು ಸನ್ಮಾನಿಸಲಾಯಿತು. ಡಾ. ಧನಂಜಯ್, ಸುಶೀಲ ಇದ್ದರು. ಪುಷ್ಪಲತಾ ನಿರೂಪಿಸಿದರು. ಶೋಭಾ ಸ್ವಾಗತಿಸಿ, ಆಶಾ ವಂದಿಸಿದರು.



ಮಹಿಳಾ ದಿನಾಚರಣೆ ಅಂಗವಾಗಿ ಮಂಜೇಶ್ವರ ತಾಲೂಕಿನ ಪಾತೂರು ಬಾಕ್ರಬೈಲು ಎಯುಪಿ ಶಾಲೆಯಲ್ಲಿ ಕಳೆದ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಮೀರಾ ಹಾಗೂ ಆಶಾ ಅವರನ್ನು ಶಾಲಾ ಪ್ರಬಂಧಕಿ ರಮ್ಯ ನಾವಡ ಹಾಗೂ ಅಧ್ಯಾಪಕ ವೃಂದ ಗೌರವಿಸಿದರು.



ಮುಲ್ಕಿ ಕಾರ್ನಾಡು ಶ್ರೀ ಧರ್ಮ ದೈವಸ್ಥಾನದಲ್ಲಿ ವರ್ಷಾವಧಿ ನೇಮದ ಅಂಗವಾಗಿ ಭಾನುವಾರ ಬೆಳಿಗ್ಗೆ ತೋರಣ ಮುಹೂರ್ತ, ಮಾಗಂದಡಿ ಭಂಡಾರ ಮನೆಯಿಂದ ಶ್ರೀ ಧರ್ಮ ದೈವಗಳ ಭಂಡಾರ ಹೊರಟು ಮಧ್ಯಾಹ್ನ ಧ್ವಜಾರೋಹಣ ಅನ್ನಸಂತರ್ಪಣೆ, ನಡೆಯಿತು. ಸಂಜೆ ಶ್ರೀ ಉಳ್ಳಾಯ ದೈವದ ನೇಮ, ರಾತ್ರಿ ಶ್ರೀ ಧೂಮಾವತಿ ದೈವದ ನೇಮ ನಡೆಯಿತು. ಈ ಸಂದರ್ಭ ದೈವಸ್ಥಾನದ ಆಡಳಿತ ಮೊಕ್ತೇಸರ ಎಂ.ಎಚ್. ಅರವಿಂದ ಪೂಂಜಾ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕೊಡವ ಹೆರಿಟೇಜ್ ಸೆಂಟರ್-ಸುವರ್ಣ ಸಮುಚ್ಛಯ ಭವನ ಕಾಮಗಾರಿ ವೀಕ್ಷಿಸಿದ ಕೊಡಗು ಡಿಸಿ ಸೋಮಶೇಖರ್

ಒಂದೇ ಬಾರಿ ಅಂದಾಜು ಪಟ್ಟಿ ಸಲ್ಲಿಸಿ ಹಣ ಬಿಡುಗಡೆ ಮಾಡಲು ಸೂಚನೆ

ಮಡಿಕೇರಿ: ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಕೊಡವ ಪಾರಂಪರಿಕ ಕೇಂದ್ರ (ಕೊಡವ ಹೆರಿಟೇಜ್ ಸೆಂಟರ್) ಹಾಗೂ ಕರ್ನಾಟಕ ಸುವರ್ಣ ಸಮುಚ್ಚಯ ಭವನ ಕಟ್ಟಡ ಕಾಮಗಾರಿಯನ್ನು ಜಿಲ್ಲಾಧಿಕಾರಿ ಎಸ್. ಜೆ. ಸೋಮಶೇಖರ್ ಅವರು ಮಂಗಳವಾರ ಭೇಟಿ ನೀಡಿ, ವೀಕ್ಷಿಸಿದರು.

ಕೊಡವ ಹೆರಿಟೇಜ್ ಸೆಂಟರ್‌ಗೆ ಭೇಟಿ ನೀಡಿ ಪರಿಶೀಲಿಸಿದ ಜಿಲ್ಲಾಧಿಕಾರಿಯವರು, ಕಟ್ಟಡದ ಒಳಾಂಗಣ ಹಾಗೂ ಹೊರಾಂಗಣ ಅಭಿವೃದ್ಧಿ ಸೇರಿದಂತೆ ಎಲ್ಲಾ ಕಾಮಗಾರಿಗೆ ಒಂದೇ ಬಾರಿ ಅಂದಾಜು ಪಟ್ಟಿ ಸಲ್ಲಿಸಿ ಹಣ ಬಿಡುಗಡೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಐನ್‌ಮನೆ ಮಾದರಿಯಲ್ಲಿ ಕೊಡವ ಹೆರಿಟೇಜ್ ಸೆಂಟರ್'ನ್ನು ನಿರ್ಮಿಸಲಾಗಿದೆ. ಕೊಡಗು ಜಿಲ್ಲೆಯಲ್ಲಿ ಐನ್‌ಮನೆಯು ಪೂಜ್ಯ ಸ್ಥಾನವನ್ನು ಹೊಂದಿದೆ. ಕೊಡವ ಸಂಸ್ಕೃತಿ ಮತ್ತು ಪರಂಪರೆಯ ಚಟುವಟಿಕೆಗಳನ್ನು ನಡೆಸಲು ಕೊಡವ ಹೆರಿಟೇಜ್ ಸೆಂಟರ್ ಸಹಕಾರಿಯಾಗಿದೆ ಎಂದು ಕಾರ್ಯಪಾಲಕ ಎಂಜಿನಿಯರ್ ಕೆ.ಟಿ.ಪ್ರಭು ಅವರು ಮಾಹಿತಿ ನೀಡಿದರು.



ಕೊಡವ ಹೆರಿಟೇಜ್ ಸೆಂಟರ್ ಮ್ಯೂಸಿಯಂ ಸಹ ಒಳಗೊಂಡಿದೆ. ಮೊದಲ ಹಂತದಲ್ಲಿ 3 ಕೋಟಿ ರೂ. ಬಿಡುಗಡೆಯಾಗಿತ್ತು. ಈಗ 4.95 ಕೋಟಿ ರೂ. ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಲೋಕೋಪಯೋಗಿ ಇಲಾಖೆ ಇಇ ತಿಳಿಸಿದರು.

ಬಳಿಕ ಕರ್ನಾಟಕ ಸುವರ್ಣ ಸಮುಚ್ಚಯ ಭವನ ವೀಕ್ಷಿಸಿದ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು, ಗಡಿ ಅಭಿವೃದ್ಧಿ ಪ್ರಾಧಿಕಾರದಿಂದ ಬಾಕಿ ಇರುವ 1.40 ಕೋಟಿ ರೂ. ಬಿಡುಗಡೆಯಾಗಲಿದ್ದು, ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಲೋಕೋಪಯೋಗಿ ಇಲಾಖೆ ಎಂಜಿನಿಯರ್'ಗೆ ಸೂಚಿಸಿದರು. ಕರ್ನಾಟಕ ಸುವರ್ಣ ಸಮುಚ್ಚಯ ಭವನದ ಕಾಮಗಾರಿ ಬಹಳ ಹಿಂದೆಯೇ ಪೂರ್ಣಗೊಳ್ಳಬೇಕಿತ್ತು, ಆದರೆ ಈಗಲಾದರೂ ತ್ವರಿತವಾಗಿ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು.

ಕರ್ನಾಟಕ ಸುವರ್ಣ ಸಮುಚ್ಚಯ ಭವನದಲ್ಲಿ ಕಲಾಮಂದಿರ, ಕಲಾ ಗ್ಯಾಲರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಅರೆಭಾಷೆ ಸಾಹಿತ್ಯ ಅಕಾಡೆಮಿ ಕಚೇರಿಗಳು ಕಾರ್ಯನಿರ್ವಹಿಸಲಿವೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಮಾಹಿತಿ ನೀಡಿದರು.

ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಗಿರೀಶ್, ಸತೀಶ್, ಪ್ರವಾಸೋದ್ಯಮ ಇಲಾಖೆಯ ಸಮಾಲೋಚಕ. ಜತಿನ್, ಇತರರು ಇದ್ದರು.



ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನ

ಉಜಿರೆ ಗ್ರಾಮ ಬೆಳ್ತಂಗಡಿ ತಾಲೂಕು

ಇಂದು ಬ್ರಹ್ಮಕಲಶೋತ್ಸವ ಸಂಭ್ರಮ



■ ಶ್ರೀನಿವಾಸ ತಂತ್ರಿ, ಉಜಿರೆ

ಸರ್ವ ಪಾಪ ಹರಂ ದೇವಂ ಉಜ್ಜ್ಯಭೂತಿ ಜನಾರ್ದನಮ್ ।
ಭಕ್ತಾಭೀಷ್ಟಪ್ರದಾಕಾರಂ ವಂದೇ ಮುಕ್ತಿ ಪ್ರದಾಯಕಮ್ ॥
ಉಜಿರೆ ಬೆಳ್ತಂಗಡಿ ತಾಲೂಕಿನ ಅತೀ ದೊಡ್ಡ ಗ್ರಾಮ. ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಾಲಯದಿಂದಾಗಿ, ಇಲ್ಲಿ ಇರುವ ವಿದ್ಯಾಸಂಸ್ಥೆಗಳಿಂದಾಗಿ; ಪರಿಸರದ ಶ್ರದ್ಧಾ ಕೇಂದ್ರಗಳಿಂದಾಗಿ ಪ್ರಸಿದ್ಧಿ ಪಡೆದಿದೆ. ಸುತ್ತಲೂ ಬೆಟ್ಟ ಗುಡ್ಡಗಳ ಸಾಲು; ಹಚ್ಚನೆ ಹಸುರಿನ ಪ್ರಕೃತಿಯ ಮಡಿಲಲ್ಲಿ ಧರ್ಮಸ್ಥಳದ ಹೆಬ್ಬಾಗಿಲಾಗಿ; ಸಾಂಸ್ಕೃತಿಕ ನಗರಿಯಾಗಿ ಬೆಳೆಯುತ್ತಿದೆ. ಬೆಳಗುತ್ತಿದೆ.

ಉಜಿರೆಯಲ್ಲಿ ಎಲ್‌ಕೆಜಿಯಿಂದ ಸ್ನಾತಕೋತ್ತರ ಹಾಗೂ ಸಂಶೋಧನೆಯವರೆಗಿನ ಎಲ್ಲ ಶಿಕ್ಷಣ ಸಂಸ್ಥೆಗಳು, ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಮಹಾ ವಿದ್ಯಾಲಯ, ಇಂಜಿನಿಯರಿಂಗ್ ಕಾಲೇಜು, ಸಿದ್ಧವನ ಮತ್ತು ರತ್ನಮಾನಸ ಉಚಿತ ವಿದ್ಯಾರ್ಥಿ ನಿಲಯಗಳು, ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳು, ಸ್ಟಾರ್ ಹೋಟೆಲ್‌ಗಳು, ಮುದ್ರಣಾಲಯಗಳಿಂದ ಉಜಿರೆ ವಾಣಿಜ್ಯೋದ್ಯಮ ಕೇಂದ್ರವಾಗಿಯೂ ಬೆಳೆಯುತ್ತಿದೆ.

ಮಂಗಳೂರು, ಕಾರ್ಕಳ, ಮೂಡಬಿದ್ರೆ, ಮೂಡಿಗೆರೆ, ಚಿಕ್ಕಮಗಳೂರು ಹಾಗೂ ಧರ್ಮಸ್ಥಳವನ್ನು ಸಂಧಿಸುವ ಕೇಂದ್ರ ಬಿಂದು ಉಜಿರೆ. ಶಿಕ್ಷಣ ಸಂಸ್ಥೆಗಳ ತವರೂರಾಗಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಹೆಸರಿನ ಶಿಕ್ಷಣ ಸಂಸ್ಥೆ ಸಹಸ್ರಾರು ವಿದ್ಯಾರ್ಥಿಗಳಿಗೆ ಜ್ಞಾನದಾನ ನೀಡಿ ಅವರ ಭವಿಷ್ಯ ರೂಪಿಸಿದೆ. ಉಜಿರೆ ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಚಾರಿತ್ರಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಗುರುತಿಸಲ್ಪಡುತ್ತದೆ. ಮಹಾವಿಷ್ಣುವಿನ ಅನಂತ ರೂಪಗಳಲ್ಲೊಂದಾದ ಉಜಿರೆಯ ಶ್ರೀ ಜನಾರ್ದನ ಸ್ವಾಮಿ ಸೀಮೆಯ ಆರಾಧ್ಯ ಮೂರ್ತಿ; ನಂಬಿದ ಭಕ್ತರಿಗೆ ಸದಾ ಅಭಯ ನೀಡಿ ಸಲಹುವ ಕರುಣಾಮೂರ್ತಿ.

ಅರಮನೆತ್ತಾಯ (ಈಗಿನ ಪಡ್ವೆಟ್ನಾಯ) ಕುಟುಂಬದವರಿಂದ ಪ್ರತಿಷ್ಠಾಪಿಸಲ್ಪಟ್ಟಿದ್ದ ದೇವಸ್ಥಾನದಲ್ಲಿ ಪೊಸಳ್ತಾಯಿ, ಉಳ್ಳಾಕ್ಲು ಮತ್ತು ಕುಮಾರಸ್ವಾಮಿ ದೈವಗಳ ಸಾನಿಧ್ಯ ಶ್ರೀ ಜನಾರ್ದನ ಸ್ವಾಮಿಯಂತೆ ಸಮಾನ ಪೂಜೆ ಹಾಗೂ ವಿಶೇಷ ಪ್ರಾಧಾನ್ಯತೆ ಪಡೆದಿದೆ. ಉಜಿರೆ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಪರಸ್ಪರ ಅವಿನಾಭಾವ ಸಂಬಂಧವಿದೆ.

ಭಕ್ತರ ಕ್ಷೇಮ ಕರುಣಿಸುವ ಸ್ವಾಮಿ

ನಂಬಿದ ಭಕ್ತರಿಗೆ ಸದಾ ಅಭಯ ನೀಡುವ ಸ್ವಾಮಿ ಮದುವೆಯಾಗದ ಕನ್ಯೆಯರಿಗೆ ವಿವಾಹ ಭಾಗ್ಯ, ಮಕ್ಕಳಾಗದ ದಂಪತಿಗಳಿಗೆ ಸಂತಾನ ಭಾಗ್ಯ, ಭೂ ವಿವಾದ ಪರಿಹಾರ, ಕಾಯಿಲೆ ಕಸಾಲೆಗಳಿಂದ ಮುಕ್ತರಾಗಿ ಆರೋಗ್ಯ ಭಾಗ್ಯ; ನಾಗದೋಷ ಪರಿಹಾರ, ದೈಹಿಕ ಹಾಗೂ ಮಾನಸಿಕ ಶಾಂತಿ, ನೆಮ್ಮದಿ, ಸೌಭಾಗ್ಯ ಅನನ್ಯ ಆರಾಧನೆಯಿಂದ ಸಂಪ್ರಾಪ್ತಿಯಾಗುವುದೆಂಬ ಅಚಲ ನಂಬಿಕೆಯಿದೆ.

ಶಿಥಿಲಾವಸ್ಥೆಯ ಸ್ಥಿತಿಯಲ್ಲಿದ್ದ ಪ್ರಾಚೀನ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ಕೆ 1994ರಲ್ಲಿ ಅಷ್ಟಮಂಗಲ ಪ್ರಶ್ನೆಯಲ್ಲಿ ಕಂಡು ಬಂದಂತೆ ಶ್ರೀ ಜನಾರ್ದನ ಸ್ವಾಮಿಗೆ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ಶಿಲಾಮಯ ಗರ್ಭಗುಡಿ, ಹೊಸದಾಗಿ ಮಂಜುಳೇಶ (ಈಶ್ವರ) ಗುಡಿ, ಗಣಪತಿ ಗುಡಿಗಳನ್ನು ಭಕ್ತಾದಿ ದಾನಿಗಳ ಸಹಕಾರದಿಂದ ನವೀಕರಿಸಿ 2001 ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ಪುನಃ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಧಾರ್ಮಿಕ ವಿಧಿಗಳು ವೇದಮೂರ್ತಿ ನೀಲೇಶ್ವರ ಮಾಧವ ತಂತ್ರಿಗಳವರ ನೇತೃತ್ವದಲ್ಲಿ ಅನುವಂಶಿಕ ಆಡಳಿತ ಮೊಕ್ತೇಸರ ಶ್ರೀ ವಿಜಯರಾಘವ ಪಡ್ವೆಟ್ನಾಯರ ಹಿರಿತನದಲ್ಲಿ ಊರವರ ಸಹಾಯ, ಸಹಕಾರದಿಂದ ಯಶಸ್ವಿಯಾಗಿ ನಡೆದಿತ್ತು.

ಪೂಜೆ – ಉತ್ಸವಗಳು

ಉಜಿರೆಯ ಶ್ರೀ ಜನಾರ್ದನ ಸ್ವಾಮಿ, ಶ್ರೀ ಮಂಜುಳೇಶ, ಶ್ರೀ ಬಲಮುರಿ ಗಣಪತಿ ಹಾಗೂ ಅಮ್ಮನವರ ಸನ್ನಿಧಿಯಲ್ಲಿ ಪ್ರತಿನಿತ್ಯ ಪೂರ್ವಾಹ್ನ 7–30, ಮಧ್ಯಾಹ್ನ 12–30 ಹಾಗೂ ರಾತ್ರಿ 7–30 ಹೀಗೆ ತ್ರಿಕಾಲಗಳಲ್ಲಿ ಪೂಜೆ, ಪರ್ವ ದಿನಗಳಲ್ಲಿ ವಿಶೇಷ ಪೂಜೆ ಹಾಗೂ ಭಕ್ತಾದಿಗಳಿಂದ ಸೇವಾ ರೂಪದಲ್ಲಿ ಹರಕೆ ಸಲ್ಲಿಸಲ್ಪಡುತ್ತಿದೆ. ಕ್ಷೇತ್ರದಲ್ಲಿ ಲಕ್ಷ ತುಳಸಿ ಅರ್ಚನೆ, ಮೂಡಪ್ಪ ಸೇವೆ, ರಾಶಿ ಪೂಜೆ, ತುಲಾಭಾರ, ಅಲಂಕಾರ ಪೂಜೆ, ಸರ್ಪ ಸೇವೆ; ಗಣಪತಿ ದೇವರಿಗೆ ಅಪ್ಪ ಸೇವೆ, ಕಡುಬು, ಮೋದಕ, ದೂರ್ವಾರ್ಚನೆ, ಪಂಚಕಜ್ಜಾಯ, ಗಣಹೋಮ; ಅಮ್ಮನವರ ಸನ್ನಿಧಿಯಲ್ಲಿ ದುರ್ಗಾಪೂಜೆ, ಸಪ್ತಶತಿ ಪಾರಾಯಣ, ಕುಂಕುಮಾರ್ಚನೆ, ಲಲಿತಾ ಸಹಸ್ರನಾಮಾರ್ಚನೆ, ಗುಡಾನ್ನ; ಶ್ರೀ ಮಂಜುಳೇಶನ ಸನ್ನಿಧಿಯಲ್ಲಿ ಶತರುದ್ರಾಭಿಷೇಕ, ಶತ ನಾಳಿಕೇರ ಗಣಯಾಗ, ರಂಗಪೂಜೆ, ಹಾಲು ಪಾಯಸ, ಅಪ್ಪ ಪರಮಾನ್ನ ಹಾಗೂ ಅನ್ನ ಸಂತರ್ಪಣೆ ವಿಶೇಷ ಸೇವೆಗಳು ನಡೆಯುತ್ತದೆ.

ಶ್ರೀ ಜನಾರ್ದನ ದೇವಸ್ಥಾನದಲ್ಲಿ ಚಾಂದ್ರಮಾನ ಹಾಗೂ ಸೌರಮಾನ ಯುಗಾದಿಯಂದು ಸೀಯಾಳ ಅಭಿಷೇಕ, ಪ್ರತೀ ಸಂಕ್ರಮಣದಂದು ಬದಿಮೇಲೆ ತಂಬಿಲ, ಶ್ರೀರಾಮ ನವಮಿಯಂದು ರಂಗಪೂಜೆ, ಲಕ್ಷ್ಯದ



ಕದಿರೆ-ದೀಪಾವಳಿ-ಲಕ್ಷದೀಪೋತ್ಸವ- ಪತ್ತನಾಜೆಯಂದು ರಂಗಪೂಜೆ, ಆಷಾಢ ಪ್ರಥಮೈಕಾದಶಿಯಂದು ತಪ್ತಮುದ್ರಾಧಾರಣೆ, ನಾಗರ ಪಂಚಮಿ, ಶ್ರೀಕೃಷ್ಣಾಷ್ಟಮಿಯಂದು ಅರ್ಘ್ಯಪ್ರದಾನ, ಗಣೇಶ ಚತುರ್ಥಿಯಂದು 108 ತೆಂಗಿನಕಾಯಿ ಗಣಹೋಮ, ದೀಪಾವಳಿ ಪ್ರಯುಕ್ತ ಕಾರ್ತಿಕ ಹುಣ್ಣಿಮೆಯಂದು ಲಕ್ಷದೀಪೋತ್ಸವ-ರಂಗಪೂಜೆ, ಧನುರ್ಮಾಸದಲ್ಲಿ ಇಡೀ ತಿಂಗಳು ಉಷಾಕಾಲದಲ್ಲಿ ಧನುಪೂಜೆ, ಸೋಣ ನಡಾವಳಿ-ನೇಮೋತ್ಸವ, ಮಕರ ಸಂಕ್ರಮಣದಿಂದ ಮೊದಲ್ಗೊಂಡು ವಾರ್ಷಿಕ ಜಾತ್ರೆ ಹಾಗೂ ನೇಮೋತ್ಸವ; ಮಹಾಶಿವರಾತ್ರಿಯಂದು ಶತರುದ್ರಾಭಿಷೇಕ, ಕುಂಭ ಮಾಸದ 20ನೇ ದಿನ ಪ್ರತಿಷ್ಠಾ ಮಹೋತ್ಸವ ಪ್ರಯುಕ್ತ 108 ಕಾಯಿ ಗಣಹೋಮ ಹಾಗೂ ರಂಗಪೂಜೆ; ಪ್ರತಿ ಸಂಕಷ್ಟ ಚತುರ್ಥಿಯಂದು ಗಣಹೋಮ, ಸಂಕಷ್ಟ ಚತುರ್ಥಿಯಂದು ವಿಶೇಷ ಸೇವೆ ಹಾಗೂ ಪೂಜೆ ಸಂಪ್ರದಾಯದಂತೆ ವಿಧ್ಯುಕ್ತವಾಗಿ ನಡೆಯುವುದು.

ಅಭಿವೃದ್ಧಿ ಕಾರ್ಯಗಳು

ಉಜಿರೆಯ ಶ್ರೀ ಜನಾರ್ದನ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರರಾಗಿದ್ದ ಕೀರ್ತಿಶೇಷ ವಿಜಯರಾಘವ ಪಡ್ವೆಟ್ನಾಯರ ವಿಶೇಷ ಆಸಕ್ತಿ, ಪರಿಶ್ರಮದಿಂದ ಭಕ್ತಾದಿ ದಾನಿಗಳ ಸಹಾಯ, ಸಹಕಾರದಿಂದ ಕಳೆದ ಎರಡು ದಶಕಗಳಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ಕೈಗೊಂಡಿವೆ. ದೇವಸ್ಥಾನದ ಶಿಲಾಮಯ ಗರ್ಭಗುಡಿ, ತೀರ್ಥ ಮಂಟಪ, ಸುತ್ತುಪೌಳಿ, ಮುಖ ಮಂಟಪ, ಒಳಾಂಗಣ ಚಪ್ಪರ, ದೇವಸ್ಥಾನ ಮುಂಭಾಗದ ಗೋಪುರದ ಮೇಲ್ಛಾವಣಿ, ಪುಷ್ಕರಣಿ ಕೆರೆಯ ನವೀಕರಣ, ಆಕರ್ಷಕವಾಗಿರುವ ಇಂಟರ್‌ಲಾಕ್, ಮರದ ಮುಂಚಿ, ಶುಭಕಾರ್ಯಗಳಿಗಾಗಿ ಶ್ರೀರಾಮಕೃಷ್ಣ ಸಭಾ ಮಂಟಪ, ಶ್ರೀ ಶಾರದಾ ಸೇವಾ ಟ್ರಸ್ಟ್ (ರಿ.) ಸಹಯೋಗದೊಂದಿಗೆ ದಾನಿಗಳ ನೆರವಿನೊಂದಿಗೆ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಶಾರದಾ ಮಂಟಪ, ಹೊಸದಾಗಿ ಮೇಲ್ಛಾವಣಿ ನಿರ್ಮಾಣಗೊಂಡಿದೆ. ಮುಖ್ಯ ಹೆದ್ದಾರಿಯಲ್ಲಿ ಶ್ರೀ ಜನಾರ್ದನ ಸ್ವಾಮಿ ಮಹಾದ್ವಾರ ನಿರ್ಮಾಣ ಕಾರ್ಯಗಳು ನಡೆದಿವೆ.

ದಿ. ಚಿದಾನಂದ ರಾವ್ ಮತ್ತು ಆಶಾ ರಾವ್ ದಂಪತಿಗಳ ಪುತ್ರ ಕಿರಣ ಕುಮಾರ್, ಅಶೋಕ ಕುಮಾರ್ ಮನೆಯವರು ಕ್ಷೇತ್ರಕ್ಕೆ ರೂ. 4.75 ಲಕ್ಷ ವೆಚ್ಚದಲ್ಲಿ 17.50 ಕಿಲೋ ಬೆಳ್ಳಿಯಿಂದ ನಿರ್ಮಿಸಲಾದ ರಜತ ಪಾಲಕಿಯನ್ನು 2007, ಫೆ. 1ರಂದು ಹಾಗೂ ರಜತ ರಥವನ್ನು ಉಡುಪಿ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಗಳವರ ದಿವ್ಯ ಉಪಸ್ಥಿತಿಯಲ್ಲಿ 2011ರಲ್ಲಿ ಶ್ರೀ ಜನಾರ್ದನ ಸ್ವಾಮಿಗೆ ಸಮರ್ಪಿಸಿದ್ದಾರೆ. ಅಂತೆಯೇ ಅವರು ಕ್ಷೇತ್ರಕ್ಕೆ ರೂ. 2 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಿರುವ ಬ್ರಹ್ಮರಥವನ್ನು 2026 ಮಾರ್ಚ್ 8ರಂದು ನಡೆದ ಕ್ಷೇತ್ರದ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ಸಮರ್ಪಿಸಿದ್ದಾರೆ. ಉಜಿರೆಯ ವೇಣು ಕನ್‌ಸ್ಟ್ರಕ್ಷನ್ ಗಣೇಶ್ ಗೌಡ ಅವರು ನೂತನ ಪುಷ್ಪರಥವನ್ನು ಶ್ರೀ ಸ್ವಾಮಿಗೆ ಸೇವಾರೂಪವಾಗಿ ಇದೇ ಸಂದರ್ಭದಲ್ಲಿ ಸಮರ್ಪಿಸಿದ್ದಾರೆ. ನಿವೃತ್ತ ಉಪನ್ಯಾಸಕ ವಿಷ್ಣುಮೂರ್ತಿ ಭಟ್ ಶ್ರೀ ಮಹಾಗಣಪತಿಗೆ ರಜತ ಕವಚ ಸಮರ್ಪಿಸಿದ್ದಾರೆ.



ಮಧ್ವಾಚಾರ್ಯರು ಉಜಿರೆಯಲ್ಲಿ ವಿದ್ವಾಂಸರ ಜತೆ ಶಾಸ್ತ್ರ ಜಿಜ್ಞಾಸೆಗಳ ಬಗ್ಗೆ ಚರ್ಚೆ ನಡೆಸಿ ತರ್ಕ ನಿರ್ಣಯ ಗ್ರಂಥ ರಚಿಸಿದ ಕುರುಹಾಗಿ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಗಳವರ ನೇತೃತ್ವದಲ್ಲಿ ದೇವಾಲಯದ ಬಲ್ಲೆಯ ಪಾರ್ಶ್ವದಲ್ಲಿ ಮಧ್ವ ಮಂಟಪವನ್ನು ನಿರ್ಮಿಸಿ ಅಲ್ಲಿ ಮಧ್ವಾಚಾರ್ಯರ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಿ ಅವರು ಕುಳಿತು ಗ್ರಂಥ ಬರೆದ ಶಿಲೆಯನ್ನು ಮಂಟಪದಲ್ಲಿ ಸಂರಕ್ಷಿಸಲಾಗಿದೆ.

ಜೀರ್ಣಾವಸ್ಥೆಯಲ್ಲಿದ್ದ ಶ್ರೀ ಮಹಮ್ಮಾಯಿ (ಮಾರಿಗುಡಿ) ದೇವಸ್ಥಾನವನ್ನು ಸುಂದರ ದೇವಾಲಯವಾಗಿ ನಿರ್ಮಿಸಿ ಪುನಃಪ್ರತಿಷ್ಠಾಪಿಸಲಾಗಿದೆ. 2001 ಮತ್ತು 2013ರಲ್ಲಿ ಶ್ರೀ ಜನಾರ್ದನ ಸ್ವಾಮಿ ಸನ್ನಿಧಿಯಲ್ಲಿ ಬ್ರಹ್ಮಕಲಶೋತ್ಸವ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಂಭ್ರಮದಿಂದ ಸಂಪನ್ನಗೊಂಡಿದೆ. 2026ರ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ನೂತನ ಆಡಳಿತ ಕಛೇರಿ, ಕಾರ್ಯಾಲಯ, ತಂತ್ರಿ ನಿವಾಸ ನಿರ್ಮಾಣಗೊಂಡಿದೆ. ತುಳು ಶಿವಳ್ಳಿ ಬ್ರಾಹ್ಮಣ ಸಭಾ ಮತ್ತು ದಾನಿಗಳ ಸಹಯೋಗದೊಂದಿಗೆ ಪ್ರತಿವರ್ಷ ಸಮಾಜದ ಉಪನೀತ ವಟುಗಳಿಗೆ 20 ದಿನಗಳ ವಸಂತ ವೇದ ಪಾಠ ಶಿಬಿರ ನಡೆಸಿ ಅವರಿಗೆ ವೈದಿಕ ಸಂಸ್ಕಾರ ನೀಡಲಾಗುತ್ತಿದೆ.

ಪ್ರತಿ ಶನಿವಾರ-ಮಂಗಳವಾರ- ಶುಕ್ರವಾರಗಳಂದು ಭಜನೆ; ಸಂಕಷ್ಟ ಚತುರ್ಥಿ ದಿನದಂದು ಭಕ್ತಿ ಸಂಗೀತ, ಯಕ್ಷಗಾನ ತಾಳಮದ್ದಳೆ, ಗಮಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಪ್ರತಿ ವರ್ಷ ಲೋಕ ಕಲ್ಯಾಣಾರ್ಥ ಶ್ರೀ ಜನಾರ್ದನ ಸ್ವಾಮಿಗೆ ಲಕ್ಷ ತುಳಸಿ ಅರ್ಚನೆ, ಧನುರ್ಮಾಸದಲ್ಲಿ ಧನು ಪೂಜೆ, ಕಾರ್ತಿಕ ಮಾಸದಲ್ಲಿ ತುಳಸಿ ಸಂಕೀರ್ತನೆ, ವಾರ್ಷಿಕ ಜಾತ್ರಾ ಮಹೋತ್ಸವದಲ್ಲಿ ಭಕ್ತಿ ಸಂಗೀತ, ನೃತ್ಯ, ಭರತನಾಟ್ಯ, ಯಕ್ಷಗಾನ; ರಕ್ತದಾನ ಹಾಗೂ ಆರೋಗ್ಯ ಶಿಬಿರಗಳು; ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಪರಿಸರದಲ್ಲಿ ಸಂಗೀತ, ನೃತ್ಯ, ಯಕ್ಷಗಾನ ತರಬೇತಿ ಕೇಂದ್ರಗಳ ಮೂಲಕ ಉದಯೋನ್ಮುಖಿ ಕಲಾವಿದರಿಗೆ ಅವಕಾಶ ಹಾಗೂ ಕಲಾವಿದರನ್ನು ಗುರುತಿಸಿ ಗೌರವಿಸುವ ಪರಂಪರೆ ಬೆಳೆದು ಬಂದಿದೆ. ಜಿಲ್ಲಾ ಸಾಹಿತ್ಯ ಸಮ್ಮೇಳನ; ಗಮಕ ಸಮ್ಮೇಳನ; ಯಕ್ಷಗಾನ, ತಾಳಮದ್ದಳೆ ಸಪ್ತಾಹಗಳು ನಡೆದಿವೆ.

ಉಜಿರೆಯ ಮರದ ವ್ಯಾಪಾರಿ ಉದ್ಯಮಿ ಯು. ಸದಾಶಿವ ಶೆಟ್ಟಿ ಮತ್ತು ಮಕ್ಕಳು ಮರದಿಂದ ಕಲಾತ್ಮಕವಾಗಿ ನಿರ್ಮಿಸಿದ ಚಂದ್ರಮಂಡಲ ರಥವನ್ನು 2017 ಜ. 19ರಂದು ಶ್ರೀ ಜನಾರ್ದನ ಸ್ವಾಮಿಗೆ ಸಮರ್ಪಿಸಿದ್ದರು. ಗರ್ಭಗುಡಿಯ ಮಹಾದ್ವಾರಕ್ಕೆ ಉಜಿರೆಯ ಭಕ್ತರಾದ ಮಹಾಲಕ್ಷ್ಮಿ ಸ್ಟೋರ್ಸ್ ಮಾಲಕ ಭರತ್ ಕುಮಾರ್ ಮತ್ತು ಮನೆಯವರು. ಜನತಾ ಕನ್‌ಸ್ಟ್ರಕ್ಷನ್‌ನ ಗಣೇಶ್ ಗೌಡ ಮತ್ತು ಮನೆಯವರು ಹಾಗೂ ಕಾಮಧೇನು ಹೋಟೆಲ್‌ನ ಮಾಲಕ ಸತೀಶ್ ಹೊಳ್ಳ ಸಹೋದರರು ಮತ್ತು ಮನೆಯವರು ರಜತ ಹೊದಿಕೆ ಅಳವಡಿಸಿ ಸಮರ್ಪಿಸಿದ್ದರು. ಮಂಜುಳೇಶನ ಗರ್ಭಗುಡಿಯ ಮಹಾದ್ವಾರಕ್ಕೆ ಉದ್ಯಮಿ ರವಿಚಂದ್ರ ಚಕ್ಕಿತ್ತಾಯ ಮತ್ತು ಮನೆಯವರು ಹಾಗೂ

ಅಮ್ಮನವರ ಗುಡಿಯ ಮಹಾದ್ವಾರಕ್ಕೆ ರಾಘವೇಂದ್ರ ಬೈಪಾಡಿತ್ತಾಯ ಮತ್ತು ಮನೆಯವರು ಕಲಾತ್ಮಕ ಕುಸುರಿ ಕೆತ್ತನೆಯ ಹಿತ್ತಾಳೆ ಹೊದಿಕೆಯನ್ನು ಸಮರ್ಪಿಸಿದ್ದಾರೆ. ಗಣಪತಿ ದೇವರಿಗೆ ಪ್ರವೀಣ್ ಕುಮಾರ್ ಇಂದ್ರ ಮತ್ತು ಮನೆಯವರು ರಜತ ಪ್ರಭಾವಳಿಯನ್ನು ಸಮರ್ಪಿಸಿದ್ದರು.

ಮಂಜುಳೇಶನ ಸನ್ನಿಧಿಗೆ ದಿ. ನಾರಾಯಣ ಹೊಳ್ಳರ ಮಕ್ಕಳು ತೀರ್ಥರೂಪರ ಸಂಸ್ಮರಣೆಗಾಗಿ ರಜತ ಪಾಣಿಪೀಠ ಹಾಗೂ ಶ್ರೀ ಜನಾರ್ದನ ಸ್ವಾಮಿಗೆ ರಜತ ಸೊಂಟಪಟ್ಟಿಯನ್ನು ಮತ್ತು ಅರ್ಚಕ ಶ್ರೀನಿವಾಸ ಹೊಳ್ಳ ಮತ್ತು ಮನೆಯವರು ಶ್ರೀ ಜನಾರ್ದನ ಸ್ವಾಮಿಗೆ ರಜತ ಪಾಣಿಪೀಠ ಸಮರ್ಪಿಸಿದ್ದಾರೆ.

ವಿಧಾನಪರಿಷತ್ ಶಾಸಕ ಪ್ರತಾಪ ಸಿಂಹ ನಾಯಕ ಅವರು ಪ್ರದೇಶಾಭಿವೃದ್ಧಿ ನಿಧಿಯಿಂದ ದೇವಸ್ಥಾನ ಮುಂಭಾಗದಲ್ಲಿ ಹೈಮಾಸ್ಟ್ ದೀಪವನ್ನು 2022 ಜ. 14ರಂದು ಲೋಕಾರ್ಪಣೆಗೊಳಿಸಿದ್ದಾರೆ.

ಶ್ರೀ ಕೃಷ್ಣಾನುಗ್ರಹ ಸಭಾಭವನ

ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಎಡ ಪಾರ್ಶ್ವದಲ್ಲಿ ಸುಮಾರು 2 ಕೋಟಿ ರೂ ಅಂದಾಜು ವೆಚ್ಚದಲ್ಲಿ ಶ್ರೀ ಕೃಷ್ಣಾನುಗ್ರಹ ಸಭಾಭವನ ಕಲ್ಯಾಣ ಮಂಟಪ ಕೀರ್ತಿಶೇಷ ವಿಜಯರಾಘವ ಪಡ್ವೆಟ್ನಾಯರ ನೇತೃತ್ವದಲ್ಲಿ ಸಕಲ ಸೌಲಭ್ಯಗಳೊಂದಿಗೆ ಲೋಕಾರ್ಪಣೆಗೊಂಡಿದೆ. ಸುಮಾರು 1000ಕ್ಕೂ ಹೆಚ್ಚು ಜನ ಕುಳಿತುಕೊಳ್ಳಲು ಅವಕಾಶವಿದ್ದು ವೇದಿಕೆಯ ಎಡಬಲಗಳಲ್ಲಿ ಎರಡು ಬೃಹತ್ ಕೊಠಡಿ (ಗ್ರೀನ್ ರೂಂ) ಹಾಗೂ ಸಭಾ ವೇದಿಕೆಯಿದೆ. ಹಿಂಭಾಗದಲ್ಲಿ ಭೋಜನ ಶಾಲೆ, ಕುಳಿತು ಊಟ ಮಾಡುವ ವ್ಯವಸ್ಥೆ, ಪಾಕಶಾಲೆ ಹಾಗೂ ಶೌಚಾಲಯ ಸೌಲಭ್ಯ ಹೊಂದಿದೆ. ತಾಲೂಕಿನ ಧಾರ್ಮಿಕ, ಸಾಮಾಜಿಕ ಸಭೆ ಸಮಾರಂಭ, ವಿವಾಹ ಶುಭ ಸಮಾರಂಭಗಳಿಗೆ ಸಭಾಂಗಣ ಲಭ್ಯವಿದ್ದು ವಾಹನಗಳ ಪಾರ್ಕಿಂಗ್‌ಗೆ ವಿಶಾಲವಾದ ಸ್ಥಳಾವಕಾಶವಿದೆ.

ಪಡ್ವೆಟ್ನಾಯ ಮನೆತನದವರು ದೇವಾಲಯದ ಆಡಳಿತಗಾರರಾಗಿ ಕೃಷ್ಣ ಪಡ್ವೆಟ್ನಾಯರು (1892–1975), ರಾಮಕೃಷ್ಣ ಪಡ್ವೆಟ್ನಾಯರು (1976–1988), ವಿಜಯರಾಘವ ಪಡ್ವೆಟ್ನಾಯರು (1989–2023) ಹಾಗೂ ಪ್ರಸ್ತುತ ಅನುವಂಶಿಕ ಆಡಳಿತ ಮೊಕ್ತೇಸರರಾಗಿ ಶರತ್ ಕೃಷ್ಣ ಪಡ್ವೆಟ್ನಾಯರು ತೀರ್ಥರೂಪರ ಗರಡಿಯಲ್ಲಿ ಪಳಗಿ ದೇವಸ್ಥಾನದ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ವಿಜಯಗೋಪುರ ನಿರ್ಮಾಣ ಕೀರ್ತಿಶೇಷ ವಿಜಯರಾಘವ ಪಡ್ವೆಟ್ನಾಯರ ಬಹುಕಾಲದ ಆಶಯ ದೇವಸ್ಥಾನದ ಅಭಿವೃದ್ಧಿಗೆ ಮುಕುಟ ಪ್ರಾಯವೆಂಬಂತೆ ರಾಜಗೋಪುರ ನಿರ್ಮಾಣದ ಕನಸು ಇದೀಗ ನನಸಾಗುವ ಸುಯೋಗ. ಅವರ ಸಂಕಲ್ಪದಂತೆ ಉತ್ತರಾಧಿಕಾರಿ, ಅವರ ಸುಪುತ್ರ ಶ್ರೀ ಶರತ್ ಕೃಷ್ಣ ಪಡ್ವೆಟ್ನಾಯರು ಊರಿನ ಸಮಸ್ತ ಭಕ್ತ ಜನರನ್ನು ಒಗ್ಗೂಡಿಸಿ ಹಾಗೂ ಭಕ್ತಾದಿ ದಾನಿಗಳ ಸಹಾಯ ಸಹಕಾರದಿಂದ ತೀರ್ಥರೂಪರ ಹೆಸರಿನಲ್ಲಿ ಎಲ್ಲರ ಸಮ್ಮತಿಯಂತೆ 'ವಿಜಯ ಗೋಪುರ' ನಿರ್ಮಾಣ ಕಾರ್ಯಕ್ಕೆ ತೊಡಗಿದರು. ಉದ್ಯಮಿ ಶಶಿಧರ ಶೆಟ್ಟಿ ಬರೋಡ ಅವರ ಅಧ್ಯಕ್ಷತೆಯಲ್ಲಿ ಊರ ಗಣ್ಯರನ್ನೊಳಗೊಂಡ ವಿಜಯ ಗೋಪುರ ನಿರ್ಮಾಣ ಸಮಿತಿ ರಚಿಸಿ ಕ್ಷಿಪ್ರ ಕಾರ್ಯಾಚರಣೆಗಿಳಿಯಿತು. ಸಮಿತಿಯ ಪದಾಧಿಕಾರಿಗಳು ಗ್ರಾಮದ ಎಲ್ಲ ಹಿಂದೂ ಸಮಾಜ ಬಾಂಧವರ ಮನೆಗಳಿಗೆ ಭೇಟಿ ನೀಡಿ ವಿಜಯ ಗೋಪುರ ನಿರ್ಮಾಣದ ಮನವಿ ಪತ್ರವನ್ನು ನೀಡಿರುವುದು ಅಪೂರ್ವ ದಾಖಲೆಯಾಗಿದೆ.

2025 ಫೆ. 17ರಂದು ವಿಜಯ ಗೋಪುರ ನಿರ್ಮಾಣಕ್ಕೆ ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಶ್ರೀಗಳವರು, ಧರ್ಮಸ್ಥಳದ ಶ್ರೀ ಡಿ. ಹರ್ಷೇಂದ್ರ ಕುಮಾರ್ ಮತ್ತು ಗಣ್ಯರ ಉಪಸ್ಥಿತಿಯಲ್ಲಿ ಶಿಲಾನ್ಯಾಸ ನೆರವೇರಿಸಲಾಯಿತು. ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಗ್ರಾಮದ ಮಹಿಳೆಯರು ಸಕ್ರಿಯರಾಗಿ ಪಾಲ್ಗೊಳ್ಳುವಂತೆ 'ಮಾತೃಶಕ್ತಿ ಶಿಲಾ ಸಂಚಯನ' ಯೋಜನೆ ರೂಪಿಸಲಾಗಿ ಮಾ. 24ರಂದು ಶ್ರೀ ಜನಾರ್ದನ ಸ್ವಾಮಿ ಸನ್ನಿಧಿಯಲ್ಲಿ ಪ್ರಾರ್ಥಿಸಿ ಶ್ರೀಕೃಷ್ಣಾನುಗ್ರಹ ಸಭಾಭವನ ಬಳಿ ನಿರ್ಮಿಸಲಾದ ವಿಶಾಲ ಸಭಾಂಗಣದಲ್ಲಿ ಶ್ರೀಮತಿ ಕುಸುಮಾ ಪಡ್ವೆಟ್ನಾಯರು ಮಾತೃಶಕ್ತಿ ಶಿಲಾ ಸಂಚಯನ ಕೂಪನ್ ಅನಾವರಣಗೊಳಿಸಿ ಚಾಲನೆ ನೀಡಿದರು.

2026 ಮಾರ್ಚ್ 3 ರಿಂದ 11ರವರೆಗೆ ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ಸರ್ವಾಲಂಕೃತ ವಿಜಯ ಗೋಪುರ ಅನಾವರಣಗೊಂಡಿದೆ. ಇದೇ ಸಂದರ್ಭದಲ್ಲಿ ನೂತನ ಬ್ರಹ್ಮರಥ ಹಾಗೂ ಪುಷ್ಪರಥಗಳ ಸಮರ್ಪಣೆ ನಡೆದಿದೆ. ಜ್ಯೋತಿಷಿ ಶ್ರೀಧರ ಗೋರೆಯವರ ನೇತೃತ್ವದಲ್ಲಿ ಕ್ಷೇತ್ರದ ತಂತ್ರಿಗಳಾದ ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿಗಳವರ ನೇತೃತ್ವದಲ್ಲಿ ತಾಂಬೂಲ ಪ್ರಶ್ನೆ ಇರಿಸಲಾಗಿ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ಪ್ರಾಯಶ್ಚಿತ್ತ ಹವನಾದಿಗಳನ್ನು ನಡೆಸಲಾಯಿತು.

ಬ್ರಹ್ಮಶ್ರೀ ನೀಲೇಶ್ವರ ಆಲಂಬಾಡಿ ಶ್ರೀ ಪದ್ಮನಾಭ ತಂತ್ರಿಗಳವರ ಧಾರ್ಮಿಕ ವಿಧಿ ವಿಧಾನಗಳಿಂದ ಕ್ಷೇತ್ರದ ಪುನಃ ಪ್ರತಿಷ್ಠಾಷ್ಟಬಂಧ ಬ್ರಹ್ಮಕಲಶೋತ್ಸವವು ವಿವಿಧ ಧಾರ್ಮಿಕ, ವೈದಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಂಭ್ರಮದಿಂದ ಸಂಪನ್ನಗೊಂಡಿದೆ.

ಉಜಿರೆ ಬ್ರಹ್ಮಕಲಶೋತ್ಸವ – 2026

- ವಿಜಯಗೋಪುರ ಲೋಕಾರ್ಪಣೆ, ನೂತನ ಬ್ರಹ್ಮರಥ, ಪುಷ್ಪರಥ ಸಮರ್ಪಣೆ
- 2026 ಮಾರ್ಚ್ 3ರಿಂದ 11ರವರೆಗೆ ಪುನಃ ಪ್ರತಿಷ್ಠಾಷ್ಟಬಂಧ ಬ್ರಹ್ಮಕಲಶೋತ್ಸವ ಬ್ರಹ್ಮಶ್ರೀ ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿಗಳ ನೇತೃತ್ವ, ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಗೌರವ ಮಾರ್ಗದರ್ಶನ, ಅನುವಂಶಿಕ ಆಡಳಿತ ಮೊಕ್ತೇಸರ ಶ್ರೀ ಶರತ್ ಕೃಷ್ಣ ಪಡ್ವೆಟ್ನಾಯರ ಯಜಮಾನತ್ವ
- ಮಾರ್ಚ್ 2 ಬೆಳಿಗ್ಗೆ 'ಸುಶಾಸನ' ನೂತನ ಆಡಳಿತ ಕಾರ್ಯಾಲಯ, 'ಸುವಾಸ' ತಂತ್ರಿ ನಿವಾಸ ಉದ್ಘಾಟನೆ, 'ಸುರಭಿ' ಬ್ರಹ್ಮಕಲಶೋತ್ಸವ ಕಾರ್ಯಾಲಯ, 'ಸುಪ್ರಸಾದ' ಭೋಜನ ಶಾಲೆ, 'ಸಮೃದ್ಧಿ' ಹಸಿರುವಾಣಿ ಉಗ್ರಾಣ, 'ಸುರುಚಿ' ಪಾಕಶಾಲೆ ಉದ್ಘಾಟನೆ
- ಮಾರ್ಚ್ 4 ಬೆಳಿಗ್ಗೆ ನೂತನ 'ವಿಜಯಗೋಪುರ' ಲೋಕಾರ್ಪಣೆ
- ಮಾರ್ಚ್ 5 ಶ್ರೀ ಅಥರ್ವಶೀರ್ಷ ಗಣಯಾಗ
- ಮಾರ್ಚ್ 6 ಶ್ರೀ ಚಂಡಿಕಾ ಯಾಗ
- ಮಾರ್ಚ್ 7 ಶ್ರೀ ವಿಷ್ಣು ಯಾಗ
- ಮಾರ್ಚ್ 8 ಶ್ರೀ ಜನಾರ್ದನ ದೇವರ ಪುನಃ ಪ್ರತಿಷ್ಠೆ, ನೂತನ ಬ್ರಹ್ಮರಥ, ಪುಷ್ಪರಥ ಸಮರ್ಪಣೆ
- ಮಾರ್ಚ್ 9 ಶ್ರೀ ರುದ್ರಯಾಗ
- ಮಾರ್ಚ್ 10 ಶ್ರೀ ಪೂರ್ಣ ನವಗ್ರಹಯಾಗ
- ಮಾರ್ಚ್ 11 ಬ್ರಹ್ಮಕಲಶಾಭಿಷೇಕ, ಶ್ರೀ ಹರಿವಾಯು ಸ್ತುತಿ ಪುರಶ್ಚರಣ ಹೋಮ, ಕಲಶಾಭಿಷೇಕ, ಸಂಜೆ ಎಸ್‌ಡಿಎಂ ಕಾಲೇಜಿನ ಬಳಿಯಿಂದ ಗಣ್ಯರನ್ನೊಳಗೊಂಡ 'ಧರ್ಮಯಾನ' ಭವ್ಯ ಶೋಭಾಯಾತ್ರೆ ಮೆರವಣಿಗೆ. ನೂತನ ಬ್ರಹ್ಮರಥದಲ್ಲಿ ಬ್ರಹ್ಮರಥೋತ್ಸವ
- ಮಾರ್ಚ್ 4ರಿಂದ 11 'ಸುನಾದ' ಭಜನಾ ಕುಟೀರದಲ್ಲಿ ಉದಯಾಸ್ತಮಾನ ನಿರಂತರ ಭಜನಾ ಸೇವೆ
- ಏಪ್ರಿಲ್ 24 ವೃಷಕಲಶಾಭಿಷೇಕ

ಪಡ್ವೆಟ್ನಾಯ ಕುಟುಂಬದ ಆಡಳಿತ

ಶಾಸನದ ಸಾರಾಂಶ: "ಈ ಶಾಸನದ ಆರಂಭದಲ್ಲಿ ಹೇಳಿರುವಂತೆ ಶಾಲಿವಾಹನ ಶಕವರುಷ 1391ನೆಯ ವಿರೋಧಿನಾಮ ಸಂವತ್ಸರದ ಈ ಶ್ರಾವಣ ಶುದ್ಧ ಶದಿಗೆ ಮಂಗಳವಾರದಂದು ಅಂದರೆ ಕ್ರಿ.ಶ 1469ನೇ ಇಸವಿ ಜುಲಾಯಿ 11ನೇ ತಾರೀಖಿನಂದು ಮಂಗಳೂರು ರಾಜ್ಯಪಾಲನಾಗಿದ್ದ ವಿಠರಸ ಒಡೆಯ (ಕ್ರಿ.ಶ 1465 – 1478) ನು ಬಂಗಾಡಿಯ ಬಂಗ ಅರಸರಿಗೆ ಸೇರಿದ್ದ ಕೊಡಿಯಾಲ (ಮಂಗಳೂರು)ದ ಅರಮನೆಯನ್ನು ನೀರುಮಾರ್ಗ ಎಂಬ ಗ್ರಾಮವನ್ನು ಸುಟ್ಟು ಹಾಳು ಮಾಡಿದ್ದ. ಆದರೆ ಕಾಲಾನುಕ್ರಮದಲ್ಲಿ ತಾನು ಮಾಡಿದ ತಪ್ಪಿನ ಅರಿವಾಗಿ ವಿಠರಸ ಒಡೆಯನು, ಅದಕ್ಕೆ ಪರಿಹಾರವಾಗಿ ಉಜಿರೆ ಗ್ರಾಮವನ್ನು ಬಂಗ ಅರಸ ಕಾಮಿರಾಯನಿಗೆ ಉಂಬಳಿಯಾಗಿ ಬಿಟ್ಟುಕೊಟ್ಟಿದ್ದ. ಇದನ್ನು ಪಡೆದುಕೊಂಡಿದ್ದ ಕಾಮಿರಾಯ ಬಂಗ ಅರಸನೂ, ಆತನ ಆ ಕಾರಿ ದೇವಣ್ಣ ಕೊಠಾರಿಯೂ ಉಜಿರೆ ಗ್ರಾಮದವರಿಗೆ ಈ ವಿಚಾರವನ್ನು ಅವರು ಕೊಡ ಬೇಕಾದ ಕಂದಾಯ ಕಾಣಿಕೆ ಇತ್ಯಾದಿಗಳನ್ನು ತಿಳಿಸಲಿಕ್ಕಾಗಿ ಈ ಶಿಲಾಶಾಸನವನ್ನು ಈ ದೇವರ ಸನ್ನಿಧಿಯಲ್ಲಿ ಬರೆಸಿ ಹಾಕಿದ್ದರು.

ಈ ಶಾಸನದಲ್ಲಿ ಬರೆದಿರುವ ಒಕ್ಕಣೆಯ ಅನುಸಾರ ಉಜಿರೆ ಗ್ರಾಮದವರು ಅವರೆಗೆ ಪೂರ್ವ ಮರ್ಯಾದೆಯ ಅನುಸಾರ ಅರಸರಿಗೆ ಕೊಡುತ್ತಿದ್ದ ಕಂದಾಯವನ್ನು ಇನ್ನು ಮುಂದೆ ಬಂಗಾಡಿ ಅರಸರಿಗೆ ಕೊಡಬೇಕು ಮತ್ತು ಕಂದಾಯ ಪಾವತಿ ಮಾಡಿದ್ದಕ್ಕೆ ಬಂಗಾಡಿಯ ಸರಕಾರವು ನೇಮಿಸಿದ್ದ ಅಧಿಕಾರಿಗಳಿಂದ ನೆನಪು ಸಾಧನ (ರಶೀದಿಯಂತಹ ದಾಖಲೆ) ವನ್ನು ಪಡೆದುಕೊಳ್ಳಬೇಕು. ಈ ರೀತಿ ವಿಧೇಯತನದಿಂದ ನಡೆದುಕೊಂಡರೆ, ಉಜಿರೆ ಗ್ರಾಮದವರು ಸುಖವಾಗಿ ಬಾಳಿರೆಂದು ತಿಳಿಸಲಾಗಿದೆ. ಒಂದು ವೇಳೆ ಈ ಕಂದಾಯವನ್ನು ಕೊಡಲು ಸಾಧ್ಯವಾಗದೇ ಇದ್ದರೆ, ಆಗ ತಮ್ಮ ತಮ್ಮ ಭೂಮಿಯನ್ನು ಆರುವಾರ ಬಿಟ್ಟರೆ, ಆ ವಿವರವನ್ನು ಭೂಮಿ ಕೆಗೆದು ಕೊಂಡವನು, ಬಂಗಾಡಿಯ ಸರಕಾರದ ಅಧಿಕಾರಿಗಳಿಗೆ ತಿಳಿಸಿ ಕಂದಾಯ ಪಾವತಿ ಮಾಡಬೇಕು. ಆದರೆ ಆ ಸಂದರ್ಭದಲ್ಲಿ ಈ ವಿವರಗಳನ್ನು ಇತರರಿಗೆ ತಿಳಿಸಿ, ಬಲ್ಲಾಳರಿಗೆ ಆ ಕಂದಾಯದ ಒಂದು ಅಂಶವನ್ನಾಗಲೀ ಬಂಟರಿಗೆ ಜೋಳವನ್ನಾಗಲೀ ಕೊಡಬಾರದು. ಈ ವ್ಯವಸ್ಥೆಯಿಂದ ಯಾರಾದರೂ ಏನಾದರೂ ತಪ್ಪು ಮಾಡಿದರೆ ಅಥವಾ ವ್ಯವಸ್ಥೆಯನ್ನು ತಪ್ಪಿಸಿಕೊಂಡರೆ, ಅಂಥವರ ಮೇಲೆ ಬಂಗಾಡಿಯ ಅಧಿಕಾರಿಗಳು ಒಟ್ಟಾಗಿ ಸೂಕ್ತವಾಗಿ ಕ್ರಮವನ್ನು ಕೈಗೊಳ್ಳುವರು. ಉಜಿರೆ ಗ್ರಾಮದಿಂದ ಸಲ್ಲಿಸಬೇಕಾಗಿರುವ ಸಿದ್ಧಾಯವೆಂಬ ಕಂದಾಯವನ್ನು ಅರಸರೇ ಸಂಗ್ರಹಿಸಿಕೊಳ್ಳುತ್ತಾರೆ.

ಉಜಿರೆ ಗ್ರಾಮದವರೂ ಈ ಸಂದರ್ಭದಲ್ಲಿ ಒಂದು ಒಪ್ಪಂದವನ್ನು ಬರೆದುಕೊಟ್ಟಿದ್ದರು. ಅದರ ಅನುಸಾರ ಗ್ರಾಮ ದಿಂದ ಕೊಡಬೇಕಾಗಿದ್ದ ಸಿದ್ಧಾಯದ ಹೊನ್ನು, ಅರಳಿಯ ಸಿದ್ಧಾಯದ ಹೊನ್ನು ಮತ್ತು ನಿಡುಗಲ್ಲಿನಲ್ಲಿ ಸಂಗ್ರಹವಾದ ಸುಂಕದ ಹೊನ್ನು – ಇದೆಲ್ಲವನ್ನು ಒಟ್ಟು ಸೇರಿಸಿ ಅದರಿಂದ ಒಂದು ನೂರು ಹೊನ್ನನ್ನು ವೆಚ್ಚಕ್ಕಾಗಿ ಇಟ್ಟುಕೊಂಡು ಉಳಿದುದನ್ನು ಸರಿಯಾಗಿ ಎರಡು ಪಾಲು ಮಾಡಿ ಅದನ್ನು ಬಂಗಾಡಿಯ ರಾಜ ಭಂಡಾರಕ್ಕೆ ಕೊಡಲು ಒಪ್ಪಿದ್ದರು. ಈ ಒಪ್ಪಂದಕ್ಕೆ ತಪ್ಪಲಿಕ್ಕಿಲ್ಲ. ಒಂದು ವೇಳೆ ತಪ್ಪಿದರೆ, ಉಜಿರೆಯ ಮಹಾವಿಷ್ಣುವಿಗೆ ಮತ್ತು ದೇವಾಲಯದ ಶ್ರೀ ಮಹಾದೇವರಿಗೆ ತಪ್ಪಿದಂತಾಗುತ್ತದೆ. ಆ



ಸಾನ್ನಿಧ್ಯಗಳನ್ನು ನಾಶಮಾಡಿದ ದೋಷಕ್ಕೆ ಹಾಗೂ ವಾರಣಾಸಿಯಲ್ಲಿ ಸಾವಿರ ಕಪಿಲದನಗಳನ್ನು ಕೊಂದ ಪಾಪಕ್ಕೆ ಹೋಗಲಿಕ್ಕಿದೆ. ಬರೆದ ಶಿಲಾಶಾಸನಕ್ಕೆ ತಪ್ಪಿದವರು ವಿಶ್ವಾಸ ದ್ರೋಹಕ್ಕೂ ಕುತ್ತಾಗುತ್ತಾರೆ ಎಂದು ತಿಳಿಸಲಾಗಿದೆ."

ಇಷ್ಟೆಲ್ಲ ಚಾರಿತ್ರಿಕ ಹಿನ್ನೆಲೆಯುಳ್ಳ ಶ್ರೀ ಜನಾರ್ದನ ಸ್ವಾಮಿ ದೇವಾಲಯದ ಆಡಳಿತಗಾರರು ಪಡ್ವೆಟ್ನಾಯ ಮನೆತನ ದವರು. ನಮಗೆ ತಿಳಿದು ಬರುವ ಮಾಹಿತಿಯಂತೆ ಅಣ್ಣಯಾನೆ ನಾರಾಯಣ ಪಡ್ವೆಟ್ನಾಯರು, ಮುತ್ತಪ್ಪ ಪಡ್ವೆಟ್ನಾಯರು, ಕೃಷ್ಣ ಪಡ್ವೆಟ್ನಾಯರು (1892–1975) ರಾಮಕೃಷ್ಣ ಪಡ್ವೆಟ್ನಾಯರು (1976–1988) ಹಾಗೂ ಪ್ರಸ್ತುತ 1989ರಿಂದ 2023 ರವರೆಗೆ ಶ್ರೀ ವಿಜಯರಾಘವ ಪಡ್ವೆಟ್ನಾಯರು ಆಡಳಿತ ನಡೆಸಿದ್ದರು. ಪ್ರಸ್ತುತ ಶರತ್ ಕೃಷ್ಣ ಪಡ್ವೆಟ್ನಾಯರು ದೇವಳದ ಆಡಳಿತವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈ ದೇವಸ್ಥಾನದ ವಾಸ್ತುಶೈಲಿಯು ಕೇರಳದ ನಾರಾಯಣ ತಿರಿ ರಚಿಸಿದ ತಂತ್ರ ಸಮುಚ್ಚಯವೆಂಬ ಗ್ರಂಥದ ಆಧಾರದಲ್ಲಿ ಇದೆ. ಗರ್ಭಗುಡಿಯು ಗಜಪೃಷ್ಠಾಕಾರದಲ್ಲಿ ಇದೆ. ವಸ್ತುತಃ ಶಿವಾಲಯವು ಗಜಪೃಷ್ಠಾಕಾರದಲ್ಲಿರಬೇಕು. ವಿಷ್ಣುವಿಗೆ ಮಂಡಲ, ಚತುರಶ್ರ ಆಕಾರಗಳು ಇರಬೇಕು ಎಂಬುದು ಪ್ರಸಿದ್ಧ. ಆದರೆ ಉಜಿರೆಯಲ್ಲಿ ವಿಷ್ಣು ದೇವಾಲಯವು ಗಜಪೃಷ್ಠಾಕಾರವಾಗಿರು ವುದು ವಿಶೇಷ. ಇತಿಹಾಸ ತಜ್ಞರಾದ ದಿ. ಡಾ. ಪಿ ಗುರುರಾಜ ಭಟ್ಟರು "ಗಜಪೃಷ್ಠಾಕಾರದ ಈ ದೇವಾಲಯವು ಮೂಲತಃ ಮಂಡಲಾಕಾರವಾಗಿದ್ದು ನಂತರದ ಕಾಲಘಟ್ಟದಲ್ಲಿ ಗಜಪೃಷ್ಠಾ ಕಾರವಾಗಿ ಪರಿವರ್ತಿತವಾಗಿರಬಹುದು" ಎಂದು ಅಭಿಪ್ರಾಯ ಪಟ್ಟಿದ್ದಾರೆ. ದೇವಾಲಯದ ಆಳತೆಯನ್ನು ಪರಿಶೀಲಿಸಿದ ವಾಸ್ತುಶಿಲ್ಪಶಾಸ್ತ್ರಜ್ಞ ಶ್ರೀ ದಿ. ವೇದವ್ಯಾಸ ಶ್ರೀಧರ ಕಾರಂತರೂ ಇದೇ ಅಭಿಪ್ರಾಯವನ್ನು ಪುಷ್ಟೀಕರಿಸಿದ್ದಾರೆ.

ಇದೀಗ ದ್ವಾದಶ ವಾರ್ಷಿಕವಾಗಿ ನಡೆಯುವ ಅಷ್ಟಬಂಧ ಬ್ರಹ್ಮಕಲಶೋತ್ಸವ 2026 ಮಾರ್ಚ್ 3 ರಿಂದ 11 ರವರೆಗೆ ನಡೆದಿದೆ. ಈ ಸಂದರ್ಭ ವಿಜಯ ಗೋಪುರ , ನೂತನ ಬ್ರಹ್ಮರಥ, ಪುಷ್ಪರಥಗಳ ಸಮರ್ಪಣೆ ನಡೆದಿದೆ. ಇದು ನಮ್ಮೂರ ದೇವಾಲಯ, ನಮ್ಮ ದೇವಾಲಯವೆಂಬ ಭಾವನೆ ಜನರಲ್ಲಿ ಒಡಮೂಡಿದೆ.







11 ಮಾರ್ಚ್ 2026, ಬುಧವಾರ

ವೈದಿಕ ಕಾರ್ಯಕ್ರಮಗಳು

ಬೆಳಗ್ಗೆ ಗಂಟೆ 5.00ರಿಂದ	: ಗಣಪತಿ ಹೋಮ, ಕವಾಟೋದ್ಘಾಟನೆ, ಅಭಿಷೇಕ, ಪ್ರಾಯಶ್ಚಿತ್ತ ಹೋಮ, ಕಲಶಾಭಿಷೇಕ, ತತ್ತ್ವಕಲಶಾಭಿಷೇಕ, ಮಹಾಬಲಿ ಪೀಠ ಪ್ರತಿಷ್ಠೆ, ಸಹಸ್ರಪರಿಕಲಶಾಭಿಷೇಕ, ಕುಂಭೇಶ ಕಲಶಾಭಿಷೇಕ, **ಬ್ರಹ್ಮಕಲಶಾಭಿಷೇಕ,** ಅವಸ್ರುತ ಪ್ರೋಕ್ಷಣ, ಮಹಾಪೂಜೆ-ಪ್ರಸಾದ ವಿತರಣೆ
ಬೆಳಗ್ಗೆ ಗಂಟೆ 6.00 ರಿಂದ	: **ಶ್ರೀ ಹರಿವಾಯುಸ್ತುತಿ ಪುರಶ್ಚರಣ ಹೋಮ, ಕಲಶಾಭಿಷೇಕ** ಸ್ಥಳ : **ಸುಯಜ್ಞ** ಯಾಗಮಂಟಪ
ಸೇವಾಕರ್ತರು	: **ಶ್ರೀ ಕಿರಣ್ ರಾವ್ ಮತ್ತು ಮನೆಯವರು,** 'ಸುಗುಣಶ್ರೀ', ಉಜಿರೆ
ಸಂಜೆ ಗಂಟೆ 6.00ರಿಂದ	: ರಾತ್ರಿ ಪೂಜೆ, ಶ್ರೀ ಭೂತಬಲಿ, ಶ್ರೀ ಜನಾರ್ದನ, ಶ್ರೀ ಮಂಜುಳೇಶ ದೇವರ ಉತ್ಸವ **ನೂತನ ಬ್ರಹ್ಮರಥದಲ್ಲಿ ಉಭಯ ದೇವರ ಬ್ರಹ್ಮರಥೋತ್ಸವ, ಮಂತ್ರಾಕ್ಷತೆ**
ಮಧ್ಯಾಹ್ನ 12.00ಕ್ಕೆ	: ಮಹಾಪೂಜೆ, **ಅನ್ನಸಂತರ್ಪಣೆ** । ರಾತ್ರಿ ಗಂಟೆ 7.30ರಿಂದ : **ಅನ್ನಸಂತರ್ಪಣೆ**
ಸೇವಾಕರ್ತರು	: **ಬ್ರಹ್ಮಕಲಶೋತ್ಸವ ಸಮಿತಿ**

ಸಭಾ ಕಾರ್ಯಕ್ರಮ


ಸ್ಥಳ : ಸುದರ್ಶನ ಸಭಾಭವನ । **ಸಮಯ :** ಸಂಜೆ ಗಂಟೆ 4.30 ರಿಂದ



ಆಶೀರ್ವಚನ
ಪರಮಪೂಜ್ಯ ಶ್ರೀ ಶ್ರೀ ಶ್ರೀ ವಿದ್ಯಾಪ್ರಸನ್ನತೀರ್ಥ ಶ್ರೀಪಾದಂಗಳವರು ಜಗದ್ಗುರು ಶ್ರೀ ಮಧ್ವಾಚಾರ್ಯ ಮಹಾಸಂಸ್ಥಾನ
ಶ್ರೀ ಕುಕ್ಕೆ ಸುಬ್ರಹ್ಮಣ್ಯ ಮಠ, ಸುಬ್ರಹ್ಮಣ್ಯ



ಆಶೀರ್ವಚನ
ಪರಮಪೂಜ್ಯ ಶ್ರೀ ಶ್ರೀ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದಂಗಳವರು, ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ
ಶ್ರೀ ಸೋದೆ ಮಠ, ಉಡುಪಿ



ದಿವ್ಯ ಉಪಸ್ಥಿತಿ
ಪರಮಪೂಜ್ಯ ರಾಜರ್ಷಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು
ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ

ಅಧ್ಯಕ್ಷತೆ	: **ಶ್ರೀ ಕೆ. ಪ್ರತಾಪಸಿಂಹ ನಾಯಕ್,** ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ, ಉಜಿರೆ
ಗೌರವ ಉಪಸ್ಥಿತಿ	: **ಶ್ರೀ ಡಿ. ಹರ್ಷೇಂದ್ರ ಕುಮಾರ್,** ಶ್ರೀ ಕ್ಷೇತ್ರ ಧರ್ಮಸ್ಥಳ । ಪ್ರಧಾನ ಗೌರವಾಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ
	: **ಶ್ರೀ ಶಶಿಧರ ಶೆಟ್ಟಿ, ನವಶಕ್ತಿ, ಬರೋಡ,** ಕಾರ್ಯಾಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ, ಉಜಿರೆ
ಧಾರ್ಮಿಕ ಉಪನ್ಯಾಸ	: **ವೇ.ಮೂ. ಶ್ರೀ ಹರಿನಾರಾಯಣ ದಾಸ ಆಸ್ರಣ್ಣರು,** ಶ್ರೀ ಕ್ಷೇತ್ರ ಕಟೀಲು
ಮುಖ್ಯ ಅಭ್ಯಾಗತರು	: **ಶ್ರೀ ಕೃಷ್ಣಬೈರೇ ಗೌಡ,** ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ
	: **ಕ್ಯಾಪ್ಟನ್ ಬ್ರಿಜೇಶ್ ಚೌಟ** ಮಾನ್ಯ ಸಂಸದರು, ಮಂಗಳೂರು ಲೋಕಸಭಾ ಕ್ಷೇತ್ರ
	: **ಶ್ರೀ ಬಿ. ವೈ. ವಿಜಯೇಂದ್ರ,** ರಾಜ್ಯಾಧ್ಯಕ್ಷರು, ಭಾ.ಜ.ಪ, ಕರ್ನಾಟಕ
	: **ಡಾ. ಸಿ. ಎನ್. ಅಶ್ವತ್ಥನಾರಾಯಣ,** ಮಾಜಿ ಉಪಮುಖ್ಯಮಂತ್ರಿಗಳು । ಮಾನ್ಯ ಶಾಸಕರು, ಬೆಂಗಳೂರು
	: **ಶ್ರೀ ಹರೀಶ್ ಪೂಂಜ,** ಮಾನ್ಯ ಶಾಸಕರು, ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ
	: **ಶ್ರೀ ಕೆ. ಹರೀಶ್ ಕುಮಾರ್,** ಅಧ್ಯಕ್ಷರು, ಮೆಸ್ಕಾಂ, ಮಂಗಳೂರು
	: **ಶ್ರೀ ಮಹಾದೇವಮೂರ್ತಿ,** ನಿವೃತ್ತ ಅಧಿಕಾರಿ, ಕೇಂದ್ರ ಗುಪ್ತಚರ ಇಲಾಖೆ, ಬೆಂಗಳೂರು

	: **ಶ್ರೀ ನಾಗೇಂದ್ರ ಭಾರಧ್ವಾಜ್,** ದೈವಜ್ಞರು, ಸುರತ್ಕಲ್
	: **ಶ್ರೀ ಮಂಜುನಾಥ ಕನ್ನಾಡಿ,** ಸಂಚಾಲಕರು, ಬ್ರಹ್ಮಕಲಶೋತ್ಸವ ಬೆಂಗಳೂರು ಸಮಿತಿ
ಉಪಸ್ಥಿತಿ	: **ಶ್ರೀ ಶಿವರಾಮ ಪಡುವೆಟ್ನಾಯರು,** ಪವಿತ್ರಪಾಣಿ
	: **ಶ್ರೀ ಅನಂತಮೋಹನ ಮೂಡಣ್ಣಾಯರು,** ಬಡೆಕೊಟ್ಟು ಮನೆ
	: **ಶ್ರೀ ಕಿರಣ್ ರಾವ್,** ಅಮೇರಿಕ – ಬ್ರಹ್ಮರಥ ದಾನಿಗಳು
	: **ಶ್ರೀ ಶ್ರೀನಿವಾಸ ಹೊಳ್ಳ,** ಪ್ರಧಾನ ಅರ್ಚಕರು

ಗೌರವಾರ್ಪಣೆ :
- **ಬ್ರಹ್ಮಶ್ರೀ ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿಗಳು**
- **ಶ್ರೀ ಶ್ರೀಧರ ಗೋರೆ,** ದೈವಜ್ಞರು, ನೆಲ್ಯಾಡಿ
- **ಶ್ರೀ ವೆಂಕಟ್ರಾಜ ಹೆಬ್ಬಾರ್,** ಬ್ರಹ್ಮವಾಹಕರು
- **ಬ್ರಹ್ಮಕಲಶೋತ್ಸವ ಬೆಂಗಳೂರು ಸಮಿತಿ**
- **ವೇ.ಮೂ. ಶ್ರೀ ಬಾಲಕೃಷ್ಣ ಹೊಳ್ಳ,** ಅರ್ಚಕರು
- **ಶ್ರೀ ಪ್ರವೀಣ್ ಕುಮಾರ್ ಇಂದ್ರ,** ಉಜಿರೆ
- **ಶ್ರೀ ಜಿ. ಪ್ರಭಾತ್ ಭಟ್,** ಉಜಿರೆ
- **ಶ್ರೀ ಕೆ. ಮೋಹನ್ ಕುಮಾರ್,** ಕನಸಿನ ಮನೆ, ಲಕ್ಷ್ಮೀ ಇಂಡಸ್ಟ್ರೀಸ್ ಉಜಿರೆ
- **ಶ್ರೀ ಅಮ್ಮಿ ಪೂಜಾರಿ,** ಪಾರ

ಸಾಂಸ್ಕೃತಿಕ ಕಾರ್ಯಕ್ರಮಗಳು

11 ಮಾರ್ಚ್ 2026, ಬುಧವಾರ ಬೆಳಗ್ಗೆ ಗಂಟೆ 10.30ರಿಂದ ಸುದರ್ಶನ ಸಭಾಭವನದಲ್ಲಿ

ಭಕ್ತಿಸಂಗೀತ ಸಂಭ್ರಮ
ಗಾನಗಂಧರ್ವ ಶ್ರೀ ಶಶಿಧರ ಕೋಟೆ ಮತ್ತು ತಂಡ ಬೆಂಗಳೂರು
ಪ್ರಾಯೋಜಕರು : ವಾಣಿಜ್ಯ ಕೈಗಾರಿಕಾ ಸಂಘ (ರಿ.), ಉಜಿರೆ



ಮಧ್ಯಾಹ್ನ ಗಂಟೆ 02.30ರಿಂದ
'ನಾದ ಮಾಧುರ್ಯ' ಸೇಕ್ಸೋಫೋನ್ ಸಂಗೀತ ಕಚೇರಿ
ಧರ್ಮಸ್ಥಳ ಬಿ. ಪ್ರಕಾಶ್ ದೇವಾಡಿಗ ಮತ್ತು ಬಳಗ, ಆಕಾಶವಾಣಿ ದೂರದರ್ಶನ ಕಲಾವಿದರು



ರಾತ್ರಿ ಗಂಟೆ 7.00ರಿಂದ:
ಉಜಿರೆ ಸಂಗೀತ ಉತ್ಸವ-2026
ಸಂಗೀತ ರಸಮಂಜರಿ

ಇಂದು, ಮಾರ್ಚ್ 2026 ಬುಧವಾರ- ಸಾಂಸ್ಕೃತಿಕ ಕಾರ್ಯಕ್ರಮ- ಶ್ರೀಕೃಷ್ಣಾನುಗ್ರಹ ಸಭಾಭವನದಲ್ಲಿ

ಸಂಜೆ ಗಂಟೆ 4.30ರಿಂದ : ಸ್ವರಾನುಪಲ್ಲವಿ-ಸಂಗೀತ ಕಾರ್ಯಕ್ರಮ – ವಿದುಷಿ ಮಂಗಳಾ ವಿಕ್ರಮ । ಪ್ರಸ್ತುತಿ : ಶ್ರೀಮತಿ ಮಲ್ಲಿಕಾ ವೈ.ಎನ್. ಸಂಜೆ ಗಂಟೆ 5.30ರಿಂದ ನಾದಾಭಿಷೇಕಮ್ -ಶಾಸ್ತ್ರೀಯ ಸಂಗೀತ-ಶ್ರೀಮತಿ ಅನಸೂಯಾ ದೇವಸ್ಥಳಿ, ಶ್ರೀ ಸರ್ವೇಶ್ ದೇವಸ್ಥಳಿ ಮತ್ತು ಬಳಗ, ಉಜಿರೆ. ಸಂಜೆ ಗಂಟೆ 6.30ರಿಂದ : ನೃತ್ಯಾಮೃತ -ಶ್ರೀಮೂಕಾಂಬಿಕಾ ಕಲ್ಚರಲ್ ಅಕಾಡೆಮಿ ಪುತ್ತೂರು । ನಿರ್ದೇಶನ : ವಿದ್ವಾನ್ ಬಿ. ದೀಪಕ್ ಕುಮಾರ್ ಪುತ್ತೂರು. ರಾತ್ರಿ ಗಂಟೆ 8.00ರಿಂದ : ರಸಮಂಜರಿ- ವಿ.ಎಸ್. ಡಿ.ಶೋ ಮಾಸ್ಟರ್ಸ್, ಉಜಿರೆ